ಬುಧವಾರ, ಜನವರಿ 8, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 8 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಸ್ಮಾರ್ಟ್‌ಫೋನ್‌ಗಳ ಬ್ಯಾಟರಿ ಬಾಳಿಕೆಗೆ ಕೆಲವು ತಂತ್ರಗಳನ್ನು ಅನುಸರಿಸಬೇಕಾಗುತ್ತದೆ

ಆಳ-ಅಗಲ
ದಿಸೆ ಇಲ್ಲದ 'ದಿಶಾ'
ಒಳಮೀಸಲಾತಿ ತ್ವರಿತ ಜಾರಿಗೆ ಚರ್ಚೆ 6
ದೆಹಲಿ ಮತಕ್ಕೆ ಮುಹೂರ್ತ 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
78,199	23,707	₹81,100 (ಬೆಂಗಳೂರು)	₹94,700 (ಬೆಂಗಳೂರು)	85.74

ಉದ್ಯಮ ತಜ್ಞರು, ಸಾರ್ವಜನಿಕ ಆಡಳಿತ, ನೀತಿ ನಿರೂಪಣೆ ಕ್ಷೇತ್ರದ ವೃತ್ತಿಪರರಿಗೆ ಅವಕಾಶ: ಯುಜಿಸಿ

ಕುಲಪತಿ ಹುದ್ದೆಗೆ ನೇರ ನೇಮಕ

ನವದೆಹಲಿ (ಪಿಟಿಐ): ಉದ್ಯಮ ರಂಗದ ಪರಿಣತರು, ಸಾರ್ವಜನಿಕ ಆಡಳಿತ, ನೀತಿ ನಿರೂಪಣೆಯಲ್ಲಿ ಕೆಲಸ ಮಾಡಿದವರು ಮತ್ತು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಹಿರಿಯ ಅಧಿಕಾರಿಗಳಿಗೆ ವಿಶ್ವವಿದ್ಯಾಲಯಗಳ ಕುಲಪತಿಗಳಾಗುವ ಅರ್ಹತೆ ಶೀಘ್ರದಲ್ಲಿ ದೊರಕಲಿದೆ. ಇದಕ್ಕಾಗಿ, ವಿಶ್ವವಿದ್ಯಾಲಯ ಅನುದಾನ ಆಯೋಗವು (ಯುಜಿಸಿ) ಹೊಸ ನಿಯಮಗಳ ಕರಡನ್ನು ರೂಪಿಸಿದೆ.

ಯುಜಿಸಿ ಸಿದ್ಧಪಡಿಸಿರುವ ಕರಡುವಿನಲ್ಲಿ ಹಲವು ಮಹತ್ವದ ಬದಲಾವಣೆಗಳನ್ನು ಪ್ರಸ್ತಾಪಿಸಲಾಗಿದೆ. ಎಂಜಿನಿಯರಿಂಗ್ ಸ್ನಾತಕೋತ್ತರ ಪದವಿ (ಎಂ.ಇ) ಮತ್ತು ತಂತ್ರಜ್ಞಾನ ಸ್ನಾತಕೋತ್ತರ ಪದವಿ (ಎಂ.ಟೆಕ್) ಪದವಿ ಪಡೆದವರು ಕನಿಷ್ಠ ಶೇ 55ರಷ್ಟು ಅಂಕಗಳನ್ನು ಗಳಿಸಿದ್ದರೆ ವಿಶ್ವವಿದ್ಯಾಲಯಗಳ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ನೇರವಾಗಿ ನೇಮಕಗೊಳ್ಳುವ ಅರ್ಹತೆ ಪಡೆಯುತ್ತಾರೆ. ಅವರು ಯುಜಿಸಿಯ ರಾಷ್ಟ್ರೀಯ ಅರ್ಹತಾ ಪರೀಕ್ಷೆಯಲ್ಲಿ (ಎನ್‌ಇಟಿ) ಅರ್ಹತೆ ಪಡೆದುಕೊಳ್ಳುವ ಅಗತ್ಯ ಇಲ್ಲ.

ಪ್ರಾಧ್ಯಾಪಕರು ಅತ್ಯುನ್ನತ ಶಿಕ್ಷಣ ಪಡೆದ ವಿಷಯದಲ್ಲಿ ಮಾತ್ರ ಬೋಧನೆ ಮಾಡಲು ಅವಕಾಶ ಕಲ್ಪಿಸುವುದಕ್ಕಾಗಿ ಯೂ ನಿಯಮಗಳಲ್ಲಿ ಬದಲಾವಣೆ ಮಾಡಲು ಉದ್ದೇಶಿಸಲಾಗಿದೆ. ಉದಾಹರಣೆಗೆ ಒಬ್ಬ ಪ್ರಾಧ್ಯಾಪಕರು ರಾಸಾಯನಿಕ ವಿಜ್ಞಾನದಲ್ಲಿ ಪಿಎಚ್‌ಡಿ, ಗಣಿತದಲ್ಲಿ ಪದವಿ ಮತ್ತು ಭೌತವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದರೆ, ರಾಸಾಯನಿಕ ವಿಜ್ಞಾನ ವಿಷಯವನ್ನು ಬೋಧಿಸಲು ಮಾತ್ರ ಅವರಿಗೆ ಅವಕಾಶ ಇರುತ್ತದೆ.

ಹಾಗೆಯೇ, ತಮ್ಮ ಸ್ನಾತಕೋತ್ತರ ಪದವಿ ಅಲ್ಲದೆ ಬೇರೊಂದು ವಿಷಯದಲ್ಲಿ ಎನ್‌ಇಟಿ ಅರ್ಹತೆ ಪಡೆದವರು ಆ ವಿಷಯವನ್ನು ಬೋಧನೆ ಮಾಡಬಹುದು ಎಂಬ ನಿಯಮವನ್ನೂ ರೂಪಿಸಲಾಗಿದೆ.

ಬಹುಶಿಸ್ತೀಯ ಹಿನ್ನೆಲೆಯನ್ನು ಹೊಂದಿರುವವರನ್ನು ಬೋಧನಾ ಸಿಬ್ಬಂದಿಯಾಗಿ ನೇಮಕ ಮಾಡುವುದಕ್ಕೆ ಕೂಡ ಹೊಸ ಕರಡು ಅವಕಾಶ ಮಾಡಿಕೊಡುತ್ತದೆ. ಶಿಕ್ಷಣದ ವ್ಯಾಪ್ತಿ ಮತ್ತು ಸ್ವಾತಂತ್ರ್ಯವನ್ನು ವಿಸ್ತರಿಸುವುದು ಹಾಗೂ ಬೋಧನೆಯ ಕುರಿತು ಅಮಿತವಾದ ಉತ್ಸಾಹ ಹೊಂದಿರುವವರನ್ನು ಬೋಧನಾ ಸಿಬ್ಬಂದಿಯಾಗಿ ನೇಮಿಸಲು ಅವಕಾಶ ಕಲ್ಪಿಸುವುದು ಈ ಬದಲಾವಣೆಗಳ ಪ್ರಾಥಮಿಕ ಉದ್ದೇಶ ಎಂದು ಯುಜಿಸಿ ಅಧ್ಯಕ್ಷ ಜಗದೀಶ್ ಕುಮಾರ್ ಹೇಳಿದ್ದಾರೆ.

11ನೇ ಪುಟ ನೋಡಿ

ಮುಖ್ಯಾಂಶಗಳು

- 2018ರಲ್ಲಿ ಮಾರ್ಗಸೂಚಿ ರೂಪಿಸಲಾಗಿತ್ತು
- ಯುಜಿಸಿ ನಿಬಂಧನೆಗಳು, 2025 ಕರಡನ್ನು ಈಗ ರೂಪಿಸಲಾಗಿದೆ
- ಶಿಕ್ಷಣದ ವ್ಯಾಪ್ತಿ, ಸ್ವಾತಂತ್ರ್ಯ ವಿಸ್ತರಣೆ ಉದ್ದೇಶ

ಈಗ ಇರುವ ನಿಯಮ
ವಿಶ್ವವಿದ್ಯಾಲಯ ಅಥವಾ ಪ್ರಮುಖ ಶೈಕ್ಷಣಿಕ ಸಂಸ್ಥೆ ಅಥವಾ ಸಂಶೋಧನಾ ಸಂಸ್ಥೆಯಲ್ಲಿ ಆಡಳಿತಾತ್ಮಕ ಹುದ್ದೆಯಲ್ಲಿ ಅನುಭವ ಮತ್ತು ಪ್ರಾಧ್ಯಾಪಕ ಹುದ್ದೆಯ ಕನಿಷ್ಠ 10 ವರ್ಷಗಳ ಅನುಭವ ಇದ್ದವರಿಗೆ ಮಾತ್ರ ವಿಶ್ವವಿದ್ಯಾಲಯದ ಕುಲಪತಿಯಾಗಲು ಈಗ ಅವಕಾಶವಿದೆ.

ಹೊಸ ಕರಡು ನಿಯಮ
ಉದ್ಯಮ, ಸಾರ್ವಜನಿಕ ಆಡಳಿತ, ನೀತಿ ನಿರೂಪಣೆ ಅಥವಾ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಹಿರಿಯ ಅಧಿಕಾರಿ ಹುದ್ದೆಯಲ್ಲಿ ಕನಿಷ್ಠ 10 ವರ್ಷ ಅನುಭವದ ಜೊತೆಗೆ ಶೈಕ್ಷಣಿಕವಾಗಿ ಮಹತ್ವದ ಕೊಡುಗೆ ನೀಡಿದವರು ವಿಶ್ವವಿದ್ಯಾಲಯದ ಕುಲಪತಿ ಹುದ್ದೆಗೆ ಅರ್ಹತೆ ಪಡೆಯುತ್ತಾರೆ.

ಜಿಗುಟು ವಿದ್ಯಾರ್ಹತೆಯ ಬದಲು ಜ್ಞಾನ ಶಾಖೆ ಹಾಗೂ ಸಮುದಾಯಕ್ಕೆ ನೀಡಿದ ಕೊಡುಗೆಗಳಿಗೆ ಹೆಚ್ಚಿನ ಮೌಲ್ಯ ಇದೆ ಎಂಬುದನ್ನು ಖಾತರಿಪಡಿಸುವುದೇ ಬದಲಾವಣೆಯ ಉದ್ದೇಶ
ಜಗದೀಶ್ ಕುಮಾರ್, ಯುಜಿಸಿ ಅಧ್ಯಕ್ಷ

ಪ್ರತಿಭಾವಂತರನ್ನು ಗುರುತಿಸಿ, ದೇಶದ ಶಿಕ್ಷಣದ ಭವಿಷ್ಯವನ್ನು ಚಲನಶೀಲಗೊಳಿಸಲು ದಾರಿ ಮಾಡಿಕೊಡುವುದೇ ನಮ್ಮ ಉದ್ದೇಶ
ಧರ್ಮೇಂದ್ರ ಪ್ರಧಾನ್,
ಕೇಂದ್ರ ಶಿಕ್ಷಣ ಸಚಿವ

'ರಾಜ್ಯದ ಹಕ್ಕುಗಳಿಗೆ ಹೊಡೆತ'



ಕುಲಪತಿ ನೇಮಕದಲ್ಲಿ ಯುಜಿಸಿ ಕರಡು ನಿಯಮಗಳು ರಾಜ್ಯಪಾಲರಿಗೆ ಹೆಚ್ಚಿನ ಅಧಿಕಾರವನ್ನು ಕೊಡುತ್ತವೆ. ಬೋಧನೆಯ ಅನುಭವ ಇಲ್ಲದವರು ಕೂಡ ಕುಲಪತಿಯಾಗಲು ಅವಕಾಶ ನೀಡಲಾಗಿದೆ. ಇದು ಒಕ್ಕೂಟ ವ್ಯವಸ್ಥೆ ಮತ್ತು ರಾಜ್ಯದ ಹಕ್ಕುಗಳ ಮೇಲೆ ನೇರ ಹೊಡೆತ ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಹೇಳಿದ್ದಾರೆ.

'ಇದು ಕೇಂದ್ರ ಸರ್ಕಾರದ ನಿರಂಕುಶ ನಡೆ. ಅಧಿಕಾರವನ್ನು ಕೇಂದ್ರೀಕರಿಸುವ ಹುನ್ನಾರ. ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ರಾಜ್ಯ ಸರ್ಕಾರಗಳನ್ನು ನಿರ್ಲಕ್ಷಿಸುವ ಹುನ್ನಾರ. ಶಿಕ್ಷಣ ಕ್ಷೇತ್ರವು ಜನಪ್ರತಿನಿಧಿಗಳ ಕೈಯಲ್ಲಿ ಇರಬೇಕೇ ಹೊರತು ಬಿಜೆಪಿ ಸರ್ಕಾರದ ಕುಮ್ಮಕ್ಕಿನಂತೆ ವರ್ತಿಸುವ ರಾಜ್ಯಪಾಲರ ನಿಯಂತ್ರಣದಲ್ಲಿ ಅಲ್ಲ' ಎಂದು ಹೇಳಿದ್ದಾರೆ

ನಾರಾಯಣನ್ ಇಸ್ರೊ ಅಧ್ಯಕ್ಷ

ನಾರಾಯಣನ್

ನವದೆಹಲಿ (ಪಿಟಿಐ): ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಅಧ್ಯಕ್ಷರನ್ನಾಗಿ ವಿ. ನಾರಾಯಣನ್ ಅವರನ್ನು ಕೇಂದ್ರ ಸರ್ಕಾರ ನೇಮಿಸಿದೆ.

ಇಸ್ರೊ ಹಾಲಿ ಅಧ್ಯಕ್ಷ ವಿ. ಸೋಮನಾಥ್ ಅವರಿಂದ ಅಧಿಕಾರವನ್ನು ನಾರಾಯಣನ್ ಅವರು ಜ. 14ರಂದು ವಹಿಸಿಕೊಳ್ಳಲಿದ್ದಾರೆ .

ಕೇಂದ್ರ ಸಂಪುಟದ ನೇಮಕಾತಿಗಳ ಸಮಿತಿಯು ನಾರಾಯಣನ್ ಅವರನ್ನು ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಇಸ್ರೊ ಅಧ್ಯಕ್ಷರನ್ನಾಗಿ ನೇಮಕ ಮಾಡಿದೆ .

ನಾರಾಯಣನ್ ಈಗ ಲಿಕ್ವಿಡ್ ಪ್ರೊಪಲ್ಷನ್ ಸಿಸ್ಟಮ್ಸ್ ಸೆಂಟರ್‌ನ ನಿರ್ದೇಶಕರಾಗಿದ್ದಾರೆ. ಅವರು ರಾಕೆಟ್ ಮತ್ತು ಉಪಗ್ರಹ ಪ್ರೊಪಲ್ಷನ್ ವಿಷಯ ಪರಿಣತ.

ಔತಣ 'ರಾಜಕೀಯ'ಕ್ಕೆ ಬ್ರೇಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್‌ನಲ್ಲಿ 'ಅಧಿಕಾರ ಹಂಚಿಕೆ' ವಿಚಾರವಾಗಿ ಆರಂಭಗೊಂಡಿದ್ದ 'ಔತಣ ರಾಜಕೀಯ'ಕ್ಕೆ ಪಕ್ಷದ ವರಿಷ್ಠರು ಬ್ರೇಕ್ ಹಾಕಿದ್ದಾರೆ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ವರಿಷ್ಠರಿಗೆ ದೂರು ನೀಡಿದ ಬೆನ್ನಲ್ಲೇ ಗೃಹ ಸಚಿವ ಜಿ.ಪರಮೇಶ್ವರ ಅವರು ಬುಧವಾರ ಹಮ್ಮಿಕೊಂಡಿದ್ದ ಔತಣ ಸಭೆ ರದ್ದಾಗಿದೆ.

ಕಳೆದ ವಾರ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರ ಮನೆಯಲ್ಲಿ ನಡೆದಿದ್ದ ಔತಣ ಕೂಟದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅವರ ಆಪ್ತ ಬಳಗದ ಸಚಿವರಾದ ಎಚ್‌.ಸಿ.ಮಹದೇವಪ್ಪ, ಕೆ.ಎನ್‌.ರಾಜಣ್ಣ, ಜಿ.ಪರಮೇಶ್ವರ ಭಾಗವಹಿಸಿದ್ದರು. ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ವಿದೇಶ ಪ್ರವಾಸದಲ್ಲಿದ್ದಾಗ ನಡೆದ ಈ ಕೂಟ– ಸಭೆ ಪಕ್ಷದ ವಲಯದಲ್ಲಿ ನಾನಾ ಚರ್ಚೆಯನ್ನು ಹುಟ್ಟು ಹಾಕಿತ್ತು.

ಆ ಸಭೆಯ ಬಳಿಕ ಜಿ.ಪರಮೇಶ್ವರ ಅವರು ಕುಟುಂಬ ಸಮೇತ ಮಲೇಷ್ಯಾಕ್ಕೆ ತೆರಳಿದ್ದರು. ಅಲ್ಲಿಂದ ಸೋಮವಾರ ಹಿಂದಿರುಗಿದ ಅವರು ದಲಿತ ಶಾಸಕರು ಮತ್ತು ಸಚಿವರಿಗೆ ಭೋಜನ ಕೂಟ ಏರ್ಪಡಿಸುವ ವಿಚಾರವನ್ನು ಮಂಗಳವಾರ ಪ್ರಕಟಿಸಿದರು. ಇದಕ್ಕೆ ದೆಹಲಿಯಲ್ಲಿ ಡಿ.ಕೆ.ಶಿವಕುಮಾರ ಆಕ್ಷೇಪ ವ್ಯಕ್ತಪಡಿಸಿದರು.

6ನೇ ಪುಟ ನೋಡಿ

ಸಿದ್ದರಾಮಯ್ಯ ಪರ ಒತ್ತಡ

ಬಜೆಟ್ ಮಂಡನೆ ಬಳಿಕ ಮುಖ್ಯಮಂತ್ರಿ ಸ್ಥಾನ ಬದಲಾವಣೆಯೂ ಸೇರಿದಂತೆ 'ಅಧಿಕಾರ ಹಂಚಿಕೆ' ಆಗಬೇಕೆಂಬ ಕೂಗು ಜೋರಾಗುವ ಲಕ್ಷಣಗಳು ಕಾಣಿಸಿವೆ.

ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಯಾವುದೇ ಕಾರಣಕ್ಕೂ ಬದಲಾಯಿಸಬಾರದೆಂದು ಹೈಕಮಾಂಡ್ ಮೇಲೆ ಒತ್ತಡ ಹೇರಲು ಅವರ ಆಪ್ತ ಬಣ ಈಗಾಗಲೇ ರಂಗಕ್ಕಿಳಿದಿದೆ. ಬದಲಾಯಿಸುವುದಾದರೆ ಸಿದ್ದರಾಮಯ್ಯ ಅವರೂ ಒಪ್ಪುವ ಸರ್ವಸಮ್ಮತ ವ್ಯಕ್ತಿಗೆ ಹುದ್ದೆ ನೀಡಬೇಕೆಂದು ಪಟ್ಟು ಹಿಡಿಯಲು ಕೂಡಾ ಈ ಬಳಗ ಮುಂದಾಗಿದೆ ಎಂದು ಮೂಲಗಳು ತಿಳಿಸಿವೆ.

6ನೇ ಪುಟ ನೋಡಿ

ಬಿಬಿಎಂಪಿ ದಾಖಲೆ ಜಾಲಾಡಿದ ಇ.ಡಿ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಕೊಳವೆಬಾವಿ ಯೋಜನೆ ಮತ್ತು ಆರ್‌ಒ ನೀರು ಶುದ್ಧೀಕರಣ ಘಟಕ ಸ್ಥಾಪನೆ ಯೋಜನೆಗಳಲ್ಲಿನ ಅಕ್ರಮ ಆರೋಪದ ದೂರಿಗೆ ಸಂಬಂಧಿಸಿದಂತೆ ಇ.ಡಿ ಅಧಿಕಾರಿಗಳು ಬಿಬಿಎಂಪಿಯ ಮುಖ್ಯ ಎಂಜಿನಿಯರ್ ಕಚೇರಿಯಲ್ಲಿ ಮಂಗಳವಾರ ಶೋಧ ನಡೆಸಿ, ದಾಖಲೆಗಳನ್ನು ವಶಕ್ಕೆ ಪಡೆದಿದ್ದಾರೆ. 3B

ಟಿಬೆಟ್‌ನಲ್ಲಿ ಭೂಕಂಪ: 126 ಬಲಿ

ಬೀಜಿಂಗ್ (ಪಿಟಿಐ/ಎಎಫ್‌ಪಿ/ಎಪಿ): ಟಿಬೆಟ್‌ನಲ್ಲಿ ಮಂಗಳವಾರ ಸಂಭವಿಸಿದ ಪ್ರಬಲ ಭೂಕಂಪದಲ್ಲಿ 126 ಜನರು ಮೃತಪಟ್ಟಿದ್ದು, 188 ಮಂದಿ ಗಾಯಗೊಂಡಿದ್ದಾರೆ.

ಚೀನಾದ ಟಿಬೆಟ್ ಸ್ವಾಯತ್ತ ಪ್ರದೇಶ ಕ್ಸಿಗಾಸೆಯ ಡಿಂಗ್ರಿ ಕೌಂಟಿಯಲ್ಲಿ ಸ್ಥಳೀಯ ಕಾಲಮಾನ ಬೆಳಿಗ್ಗೆ 9.05ಕ್ಕೆ ಭೂಕಂಪ ಸಂಭವಿಸಿದೆ. ರಿಕ್ಟರ್ ಮಾಪಕದಲ್ಲಿ ತೀವ್ರತೆ 6.8ರಷ್ಟು ದಾಖಲಾಗಿದೆ. ಆದರೆ, ಯುನೈಟೆಡ್ ಸ್ಟೇಟ್ಸ್ ಜಿಯಾಲಜಿಕಲ್ ಸರ್ವಿಸ್ (ಯುಎಸ್‌ಜಿಎಸ್) ಪ್ರಕಾರ ಭೂಕಂಪದ ತೀವ್ರತೆ 7.1ರಷ್ಟಿತ್ತು.

ಮನೆಗಳು ಮತ್ತು ಹಲವು ಕಟ್ಟಡಗಳು ನೆಲಸಮವಾಗಿದ್ದು, ಸಾವಿನ ಸಂಖ್ಯೆ ಹೆಚ್ಚುವ ಆತಂಕ ಇದೆ. ನೇಪಾಳ ಮತ್ತು ಉತ್ತರ ಭಾರತದ ಕೆಲವೆಡೆ ಭೂಮಿ ಕಂಪಿಸಿದ ಅನುಭವ ಆಗಿದೆ.

ಭೂಕಂಪದಿಂದ ತೊಂದರೆಗೆ ಒಳಗಾದ ಪ್ರದೇಶಗಳಲ್ಲಿ ಪರಿಹಾರ ಮತ್ತು ರಕ್ಷಣಾ ಕಾರ್ಯಾಚರಣೆಯನ್ನು ಸಮರೋಪಾದಿಯಲ್ಲಿ ಕೈಗೊಳ್ಳಲು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ಆದೇಶಿಸಿದ್ದಾರೆ.

11ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಮಯೂರ ಓದಿರಿ

ನೈರುತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. [illegible]/42/2024 ದಿನಾಂಕ : 31-12-2024

[illegible]

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 23-01-2025 ರಂದು 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು / ಬೆಂಗಳೂರು ದಂಡು

ಪಿಯುಬಿ/680/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024-25

South Western Railway - SWR | SWRRLY | SWRRLY

PUBLIC NOTICE

NOTICE is hereby given that our client is proposing to transact with the converted land measuring 2 acres along with 5 guntas kharabh situated at Ilathore Village (more fully described in the Schedule hereunder and referred to as the ***"Schedule Property"***) from its owner, namely, **Ms Ambuja** wife of Mr C Krishnappa.

Any person/s having any subsisting claim, right, title or interest, in respect of the Schedule Property or any part thereof, by way of inheritance, transfer of any kind, mortgage, sale, agreement for sale, lease, license, lien, charge, maintenance, easement, gift, acquisition, requisition, or beneficial interest, right of prescription or pre-emption or under any agreement or other disposition or under any suit, decree, injunction order or attachment or award passed by any Court or Authority, arbitrator, litigation, lis-pendens, order of any adjudicating authority, exchange, partition, power of attorney, bequest, FSI, tenancy, development rights, partnership, family arrangement /settlement, possession, allotment or otherwise encumbrance howsoever **("Claim")**, are hereby requested to respond along with complete documentary proof to the undersigned within a period of 15 (Fifteen) days from the date of publication, failing which, it shall be presumed that no such Claim exists and if it existed, the claimant has relinquished such Claim and/or waived their right to exercise such Claim.

SCHEDULE PROPERTY

All that piece and parcel of immovable property being converted land measuring 2 acres along with 5 guntas kharabh, totally measuring 2 acres 5 guntas in **Survey No 145/1** (old Survey No 145, carved out of larger Survey No 46) situated at Ilathore Village, Kundana Hobli, Devanahalli Taluk, Bangalore Rural District, and bounded as follows:

East by : Land in Survey No 146;
West by : Land in Survey No 145/2;
North by : Naraganahalli Village boundary; and
South by : IVC Road

Pavithra Thammaiah
Counsel, Khaitan & Co LLP
Embassy Quest, 3rd Floor, 45/1,
Magrath Road, Bengaluru-560 025
T: +91 80 43397000

8th January 2025

PUBLIC NOTICE

Publics are hereby informed that my client **M/s. DS-Max Properties Pvt. Ltd.,** having its office at No. 1854, 17th Main, 30th 'B' Cross, HBR Layout, 1st Stage, 5th Block, Bangalore- 43 and intend to enter into Joint Development Agreement with Owner/s **Smt. Sampangamma** w/o Sri. Chikka Nagappa is the absolute owner of converted land property bearing Sy. No.**204/3**, which measuring **29.08 Guntas**, out of **33 Guntas**, situated at **Kurubarahalli Village**, Tavarekere Hobli, Bangalore South Taluk, Bangalore Urban District, in vide; Conversion Order dated **25/08/2018**, in Order No. **ALN:(ST):SR:38/2017-18**, for residential use, issued by Deputy Commissioner, Bangalore District and bounded on **East by:** Land of Sy. No. 204/8, **West by:** Land of Sy. No. 204/2, **North by:** Land of Sy. No. 212, **South by:** Road and referred to as schedule property of **Item.No.I.**

Sri. Govindaraju s/o Late Muddarangaiah is the absolute owner of converted land property bearing old Sy. No.**204/3**, New Sy.No.**204/8**, which measuring **18.08 Guntas**, situated at **Kurubarahalli Village**, Tavarekere Hobli, Bangalore South Taluk, Bangalore District, in vide; Conversion Order dated **21/02/2024**, in Order No. **619836**, for residential use, issued by Deputy Commissioner, Bangalore Urban District and bounded on: **East by:** Land of Sy.No. 204/9, **West by:** Land of Sy.No. 204/3, **North by:** Land of Sy.No. 212, **South by:** Land of Sy.No. 205 and referred to as "schedule property of **Item.No.II.**"

Sri. Govindaraju s/o Late Muddarangaiah is the absolute owner of converted land property bearing Sy. No.**204/9**, which measuring **11.08 Guntas**, situated at **Kurubarahalli Village**, Tavarekere Hobli, Bangalore South Taluk, Bangalore Urban District, in vide; Conversion Order dated **21/02/2024**, in Order No. **619838**, for residential use, issued by Deputy Commissioner, Bangalore Urban District and bounded on: **East by:** Land of Sy.No. 226 & Sy.No. 211, **West by:** Land of Sy.No. 204/8, **North by:** Land of Sy.No. 211, **South by:** Land of Sy.No. 226 and referred to as schedule property of **Item.No.III.**"

which total measuring of **Item.No.I, II & III = 29.8 guntas + 18.08 guntas + 11.08 guntas = 1 Acres 19.08 Guntas** and referred to as **"composite schedule property"** and commonly bounded on: **East by:** Land of Sy. No. 226 & 211, **West by:** Private Land, **North by:** Land of Sy. No. 212 & 211 and **South by:** Road.

Any person or Any Authority or Any promoters having any asserting right, title, interest and claims to oppose for Joint Development Agreement of property and further having any manner of right, title, claims etc., and may lodge their objections, claims over the property along with relevant papers in support of their claims, right to the below address within **10** days from the date of this notice, if any objections fails to comply, my client shall take further steps and deemed for entering into Joint Development Agreement of property.

LINGARAJ. S. NADAGOUDA., ADVOCATE
No.1854, 17th Main, 30th 'B' Cross, HBR Layout, 1st Stage, 5th Block, Bangalore - 560 043.
Mob : 96204 74780 , 94481 35970

ಹಸುಗೂಸು, ಬಾಣಂತಿ ಹೊರಹಾಕಿದ ಫೈನಾನ್ಸ್ ಸಿಬ್ಬಂದಿ

ಪ್ರಜಾವಾಣಿ ವಾರ್ತೆ

ಮೂಡಲಗಿ (ಬೆಳಗಾವಿ ಜಿಲ್ಲೆ): ಸಾಲ ಮರುಪಾವತಿಸಲು ವಿಳಂಬ ಮಾಡಿದ ಕಾರಣಕ್ಕೆ ತಾಲ್ಲೂಕಿನ ನಾಗನೂರು ಪಟ್ಟಣದಲ್ಲಿ ಖಾಸಗಿ ಫೈನಾನ್ಸ್ ಸಿಬ್ಬಂದಿ ಕುಟುಂಬದ ಏಳು ಸದಸ್ಯರನ್ನು ಹೊರಗೆ ಹಾಕಿ, ಮನೆ ಕಬ್ಜಾ ಮಾಡಿದ್ದಾರೆ. ಮನೆಯಲ್ಲಿದ್ದ ಬಾಣಂತಿಯನ್ನೂ ಹೊರಗೆ ಹಾಕಿದ್ದಾರೆ.

ಗ್ರಾಮದ ರೈತ ಶಂಕರೆಪ್ಪ ಗದ್ದಾಡಿ ಎಂಬುವರ ಮನೆಗೆ ಫೈನಾನ್ಸ್ ಸಿಬ್ಬಂದಿ ಸೋಮವಾರ ಸಂಜೆಯೇ ಬೀಗ ಹಾಕಿದ್ದಾರೆ. ಒಂದೂವರೆ ತಿಂಗಳ ಹಸುಗೂಸನ್ನು ಮಡಿಲಲ್ಲಿ ಇಟ್ಟುಕೊಂಡು, ಬಾಣಂತಿ ಇಡೀ ರಾತ್ರಿ ಚಳಿಯಲ್ಲೇ ಮನೆ ಮುಂಭಾಗದಲ್ಲಿ ಕಾಲ ಕಳೆದಿದ್ದಾರೆ. ಅವರೊಂದಿಗೆ ಎರಡು ಮಕ್ಕಳು ಮತ್ತು ವೃದ್ಧರು ರಾತ್ರಿ ಅಂಗಳದಲ್ಲೇ ಮಲಗಿದ್ದಾರೆ.

'ಶಂಕರೆಪ್ಪ ಅವರು ಚೆನ್ನೈ ಮೂಲದ ಫೈನಾನ್ಸ್‌ನಿಂದ ಹೈನುಗಾರಿಕೆಗೆ ₹5 ಲಕ್ಷ ಸಾಲ ಪಡೆದಿದ್ದಾರೆ. ನಷ್ಟ ಸಂಭವಿಸಿದ್ದರಿಂದ ಸಾಲ ಪಾವತಿಸಲು ಆಗಿಲ್ಲ. ಹಣಕಾಸು ಸಂಸ್ಥೆಯವರು ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು. ನ್ಯಾಯಾಲಯದ ಆದೇಶದಂತೆ ಸೋಮವಾರ ಮನೆ ಜಪ್ತಿ ಮಾಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ರಿಟರ್ನಿಂಗ್ ಅಧಿಕಾರಿ, ಮಾಧವನಗರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್, ನಂ.14, 3ನೇ ಅಡ್ಡರಸ್ತೆ, ನೆಹರುನಗರ, ಶೇಷಾದ್ರಿಪುರಂ, ಬೆಂಗಳೂರು-560 020 ಇವರ ನಡವಳಿಗಳು.

ಪ್ರಕಟಣೆ

ಮೇಲ್ಕಂಡ ಬ್ಯಾಂಕಿನ ಮುಂದಿನ ಐದು ವರ್ಷಗಳ ಅವಧಿಗೆ ಆಡಳಿತ ಮಂಡಲಿ ನಿರ್ದೇಶಕರ ಚುನಾವಣೆಯು **ದಿನಾಂಕ: 19-01-2025 ರಂದು ಬೆಳಿಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 02:00 ಗಂಟೆಯವರೆಗೆ ಸಂಘದ ಆವರಣದಲ್ಲಿ** ನಡೆಯಲಿದ್ದು, ಸದರಿ ಚುನಾವಣೆಯ ಸಂಬಂಧ ಚುನಾವಣೆಗೆ ಸ್ಪರ್ಧಿಸಲು ದಿನಾಂಕ:11-01-2025 ರಂದು ಬೆಳಿಗ್ಗೆ 11:00 ರಿಂದ ಮಧ್ಯಾಹ್ನ 3:00 ಗಂಟೆಯವರೆಗೆ ನಾಮಪತ್ರಗಳನ್ನು ಸಂಘ ಆಡಳಿತ ಕಛೇರಿಯಲ್ಲಿ ಸಲ್ಲಿಸಬಹುದಾಗಿರುತ್ತದೆ ಹಾಗೂ ದಿನಾಂಕ:12-01-2025 ರಂದು ಬೆಳಿಗ್ಗೆ 11:00 ಗಂಟೆಗೆ ರಿಟರ್ನಿಂಗ್ ಅಧಿಕಾರಿಯವರಿಂದ ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ದಿನಾಂಕ:13-01-2025 ರಂದು ಮಧ್ಯಾಹ್ನ 03:00 ಗಂಟೆಯವರೆಗೆ ಅಭ್ಯರ್ಥಿಗಳು ನಾಮಪತ್ರಗಳನ್ನು ಹಿಂಪಡೆಯಲು ಅವಕಾಶವಿರುತ್ತದೆ.

ಸ್ಥಳ: ಬೆಂಗಳೂರು
ದಿನಾಂಕ: 02/01/2025

ಸಹಿ/- (**ನಾಗೇಶ್ ಶೀಪಾದ ಶೆಟ್ಟಿ**) ರಿಟರ್ನಿಂಗ್ ಅಧಿಕಾರಿ
ಮಾಧವನಗರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್, ನಂ.14, 3ನೇ ಅಡ್ಡರಸ್ತೆ, ನೆಹರುನಗರ, ಶೇಷಾದ್ರಿಪುರಂ, ಬೆಂಗಳೂರು-560 020.

ನಗರಸಭಾ ಕಾರ್ಯಾಲಯ, ಹೆಬ್ಬಗೋಡಿ

ಡಾ|| ಬಿ.ಆರ್. ಅಂಬೇಡ್ಕರ್ ರಸ್ತೆ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ.
website:www.hebbagodicity.mrc.gov.in Email: ltstaff_ulb_hebbagodi@yahoo.com

ಸಂಖ್ಯೆ: ಹೆ.ನ.ಸ/ತಾಂ.ಶಾ./ಟೆ.ನೋ/ಸಿ.ಆರ್/10/2024-25 ದಿನಾಂಕ: 07.01.2025

ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಪ್ರಕಟಣೆ

ಹೆಬ್ಬಗೋಡಿ ನಗರಸಭೆ ವ್ಯಾಪ್ತಿಯಲ್ಲಿ 2024-25 ನೇ ಸಾಲಿನ ನಗರಸಭಾ ನಿಧಿ ಅಡಿಯಲ್ಲಿ ಒಟ್ಟು 57 ಕಾಮಗಾರಿಗಳ **ಕನಿಷ್ಠ ಮೊತ್ತ ರೂ.2.00 ಗರಿಷ್ಠ ಮೊತ್ತ ರೂ.99.80 ಲಕ್ಷಗಳನ್ನು** ನಿರ್ವಹಿಸುವುದಕ್ಕೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮ 1999 ಮತ್ತು ನಿಯಮಾವಳಿ 2000 ಹಾಗೂ ಆರ್ಥಿಕ ಇಲಾಖೆಯ ಕೆ ಡಬ್ಲ್ಯೂ-1 ಮತ್ತು ಕೆ.ಡಬ್ಲ್ಯೂ-2 ಅರ್ಹ ಗುತ್ತಿಗೆದಾರರಿಗೆ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ನ್ನು **ದಿನಾಂಕ: 08.01.2025 ರಿಂದ ದಿನಾಂಕ: 27.01.2025 ಸಂಜೆ 5.00 ಗಂಟೆಯವರೆಗೆ** ಕೆ.ಪಿ.ಪಿ ಪೋರ್ಟಲ್‌ನಲ್ಲಿ ಸಲ್ಲಿಸಬಹುದಾಗಿರುತ್ತದೆ. ಟೆಂಡರ್ ತೆರೆಯುವ **ದಿನಾಂಕ: 28.01.2025ರಂದು ಸಂಜೆ 5.30 ಗಂಟೆಗೆ** ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ **www.hebbagodicity.mrc.gov.in Or https://kppp.karnataka.gov.in** ನಲ್ಲಿ ವೀಕ್ಷಿಸಬಹುದು ಹಾಗೂ ಯಾವುದೇ ರೀತಿ ಬದಲಾವಣೆಯಿದ್ದಲ್ಲಿ ಅಥವಾ ತಿದ್ದುಪಡಿಯಿದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/- ಅಧ್ಯಕ್ಷರು, ನಗರಸಭೆ, ಹೆಬ್ಬಗೋಡಿ
ಸಹಿ/- ಪೌರಾಯುಕ್ತರು, ನಗರಸಭೆ, ಹೆಬ್ಬಗೋಡಿ

ವಾಸಸಂಇ/ವಾ.ಪ್ರ./4184/ಎಸ್‌ಎಸ್‌ಸಿ/2024-25

ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಸಾಮಾಜಿಕ ಅರಣ್ಯ ವಿಭಾಗ, ಬೆಂಗಳೂರು ಗ್ರಾಮಾಂತರ, ಬೊಮ್ಮವಾರ, ದೇವನಹಳ್ಳಿ ತಾಲ್ಲೂಕು - 562110
ದೂರವಾಣಿ: 080-29599998 e-mail : forest.brzp@gmail.com

ಸಂ: ಎ3/ಬಿಯುಡಿ/ಮಿಟಿಗೇಶನ್/ಟೆಂಡರ್/ಸಿಆರ್- /2024-25 ದಿನಾಂಕ: 06.01.2025

ಇ-ಟೆಂಡರ್ ಪ್ರಕಟಣೆ

2024-25ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಸಾಮಾಜಿಕ ಅರಣ್ಯ ವಿಭಾಗದ ವ್ಯಾಪ್ತಿಯ ವಲಯಗಳಲ್ಲಿ ರಾಷ್ಟ್ರೀಯ ವಿಪತ್ತು ತಗ್ಗಿಸುವಿಕೆ (Mitigation) ಕಾರ್ಯಕ್ರಮದಡಿ ನರ್ಸರಿಗಳಲ್ಲಿ ವಿವಿಧ ಜಾತಿಯ, ವಿವಿಧ ಅಳತೆಯ ಪಾಲಿಥಿನ್ ಚೀಲಗಳಲ್ಲಿ ಸಸಿಗಳನ್ನು ಬೆಳೆಸುವ ಕಾಮಗಾರಿ ಮತ್ತು ಸರ್ಕಾರಿ ಜಾಗಗಳಲ್ಲಿ ಟ್ರೆಂಚ್‌ಗಳನ್ನು ತೆಗೆಯುವ ಕಾಮಗಾರಿಗಳನ್ನು ಕೈಗೊಳ್ಳಲು ಬೆಂಗಳೂರು ಗ್ರಾಮಾಂತರ ಪ್ರಾದೇಶಿಕ ಅರಣ್ಯ ವಿಭಾಗ/ಗ್ರಾಮಾಂತರ ಸಾಮಾಜಿಕ ಅರಣ್ಯ ವಿಭಾಗದಲ್ಲಿ ನೊಂದಾಯಿತ ಅರಣ್ಯ ಗುತ್ತಿಗೆದಾರರಿಂದ ಮಾತ್ರ ಕರ್ನಾಟಕ ಸರ್ಕಾರದ ಇ-ಪ್ರೋರ್ಟಲ್ https://kppp.karnataka.gov.in ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಫಾರಂಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 21.01.2025 ಸಂಜೆ 5.00 ರವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 23.01.2025ರ ಅಪರಾಹ್ನ 12.00 ಗಂಟೆಗೆ. ತಾಂತ್ರಿಕ ಬಿಡ್‌ನಲ್ಲಿನ ಷರತ್ತುಗಳನ್ನು ಯಶಸ್ವಿಯಾಗಿ ಪೂರೈಸಿದ್ದರೆ ಮಾತ್ರ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗುವುದು ಹಾಗೂ ಷರತ್ತುಗಳನ್ನು ಪೂರೈಸಿಲ್ಲದ ಬಿಡ್‌ಗಳನ್ನು ತಿರಸ್ಕರಿಸಲಾಗುವುದು. ಆರ್ಥಿಕ ಬಿಡ್‌ನ್ನು ದಿನಾಂಕ: 24.01.2025 ರಂದು ಅಪರಾಹ್ನ 12.00 ಗಂಟೆಗೆ ತೆರೆಯಲಾಗುವುದು.

ಮೇಲ್ಕಂಡ ದಿನಾಂಕಗಳಂದು ಯಾವುದೇ ಟೆಂಡರ್ ಬಾರದಿದ್ದರೆ ಅಥವಾ ಕಾರಣಾಂತರಗಳಿಂದ ಟೆಂಡರ್ ನಡೆಯದೇ ಇದ್ದರೆ ಇದೇ ಪ್ರಕಟಣೆಯ ಷರತ್ತಿಗೊಳಪಟ್ಟು ದಿನಾಂಕ: 28.01.2025ರ ಸಾಯಂಕಾಲ 5.00 ಗಂಟೆವರೆಗೆ ಮರು ಟೆಂಡರ್ ಮುಂದುವರೆಸಲಾಗುವುದು (Auto extension) ತಾಂತ್ರಿಕ ಬಿಡ್ಡನ್ನು ದಿನಾಂಕ: 30.01.2025 ರಂದು ಮಧ್ಯಾನ 12.00 ಗಂಟೆಗೆ ತೆರೆಯಲಾಗುವುದು. ಆರ್ಥಿಕ ಬಿಡ್ಡನ್ನು ದಿನಾಂಕ: 31.01.2025 ರಂದು ತೆರೆಯಲಾಗುವುದು.

ಮೇಲಿನ ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಸಾಮಾಜಿಕ ಅರಣ್ಯ ವಿಭಾಗ, ಬೊಮ್ಮವಾರ, ದೇವನಹಳ್ಳಿ ತಾಲ್ಲೂಕು ಇಲ್ಲಿ ಸಂಪರ್ಕಿಸಬಹುದು.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ
ಸಾಮಾಜಿಕ ಅರಣ್ಯ ವಿಭಾಗ, ಬೆಂಗಳೂರು ಗ್ರಾಮಾಂತರ

ವಾಸಾಸಂಇ/ವಾಪ್ರ/4188/ಆಕಾರ್/2024-25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಚೇರಿ (ಗುಆ/ಗುನಿ-ಪೂರ್ವ), ಕೊಠಡಿ ನಂ. 101, ಅನೆಕ್ಸ್-3 ಕಟ್ಟಡ, ಬಿಬಿಎಂಪಿ, ಎನ್.ಆರ್. ಚೌಕ, ಬೆಂಗಳೂರು-560002.

ಸಂಖ್ಯೆ: ಕಾಪಾಅ(ಗುಆ/ಗುನಿ)/ಪೂರ್ವ/ಟೆಂಡರ್/77/24-25 ದಿನಾಂಕ: 07.01.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ದ್ವಿ ಲಕೋಟೆ ಪದ್ಧತಿ (ಜಿಓಕೆ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಗುಣಮಟ್ಟ ಆಶ್ವಾಸನೆ / ಗುಣಮಟ್ಟ ನಿಯಂತ್ರಣ - ಪೂರ್ವ, ಬಿಬಿಎಂಪಿ, ಬೆಂಗಳೂರು ಇವರು ವಿಶೇಷ ಆಯುಕ್ತರು, ಬಿಬಿಎಂಪಿ ಇವರ ಪರವಾಗಿ ಈ ಕೆಳಕಂಡ ಕಾಮಗಾರಿಗಳಿಗಾಗಿ ಬಿಬಿಎಂಪಿ ಅಥವಾ ಸಿಪಿಡಬ್ಲ್ಯೂಡಿ/ ಕೆಪಿಡಬ್ಲ್ಯೂಡಿ/ ರೈಲ್ವೇಸ್/ ಎಂಇಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೊಂದಾಯಿತಗೊಂಡ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಯೋಜನಾ ಮೊತ್ತ (ಲಕ್ಷ ರೂ.ಗಳಲ್ಲಿ)	ಇಎಂಡಿ ಮೊತ್ತ (ರೂ.ಗಳಲ್ಲಿ)
1	ಹಲಸೂರು ಕೆರೆಯಲ್ಲಿ ಉಳಿಕೆ ಗೇಬಿಯನ್ ಕೆಲಸ, ಪಾತ್‌ವೇ ಸುಧಾರಣೆ, ಹೊರಮೇಲ್ಮೈ ಗ್ರಿಲ್ ಕೆಲಸ ಮತ್ತು ಬಂಡ್ ಸ್ಲೋಪ್ ರಕ್ಷಣಾ ಕೆಲಸಗಳಿಗೆ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ ಸೇರಿದಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು.	1000.00	20,350/-
2	ಹಲಸೂರು ಕೆರೆಯಲ್ಲಿ ಇನ್‌ಲೆಟ್ ಕಲ್ವರ್ಟ್, ರೀಟೈನಿಂಗ್ ಗೋಡೆ ನಿರ್ಮಾಣ, ವೆಸ್ಟ್ರನ್ ಪೆರಿಫೆರಿ ನಿರ್ಮಾಣ, ಶೋರ್‌ಲೈನ್ ಗ್ರಿಲ್ ಕೆಲಸಗಳು ಮತ್ತು ಇತರೆ ಮೂಲಸೌಕರ್ಯ ಕೆಲಸಗಳಿಗೆ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ ಸೇರಿದಂತೆ ಪಿಎಂಸಿ ಸೇವೆಗಳನ್ನು ಒದಗಿಸುವುದು.	1000.00	18,750/-

ಕಾಲಾವಧಿ : ***ಯೋಜನೆ ಪೂರ್ಣಗೊಳಿಸುವವರೆಗೆ.***

ಟೆಂಡರ್ ದಿನಾಂಕಗಳು : (1) ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್ **https://kppp.karnataka.gov.in**ನಿಂದ ದಿನಾಂಕ: **10.01.2025**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಪೂರ್ವ-ಬಿಡ್ ಸಭೆಯ ದಿನಾಂಕ: **15.01.2025ರಂದು ಬೆಳಿಗ್ಗೆ 11.30 ಗಂಟೆಗೆ.** (3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **20.01.2025ರ ಸಂಜೆ 4.00 ಗಂಟೆಯವರೆಗೆ.** (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **21.01.2025ರಂದು ಸಂಜೆ 4.30 ಗಂಟೆಗೆ.** (5) ಟೆಂಡರ್ ಕಾಲಾವಧಿ: **ಟೆಂಡರ್ ಸ್ವೀಕರಿಸಿದ ಕೊನೆಯ ದಿನಾಂಕದಿಂದ 90 ದಿನಗಳು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ಕೆಪಿಪಿ ಪೋರ್ಟಲ್ **https://kppp.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು (ಗುಆ/ಗುನಿ-ಪೂರ್ವ), ಬಿಬಿಎಂಪಿ

'ಪೆರಿಫೆರಲ್ ರಿಂಗ್ ರಸ್ತೆ-2'ರ ನಿರ್ಮಾಣ • ರಿಟ್ ಅರ್ಜಿಗಳ ವಿಚಾರಣೆ

ಭೂ ಸ್ವಾಧೀನ: ಎತ್ತಿಹಿಡಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸೂರು-ಮೈಸೂರು ಮತ್ತು ತುಮಕೂರು ರಸ್ತೆ ನಡುವೆ ಸಂಪರ್ಕ ಕಲ್ಪಿಸುವ ಪೆರಿಫೆರಲ್ ರಿಂಗ್ ರಸ್ತೆ-2ರ ನಿರ್ಮಾಣಕ್ಕಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಕೈಗೊಂಡಿರುವ ಭೂಸ್ವಾಧೀನ ಪ್ರಕ್ರಿಯೆಯನ್ನು ಹೈಕೋರ್ಟ್ ಎತ್ತಿಹಿಡಿದಿದೆ.

ಈ ಸಂಬಂಧ ಕೆಂಗೇರಿ ಹೋಬಳಿಯ ಎಂ.ವನಿತಾ ಮತ್ತಿತರರು ಸಲ್ಲಿಸಿದ್ದ ರಿಟ್ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಇ.ಎಸ್.ಇಂದಿರೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ಬಿಡಿಎ, 2011ರಲ್ಲಿ ಹೊರಡಿಸಿದ್ದ ಪ್ರಾಥಮಿಕ ಹಾಗೂ 2013ರಲ್ಲಿ ಪ್ರಕಟಿಸಿದ್ದ ಅಂತಿಮ ಅಧಿಸೂಚನೆಗಳನ್ನು ಊರ್ಜಿತಗೊಳಿಸಿದೆ.

'ಒಂದು ವೇಳೆ ಜಮೀನನ್ನು ಇನ್ನೂ ಸ್ವಾಧೀನಪಡಿಸಿಕೊಂಡಿಲ್ಲ ಎಂದಾದರೆ ಕೂಡಲೇ ಸ್ವಾಧೀನಕ್ಕೆ ಪಡೆದುಕೊಳ್ಳಬೇಕು ಮತ್ತು ಆರು ತಿಂಗಳಲ್ಲಿ ಪರಿಹಾರ ಘೋಷಿಸಬೇಕು' ಎಂದು ಬಿಡಿಎಗೆ ನಿರ್ದೇಶಿಸಿರುವ ನ್ಯಾಯಪೀಠ, 'ಸಾರ್ವಜನಿಕರು ಹಾಗೂ ವಾಹನಗಳ ಸುಗಮ ಸಂಚಾರಕ್ಕೆ ಬಾಕಿ ಇರುವ ಟ್ರಕ್ ಟರ್ಮಿನಲ್, ಸ್ಕೈ ವಾಕ್, ಬಸ್ ಡಿಪೊ ಮತ್ತಿತರ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು' ಎಂದು ಹೇಳಿದೆ.

'ಬಿಡಿಎ ರಸ್ತೆ ಅಭಿವೃದ್ಧಿ ಯೋಜನೆಯಲ್ಲಿ ಮಾರ್ಗ ಬದಲಾವಣೆ ಮಾಡಿದೆ' ಎಂಬ ಅರ್ಜಿದಾರರ ವಾದವನ್ನು ತಳ್ಳಿಹಾಕಿರುವ ನ್ಯಾಯಪೀಠ, 'ಈಗಾಗಲೇ ಪೆರಿಫೆರಲ್ ರಿಂಗ್ ರಸ್ತೆ ಭಾಗ-2ರಲ್ಲಿ ಬಿಡಿಎ ಶೇ 80ರಷ್ಟು ಕಾಮಗಾರಿಯನ್ನು ಪೂರ್ಣಗೊಳಿಸಿದೆ. ಸಾರ್ವಜನಿಕರು ಹಾಗೂ ವಾಹನಗಳ ಸುರಕ್ಷಿತ ಸಂಚಾರಕ್ಕೆ ಅನುಕೂಲವಾಗುವಂತೆ ಮೆಟ್ರೊ ನಿಲ್ದಾಣ, ಸರ್ವೀಸ್ ರಸ್ತೆ ನಿರ್ಮಾಣ ಮತ್ತಿತರ ಕಾಮಗಾರಿ ಗಳನ್ನು ಕೈಗೊಳ್ಳಬೇಕಿದೆ. ಹಾಗಾಗಿ, ಈ ಹಂತದಲ್ಲಿ ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಹಸ್ತಕ್ಷೇಪ ಮಾಡಲಾಗದು' ಎಂದು ವಿವರಿಸಿದೆ.

ಅರ್ಜಿದಾರರ ಕೋರಿಕೆ ಏನಿತ್ತು?: 'ಅಧಿಸೂಚನೆ ಬಿಡಿಎ ಕಾಯ್ದೆ-1976ರ ಕಲಂ 36 (3)ಕ್ಕೆ ವಿರುದ್ಧವಾಗಿದೆ. ಪ್ರಾಥಮಿಕ ಹಾಗೂ ಅಂತಿಮ ಅಧಿಸೂಚನೆಯ ಮಧ್ಯೆ ಸಾಕಷ್ಟು ಅಂತರವಿದೆ. ಅಂತೆಯೇ, ಭೂ ಮಾಲೀಕರಿಗೆ ಈತನಕ ಪರಿಹಾರ ಪ್ರಕಟಿಸಿಲ್ಲ. ಹಾಗಾಗಿ, ಅಧಿಸೂಚನೆಗಳನ್ನು ರದ್ದುಗೊಳಿಸಬೇಕು' ಎಂದು ಕೋರಿದ್ದರು.

ಬಿಡಿಎ ಪ್ರತಿವಾದ ಏನಿತ್ತು?: 'ಪರಿಹಾರದ ನೋಟಿಸ್‌ಗಳನ್ನು ಈಗಾಗಲೇ ಭೂ ಮಾಲೀಕರಿಗೆ ನೀಡಲಾಗಿದೆ. ಕೆಲವು ಭೂ ಮಾಲೀಕರ ಜಮೀನಿನ ಮಹಜರು ನಡೆಸಿ ಎಂಜಿನಿಯರಿಂಗ್ ವಿಭಾಗಕ್ಕೆ ಜಮೀನು ಹಸ್ತಾಂತರ ಮಾಡಲಾಗಿದೆ. ಕರ್ನಾಟಕ ನಗರ ಮತ್ತು ಪಟ್ಟಣ ಯೋಜನಾ ಕಾಯ್ದೆ-1961ರ ಪ್ರಕಾರ ರಸ್ತೆ ನಿರ್ಮಾಣ ಯೋಜನೆ ರದ್ದಾಗಿಲ್ಲ. ಒಟ್ಟು 10.35 ಕಿ.ಮೀ. ಪ್ರಮುಖ ರಸ್ತೆ ನಿರ್ಮಿಸಬೇಕಿತ್ತು. ಅದರಲ್ಲಿ 8.53 ಕಿ.ಮೀ. ರಸ್ತೆ ನಿರ್ಮಿಸಲಾಗಿದೆ. ಉಳಿದ 1.8 ಕಿ.ಮೀ. ರಸ್ತೆ ಕಾಮಗಾರಿ ಮಾತ್ರ ಬಾಕಿ ಇದೆ. ಹಾಗಾಗಿ, ಅರ್ಜಿಗಳನ್ನು ವಜಾಗೊಳಿಸಬೇಕು' ಎಂದು ಬಿಡಿಎ ನ್ಯಾಯಪೀಠಕ್ಕೆ ಮನವಿ ಮಾಡಿತ್ತು.

'ವಯಸ್ಸು ದೇಹಕ್ಕಷ್ಟೇ, ಮನಸ್ಸಿಗಲ್ಲ'

'ರೇವಾ' ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ಯಾರಾ ಅಥ್ಲೀಟ್ ಮಾಲತಿ ಹೊಳ್ಳ

ಪ್ರಜಾವಾಣಿ ವಾರ್ತೆ

ಯಲಹಂಕ: ರೇವಾ ವಿಶ್ವವಿದ್ಯಾಲಯದ ಸಂಸ್ಥಾಪನಾ ದಿನಾಚರಣೆಯ ಪ್ರಯುಕ್ತ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪ್ಯಾರಾ ಅಥ್ಲೀಟ್ ಮಾಲತಿ ಹೊಳ್ಳ ಮತ್ತು ಹೃದ್ರೋಗ ತಜ್ಞ ಡಾ. ದೇವಿಶೆಟ್ಟಿ ಅವರಿಗೆ 'ರೇವಾ-ಜೀವ ಮಾನ ಸಾಧನೆ' ಮತ್ತು ಇತಿಹಾಸತಜ್ಞ ವಿಕ್ರಮ್ ಸಂಪತ್ ಅವರಿಗೆ 'ರೇವಾ-ಎಕ್ಸಲೆನ್ಸ್' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಮಾಲತಿ ಹೊಳ್ಳ, ಪೋಲಿಯೊದೊಂದಿಗಿನ ತಮ್ಮ ಹೋರಾಟ ಜೀವನದ ಕುರಿತು ವಿವರಿಸಿದರು. 'ವಯಸ್ಸಾಗುವುದು ದೇಹಕ್ಕೇ ಹೊರತು ಮನಸ್ಸು ಮತ್ತು ವಿಚಾರಧಾರೆಗಳಿಗಲ್ಲ. ನೋವಾಗುವುದು ದೇಹದ ಭಾಗಗಳಿಗೆ, ಆದರೆ ಆಲೋಚನೆಗಳಿಗಲ್ಲ. ನನ್ನ ಅಂಗಾಂಗ ಊನವಾಗಿದ್ದರೂ ನನ್ನ ಜೀವನದ ಗುರಿ, ಕನಸುಗಳು ಹಾಗೂ ದೃಢ ನಿರ್ಧಾರಗಳಿಗೆ ಎಂದಿಗೂ ಊನವಾಗಿಲ್ಲ' ಎಂದರು.

ವಿಕ್ರಮ್ ಸಂಪತ್ ಮಾತನಾಡಿ, 'ಈ ಹಿಂದೆ ಭಾರತದ ನಳಂದಾ, ತಕ್ಷಶಿಲಾ, ವಿಕ್ರಮಶಿಲಾ ಹಾಗೂ ಓದಂಪುರಿಯಂತಹ ವಿಶ್ವವಿದ್ಯಾಲಯಗಳಿಗೆ ಪಾಶ್ಚಿಮಾತ್ಯರು ಬಂದು ಜ್ಞಾನಾರ್ಜನೆ ಮಾಡುತ್ತಿದ್ದರು. ಕಾಲಕ್ರಮೇಣ ತೀವ್ರ ಆಕ್ರಮಣಗಳು ಮತ್ತು ವಸಾಹತುಶಾಹಿ ಪರಿಸ್ಥಿತಿಯಿಂದಾಗಿ ಭಾರತ ಬದಲಾಗಿತ್ತು. ಆದರೆ ಇದೀಗ ಭಾರತವು ತನ್ನ ಇತಿಹಾಸದ ವೈಭವವನ್ನು ಮರಳಿ ಪಡೆಯುತ್ತಿದ್ದು, ಇಂದಿನ ವಿಶ್ವವಿದ್ಯಾಲಯಗಳು ಇದಕ್ಕೆ ದೊಡ್ಡ ಕೊಡುಗೆ ನೀಡುತ್ತಿವೆ' ಎಂದು ತಿಳಿಸಿದರು.

ರೇವಾ ವಿಶ್ವವಿದ್ಯಾಲಯದ ಕುಲಾಧಿಪತಿ ಪಿ.ಶ್ಯಾಮರಾಜು ಮಾತನಾಡಿ, 'ನಾವು ಬದುಕುತ್ತಿರುವ ಸಮಾಜಕ್ಕೆ ಏನಾದರೂ ಕೊಡುಗೆ ನೀಡಬೇಕೆಂಬ ಉದ್ದೇಶದೊಂದಿಗೆ ಈ ವಿಶ್ವವಿದ್ಯಾಲಯವನ್ನು ಆರಂಭಿಸಲಾಯಿತು. 240 ವಿದ್ಯಾರ್ಥಿಗಳಿಂದ ಆರಂಭವಾಗಿ ಇಂದು 15 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. 1500ಕ್ಕೂ ಹೆಚ್ಚು ಬೋಧಕರು ಹಾಗೂ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ' ಎಂದರು.

ಡಾ.ದೇವಿಶೆಟ್ಟಿ ಅವರು ಪ್ರಶಸ್ತಿ ಸ್ವೀಕರಿಸಲು ಬಂದಿರಲಿಲ್ಲ. ಹೀಗಾಗಿ ಅವರಿಗೆ ನೀಡಿದ್ದ 'ಜೀವಮಾನ ಸಾಧನೆ' ಪ್ರಶಸ್ತಿ ಫಲಕವನ್ನು ಆಯೋಜಕರು ಸಭಿಕರಿಗೆ ತೋರಿಸಿದರು.

ಮಾಲತಿ ಹೊಳ್ಳ ಅವರಿಗೆ 'ರೇವಾ ಜೀವಮಾನ ಸಾಧನೆ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ರೇವಾ ವಿವಿಯ ಕುಲಸಚಿವೆ (ಮೌಲ್ಯಮಾಪನ) ಬೀನಾ, ಕುಲಪತಿ ಸಂಜಯ್‌ಆರ್‌ಚಿಟ್ನಿಸ್, 'ರೇವಾಎಕ್ಸಲೆನ್ಸ್' ಪ್ರಶಸ್ತಿ ಪುರಸ್ಕೃತ ವಿಕ್ರಮ್ ಸಂಪತ್, ಕುಲಾಧಿಪತಿ ಪಿ.ಶ್ಯಾಮರಾಜು, ಸಹ ಉಪಕುಲಪತಿ ಉಮೇಶ್ ಎಸ್‌ರಾಜು, ಆರ್‌ಡಬ್ಲ್ಯೂ.ಅಲೆಕ್ಸಾಂಡರ್ ಜೇಸುದಾಸನ್ ಕಾರ್ಯಕ್ರಮದಲ್ಲಿ ಹಾಜರಿದ್ದರು

ತೆಂಗಿನಕಾಯಿ ಒಂದಕ್ಕೆ ₹50

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿನಿತ್ಯ ಅಡುಗೆಗೆ ಬೇಕಾಗುವ ತೆಂಗಿನಕಾಯಿಯ ದರ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಗ್ರಾಹಕರಿಗೆ ಬೆಲೆ ಏರಿಕೆಯ ಬಿಸಿ ತಟ್ಟಿದೆ. ಅಂಗಡಿಗಳಲ್ಲಿ ಒಂದು ತೆಂಗಿನಕಾಯಿ ₹50ರಂತೆ ಮಾರಾಟವಾಗುತ್ತಿದೆ.

ಸಾಧಾರಣ ಗಾತ್ರದ ಕಾಯಿ ₹30ರಿಂದ ₹40ಕ್ಕೆ ಮಾರಾಟವಾಗುತ್ತಿದೆ. ದೊಡ್ಡ ಗಾತ್ರದ ಕಾಯಿಗಳ ದರ ₹45ರಿಂದ ₹50ರವರೆಗೆ ಇದೆ.

ಮಳೆ ಕೊರತೆಯ ಕಾರಣದಿಂದ ತೆಂಗಿನ ಮರಗಳಿಗೆ ನೀರಿಲ್ಲದೇ ತೋಟಗಳು ಒಣಗಿದ್ದರಿಂದ ಫಸಲಿನ ಕೊರತೆ ಉಂಟಾಗಿತ್ತು. ಇತ್ತೀಚಿನ ವರ್ಷಗಳಲ್ಲಿ ಎಳನೀರಿಗೆ ಬೇಡಿಕೆ ಹೆಚ್ಚಾಗುತ್ತಿರುವುದರಿಂದ ತೆಂಗಿನ ಕಾಯಿಗಳನ್ನು ಎಳನೀರಿಗಾಗಿ ಕೀಳಲಾಗುತ್ತಿದೆ ' ಎಂದು ವ್ಯಾಪಾರಿಗಳು ತಿಳಿಸಿದರು.

ಮಗುವನ್ನು ಅಜ್ಜಿಯ ಸುಪರ್ದಿಗೆ ಒಪ್ಪಿಸಲು ಕೋರ್ಟ್ ನಕಾರ

ನವದೆಹಲಿ (ಪಿಟಿಐ): ಆತ್ಮಹತ್ಯೆ ಮಾಡಿಕೊಂಡ ಟೆಕಿ ಅತುಲ್ ಸುಭಾಷ್ ಅವರ ತಾಯಿಯು ಮೊಮ್ಮಗನನ್ನು (ಅತುಲ್ ಅವರ ಮಗ) ತಮ್ಮ ಸುಪರ್ದಿಗೆ ನೀಡಬೇಕು ಎಂದು ಕೋರಿರುವುದನ್ನು ಪುರಸ್ಕರಿಸಲು ನಿರಾಕರಿಸಿರುವ ಸುಪ್ರೀಂ ಕೋರ್ಟ್, 'ಮಗುವಿಗೆ ಈಕೆ ಅಪರಿಚಿತೆ' ಎಂದು ಹೇಳಿದೆ.

ವಿಚಾರಣೆ ನಡೆಸುತ್ತಿರುವ ನ್ಯಾಯಾಲಯದ ಎದುರು ಮಗುವಿನ ಸುಪರ್ದಿಯ ವಿಷಯ ಪ್ರಸ್ತಾಪಿಸಬಹುದು ಎಂದು ನ್ಯಾ. ಬೇಲಾ ಎಂ. ತ್ರಿವೇದಿ ಮತ್ತು ಎನ್. ಕೋಟೀಶ್ವರ ಸಿಂಗ್ ಅವರು ಇರುವ ವಿಭಾಗೀಯ ಪೀಠವು ಹೇಳಿದೆ. 'ಹೀಗೆ ಹೇಳುವುದಕ್ಕೆ ಬೇಸರವಾಗುತ್ತದೆ. ಆದರೆ, ಮಗುವಿನ ಪಾಲಿಗೆ ಅರ್ಜಿದಾರರು ಅಪರಿಚಿತರು. ನೀವು ಬಯಸಿದರೆ ಮಗುವನ್ನು ಭೇಟಿ ಮಾಡಬಹುದು. ಮಗುವನ್ನು ನಿಮ್ಮ ಸುಪರ್ದಿಗೆ ಪಡೆಯಬೇಕಿದ್ದರೆ ಅದಕ್ಕೆ ಪ್ರತ್ಯೇಕ ಪ್ರಕ್ರಿಯೆ ಇದೆ' ಎಂದು ಪೀಠವು ಹೇಳಿತು.

ಸುಭಾಷ್ ಅವರ ತಾಯಿ ಅಂಜು ದೇವಿ ಅವರು ನಾಲ್ಕು ವರ್ಷ ವಯಸ್ಸಿನ ಮೊಮ್ಮಗನನ್ನು ತಮ್ಮ ಸುಪರ್ದಿಗೆ ನೀಡಬೇಕು ಎಂದು ಕೋರಿ ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿದ್ದಾರೆ.

'ಮಗುವು ಹರಿಯಾಣದ ವಸತಿ-ಶಾಲೆಯೊಂದರಲ್ಲಿ ವಿದ್ಯಾಭ್ಯಾಸ ಮಾಡುತ್ತಿದೆ' ಎಂದು ಸುಭಾಷ್ ಅವರಿಂದ ಬೇರೆಯಾಗಿದ್ದ ಪತ್ನಿ ನಿಕಿತಾ ಸಿಂಘಾನಿಯಾ ಪರ ವಕೀಲರು ವಿಚಾರಣೆ ಸಂದರ್ಭದಲ್ಲಿ ತಿಳಿಸಿದರು.

ಅಹೋರಾತ್ರಿ ಮುಷ್ಕರ

ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಹೋರಾಟ ಆರಂಭಿಸಿರುವ ಆಶಾ ಕಾರ್ಯಕರ್ತೆಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ರಾತ್ರಿ ಕೊರೆಯುವ ಚಳಿಯ ಮಧ್ಯೆಯೇ ಅಹೋರಾತ್ರಿ ಮುಷ್ಕರ ಮುಂದುವರಿಸಿದರು -ಪ್ರಜಾವಾಣಿ ಚಿತ್ರ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರವರ ಕಚೇರಿ, ಅನೆಕ್ಸ್ ಕಟ್ಟಡ-1, ನರಸಿಂಹರಾಜ ಚೌಕ, ಬೆಂಗಳೂರು-560002

ಸಂ.: BBMP/C.Comm/PSR(G)/2857/2024-25 ನಮೂನೆ-3 (ನಿಯಮ 3ರ ಉಪ-ನಿಯಮ (3)ನ್ನು ನೋಡಿ) ದಿನಾಂಕ : 04.01.2025

ಸಾರ್ವಜನಿಕ ಪ್ರಕಟಣೆ

ದಿನಾಂಕ : 05.01.2024 ರಂದು ಈ ದೈನಂದಿನ ಪತ್ರಿಕೆಯಲ್ಲಿ ಮಾನ್ಯ ಮುಖ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ :BBMP/C.Comm/PSR(G)/2857/2024-25 ದಿನಾಂಕ : 04.01.2025 ರಂತೆ ಅನುಮೋದನೆಯಾದ ಅಧಿಸೂಚನೆಯು ತಾಂತ್ರಿಕ ತೊಂದರೆಯಿಂದ ಪ್ರಕಟಣೆಯಲ್ಲಿನ **Market Value** ಕಾಲಂನಲ್ಲಿನ ಮಾಹಿತಿಯು ತಪ್ಪಾಗಿ ನಮೂದಾಗಿ ಪ್ರಕಟವಾಗಿದ್ದು, ಈ ಕೆಳಕಂಡಂತೆ ಅಧಿಸೂಚನೆಯನ್ನು ತಿದ್ದುಪಡಿ ಮಾಡಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ಪಟ್ಟಣ ಮತ್ತು ದೇಶ ಯೋಜನೆ ಕಾಯಿದೆ 1961 ರ ಸೆಕ್ಷನ್ 14-ಬಿ ರಲ್ಲಿ ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತಾ ಈ ಕೆಳಗಿನ ಷೆಡ್ಯೂಲ್ ನಲ್ಲಿ ನಮೂದಿಸಿರುವ "ಕೊತನೂರು ರಸ್ತೆಯಿಂದ ಆವಲಹಳ್ಳಿ, ಬೈರತಿ, ಬಿಳಿಶಿವಾಲೆ, ಆಡೂರು, ಬಿದರಹಳ್ಳಿ, ಹಿರಂಡಹಳ್ಳಿ, ಮತ್ತು ರಾಂಪುರ ರಸ್ತೆವರೆಗಿನ" 'ಪ್ರದೇಶ'ವು ಅನುಮೋದಿತ ಮಹಾಯೋಜನೆ 2015 ರ ಪ್ರಸ್ತಾವನೆಗಳನ್ನು ಅನುಷ್ಠಾನಗೊಳಿಸಲು ಅಗಲೀಕರಣಕ್ಕಾಗಿ ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರಿಗೆ ಅವಶ್ಯಕವಿರುತ್ತದೆ.

ಕೆಳಗಿನ ಭೂ /ಕಟ್ಟಡ ಮಾಲೀಕರು ನ್ಯಾಯಯುತ ಪರಿಹಾರ ಮತ್ತು ಭೂಸ್ವಾಧೀನ, ಪುನರ್ವಸತಿ ಮತ್ತು ಮರುವಸತಿ ಕಾಯಿದೆ 2013 ರಲ್ಲಿ ಪಾರದರ್ಶಕತೆ ಹಕ್ಕಿನ ಅಡಿಯಲ್ಲಿ ವಿತ್ತೀಯ ಪರಿಹಾರದ ಬದಲಿಗೆ ಅಭಿವೃದ್ಧಿ ಹಕ್ಕುಗಳನ್ನು ಆರಿಸಿಕೊಂಡಿದ್ದಾರೆ. ಭೂ ವಿಸ್ತೀರ್ಣಕ್ಕಿಂತ ಎರಡು ಪಟ್ಟು ಹೆಚ್ಚು ಒಪ್ಪಿಸಿದ ಭೂ ಪ್ರದೇಶಕ್ಕೆ ಮತ್ತು ಎರಡು ಪಟ್ಟು ಒಪ್ಪಿಸಿದ ಕಟ್ಟಡ ಪ್ರದೇಶಕ್ಕೆ ಮತ್ತು ಒಪ್ಪಿಸಿದ ಕಟ್ಟಡದ ಪ್ರದೇಶದ ಮೌಲ್ಯದಿಂದ ಅಂದಾಜಿಸಿದಂತೆ (ಪಿಡಬ್ಲ್ಯೂಡಿ ಮಾನದಂಡಗಳ ಪ್ರಕಾರ) ಕಟ್ಟಡವನ್ನು ನಿರ್ಮಿಸಿದ ಭೂಮಿಯ ಭಾಗಿಸಲಾದ ಮಾರುಕಟ್ಟೆ ಮೌಲ್ಯದ ಅಭಿವೃದ್ಧಿ ಹಕ್ಕುಗಳನ್ನು ಪ್ರಾಧಿಕಾರವು ನೀಡಲಿದೆ.

ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಸಾರ್ವಜನಿಕ ಉದ್ದೇಶಕ್ಕಾಗಿ ಅವಶ್ಯಕವಿರುವ ಸ್ವತ್ತು ಮತ್ತು ಸ್ವತ್ತಿನ ಮಾಲೀಕರು ಹಾಗೂ ಆಸಕ್ತ ವ್ಯಕ್ತಿಗಳಿಗೆ ವಿತ್ತೀಯ ಪರಿಹಾರದ ಬದಲಿಗೆ ಅಭಿವೃದ್ಧಿ ಹಕ್ಕುಗಳ ಪ್ರಮಾಣ ಪತ್ರಗಳನ್ನು (ಡಿಆರ್‌ಸಿಗಳು) ವಿತರಿಸಲಾಗುವುದು. ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳಿದ್ದಲ್ಲಿ ವಿಶೇಷ ಭೂ ಸ್ವಾಧೀನಾಧಿಕಾರಿಗಳು, ಡೆಪ್ಯೂಟಿ ಕಮಿಷನರ್‌ರವರ ಕಚೇರಿ (ಭೂ ಸ್ವಾಧೀನ & ಟಿಡಿಆರ್), ಮುಖ್ಯ ಕಚೇರಿ, ಬಿಬಿಎಂಪಿ ಇವರನ್ನು ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಸಂಪರ್ಕಿಸಬಹುದು.

ಡಿಆರ್‌ಸಿ ನೀಡಬೇಕಾದ ಭೂಮಿ/ಕಟ್ಟಡದ ಪ್ರದೇಶ ಮತ್ತು ಭೂ ಮಾಲೀಕರ ಪಟ್ಟಿ.

ಜಿಲ್ಲೆಯ ಹೆಸರು: ಬೆಂಗಳೂರು ನಗರ | ತಾಲ್ಲೂಕಿನ ಹೆಸರು: ಬೆಂಗಳೂರು ಪೂರ್ವ | ಗ್ರಾಮದ ಹೆಸರು: ಅವಲಹಳ್ಳಿ

Sl No	Sy No/ Khatha No	Type of Land		Nature of Land			Dimension of the land / plot and extent in sq.m		Boundaries of the land /plot				Building Details			Present activity on Land/ Building (Specify Specific activity such as shop, office, factory, apartment individual house etc.,	Market (guidelines) value of the land per Sqm	Name and address of the owner of the plot/ land for which DRC is to be issued
		Vacant	Built up	Agriculture	Converted Undeveloped	Approved layout / developed land Building Site	Dimension	Extent	North	South	East	West	Extent in Sqm	Type of Construction and No. of Floors	Floor area Ratio			
1	ಸರ್ವೆ ನಂ.21/2, ಖಾತಾ ನಂ.328/21/2	ಖಾಲಿ ಜಾಗ		ಕೃಷಿ ಜಾಗ			76.50 ಚದರ ಮೀ		ಸರ್ವೆ ನಂ.21/2 ರ ಉಳಿದ ಭಾಗ	ಸರ್ವೆ ನಂ.21/2 ರ ಉಳಿದ ಭಾಗ	ರಸ್ತೆ	ಸರ್ವೆ ನಂ.21/2 ರ ಉಳಿದ ಭಾಗ	ಇಲ್ಲ	ಇಲ್ಲ	ಇಲ್ಲ	ಖಾಲಿ	14,826/-	ಶ್ರೀಮತಿ ಲಕ್ಷ್ಮಮ್ಮ W/o ಮುನಿಚಿನ್ನಪ್ಪ ವಿಳಾಸ ಆವಲಹಳ್ಳಿ ಗ್ರಾಮ, ವಿರ್ಗೋನಗರ ಪೋಸ್ಟ್, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲೂಕು.

ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಕೆಳಗೆ ನಿರ್ದಿಷ್ಟಪಡಿಸಿದ ವಿಳಾಸದಲ್ಲಿ ಸಲ್ಲಿಸಬೇಕು:

ವಿಭಾಗ / ಉಪ-ವಿಭಾಗ / ಶಾಖೆ ಕಚೇರಿಗಳ ಹೆಸರು ಮತ್ತು ವಿಳಾಸ : ಡೆಪ್ಯೂಟಿ ಕಮಿಷನರ್, ಭೂಸ್ವಾಧೀನ ಮತ್ತು ಟಿಡಿಆರ್. 2ನೇ ಮಹಡಿ, ಕೊಠಡಿ ಸಂಖ್ಯೆ: 208, ಅನೆಕ್ಸ್ ಬಿಲ್ಡಿಂಗ್-3, ಎನ್.ಆರ್. ಚೌಕ, ಬಿಬಿಎಂಪಿ, ಬೆಂಗಳೂರು-560002

ಸಹಿ/- ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನಗರದಲ್ಲಿ ಇಂದು

ವಾರ್ಷಿಕೋತ್ಸವ ದಿನಾಚರಣೆ: ಅತಿಥಿಗಳು: ಟಿ.ಎಚ್. ಅಂಜನಪ್ಪ, ನಾಗರಾಜಯ್ಯ, ಬಿ.ಆರ್. ರವಿಶಂಕರ್, ಜಿ. ಮಂಜುಳಾದೇವಿ, ಬಿ.ಆರ್. ಪ್ರಸನ್ನ ಕುಮಾರ್, ಆಯೋಜನೆ: ಆರ್.ಟಿ. ನಗರ ಪಬ್ಲಿಕ್ ಸ್ಕೂಲ್, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ವೈಯಾಲಿ ಕಾವಲ್, ಬೆಳಿಗ್ಗೆ 10.30

ಮಂಥನ್, ಎಕ್ಸ್‌ಪೋರ್ಟ್ ಎಕ್ಸಲೆನ್ಸ್ ಪ್ರಶಸ್ತಿ-2025: ಅತಿಥಿಗಳು: ಥಾವರಚಂದ್ ಗೆಹಲೋತ್, ಡಾ.ಸಿ. ಎನ್. ಮಂಜುನಾಥ್, ಅಧ್ಯಕ್ಷತೆ: ಎಂ.ಜಿ. ಬಾಲಕೃಷ್ಣ, ಆಯೋಜನೆ: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ, ಸ್ಥಳ: ಸರ್ ಎಂ.ವಿ. ಸಭಾಂಗಣ, ಎಫ್‌ಕೆಸಿಸಿಐ, ಕೆ.ಜಿ. ರಸ್ತೆ, ಬೆಳಿಗ್ಗೆ 11

ಥಾವರಚಂದ್ ಗೆಹಲೋತ್

ಧನುರ್ಮಾಸದ ಸಂಗೀತ ರುದ್ರ ಸಹಿತ ಇಷ್ಟಲಿಂಗ ಮಹಾಶಿವ ಪೂಜೆ, ಸಿದ್ಧಾಂತ ಶಿಖಾಮಣಿ ಆಧ್ಯಾತ್ಮಿಕ ಪ್ರವಚನ: 'ವೀರಶೈವಪಂಚಸೂತ್ರಾಣಿ' ಗ್ರಂಥ ಬಿಡುಗಡೆ: ಸಾನ್ನಿಧ್ಯ: ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರು, ಆಯೋಜನೆ: ಜಗದ್ಗುರು ವಿಶ್ವಾರಾಧ್ಯ ಜನಕಲ್ಯಾಣ ಪ್ರತಿಷ್ಠಾನ, ಸ್ಥಳ: ಜಗಜ್ಯೋತಿ ಬಸವೇಶ್ವರ ಸುಜ್ಞಾನ ಮಂಟಪ, ವಿಜಯನಗರ, ಸಂಜೆ 6ರಿಂದ

ವಾರ್ಷಿಕೋತ್ಸವ: ತಬಲಾ-ಮೃದಂಗ ಜುಗಲ್‌ಬಂದಿ: ತಬಲಾ: ರವೀಂದ್ರ ಯಾವಗಲ್, ಮೃದಂಗ: ಆನೂರು ಅನಂತಕೃಷ್ಣ ಶರ್ಮ, ಪಿಟೀಲು ಲೆಹ್ರಾ: ರಂಜನ್ ಕುಮಾರ್, ಆಯೋಜನೆ ಮತ್ತು ಸ್ಥಳ: ರಾಮಕೃಷ್ಣ ಮಠ, ಬಸವನಗುಡಿ, ಸಂಜೆ 5.30ರಿಂದ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಈಜಿಪುರ ಮೇಲ್ಸೇತುವೆ: ಯೋಜನಾ ವಿಭಾಗದ ಎಂಜಿನಿಯರ್‌ಗಳಿಗೆ ಗಡುವು

ಕಾಮಗಾರಿ ವಿಳಂಬ: ಸಚಿವರ ಅಸಮಾಧಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈಜಿಪುರ ಮೇಲ್ಸೇತುವೆ ಕಾಮಗಾರಿ ವಿಳಂಬಕ್ಕೆ ಆಕ್ರೋಶ ವ್ಯಕ್ತಪಡಿಸಿರುವ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ನಿಧಾನಗತಿಗೆ ಕಾರಣರಾದ ಯೋಜನೆ ವಿಭಾಗದ ಎಂಜಿನಿಯರ್‌ಗಳನ್ನು ಮಂಗಳವಾರ ತರಾಟೆಗೆ ತೆಗೆದುಕೊಂಡಿದ್ದಾರೆ.

ಈಜಿಪುರ ಮೇಲ್ಸೇತುವೆ ಕಾಮಗಾರಿಯ ಪರಿಶೀಲನಾ ಸಭೆ ನಡೆಸಿದ ಸಚಿವರು, ಏಳು ವರ್ಷದಿಂದ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸದ ಕೇಂದ್ರ ಯೋಜನಾ ವಿಭಾಗದ ಮುಖ್ಯ ಎಂಜಿನಿಯರ್ ಲೋಕೇಶ್ ಹಾಗೂ ಸಂಬಂಧಪಟ್ಟ ಎಂಜಿನಿಯರ್‌ಗಳ ಕಾರ್ಯವೈಖರಿ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ರಾಮಲಿಂಗಾರೆಡ್ಡಿ

ಡಿಸೆಂಬರ್ ಅಂತ್ಯಕ್ಕೆ ಮೇಲ್ಸೇತುವೆ ಕಾಮಗಾರಿ ಮುಗಿಸಬೇಕು ಎಂದು ಎಂಜಿನಿಯರ್‌ಗಳಿಗೆ ಸೂಚಿಸಲಾಗಿದೆ. ಪ್ರತಿ 15 ದಿನಕ್ಕೊಮ್ಮೆ ಮೇಲ್ಸೇತುವೆ ಕಾಮಗಾರಿಯನ್ನು ಪರಿಶೀಲಿಸುವ ಜವಾಬ್ದಾರಿಯನ್ನು ಯೋಜನೆ ವಿಭಾಗದ ವಿಶೇಷ ಆಯುಕ್ತ ಅವಿನಾಶ್ ಮೆನನ್ ರಾಜೇಂದ್ರ ಅವರಿಗೆ ವಹಿಸಿದ್ದಾರೆ. ಕಾಮಗಾರಿ ಪ್ರಗತಿ, ಬಿಲ್ ಪಾವತಿ ಸೇರಿದಂತೆ ಯಾವುದೇ ವಿಳಂಬವಾಗದಂತೆ ಅವರು ಮೇಲ್ವಿಚಾರಣೆ ನಡೆಸಲು ಸಚಿವರು ಆದೇಶಿಸಿದ್ದಾರೆ. 'ಎಂಜಿನಿಯರ್‌ಗಳು ಅಸಡ್ಡೆ ತೋರುತ್ತಿದ್ದಾರೆ. ಅವರ ಅಸಹಕಾರದಿಂದ ಕಾಮಗಾರಿ ವಿಳಂಬವಾಗುತ್ತಿದೆ' ಎಂದು ತಿಳಿಸಿದರು.

ಪಕ್ಷದ ಅಧ್ಯಕ್ಷ ಸ್ಥಾನ ಬದಲಾವಣೆ ಚರ್ಚೆ ನಡೆದಿಲ್ಲ: ನಿಖಿಲ್

ಪ್ರಜಾವಾಣಿ ವಾರ್ತೆ

ನಿಖಿಲ್ ಕುಮಾರಸ್ವಾಮಿ

ಚನ್ನಪಟ್ಟಣ: ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದ ಬಗ್ಗೆ ಪಕ್ಷದ ಚೌಕಟ್ಟಿನಲ್ಲಿ ಯಾವುದೇ ಚರ್ಚೆ ಆಗಿಲ್ಲ ಎಂದು ಜೆಡಿಎಸ್ ಯುವ ಘಟಕದ ರಾಜ್ಯ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದ್ದಾರೆ.

ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ಪಕ್ಷದ ರಾಜ್ಯ ಅಧ್ಯಕ್ಷರ ನೇಮಕದ ವಿಚಾರ ಗಮನಕ್ಕೆ ಬಂದಿಲ್ಲ. ಎಚ್‌.ಡಿ.ಕುಮಾರಸ್ವಾಮಿ ಅವರೇ ಸದ್ಯ ಅಧ್ಯಕ್ಷ ಸ್ಥಾನದಲ್ಲಿ ಮುಂದುವರಿಯುತ್ತಾರೆ. ಮುಂದೆ ಕಾರ್ಯಕರ್ತರು ಬಯಸಿದ ಹಾಗೆ ಆಗಲಿದೆ ಎಂದು ಸ್ಪಷ್ಟಪಡಿಸಿದರು.

ಮಾರ್ಚ್, ಏಪ್ರಿಲ್‌ನಲ್ಲಿ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆ ನಡೆಯುವ ಸಾಧ್ಯತೆ ಇದೆ. ಚುನಾವಣೆಗೆ ಸಿದ್ಧತೆ ಕುರಿತು ಚರ್ಚಿಸಲು ಎಚ್‌.ಡಿ.ಕುಮಾರಸ್ವಾಮಿ ನೇತೃತ್ವದಲ್ಲಿ ಜ.12ರಂದು ಪಕ್ಷದ ಕಚೇರಿಯಲ್ಲಿ ಸಭೆ ಕರೆಯಲಾಗಿದೆ ಎಂದು ತಿಳಿಸಿದರು.

ನಿಧನ ವಾರ್ತೆ

ಎ.ಪಿಳ್ಳಪ್ಪ

ನೆಲಮಂಗಲ: ನಗರಸಭೆ ಸದಸ್ಯೆ ರಾಜಮ್ಮ ಅವರ ಪತಿ ಪುರಸಭೆ ಮಾಜಿ ಅಧ್ಯಕ್ಷ ಎ.ಪಿಳ್ಳಪ್ಪ(57) ಅವರು ಅನಾರೋಗ್ಯದಿಂದ ಮಂಗಳವಾರ ಬೆಳಿಗ್ಗೆ ಪಟ್ಟಣದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ.

ಮೃತರಿಗೆ ಒಬ್ಬ ಪುತ್ರ ಇದ್ದಾನೆ. ತಾಲ್ಲೂಕಿನ ಗೊಲ್ಲಹಳ್ಳಿಯ ಅವರ ತೋಟದಲ್ಲಿ ಬುಧವಾರ ಮಧ್ಯಾಹ್ನ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಐಶ್ವರ್ಯಾ ವಿರುದ್ಧ 3ನೇ ಎಫ್‌ಐಆರ್

ಸ್ತ್ರೀರೋಗ ತಜ್ಞೆಗೆ ₹5.03 ಕೋಟಿ ವಂಚನೆ ಆರೋಪ • ಐಶ್ವರ್ಯಾ ಪತಿ ಸೇರಿ ನಾಲ್ವರ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಐಶ್ವರ್ಯಾ ಗೌಡ

ಬೆಂಗಳೂರು: ಹಣ, ಚಿನ್ನಾಭರಣ ಸೇರಿದಂತೆ ₹5.03 ಕೋಟಿ ವಂಚಿಸಿರುವ ಆರೋಪದಡಿ ಐಶ್ವರ್ಯಾ ಗೌಡ, ಅವರ ಪತಿ ಹರೀಶ್ ಸೇರಿ ನಾಲ್ವರ ವಿರುದ್ಧ ಆರ್.ಆರ್.ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ವಂಚನೆಗೆ ಸಂಬಂಧಿಸಿದಂತೆ ಈವರೆಗೆ ಐಶ್ವರ್ಯಾ ದಂಪತಿ ವಿರುದ್ಧ ಮೂರು ಎಫ್‌ಐಆರ್‌ಗಳು ದಾಖಲಾಗಿವೆ.

ಮಾಜಿ ಸಂಸದ ಡಿ.ಕೆ.ಸುರೇಶ್ ಅವರ ಸಹೋದರಿ ಎಂದು ಹೇಳಿಕೊಂಡು ಹಣ ಮತ್ತು ಚಿನ್ನಾಭರಣಗಳು ಪಡೆದು ವಂಚಿಸಿರುವುದಾಗಿ ರಾಜರಾಜೇಶ್ವರಿನಗರದ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ಮಂಜುಳಾ ಪಾಟೀಲ ಅವರ ದೂರಿನ ಮೇರೆಗೆ ಐಶ್ವರ್ಯಾ ಗೌಡ, ಅವರ ಪತಿ ಹರೀಶ್ ಕೆ.ಎನ್, ಕಾರು ಚಾಲಕರಾದ ಧನಂಜಯ್ ಹಾಗೂ ಅಶ್ವತ್ಥ್ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿ , ತನಿಖೆ ಕೈಗೊಂಡಿದ್ದಾರೆ.

'2020-21ನೇ ಸಾಲಿನಲ್ಲಿ ನನ್ನ ಬಳಿ ಚಿಕಿತ್ಸೆಗಾಗಿ ಬರುತ್ತಿದ್ದಾಗ ಐಶ್ವರ್ಯಾ ಗೌಡ ಪರಿಚಯವಾಗಿತ್ತು. ಡಿ.ಕೆ. ಸುರೇಶ್ ಹಾಗೂ ಡಿ.ಕೆ.ಶಿವಕುಮಾರ್ ಅವರ ಸಹೋದರಿ ಎಂದು ಪರಿಚಯಿಸಿಕೊಂಡಿದ್ದ ಐಶ್ವರ್ಯಾ, ತನಗೆ ದೊಡ್ಡಮಟ್ಟದಲ್ಲಿ ರಿಯಲ್ ಎಸ್ಟೇಟ್, ಚಿನ್ನದ ವ್ಯವಹಾರ, ಕ್ಯಾಸಿನೊ ವ್ಯವಹಾರ ಇರುವುದಾಗಿ ನಂಬಿಸಿದ್ದಳು' ಎಂದು ಮಂಜುಳಾ ದೂರಿನಲ್ಲಿ ತಿಳಿಸಿದ್ದಾರೆ.

'2022ರಿಂದ 2024ರವರೆಗೂ ಹೂಡಿಕೆ, ಮತ್ತಿತರ ಕಾರಣ ನೀಡಿ ಹಂತ ಹಂತವಾಗಿ ₹2.52 ಕೋಟಿ ಹಣ, ₹2.50 ಕೋಟಿ ಮೌಲ್ಯದ ಒಟ್ಟು 2 ಕೆ.ಜಿ 350 ಗ್ರಾಂ. ಚಿನ್ನಾಭರಣ ಪಡೆದಿದ್ದ ಐಶ್ವರ್ಯಾ ಗೌಡ ಹಿಂದಿರುಗಿಸದೇ ಸಬೂಬು ಹೇಳುತ್ತಿದ್ದಳು. ಇತ್ತೀಚೆಗೆ ಐಶ್ವರ್ಯಾ ಗೌಡ ಮತ್ತಿತರ ವಿರುದ್ಧ ಚಂದ್ರಾ ಲೇಔಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುವುದು, ಆರೋಪಿಗಳು ಜಾಮೀನು ಪಡೆದಿರುವುದು ಗೊತ್ತಾಯಿತು' ಎಂದು ಹೇಳಿದ್ದಾರೆ.

'ಜನವರಿ 1ರಂದು ನನ್ನ ಮನೆ ಬಳಿ ಬಂದು ಚಾಲಕ ಧನಂಜಯ್, ಐಶ್ವರ್ಯಾ ಗೌಡಗೆ ಕರೆ ಮಾಡಿ ಕೊಟ್ಟಿದ್ದ. ಫೋನ್‌ನಲ್ಲಿ ಮಾತನಾಡಿದ್ದ ಐಶ್ವರ್ಯಾ ಗೌಡ, 'ನಿನಗೆ ಕೊಡಬೇಕಿರುವ ಹಣ, ಚಿನ್ನಾಭರಣದ ಕುರಿತು ಯಾರಿಗೂ ಹೇಳಬಾರದು, ದೂರು ನೀಡಬಾರದು. ಹಾಗೇನಾದರೂ ದೂರು ನೀಡಿದರೆ, ಸಾಕ್ಷಿಯಾಗಿ ಹೇಳಿಕೆ ನೀಡಿದರೆ ಕೊಡಬೇಕಿರುವ ಹಣ ಚಿನ್ನಾಭರಣ ಕೊಡುವುದಿಲ್ಲ. ನಾನು ಡಿ.ಕೆ.ಸುರೇಶ್ ಹಾಗೂ ಡಿ.ಕೆ. ಶಿವಕುಮಾರ್ ಅವರ ಸಹೋದರಿ ಎಂಬುದು ಗೊತ್ತಿದೆ ತಾನೆ?' ಎಂದು ಬೆದರಿಕೆ ಹಾಕಿದ್ದಾಳೆ' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಹಣಕಾಸಿನ ವಹಿವಾಟಿನ ಬಗ್ಗೆ ಬ್ಯಾಂಕ್ ದಾಖಲೆಗಳು, ಆರೋಪಿಗಳಿಗೆ ಹಣ ಸಂದಾಯ ಮಾಡಿರುವ ಬಗ್ಗೆ ಬ್ಯಾಂಕ್ ಖಾತೆಯ ವಿವರ, ಮೊಬೈಲ್ ನಂಬರ್‌ಗಳು, ಚಿನ್ನಾಭರಣ ಖರೀದಿಸಿರುವ ಬಿಲ್‌ಗಳನ್ನು ಹಾಜರುಪಡಿಸುವಂತೆ ಮಂಜುಳಾ ಅವರಿಗೆ ನೋಟಿಸ್ ನೀಡಿದ್ದಾರೆ.

ವಿನಯ ಕುಲಕರ್ಣಿಗೆ ನೋಟಿಸ್ ಜಾರಿ ಸಾಧ್ಯತೆ

ಬೆಂಗಳೂರು: ಐಶ್ವರ್ಯಾ ಗೌಡ ಪತಿ ಹರೀಶ್ ಅವರ ಹೆಸರಿನಲ್ಲಿ ನೋಂದಣಿಯಾಗಿರುವ ಬೆಂಜ್ ಕಾರನ್ನು ಧಾರವಾಡ ಶಾಸಕ ವಿನಯ ಕುಲಕರ್ಣಿ ಬಳಕೆ ಮಾಡುತ್ತಿರುವುದು ಪೊಲೀಸರ ತನಿಖೆಯಿಂದ ಗೊತ್ತಾಗಿದೆ.

ಐಶ್ವರ್ಯಾ ದಂಪತಿ ಜೊತೆಗಿನ ನಂಟು, ವ್ಯವಹಾರ ಕುರಿತು ವಿನಯ ಕುಲಕರ್ಣಿ ಅವರಿಗೆ ನೋಟಿಸ್ ನೀಡಿ, ವಿಚಾರಣೆಗೆ ಒಳಪಡಿಸುವ ಸಾಧ್ಯತೆ ಇದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಈಗಾಗಲೇ ಆರೋಪಿಗಳಿಂದ ಔಡಿ, ಬಿಎಂಡಬ್ಲ್ಯು ಮತ್ತು ಫಾರ್ಚೂನರ್ ಕಾರು ಜಪ್ತಿ ಮಾಡಿಕೊಳ್ಳಲಾಗಿದೆ. ಇನ್ನೂ ಎರಡು ಬೆಂಜ್ ಕಾರುಗಳಿರುವ ಬಗ್ಗೆ ವಿಚಾರಣೆ ವೇಳೆ ಐಶ್ವರ್ಯಾ ಮಾಹಿತಿ ನೀಡಿರಲಿಲ್ಲ. ಆರೋಪಿಗಳ ಸ್ಥಿರಾಸ್ತಿ ಮತ್ತು ಚರಾಸ್ತಿ ಪೊಲೀಸರು ಪತ್ತೆ ಹಚ್ಚಲಾರಂಭಿಸಿದರು. ಈ ವೇಳೆ ಐಷಾರಾಮಿ ಕಾರುಗಳು ಪತ್ತೆಯಾಗಿತ್ತು. ಇದರಲ್ಲಿ ಒಂದು ಕಾರನ್ನು ವಿನಯ ಕುಲಕರ್ಣಿ ಬಳಸುತ್ತಿರುವುದು ಗೊತ್ತಾಗಿದೆ. ಐಶ್ವರ್ಯಾ ಗೌಡ ಕಾರು ಚಾಲಕನಾಗಿರುವ ಅಶ್ವಥ್ ಗೌಡ, ಯೋಗೇಶ್ ಗೌಡ ಕೊಲೆ ಪ್ರಕರಣದಲ್ಲಿ ಐದನೇ ಆರೋಪಿ ಆಗಿದ್ದಾರೆ.

ವಂಚನೆ ಪ್ರಕರಣದ ಆರೋಪಿಯಾಗಿರುವ ಐಶ್ವರ್ಯಾ ಗೌಡ ದಂಪತಿ ಹಾಗೂ ದೂರುದಾರೆ ವಾರಾಹಿ ವರ್ಲ್ಡ್ ಆಫ್ ಗೋಲ್ಡ್ ಚಿನ್ನದಂಗಡಿ ಮಾಲಕಿ ವನಿತಾ ಐತಾಳ್‌ಗೆ ವಿನಯ ಕುಲಕರ್ಣಿ ಚಿರಪರಿಚಿತರು. ದೂರು ದಾಖಲಾದ ಬಳಿಕ ಖಾಸಗಿ ಹೋಟೆಲ್‌ನಲ್ಲಿ ಐಶ್ವರ್ಯಾ ಹಾಗೂ ವನಿತಾ ಮಧ್ಯೆ ಸಂಧಾನಕ್ಕೂ ಈ ಹಿಂದೆ ಯತ್ನಿಸಿದ್ದರು.

ವಿನಯ ಕುಲಕರ್ಣಿ ಆರೋಪಿಗಳ ಕಾರು ಬಳಸುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಗೃಹ ಸಚಿವ ಜಿ.ಪರಮೇಶ್ವರ, 'ಪೊಲೀಸರು ಪರಿಶೀಲನೆ ನಡೆಸುತ್ತಿದ್ದಾರೆ. ತನಿಖೆ ಯಾವ ರೀತಿ ನಡೆಯುತ್ತದೆ ನೋಡಬೇಕು' ಎಂದು ಹೇಳಿದ್ದಾರೆ..

ಅಪರಾಧ ಸುದ್ದಿ

ಬೆಂಗಳೂರು ವಿ.ವಿ: ಆವಿಷ್ಕಾರ, ಸಂಶೋಧನೆಗೆ ಆದ್ಯತೆ

'ಐಪಿಆರ್' ಕೋಶ ಸ್ಥಾಪನೆ

ಪ್ರಜಾವಾಣಿ ವಾರ್ತೆ

'ಐಪಿಆರ್' ಕೋಶ ಸ್ಥಾಪನೆ ಸ್ಥಾಪನೆ ಸಂಬಂಧ ಬೆಂಗಳೂರು ವಿಶ್ವವಿದ್ಯಾಲಯ ಕುಲಪತಿ ಎಸ್.ಎಂ. ಜಯಕರ (ಎಡದಿಂದ 3ನೆಯವರು) ಮತ್ತು ಕೆಎಸ್‌ಸಿಟಿ ನಿರ್ದೇಶಕ ವಿಜಯ ಯು.ಟಿ (ಎಡದಿಂದ 4ನೆಯವರು) ಅವರು ಒಡಂಬಡಿಕೆಗೆ ಸಹಿ ಹಾಕಿದ ಸಂದರ್ಭ. ಐಪಿಆರ್ ಕೋಶದ ಸಂಯೋಜಕ ಪ್ರೊ.ಕೃಷ್ಣಮೂರ್ತಿ ಜಿ, ಪಿಎಂಇಬಿ ನಿರ್ದೇಶಕ ಪ್ರೊ.ಅಶೋಕ್ ಡಿ ಹಂಜಗಿ, ಸಂಪನ್ಮೂಲ ವ್ಯಕ್ತಿಗಳಾದ ನಿವೃತ್ತ ಐಆರ್‌ಎಸ್ ಅಧಿಕಾರಿ ಕೋದಂಡರಾಮ, ವಿನೀತ್ ಕುಮಾರ್ ಉಪಸ್ಥಿತರಿದ್ದರು

ಬೆಂಗಳೂರು: ಸಂಶೋಧನೆ ಮತ್ತು ಅಧ್ಯಯನವನ್ನು ಮತ್ತಷ್ಟು ಉತ್ತೇಜಿಸಲು ಬೆಂಗಳೂರು ವಿಶ್ವವಿದ್ಯಾಲಯ ಬೌದ್ಧಿಕ ಆಸ್ತಿ ಹಕ್ಕುಗಳ ಕೋಶವನ್ನು (ಐಪಿಆರ್ ಕೋಶ) ಸ್ಥಾಪಿಸಿದೆ. ಈ ಸಂಬಂಧ ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯೊಂದಿಗೆ(ಕೆಎಸ್‌ಸಿಟಿ) ಒಡಂಬಡಿಕೆಗೆ ಸಹಿ ಹಾಕಿದೆ.

ಬೆಂಗಳೂರು ವಿಶ್ವವಿದ್ಯಾಲಯ ವಿಜ್ಞಾನ, ತಂತ್ರಜ್ಞಾನ, ಭೂಗೋಳ ಕ್ಷೇತ್ರಗಳಲ್ಲಿ ನಿರಂತರವಾಗಿ ಸಂಶೋಧನೆ ನಡೆಸುತ್ತಿದೆ. ಅನೇಕ ಸಂಶೋಧಕರು ತಮ್ಮ ಆವಿಷ್ಕಾರಗಳು, ಆಲೋಚನೆಗಳಿಗೆ ಪೇಟೆಂಟ್‌ಗಳನ್ನು ಪಡೆದಿದ್ದಾರೆ. 70ಕ್ಕೂ ಅಧಿಕ ಪೇಟೆಂಟ್‌ಗಳು ದಾಖಲಾಗಿವೆ. ಈ ಸಂಖ್ಯೆಯನ್ನು ಮತ್ತಷ್ಟು ವಿಸ್ತರಿಸುವ ಗುರಿಯನ್ನು ವಿಶ್ವವಿದ್ಯಾಲಯ ಹೊಂದಿದೆ.

ಐಪಿಆರ್ ಕೋಶ ಸ್ಥಾಪನೆ ಕುರಿತು ಮಾತನಾಡಿದ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಎಂ.ಎಸ್.ಜಯಕರ, 'ರಾಜ್ಯದಲ್ಲಿ ಉಳಿದ ವಿಶ್ವವಿದ್ಯಾಲಯಗಳಿಗಿಂತ ಹೆಚ್ಚಿನ ಪೇಟೆಂಟ್‌ಗಳನ್ನು ಬೆಂಗಳೂರು ವಿಶ್ವವಿದ್ಯಾಲಯ ಹೊಂದಿದೆ. ಆವಿಷ್ಕಾರ, ಸಂಶೋಧನೆ ಮತ್ತು ಅಧ್ಯಯನದಿಂದ ಮಾತ್ರ ಬದಲಾವಣೆ ಸಾಧ್ಯ. ಆ ನಿಟ್ಟಿನಲ್ಲಿ ವಿಶ್ವವಿದ್ಯಾಲಯದಲ್ಲಿ ಪೂರಕ ವಾತಾವರಣ ನಿರ್ಮಿಸಲಾಗಿದೆ' ಎಂದು ಹೇಳಿದರು.

ಬೌದ್ಧಿಕ ಆಸ್ತಿ ಹಕ್ಕು ಕೋಶದ ಸಂಯೋಜಕ ಪ್ರೊ. ಜಿ.ಕೃಷ್ಣಮೂರ್ತಿ, 'ಭವಿಷ್ಯದ ದಿನಗಳಲ್ಲಿ ಈ ಕೋಶ ವಿಶ್ವವಿದ್ಯಾಲಯಕ್ಕೆ ದೊಡ್ಡ ಮಟ್ಟದ ಕೊಡುಗೆ ನೀಡುವ ವಿಶ್ವಾಸವಿದೆ' ಎಂದರು.

'ಐಪಿಆರ್' ಕಾರ್ಯವೈಖರಿ: ಐಪಿಆರ್ ಕೋಶದಲ್ಲಿ ವಿಶ್ವವಿದ್ಯಾಲದ ವಿದ್ಯಾರ್ಥಿಗಳು, ಸಂಶೋಧಕರು, ಪ್ರಾಧ್ಯಾಪಕರಿಗೆ ತಮ್ಮ ಆವಿಷ್ಕಾರ, ಸಂಶೋಧನೆಗಳನ್ನು ರಕ್ಷಿಸುವ ಕುರಿತು ಮಾರ್ಗದರ್ಶನ ನೀಡಲಾಗುತ್ತದೆ. ಹೊಸ ಆವಿಷ್ಕಾರ, ಸಂಶೋಧನೆಗೆ ಪೇಟೆಂಟ್, ಹಕ್ಕುಸ್ವಾಮ್ಯ(ಕಾಪಿ ರೈಟ್) ಟ್ರೇಡ್ ಸೀಕ್ರೆಟ್ಸ್, ಟ್ರೇಡ್ ಮಾರ್ಕ್ ಪಡೆಯಲು ಸಹಕರಿಸಲಾಗುತ್ತದೆ.

ಅತ್ಯಾಚಾರ ಆರೋಪ: ತಲೆಮರೆಸಿಕೊಂಡ 'ಜಿಮ್' ಸೋಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮದ್ಯ ಕುಡಿಸಿ ಅತ್ಯಾಚಾರ ಎಸಗಲಾಗಿದೆ' ಎಂದು ಆರೋಪಿಸಿ ಯುವತಿ ನೀಡಿದ ದೂರಿನ ಮೇರೆಗೆ 'ಜಿಮ್' ಸೋಮ ಅಲಿಯಾಸ್ ಸೋಮಶೇಖರ್ ವಿರುದ್ಧ ಅಶೋಕನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಮದುವೆಗೆ ಸಾಲ ಕೊಡುವುದಾಗಿ ನಂಬಿಸಿ ಫ್ಲ್ಯಾಟ್‌ವೊಂದಕ್ಕೆ ಕರೆದೊಯ್ದು ಬಲವಂತದಿಂದ ಮದ್ಯ ಕುಡಿಸಿ ಅತ್ಯಾಚಾರ ನಡೆಸಲಾಗಿದೆ' ಎಂದು ಆರೋಪಿಸಿ 26 ವರ್ಷದ ಯುವತಿ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿರುವ ಪೊಲೀಸರು, ತನಿಖೆ ನಡೆಸುತ್ತಿದ್ದಾರೆ. ಆರೋಪಿ ತಲೆಮರೆಸಿಕೊಂಡಿದ್ದಾರೆ.

'ಸಂತ್ರಸ್ತೆಗೆ ಮದುವೆ ನಿಶ್ಚಯವಾಗಿತ್ತು. ಅದೇ ವೇಳೆ ಸಂತ್ರಸ್ತೆಗೆ ಸ್ನೇಹಿತೆ ಮೂಲಕ ಸೋಮಶೇಖರ್ ಪರಿಚಯವಾಗಿತ್ತು. ಹೀಗಾಗಿ ₹6 ಲಕ್ಷ ಸಹಾಯ ಮಾಡುವಂತೆ ಸೋಮಶೇಖರ್ ಬಳಿ ಸಂತ್ರಸ್ತೆ ಕೇಳಿಕೊಂಡಿದ್ದರು. 2024ರ ಅಕ್ಟೋಬರ್‌ನಲ್ಲಿ ಸಂತ್ರಸ್ತೆ ಪಿ.ಜಿ ಬಳಿ ತೆರಳಿದ್ದ ಸೋಮಶೇಖರ್, ಹಣ ಕೊಡುವುದಾಗಿ ಲ್ಯಾಂಗ್‌ಫೋರ್ಡ್ ರಸ್ತೆಯ ತಮ್ಮ ಫ್ಲ್ಯಾಟ್‌ವೊಂದಕ್ಕೆ ಕರೆದೊಯ್ದಿದ್ದರು. ಅಲ್ಲಿ ಅತ್ಯಾಚಾರ ಎಸಗಿದ್ದಾರೆ' ಎಂದು ಆರೋಪಿಸಿ ದೂರು ನೀಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಆರೋಪಿ ಪತ್ತೆಗೆ ವಿಶೇಷ ಪೊಲೀಸ್ ತಂಡ ರಚಿಸಲಾಗಿದೆ. 'ಜಿಮ್' ಸೋಮನ ಹೆಸರು ರೌಡಿ ಪಟ್ಟಿಯಲ್ಲೂ ಇತ್ತು' ಎಂದು ಪೊಲೀಸರು ತಿಳಿಸಿದರು.

ಬಿಜೆಪಿಯಿಂದ ಚುನಾವಣೆಗೆ ಸ್ಪರ್ಧೆ

'ಜಿಮ್' ಸೋಮ

'ಜಿಮ್' ಸೋಮ 2018ರ ವಿಧಾನಸಭೆ ಚುನಾವಣೆಯಲ್ಲಿ ಸಕಲೇಶಪುರ ಕ್ಷೇತ್ರದಿಂದ ಬಿಜೆಪಿ ಟಿಕೆಟ್‌ನಡಿ ಸ್ಪರ್ಧಿಸಿ, ಪರಾಜಿತಗೊಂಡಿದ್ದರು. 2019ರ ಲೋಕಸಭೆ ಚುನಾವಣೆಯಲ್ಲಿ ಚಿತ್ರದುರ್ಗ ಕ್ಷೇತ್ರದಿಂದ, 2023ರ ವಿಧಾನಸಭೆ ಚುನಾವಣೆಗೆ ಸಕಲೇಶಪುರ ಕ್ಷೇತ್ರದಿಂದ ಸ್ಪರ್ಧಿಸಲು ಬಿಜೆಪಿ ಟಿಕೆಟ್‌ಗೆ ಪ್ರಯತ್ನಿಸಿದ್ದರು' ಎಂದು ಮೂಲಗಳು ತಿಳಿಸಿವೆ.

ವ್ಹೀಲಿ: ಪೋಷಕರ ವಿರುದ್ಧ ಎಫ್‌ಐಆರ್

ಬೆಂಗಳೂರು: ವ್ಹೀಲಿ ಮಾಡುತ್ತಿದ್ದ ಬಾಲಕನ ಪೋಷಕರ ವಿರುದ್ಧ ಕೆ.ಆರ್. ಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಕೆ.ಆರ್.ಪುರ ಪೊಲೀಸರು ಸೋಮವಾರ ಹೂಡಿ ಮುಖ್ಯರಸ್ತೆಯಲ್ಲಿ ವಿಶೇಷ ಕಾರ್ಯಾಚರಣೆ ನಡೆಸುತ್ತಿದ್ದರು. ಅದೇ ವೇಳೆ ಬಾಲಕ ವ್ಹೀಲಿ ಮಾಡುತ್ತಿದ್ದ. ದ್ವಿಚಕ್ರ ವಾಹನವನ್ನು ಜಪ್ತಿ ಮಾಡಿಕೊಂಡು, ಬಾಲಕನ ಪೋಷಕರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಾನಸಿಕ ಕಿರುಕುಳ: ಉದ್ಯಮಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ಯಾಟರಿಂಗ್ ಪಾಲುದಾರನ ಕಿರುಕುಳದಿಂದ ನೊಂದು ಉದ್ಯಮಿಯೊಬ್ಬರು ನೇಣು ಹಾಕಿಕೊಂಡು ಮಂಗಳವಾರ ರಾತ್ರಿ ಆತ್ಮಹತ್ಯೆ ಮಾಡಿಕೊಂಡಿದ್ದು, ಹುಳಿಮಾವು ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಬೇಗೂರಿನ ಅಕ್ಷಯ್ ನಗರದ ನಿವಾಸಿ ಕಲೋಲ್ ದತ್ತಾ ಮೃತರು.

ಮಾನಸಿಕ ಕಿರುಕುಳ ನೀಡಿದ ಆರೋಪದಡಿ ಕ್ಯಾಟರಿಂಗ್ ಪಾಲುದಾರ ಎ.ಜೆ.ಮರಿಸ್ವಾಮಿ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ದತ್ತಾ ಅವರು ಫೋರ್ಟಿಸ್ ಆಸ್ಪತ್ರೆ ಆಹಾರ ಮತ್ತು ಸುರಕ್ಷತಾ ವಿಭಾಗದಲ್ಲಿ ವ್ಯವಸ್ಥಾಪಕರಾಗಿದ್ದರು. ಮರಿಸ್ವಾಮಿ ಅದೇ ಆಸ್ಪತ್ರೆಯಲ್ಲಿ ಕ್ಯಾಟರಿಂಗ್ ಗುತ್ತಿಗೆ ಪಡೆದಿದ್ದರು. ಇದರ ಜತೆಗೆ ಮರಿಸ್ವಾಮಿ ಮತ್ತೊಂದು ಆಸ್ಪತ್ರೆ ಕ್ಯಾಟರಿಂಗ್ ಜವಾಬ್ದಾರಿಯನ್ನೂ ನೋಡಿಕೊಳ್ಳುತ್ತಿದ್ದರು. ಫೋರ್ಟಿಸ್ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದ ಸಿಬ್ಬಂದಿಯನ್ನು ಅಲ್ಲಿಗೆ ಕರೆಸಿಕೊಂಡು ಪತಿಯ ಮೇಲೆ ಕೆಟ್ಟ ಅಭಿಪ್ರಾಯ ಬರುವಂತೆ ಮಾಡಿ ಕೆಲಸಕ್ಕೆ ರಾಜೀನಾಮೆ ಸಲ್ಲಿಸುವಂತೆ ಮಾಡಿದ್ದರು' ಎಂದು ಕಲೋಲ್ ದತ್ತಾ ಅವರ ಪತ್ನಿ ಆರ್.ಸಜಿನಿ ದತ್ತಾ ನೀಡಿದ ದೂರು ಆಧರಿಸಿ ಎಫ್‌ಐಆರ್ ದಾಖಲಿಸಲಾಗಿದೆ.

'2018ರಲ್ಲಿ ಮರಿಸ್ವಾಮಿ ಜತೆಸೇರಿ ಪತಿ, ಸಾಯಿ ಸರ್ವೀಸ್ ಹೆಸರಿನಲ್ಲಿ ಕ್ಯಾಟರಿಂಗ್ ಆರಂಭಿಸಿದ್ದರು. ಕೋವಿಡ್ ವೇಳೆ ನಷ್ಟವಾಗಿದೆ ಎಂದು ಪತಿಗೆ ನಿಂದಿಸುತ್ತಿದ್ದು, ಮಾನಸಿಕ ಹಿಂಸೆ ನೀಡುತ್ತಿದ್ದರು. ನೊಂದು ಅರಕೆರೆಯ ಲಾಡ್ಜ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಿ, ಕ್ರಮಕ್ಕೆ ಒತ್ತಾಯಿಸಿದ್ದಾರೆ

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Wanted

WANTED RESIDENTIAL LADY WARDEN, experienced & with BSW/MSW to SEVA SADAN ASSOCIATION (R), a home for needy girls. Contact: No. 4, 14th Cross, Malleswaram, Bengaluru-3. Phone: 08023347830, 9538880115. Email: sevasadan.36@gmail.com

WANTED: ESTATE is near Chickmaglur 26kms from town.Housing, jeep, salary 25,000/- plus spouse and child benefits, Contact on WhatsApp only:+91 9902894433

Accounts & Finance

WANTED IMMEDIATELY MANAGER, FDC & ACCOUNTS ASSISTANT For Global City Credit Co-Operative Society Ltd,. Malleswaram. 080-41234580

Teachers/ Professors

WANTED LADY Teachers for Chemistry, Mathematics and Physics (M.Sc.B.Ed.) Computer (M.Sc/ BE.B.Ed) Hindi, English & Kannada (MA.B.Ed) Walk-In on the following dates - From 6th to 10th of January 2025 Between 11:00AM and 4:00PM Resumes Drop to Mail.Id: srikrishnainternationals@yahoo.com The Secretary, Sri Krishna International School, Bangalore-85. Ph-26690799.

POORNAPRAJNA EDUCATION CENTRE, INDIRANAGAR
(Promoted & Managed by Udupi Shree Adamaru Matha Education Council)
C.A Site No. 48, New Thippasandra, HAL 3rd Stage, Bangalore -75. Ph: 080-25292930
English medium school under Karnataka State syllabus invites applications for the following posts:
PRINCIPAL — Master's degree with M Ed, 5 yrs experience as Principal & 10 yrs in teaching.
ENGLISH LANGUAGE TEACHER — B A/ M A (English) with B Ed, 5 yrs experience in teaching.
KANNADA LANGUAGE TEACHER — B A/ M A (Kannada) with B Ed, 5 yrs experience in teaching
ASSISTANT LIBRARIAN — Any Graduate with proficiency in Computer
PRE PRIMARY ASSISTANT TEACHER — Any Graduate with NTTE
Apply to the Hon. Secretary before 15-01-2025 through post or email to contact.indiranagar@ppec.edu.in

WANTED
A Reputed CBSE School up to +2 having 2000 students run by Trust Requires the following positions:
1. PRINCIPAL: (Post Graduate with B.Ed with 5 years' experience as Principal/Vice Principal. We are seeking dynamic candidate with record in guiding teams to success and exceptional communication skills, administrative capacity, with experience.
2. ACCOUNTANT: (Male- Candidate B.Com with Tally and knowledge of PF/ESI/GST/Professional Tax etc. with 3 years of Experience.
How to Apply:- Kindly apply by sending your updated CV with photo and copies of educational documents to mail Id: sreeayyappaedutrust@gmail.com by 20.01.2025 and hard copy may sent to
SREE AYYAPPA EDUCATIONAL & CHARITABLE TRUST
Sree Ayyappan Temple Complex, S.M.Road, Jalahalli West, Bangalore-560015.
Phone: 080-28391638, Mobile No: 9483105248.

Smt. Bylamma Educational & Charitable Trust (R)
HARWARD INTERNATIONAL SCHOOL
Affiliated to CBSE No.830335
Dasanapura, Tumkur Road, Bengaluru North 562162
IMMEDIATE REQUIRED
CHEMISTRY Teacher (PGT)
FRONT OFFICE - PRO (Female)
MARKETING PERSON - MBA
HIRING FOR THE ACADEMIC YEAR 2025-26
PRT & TGT
Science/ Maths/ Social Science/ English/ Kannada/ Hindi/ Computer/ PE Teacher/ Pre Primary Teachers (NTT, MTT, ECCEd)
Eligible candidates mail your application with updated Bio-data to : email: infoharwardints@gmail.com
Contact : 9880112833 / 9945230286

Dr. T. THIMMAIAH INSTITUTE OF TECHNOLOGY GVET Group of Institutions
Affiliated to Visvesvaraya Technological University, Belagavi
Approved by AICTE - New Delhi | Accredited with 'A' Grade by NAAC
NBA Accredited for CSE, ECE & Mining Engg Programs
Oorgaum, KGF - 563 120 | www.drttit.edu.in
CAREER OPPORTUNITIES
Applications are invited from qualified and experienced candidates for Professors, Associate Professors and Assistant Professors in
- Computer Science & Engineering
- CSE - Artificial Intelligence and Machine Learning
- Electronics and Communication Engineering

Salary and Qualifications as per AICTE norms. Interested candidates may send their applications along with detailed CV to the Principal at the above address or mail to careers@drttit.edu.in within 8 days from the date of advertisement.
Ph : 9448574037 www.drttit.edu.in
Dr. T. VENKAT VARDHAN (President, GVET)

Marketing & Sales

JOBS FOR WOMEN (Reliance) Age above 30 Years, Any Degree, Salary 18000 to 25000 Incentives Bonus, PF, ESI Ph: 7899408159

WANTED OFFICE ASSISTANT & HELPER/ PACKER (Male) Bommanahalli (Bangalore) Ph:9980140661/ 08025631755 starsilks@gmail.com

WANTED URGENTLY
ATTRACTIVE SALARY
Experienced Male Marketing Executive with Good communication skill for a
QSR Restaurant.
Location :- Chandra Layout, Bangalore
Phone:- +91 97311 85180
E-mail:- eshwar12598@gmail.com

Part-Time Jobs

RETIRED/VRS PERSONS, Age Above 45 Years Earn 2nd Income 35K To 40K PM. 9886641282/ 6362220162

Factory

REQUIRED BY 100% EOU at Jigani logistics and Export documentation executive. pharma14g@gmail.com

Multiple Vacancy

REQUIRED TEACHERS Centre Head House keeping Security for upcoming Preschool JPNagar Phase2 Please Contact: 9341273990

General

WANTED COOK, ASSISTANT COOK, HOUSE KEEPING STAFF at No.51, Dadlani Mansion, KH Road, Bangalore- 560027 & Café Mythri at Bommasandra Industrial Area, Bangalore- 560099. Accommodation and Food will be provided for deserving candidates. Contact: 080-26601239/ 97418-62781 Email: cafemythri@gmail.com

WANTED
Looking for retired senior citizens Male/Female with good health, fluent in English and Kannada with good communication skills for an established business in Kerala for its new branch office opening at M.G. Road, Bangalore. Good package offered. Please post your resume to gracestudybangalore@gmail.com OR WhatsApp to 9845054545. No phone calls please.

WANTED FACTORY HELPERS for a Laundry in Bannergatta Road, Bangalore Salary 15,000 + Food + accommodation Timings 7am to 7pm Contact: 8050666007

DH Classifieds More value, more impact — ಪ್ರಜಾವಾಣಿ
RECRUITMENT
BOOK YOUR JOB ADS IN DH ALL KARNATAKA + PRAJAVANI BENGALURU CITY ON WEDNESDAY + SUNDAY
@ 2481/-* FOR 15 WORDS
www.dhclassifieds.com BOOK NOW
For more details contact:
+91 9901641752 | +91 9845114560 | +91 9900428036
*Conditions apply

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

SECURITY AGENCY REQUIRED Experience Manager, Marketing Manager, Fd Exe, Tally Clerk, R.T.Nagar Bangalore Ph:080-23437474 23437797 Mob:8892073262

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

Industrial & Factory

Peenya

SALE, PEENYA, KIADB Land, Prime Location. Available 5000, 10000, 20000 sqft. 40 feet Road. Rs 10000/- sqft. 'PEENYA ESTATES' 9844039416

Sites

Thyagaraja Nagar

THYAGARAJANAGAR SALE Site 25'x40' with two floor 2 BHK House NF. Call: 9886019240/ 080-26623994.

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats,Converted& Agriculture Lands Call:7204995189

CONNECT ಕ್ಲಾಸಿಫೈಡ್ಸ್

ಸಂಕ್ರಾಂತಿ ಹಾಗೂ ಮದುವೆ ಸಮಾರಂಭಗಳ ಪ್ರಯುಕ್ತ
ಪರಿಶುದ್ಧ ರೇಷ್ಮೆ ಸೀರೆ ಮತ್ತು ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ
LAST 5 DAYS
ಅಭಿವೃದ್ಧಿ ಸಿಲ್ಕ್ ಇಂಡಿಯ® 2025
Exclusive Wedding Collections

ಭಾರತದ ಎಲ್ಲಾ ರಾಜ್ಯಗಳಿಂದ ಪರಿಶುದ್ಧ ರೇಷ್ಮೆ ಸೀರೆಗಳು ಹಾಗೂ ರೇಷ್ಮೆ ಉತ್ಪನ್ನಗಳು
ಬಿಹಾರ್ : ತಸ್ಸರ್ ರೇಷ್ಮೆ ಸೀರೆಗಳು, ಸ್ಟೋಲ್ಸ್, ಶಾಲುಗಳು ಕರ್ನಾಟಕ : ಕ್ರೇಪ್, ಶಿಫಾನ್ ಮತ್ತು ಜಾರ್ಜೆಟ್ ಸಿಲ್ಕ್ ಸೀರೆಗಳು ತಮಿಳುನಾಡು : ಕಾಂಚಿಪುರಂ ಸಿಲ್ಕ್ ಮತ್ತು ಮದುವೆ ಸೀರೆಗಳು ಆಂಧ್ರ ಪ್ರದೇಶ : ಧರ್ಮಾವರಂ, ಉಪ್ಪಡಾ, ಗೊಡ್ವಾಲ್, ಮಂಗಲಗಿರಿ ಹಾಗೂ ಪೂಚಂಪಲ್ಲಿ ಸೀರೆಗಳು ಉತ್ತರ ಪ್ರದೇಶ : ಬನಾರಸ್ ಮತ್ತು ಜಮ್‌ದಾನಿ, ಜಮಾವರ್ ರೇಷ್ಮೆ, ಟೆಂಪಲ್ ಬಾರ್ಡರ್‌ಉಳ್ಳ ಮುಲ್‌ಬಾರಿ ಸಿಲ್ಕ್, ಲಕ್ನೋ ಚಿಕಾನ್ ಕಸೂತಿ ಮಹಾರಾಷ್ಟ್ರ : ಪೈಥಾಣಿ ಸೀರೆ, ಡಿಸೈನರ್ ಎಂಬ್ರಾಯಿಡರಿ ಸೀರೆ ಮತ್ತು ಡ್ರೆಸ್ ಪಂಜಾಬ್ : ಪಟಿಯಾಲ ಡ್ರೆಸ್ ಮೆಟೀರಿಯಲ್ಸ್ ಒರಿಸ್ಸಾ : ಸಂಬಲ್‌ಪುರಿ, ಇಕ್ಕತ್, ಬೋಂಕೈ ಸೀರೆಗಳು, ಹ್ಯಾಂಡ್‌ಲೂಮ್ ಸಿಲ್ಕ್ ಕಾಟನ್ ಛತ್ತೀಸ್‌ಘಡ್ : ರಾ ಸಿಲ್ಕ್ ಮತ್ತು ಕೋಸಾ ಸೀರೆಗಳು ಮಧ್ಯ ಪ್ರದೇಶ : ಮಹೇಶ್ವರಿ ಮತ್ತು ಚಂದೇರಿ ಸಿಲ್ಕ್ ಪಶ್ಚಿಮ ಬಂಗಾಳ : ಢಾಕ ಸೀರೆಗಳು, ಬಲ್‌ಚೂರಿ ರೇಷ್ಮೆ, ಕಲ್ಕೋತ್ತಾ ರೇಷ್ಮೆ ಸೀರೆಗಳು ಮತ್ತು ಕಾಂತ ಎಂಬ್ರಾಯಿಡರಿ ಸೀರೆಗಳು ಅಸ್ಸಾಂ : ಮುಗಾ ಮತ್ತು ಎರ್ರಿ ರೇಷ್ಮೆ ಸೀರೆಗಳು ಜಮ್ಮು ಮತ್ತು ಕಾಶ್ಮೀರ : ಚಿನಾನ್, ಟೆಡ್ಡಿ ರೇಷ್ಮೆ ಸೀರೆಗಳು, ಪಶ್ಮೀನಾ ಸೀರೆಗಳು, ಸ್ಟೋಲ್ಸ್, ಶಾಲುಗಳು ರಾಜಾಸ್ಥಾನ್ : ಕೋಟಾ ಸಿಲ್ಕ್, ಕೈ ಅಚ್ಚಿನ ಸೀರೆಗಳು
ವೈಟ್ ಪೆಟಲ್ಸ್ — ಬಿ.ಎಂ.ಟಿ.ಸಿ. ಬಸ್ ಡಿಪೋ, ಮಾರುತಿ ಮಂದಿರದ ಹತ್ತಿರ ವಿಜಯನಗರ, ಬೆಂಗಳೂರು
3 ರಿಂದ 12 ಜನವರಿ 2025 ರವರೆಗೆ
ಬೆಳಿಗ್ಗೆ 10.30 ರಿಂದ ಸಂಜೆ 8.30 ರವರೆಗೆ
Entry Free | All Credit & Debit Cards Accepted | Contact : 63641 65152, 99008 03345

EDUCATIONAL

Admission

ADMISSION OPEN D.Pharma LLB BNYS Ph.D BBA MBA AMIIE/ B.Tech TMIIE/ Diploma 10th 12th: 9341273990

PERSONAL

Change of Name

I, TAVADUR SHANUBHOGARA RAJENDRA CHAYA BHAGAVATHI W/o.Devaramani Guru Basavaraj R/a#233 Sakshatkara 1st cross Vijayashree Layout Mylasandra Bengaluru 560059 After marriage have changed my Name to CHAYA BHAGAVATHI vide affidavit dated:31.5.2008 before Notary A.Raghunath Bangalore

CHANGE OF NAME
I, Allan Ignatius Sequeira & Allan I. Sequeira, residing at Flat No. 204, Building No. A-10, Sector-2, Shanti Nagar, Mira Road, (East) Thane, Maharashtra 401107, have changed my name to ALLAN SEQUEIRA Vide affadiavit dated 07.01.2025 before Notary Thippeswamy T, Bengaluru

ASTRO YATRA

ವಿಶ್ವವಿಖ್ಯಾತ ಕೇರಳ ಜೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ,ಮದುವೆಯೋಗ, ಪ್ರೇಮ-ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)
ಹೋಟೆಲ್ ಸಭಾರ್‌ವಾಲ್ ವೈಸ್‌ರಾಯ್, ರೂಂ ನಂ. 102, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ವೃತ್ತ, (ನಂದಿನಿ ಹೋಟೆಲ್ ಎದುರು) ಬೆಂಗಳೂರು-04.
ನಂ. 24, 1ನೇ ಅಡ್ಡರಸ್ತೆ, ಕಮ್ಮನಹಳ್ಳಿ, ಕುಳ್ಳಪ್ಪ ವೃತ್ತ, ಬಾಣಸವಾಡಿ, ಸಿಟಿ ಸೂಪರ್ ಮಾರ್ಕೆಟ್ ಹತ್ತಿರ, ಬೆಂಗಳೂರು-84.
Ph: 080 25420833, 98441 65272 / 99727 41083
ಭೇಟಿಯ ವೇಳೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

WE, CHANDRASHEKHAR A GOWDA and SHALINI SHANKARAGOWDA, residing at Ramanagar, have changed our Daughter name from MEDHANSH to VARUSH KAVAN GOWDA, vide affidavit dated 7/1/2025 before Notary K.S.Bammappanavar, Bengaluru

I, REEMA HEGDE resident of No.41, 2nd Cross, Vinayaka Layout, Bhupasandra, RMV Extension II stage, Bengaluru-560094 have changed my name to REEMA JEEVAN HEGDE vide affidavit dated 06/01/2025 sworn before notary H.Sridhar Rao, Bangaluru

HEALTH SPECIAL

MVM NATURECURE HEALTH CENTRE
Maruthinagar, Yelahanka, Bangalore- 560064
Naturopathy and Yoga Health Camp for Senior Citizen at
MVM NATURECURE HEALTH CENTRE
from
9 to 11 Jan 2025
We treat Osteo Arthritis, Slip Disc, Paralysis, Diabetes, Asthma , Gastritis, Rheumatoid Arthritis, Anxiety, Insomnia, Stress, Bowel related problems etc,.
Ph: 9449658968, 7259977110

JOB — To Place your Classified Ads Contact: 9886213331

₹969 ಕೋಟಿ ಮೊತ್ತದ ಕೊಳವೆಬಾವಿ, ಆರ್‌ಒ ಘಟಕ ಕಾಮಗಾರಿ ಅಕ್ರಮ ಪ್ರಕರಣ

ಬಿಬಿಎಂಪಿ ದಾಖಲೆ ಜಾಲಾಡಿದ ಇ.ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಕೊಳವೆಬಾವಿ ಯೋಜನೆ ಮತ್ತು ಆರ್‌ಒ ನೀರು ಶುದ್ಧೀಕರಣ ಘಟಕ ಸ್ಥಾಪನೆ ಯೋಜನೆಗಳಲ್ಲಿನ ಅಕ್ರಮ ಆರೋಪದ ದೂರಿಗೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯದ (ಇ.ಡಿ.) ಅಧಿಕಾರಿಗಳು ಬಿಬಿಎಂಪಿಯ ಮುಖ್ಯ ಎಂಜಿನಿಯರ್ ಕಚೇರಿಯಲ್ಲಿ ಮಂಗಳವಾರ ಶೋಧ ಕಾರ್ಯ ನಡೆಸಿದ್ದು, ಹಲವು ದಾಖಲೆಗಳನ್ನು ವಶಕ್ಕೆ ಪಡೆದಿದ್ದಾರೆ.

ಬಿಬಿಎಂಪಿ ಕೇಂದ್ರ ಕಚೇರಿಯ ಆವರಣದಲ್ಲಿ ಬೆಳಿಗ್ಗೆ 7ಕ್ಕೇ ಬೀಡುಬಿಟ್ಟಿದ್ದ ಇ.ಡಿಯ ಏಳು ಅಧಿಕಾರಿಗಳ ತಂಡವು, 11ರ ವೇಳೆಗೆ ಮುಖ್ಯ ಎಂಜಿನಿಯರ್ ಕಚೇರಿ ಮೇಲೆ ದಾಳಿ ನಡೆಸಿತು. ಮುಖ್ಯ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ಅವರನ್ನು ವಿಚಾರಣೆಗೆ ಒಳಪಡಿಸಿದ ಅಧಿಕಾರಿಗಳು, ಕಾಮಗಾರಿಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಕೇಳಿದರು. ಎಂಜಿನಿಯರಿಂಗ್ ವಿಭಾಗದ ವಿವಿಧ ಘಟಕಗಳ ಮುಖ್ಯಸ್ಥರನ್ನೂ ವಿಚಾರಣೆಗೆ ಒಳಪಡಿಸಿದರು ಎಂದು ಮೂಲಗಳು ಹೇಳಿವೆ.

‘2016–2019ರ ಅವಧಿಯಲ್ಲಿ ನಡೆದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ದೂರು ದಾಖಲಾಗಿತ್ತು. ಅವುಗಳ ದಾಖಲೆಗಳನ್ನು ಇ.ಡಿ ಅಧಿಕಾರಿಗಳು ಕೇಳಿದರು. ಲಭ್ಯವಿದ್ದ ಅಷ್ಟೂ ದಾಖಲೆಗಳನ್ನು ಬಿಬಿಎಂಪಿ ಸಿಬ್ಬಂದಿ ಒದಗಿಸಿದರು. ಅವುಗಳನ್ನು ಪರಿಶೀಲಿಸಿದ ಅಧಿಕಾರಿಗಳು ಹಲವು ದಾಖಲೆಗಳನ್ನು ಮತ್ತು ಇ–ಕಡತಗಳನ್ನು ವಶಕ್ಕೆ ಪಡೆದರು’ ಎಂದು ಮೂಲಗಳು ಮಾಹಿತಿ ನೀಡಿವೆ.

‘2016–2019ರ ಮಧ್ಯೆ 9,588 ಕೊಳವೆಬಾವಿಗಳನ್ನು ಕೊರೆಸಿದ್ದು, ತಲಾ ₹10 ಲಕ್ಷ ಬಿಲ್ ಮಂಜೂರು ಮಾಡಿರುವ ಬಗ್ಗೆ ಬಿಬಿಎಂಪಿ ದಾಖಲೆ ಸಲ್ಲಿಸಿದೆ. ಕೊಳವೆಬಾವಿ ಕೊರೆಸಿ, ಪಂಪ್‌ಸೆಟ್ ಅಳವಡಿಸಲು ಅಷ್ಟು ಮೊತ್ತವಾಗುವುದಿಲ್ಲ ಎಂಬ ದಿಕ್ಕಿನಲ್ಲಿ ತನಿಖೆ ನಡೆಸಲಾಗುತ್ತಿದೆ. ಜತೆಗೆ 9,588ರಲ್ಲಿ ಎಲ್ಲ ಕೊಳವೆಬಾವಿಗಳ ಚಿತ್ರ ಮತ್ತು ಸ್ಥಳ ಪರಿಶೀಲನೆ ವರದಿಗಳು ಲಭ್ಯವಿಲ್ಲ’ ಎಂದು ತಿಳಿಸಿವೆ.

‘ಅದೇ ಅವಧಿಯಲ್ಲಿ ಒಟ್ಟು 976 ಆರ್‌ಒ ನೀರು ಶುದ್ಧೀಕರಣ ಘಟಕಗಳನ್ನು ಸ್ಥಾಪಿಸಲಾಗಿದೆ ಎಂದು ದಾಖಲೆಗಳಲ್ಲಿ ಮಾಹಿತಿ ಇದೆ. ದುಪ್ಪಟ್ಟು ದರದಲ್ಲಿ ಕಾಮಗಾರಿ ನಡೆಸಿದ್ದು, ಎಲ್ಲ ಕಾಮಗಾರಿಗಳ ಸ್ಥಳ ಪರಿಶೀಲನಾ ವರದಿ ಲಭ್ಯವಿಲ್ಲ. ಈ ನಿಟ್ಟಿನಲ್ಲೂ ಮಾಹಿತಿ ಕಲೆಹಾಕಲಾಗುತ್ತಿದೆ’ ಎಂದು ಮೂಲಗಳು ತಿಳಿಸಿವೆ.

ಮುಖ್ಯ ಎಂಜಿನಿಯರ್ ಪ್ರಹ್ಲಾದ್ ಅವರನ್ನು ರಾತ್ರಿ 9ರ ವೇಳೆಗೆ ಮತ್ತೆ ಕರೆದ, ಇ.ಡಿ ಅಧಿಕಾರಿಗಳು ವಿಚಾರಣೆ ಮುಂದುವರೆಸಿದರು. ಮತ್ತೊಂದು ತಂಡವು ಎಂಜಿನಿಯರಿಂಗ್ ವಿಭಾಗದ ಇತರ ಅಧಿಕಾರಿಗಳನ್ನು ವಿಚಾರಣೆಗೆ ಒಳಪಡಿಸಿತು. ರಾತ್ರಿಯೂ ವಿಚಾರಣೆ ಮುಂದುವರೆದಿತ್ತು.

ಶೋಧಕಾರ್ಯದ ವೇಳೆ ಇ.ಡಿ ಅಧಿಕಾರಿಗಳಿಗೆ ನೀಡಲು ಬಿಬಿಎಂಪಿ ಸಿಬ್ಬಂದಿ ಕಡತಗಳನ್ನು ಹೊತ್ತು ತಂದರು –ಪ್ರಜಾವಾಣಿ ಚಿತ್ರ

2019ರಲ್ಲಿ ದಾಖಲಾಗಿದ್ದ ಪ್ರಕರಣ

ಬಿಬಿಎಂಪಿ ನಡೆಸಿದ ಕೊಳವೆಬಾವಿ ಮತ್ತು ಆರ್‌ಒ ಘಟಕ ಕಾಮಗಾರಿಗಳಲ್ಲಿ ₹969 ಕೋಟಿಯಷ್ಟು ಅಕ್ರಮ ನಡೆದಿದೆ ಎಂದು ಬಿಜೆಪಿಯ ಎನ್‌.ಆರ್.ರಮೇಶ್ ಅವರು 2019ರಲ್ಲಿ ಎಸಿಬಿಗೆ ದೂರು ನೀಡಿದ್ದರು. 2021ರಲ್ಲಿ ಇ.ಡಿಗೂ ಈ ಸಂಬಂಧ ಮಾಹಿತಿ ನೀಡಿದ್ದರು. 2022ರ ಡಿಸೆಂಬರ್‌ನಲ್ಲೇ ರಮೇಶ್ ಅವರಿಗೆ ಸಮನ್ಸ್ ನೀಡಿದ್ದ ಇ.ಡಿ, ಅವರಿಂದ ಮಾಹಿತಿ ಕಲೆಹಾಕಿತ್ತು.

ನಂತರ ಬಿಬಿಎಂಪಿ ಆಯುಕ್ತರಿಗೆ ಸಮನ್ಸ್ ಜಾರಿ ಮಾಡಿ, ವಿಚಾರಣೆಗೆ ಸಹಕರಿಸುವಂತೆ ಸೂಚಿಸಿತ್ತು. ಇ.ಡಿಗೆ ಮಾಹಿತಿ ನೀಡಲು ಪಾಲಿಕೆಯ ಮುಖ್ಯ ಎಂಜಿನಿಯರ್ ಬಿ.ಎಸ್.ಪ್ರಹ್ಲಾದ್ ಅವರನ್ನು ನೋಡಲ್ ಅಧಿಕಾರಿಯನ್ನಾಗಿ ಆಯುಕ್ತ ತುಷಾರ್ ಗಿರಿನಾಥ್ ಅವರು ನೇಮಕ ಮಾಡಿದ್ದರು.

2022ರ ಡಿಸೆಂಬರ್‌ನಲ್ಲೇ ಪ್ರಕರಣದ ವಿಚಾರಣೆ ಕೈಗೆತ್ತಿಕೊಂಡಿದ್ದರೂ ಇ.ಡಿಯು ಈವರೆಗೆ ಶೋಧಕಾರ್ಯ ನಡೆಸಿರಲಿಲ್ಲ. ಎರಡು ವರ್ಷಗಳ ಅಂತರದ ಬಳಿಕ ಈಗ ಶೋಧಕಾರ್ಯಕ್ಕೆ ಚಾಲನೆ ನೀಡಿದೆ.

‘₹400 ಕೋಟಿ ಅಕ್ರಮ...’

ಬಿಬಿಎಂಪಿಯ ರಾಜರಾಜೇಶ್ವರಿ ನಗರ, ಮಹದೇವಪುರ, ದಾಸರಹಳ್ಳಿ, ಯಲಹಂಕ ಮತ್ತು ಬೊಮ್ಮನಹಳ್ಳಿ ವಲಯಗಳಲ್ಲಿ ಅಕ್ರಮ ನಡೆದಿದೆ ಎಂದು ದೂರಿನಲ್ಲಿ ಆರೋಪಿಸಲಾಗಿತ್ತು. ಎಸಿಬಿಯಲ್ಲಿ ದೂರು ದಾಖಲಾದ ಬೆನ್ನಲ್ಲೇ ನಗರಾಭಿವೃದ್ಧಿ ಇಲಾಖೆಯ ಜಾಗೃತ ಅಧಿಕಾರಿ ಈ ಸಂಬಂಧ ತನಿಖೆ ನಡೆಸಿ, ಮುಂದಿನ ಕ್ರಮಕ್ಕಾಗಿ 2019ರಲ್ಲೇ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದರು.

‘ಬಿಬಿಎಂಪಿ ವಲಯ ಎಂಜಿನಿಯರ್‌ಗಳು, ಪಾಲಿಕೆ ಸದಸ್ಯರು, ಗುತ್ತಿಗೆದಾರರು ಅಕ್ರಮದಲ್ಲಿ ಭಾಗಿಯಾಗಿದ್ದಾರೆ. ₹969 ಕೋಟಿ ಮೊತ್ತದ ಕಾಮಗಾರಿಗಳಲ್ಲಿ ₹400 ಕೋಟಿಯಷ್ಟು ಅಕ್ರಮ ನಡೆದಿದೆ. ಈ ಸಂಬಂಧ ಹೆಚ್ಚಿನ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು’ ಎಂದು ವರದಿ ಶಿಫಾರಸು ಮಾಡಿತ್ತು.

ಶಿಫಾರಸನ್ನು ಅನುಷ್ಠಾನಕ್ಕೆ ತರಲು ಅಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅನುಮೋದನೆ ನೀಡಿದ್ದರು. ಆದರೆ ತನಿಖೆ ಅಲ್ಲಿಗೇ ನಿಂತಿತ್ತು.

‘ಜಾಗೃತಿ ಅಧಿಕಾರಿ ನೀಡಿದ್ದ ವರದಿಯನ್ನು ವಶಕ್ಕೆ ಪಡೆದಿದ್ದ ಇ.ಡಿ ಅಧಿಕಾರಿಗಳು, ಸಂಬಂಧಿತ ವ್ಯಕ್ತಿಗಳ ವಿರುದ್ಧವೂ ತನಿಖೆ ಆರಂಭಿಸಿದ್ದಾರೆ. ಎಂಜಿನಿಯರ್‌ಗಳು, ಗುತ್ತಿಗೆದಾರರು, ಪಾಲಿಕೆ ಸದಸ್ಯರು ಮಾತ್ರವಲ್ಲದೇ ಆಯಾ ವಿಧಾನಸಭಾ ಕ್ಷೇತ್ರದ ಶಾಸಕರಿಗೆ ಸಂಬಂಧಿಸಿದಂತೆಯೂ ಮಾಹಿತಿ ಕಲೆ ಹಾಕಿದ್ದಾರೆ’ ಎಂದು ಮೂಲಗಳು ಹೇಳಿವೆ.

‘ಗುತ್ತಿಗೆದಾರರ ಆಯ್ಕೆಯಲ್ಲಿ, ಕೊಳವೆಬಾವಿ ಮತ್ತು ಆರ್‌ಒ ಘಟಕಕ್ಕೆ ಸ್ಥಳ ಗುರುತಿಸುವಲ್ಲಿ ಶಾಸಕರೂ ಪ್ರಭಾವ ಬೀರಿರುವ ಬಗ್ಗೆ ಮಾಹಿತಿ ದೊರೆತಿದೆ. ಶಾಸಕರು ಮತ್ತು ಪಾಲಿಕೆ ಸದಸ್ಯರು ನೀಡಿರುವ ಶಿಫಾರಸು ಪತ್ರಗಳು, ಕೆಲವು ಕಾಮಗಾರಿಗಳನ್ನು ಪಾಲಿಕೆ ಸದಸ್ಯರೇ ಬೇನಾಮಿ ಹೆಸರಿನಲ್ಲಿ ನಡೆಸಿರುವುದಕ್ಕೆ ಸಂಬಂಧಪಟ್ಟ ದಾಖಲೆಗಳು ದೊರೆತಿವೆ’ ಎಂದು ಮೂಲಗಳು ತಿಳಿಸಿವೆ.

> **ಇ.ಡಿ ಅಧಿಕಾರಿಗಳು ಕೇಳಿದ ದಾಖಲೆಗಳನ್ನು ನೀಡಿದ್ದೇವೆ. ಕಡತಗಳ ಪರಿಶೀಲನೆಗೆ ಇಲ್ಲೇ ಒಂದು ಕೊಠಡಿ ನೀಡಿ ಎಂದೂ ಸೂಚಿಸಿದ್ದಾರೆ**
> **ಬಿ.ಎಸ್.ಪ್ರಹ್ಲಾದ್**
> ಬಿಬಿಎಂಪಿ ಮುಖ್ಯ ಎಂಜಿನಿಯರ್

ನೂತನ ಪೊಲೀಸ್ ಠಾಣೆಗಳ ಉದ್ಘಾಟನೆ ಇಂದು

ಬೆಂಗಳೂರು: ರಾಜ್ಯ ಪೊಲೀಸ್ ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ ಹಾಗೂ ನಗರ ಪೊಲೀಸ್ ಇಲಾಖೆ ಸಹಯೋಗದಲ್ಲಿ ನೂತನವಾಗಿ ನಿರ್ಮಿಸಿರುವ ನಾಲ್ಕು ಕಟ್ಟಡಗಳ ಉದ್ಘಾಟನಾ ಸಮಾರಂಭವು ಜ.8ರಂದು ನಡೆಯಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟನೆ ನೆರವೇರಿಸಲಿದ್ದಾರೆ.

ಬೆಳಿಗ್ಗೆ 11ಕ್ಕೆ ಚಾಮರಾಜಪೇಟೆ ಪೊಲೀಸ್ ಠಾಣೆ (ಕಾನೂನು ಸುವ್ಯವಸ್ಥೆ ಮತ್ತು ಸಂಚಾರ), ಬೆಳಿಗ್ಗೆ 11.30ಕ್ಕೆ ಕೇಂದ್ರ ವಿಭಾಗದ ಡಿಸಿಪಿ ಕಚೇರಿ ಹಾಗೂ ಕಬ್ಬನ್‌ಪಾರ್ಕ್ ಸಂಚಾರ ಪೊಲೀಸ್ ಠಾಣೆ, ಮಧ್ಯಾಹ್ನ 12ಕ್ಕೆ ಶೇಷಾದ್ರಿಪುರ ಸಹಾಯಕ ಪೊಲೀಸ್ ಕಮಿಷನರ್ ಕಚೇರಿ ಹಾಗೂ ಹೈಗ್ರೌಂಡ್ಸ್ ಠಾಣೆ (ಕಾನೂನು ಸುವ್ಯವಸ್ಥೆ ಹಾಗೂ ಸಂಚಾರ) ಹಾಗೂ ಮಧ್ಯಾಹ್ನ 12.30ಕ್ಕೆ ಪುಲಕೇಶಿನಗರ ಪೊಲೀಸ್ ವಸತಿಗೃಹದ ಉದ್ಘಾಟನಾ ಸಮಾರಂಭ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

PARAS

दामोदर घाटी निगम
DAMODAR VALLEY CORPORATION
डीवीसी टावर्स, वीआईपी रोड, कोलकाता-700054
DVC Towers, VIP Road, Kolkata 700054

NOTIFICATION

Name of the Company: DAMODAR VALLEY CORPORATION.
Registered Office: DVC Towers, VIP Road, Kolkata – 700054

1) The applicant above named has made applications for its **Non-ISTS 400kV Transmission Lines carrying ISTS Power of Damodar Valley Corporation**, before the Hon'ble Central Electricity Regulatory Commission, New Delhi for determination of tariff for the period 2019-24 & 2024-29 in terms of CERC Regulations.

2) The beneficiaries of the DVC 400kV Transmission Lines carrying ISTS Power :
a) West Bengal State Electricity Distribution Company Limited
b) Jharkhand Bijli Vitran Nigam Limited
c) Punjab State Power Corporation Ltd
d) Kerala State Electricity Board
e) Haryana Power Purchase Centre
f) Bangalore Electricity Supply Company

3) Assets of 400KV Transmission Lines carrying ISTS Power :

Sl. No.	Name of the Assets	Type of Circuit	Line length in KM	COD of the Assets
1	LILO of 400 kV D/C Durgapur (PG)-Jamshedpur (PG) at DSTPS	Double Circuit	3.89	01.02.2011
2	LILO of 400 kV D/C Maithon (PG)-Ranchi (PG) at RTPS.	Double Circuit	10.563	01.07.2012
3	400 kV D/C DSTPS-RTPS transmission line	Double Circuit	69.5	01.08.2013
4	400 kV D/C RTPS-Ranchi (PG) transmission line	Double Circuit	155.5	30.08.2017

4) Total Capital Cost for individual Assets of 400KV Transmission Lines carrying ISTS Power : (in Rs. Lakh)

Name of the Assets	Capital Cost as allowed by CERC as on 31.03.2019	Capital Cost as claimed on 31.03.2024	Capital Cost as claimed on 31.03.2029
LILO of 400 kV D/C Durgapur (PG)-Jamshedpur (PG) at DSTPS	870.66	870.66	870.66
LILO of 400 kV D/C Maithon (PG)-Ranchi (PG) at RTPS.	2172.41	2172.41	2172.41
400 kV D/C DSTPS-RTPS transmission line	14855.59	14855.59	14855.59
400 kV D/C RTPS-Ranchi (PG) transmission line	46603.80	47631.41	47631.41

5) Authority which has approved the capital cost: Central Electricity Regulatory Commission.
6) Schedule date of commercial operation: Not applicable
7) Actual date of commercial operation of individual station: As stated under Sl. 3 above
8) Details of Tariff: (in Rs. Lakh)

T&D System	Capacity charges/ Energy charges	Name of the Asset	Year wise tariff sought to be determined as per True-up Petition for 2019-24					Year wise tariff sought to be determined as per claimed in Tariff Petition for 2024-29				
			2019-20	2020-21	2021-22	2022-23	2023-24	2024-25	2025-26	2026-27	2027-28	2028-29
400KV ISTS Line	Capacity charge (in Rs. Lakh)	LILO of 400 kV D/C Durgapur (PG)-Jamshedpur (PG) at DSTPS	227.34	223.18	214.23	213.30	216.04	194.97	193.36	191.93	190.69	189.64
		LILO of 400 kV D/C Maithon (PG)-Ranchi (PG) at RTPS.	468.23	454.62	428.89	422.86	425.28	395.54	386.73	378.11	369.70	361.51
		400 kV D/C DSTPS-RTPS transmission line	2774.45	2670.81	2492.46	2439.95	2437.79	2310.29	2234.24	2158.68	2083.62	2034.30
		400 kV D/C RTPS-Ranchi (PG) transmission line	8698.77	8407.86	7821.78	7688.01	7714.44	7391.91	7131.70	6872.14	6613.31	6355.67

9) A copy of the application made for determination of tariff is posted on the DVC website **www.dvc.gov.in**

10) The suggestions & objections if any, on the proposals for determination of tariff contained in the application be filed by any person, including the beneficiary before the Secretary, **Central Electricity Regulatory Commission, 6th, 7th & 8th Floors, Tower B, World Trade Centre, Nauroji Nagar, New Delhi- 110029** with a copy to the applicant within 30days of publication of the notice.

Place: Kolkata
Date: 08.01.2025
INF&PR/Comml/87/24-25

Senior General Manager (Commercial)

ನೀರುಗಾಲುವೆ ಒತ್ತುವರಿ ತೆರವು ಕಾರ್ಯಾಚರಣೆ

ಬೆಂಗಳೂರು: ಉತ್ತರಹಳ್ಳಿ ಹೋಬಳಿ ಹೊಸಕೆರೆಹಳ್ಳಿ ಗ್ರಾಮದ ಸರ್ವೆ ನಂಬರ್ 90ರಲ್ಲಿ ಬೃಹತ್ ನೀರುಗಾಲುವೆ ಮೇಲಿನ ಒತ್ತುವರಿಯನ್ನು ಬಿಬಿಎಂಪಿ ಸಿಬ್ಬಂದಿ ಮಂಗಳವಾರ ತೆರವುಗೊಳಿಸಿದರು.

ಚಾಮುಂಡಿ ಕೊಳೆಗೇರಿಯಲ್ಲಿ ತಾತ್ಕಾಲಿಕ ಶೆಡ್‌ಗಳನ್ನು ನಿರ್ಮಿಸಲಾಗಿತ್ತು. ಈ ಒತ್ತುವರಿಯನ್ನು ತೆರವುಗೊಳಿಸಲು ಸರ್ಕಾರ ಆದೇಶಿಸಿತ್ತು. ಅದರಂತೆ ದಕ್ಷಿಣ ವಲಯ ಆಯುಕ್ತರ ನಿರ್ದೇಶನದ ಮೇರೆಗೆ ತೆರವು ಕಾರ್ಯಾಚರಣೆ ನಡೆಸಲಾಯಿತು ಎಂದು ದಕ್ಷಿಣ ವಲಯದ ಬೃಹತ್ ನೀರುಗಾಲುವೆ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ರೇಖಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಜಯಂತಿ ಹೆಸರಲ್ಲಿ ಪ್ರಶಸ್ತಿ ಸ್ಥಾಪನೆ ಪ್ರಯತ್ನ’

‘ಲವ್ಲಿ ಬಟ್ ಲೋನ್ಲಿ’ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಸಿ.ಎಂ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಟಿ ಜಯಂತಿ ಅವರ ಹೆಸರಿನಲ್ಲಿ ಪ್ರಶಸ್ತಿ ಸ್ಥಾಪಿಸಲು ಪ್ರಯತ್ನಿಸಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಸೌರಭ ಪ್ರಕಾಶನ ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಪತ್ರಕರ್ತ ಕೆ.ಸದಾಶಿವ ಶೆಣೈ ಅವರು ರಚಿಸಿರುವ ಜಯಂತಿ ಅವರ ಜೀವನಗಾಥೆ ‘ಲವ್ಲಿ ಬಟ್ ಲೋನ್ಲಿ’ ಪುಸ್ತಕ ಬಿಡುಗಡೆ ಮಾಡಿದರು.

ಇದಕ್ಕೂ ಮೊದಲು ಮಾತನಾಡಿದ ಕೆ.ಸದಾಶಿವ ಶೆಣೈ, ‘ಜಯಂತಿ ಅವರ ಹೆಸರು ಅಜರಾಮರವಾಗಲು ಅವರ ಹೆಸರಿನಲ್ಲಿ ಪ್ರಶಸ್ತಿ ಸ್ಥಾಪಿಸಬೇಕು’ ಎಂದು ಮನವಿ ಮಾಡಿದರು. ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ಸಿದ್ದರಾಮಯ್ಯ, ‘ಚಿತ್ರರಂಗದವರ ಅಭಿಪ್ರಾಯ ಪಡೆದು, ಪ್ರಶಸ್ತಿ ಸ್ಥಾಪಿಸಲು ಪ್ರಯತ್ನಿಸುತ್ತೇನೆ. ಕಲಾವಿದೆಯಾಗಿ ಜಯಂತಿಗೆ ಜಯಂತಿಯವರೇ ಸಾಟಿ. ಅವರು ಮಾನವೀಯವಾಗಿ ಬದುಕು ನಡೆಸಿ, ಬದುಕನ್ನು ಸಾರ್ಥಕಗೊಳಿಸಿಕೊಂಡಿದ್ದಾರೆ. ನನ್ನ ಮತ್ತು ಜಯಂತಿ ಅವರ ರಾಜಕೀಯ ಮೌಲ್ಯಗಳು ಒಂದೇ ಆಗಿದ್ದವು. ಅವರು ಕೂಡ ಸಮಾಜ ಪ್ರೇಮಿ, ಮಾನವೀಯತೆಯ ಪ್ರೇಮಿಯಾಗಿದ್ದರು’ ಎಂದು ಬಣ್ಣಿಸಿದರು.

‘ಜಯಂತಿ ಅವರ ಅಭಿನಯ ಮರೆಯಲು ಸಾಧ್ಯವಿಲ್ಲ. ಪಾತ್ರಕ್ಕೆ ಜೀವ ತುಂಬುವ ಕೆಲಸವನ್ನು ಅವರು ಮಾಡುತ್ತಿದ್ದರು’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಟ ರಮೇಶ್ ಅರವಿಂದ್, ‘ಅಭಿನಯ ಶಾರದೆ ಎಂಬ ಖ್ಯಾತಿ ಪಡೆದಿದ್ದ ಜಯಂತಿ ಅವರು ಸೌಂದರ್ಯವಂತಿಕೆಯ ಜತೆಗೆ ಸೌಮ್ಯ ಸ್ವಭಾವದ ಶ್ರೇಷ್ಠ ವ್ಯಕ್ತಿತ್ವದವರಾಗಿದ್ದರು. ಅವರ ಕುರಿತು ಆತ್ಮಚರಿತ್ರೆ ಬಿಡುಗಡೆಗೊಳ್ಳುತ್ತಿರುವುದು ಸಂತೋಷದ ಸಂಗತಿ’ ಎಂದು ಹೇಳಿದರು.

ನಟ ಶ್ರೀನಾಥ್, ‘ಜಯಂತಿ ಅವರ ಮೊದಲ ಹೆಸರು ಕಮಲಾ. ಅವರು ಕಣ್ಣಿನಲ್ಲೇ ಅಭಿನಯ ಮಾಡುತ್ತಿದ್ದರು. ಜೀವನದಲ್ಲಿ ತಾನೆಷ್ಟೇ ಒಂಟಿಯಾಗಿದ್ದರೂ ಮತ್ತೊಬ್ಬರನ್ನು ನಗಿಸುತ್ತಿದ್ದ ವ್ಯಕ್ತಿ ಜಯಂತಿ’ ಎಂದರು.

ಕೃತಿ ಬಗ್ಗೆ ಮಾತನಾಡಿದ ಪತ್ರಕರ್ತ ಬೆಲಗೂರು ಸಮೀವುಲ್ಲಾ, ‘ಜಯಂತಿ ಅವರ ಆತ್ಮಕತೆಯಲ್ಲಿ ವೈಭವೀಕರಣ ಕಾಣಿಸುವುದಿಲ್ಲ. ಜೀವನಪ್ರೀತಿ ತೆರೆದಿಡುವ ಪುಸ್ತಕ ಇದಾಗಿದೆ. ವೈವಿಧ್ಯಮಯ, ವಿಶಿಷ್ಟ ಪಾತ್ರಗಳ ಮೂಲಕ ಚಿತ್ರರಂಗಕ್ಕೆ ಹೊಸ ಮೆರುಗು ನೀಡಿದ್ದರು’ ಎಂದರು.

ಜಯಂತಿ ಅವರ ಪುತ್ರ ಕೃಷ್ಣ ಕುಮಾರ್, ‘ಹೆಣ್ಣುಮಕ್ಕಳಿಗೆ ಗೌರವ ಕೊಡಬೇಕು. ಬೆಳೆದಷ್ಟೂ ತಗ್ಗಿ ನಡೆಯಬೇಕು ಎಂಬ ಕಿವಿಮಾತನ್ನು ಅಮ್ಮ ಹೇಳಿದ್ದರು. ಅದನ್ನು ಪಾಲಿಸಿಕೊಂಡು ಬರುತ್ತಿದ್ದೇನೆ. ವೈಯಕ್ತಿಕವಾಗಿ ಅವರು ಒಂಟಿತನ ಎದುರಿಸಿದ್ದರು. ಅವರು ತಾವು ಅನುಭವಿಸಿದ ದುಃಖವನ್ನು ಹಂಚಿಕೊಳ್ಳುತ್ತಿರಲಿಲ್ಲ’ ಎಂದು ಹೇಳಿದರು.

ನಿರ್ದೇಶಕರಾದ ಕವಿತಾ ಲಂಕೇಶ್, ಇಂದ್ರಜಿತ್ ಲಂಕೇಶ್ ಹಾಗೂ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೆ. ಸದಾಶಿವ ಶೆಣೈ ಅವರ ‘ಲವ್ಲಿ ಬಟ್ ಲೋನ್ಲಿ’ ಪುಸ್ತಕದ ಪ್ರತಿಯನ್ನು ನಟಿ ಪೂಜಾ ಗಾಂಧಿ ಅವರಿಗೆ ನೀಡಿದರು. ರಮೇಶ್ ಅರವಿಂದ್, ನಟಿಯರಾದ ಭಾವನಾ ರಾಮಣ್ಣ, ಕವಿತಾ ಲಂಕೇಶ್ ಮತ್ತು ಪ್ರೇಮಾ ಉಪಸ್ಥಿತರಿದ್ದರು

‘ಸಿದ್ಧಾರೂಢ ಜ್ಯೋತಿ ರಥ ಯಾತ್ರೆ’ಗೆ ಭವ್ಯ ಸ್ವಾಗತ

’ಸಿದ್ಧಾರೂಢ ಜ್ಯೋತಿ’ಗೆ ರಾಮೋಹಳ್ಳಿಯ ಭಕ್ತರು ಪೂಜೆ ಸಲ್ಲಿಸಿದರು. ಸಿದ್ಧಾರೂಢ ಮಿಷನ್ ಆಶ್ರಮದ ಅಧ್ಯಕ್ಷ ಆರೂಢಭಾರತೀ ಸ್ವಾಮೀಜಿ ಹಾಗೂ ಭಕ್ತರು ಈ ಸಂದರ್ಭದಲ್ಲಿ ಹಾಜರಿದ್ದರು

ಪ್ರಜಾವಾಣಿ ವಾರ್ತೆ

ಕೆಂಗೇರಿ: ಸಿದ್ಧಾರೂಢ ಸ್ವಾಮೀಜಿಯವರ 190 ಹಾಗೂ ಗುರುನಾಥಾರೂಢ ಸ್ವಾಮೀಜಿಯವರ 155ನೇ ಜಯಂತಿ ನಿಮಿತ್ತ ಸಂಚರಿಸುತ್ತಿರುವ ಹುಬ್ಬಳ್ಳಿ ಸಿದ್ಧಾರೂಢ ಮಠದ ‘ಜ್ಯೋತಿ ರಥಯಾತ್ರೆ’ಗೆ ರಾಮೋಹಳ್ಳಿ ಸಿದ್ಧಾರೂಢ ಮಿಷನ್ ಆಶ್ರಮದಲ್ಲಿ ಭವ್ಯ ಸ್ವಾಗತ ನೀಡಲಾಯಿತು.

59 ದಿನಗಳ ‘ಜ್ಯೋತಿ ರಥಯಾತ್ರೆ’ ಕಳೆದ ಡಿಸೆಂಬರ್ 22ರಿಂದ ಸಿದ್ಧಾರೂಢರ ಜನ್ಮಸ್ಥಳ ಬೀದರ್ ಜಿಲ್ಲೆ ಚಳಕಾಪುರದಿಂದ ಆರಂಭಗೊಂಡಿತ್ತು. ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರದಲ್ಲಿ ಸಂಚರಿಸಿ ಸೋಮವಾರ ರಾಮೋಹಳ್ಳಿ ತಲುಪಿತು.

ಸಿದ್ಧಾರೂಢ ಮಿಷನ್ ಆಶ್ರಮದ ಅಧ್ಯಕ್ಷ ಆರೂಢಭಾರತೀ ಸ್ವಾಮೀಜಿಯವರ ನೇತೃತ್ವದಲ್ಲಿ ಬೇಲಿಮಠದ ಶಿವರುದ್ರ ಸ್ವಾಮೀಜಿ, ರಾಮಕೃಷ್ಣ ಯೋಗಾಶ್ರಮದ ಸ್ವಾಮಿ ಯೋಗೇಶ್ವರಾನಂದಜಿ, ಸಂಗಮಾನಂದ ಸ್ವಾಮೀಜಿ, ಇಮ್ಮಡಿ ಮಹಾಂತ ಸ್ವಾಮೀಜಿ, ಮುಮ್ಮಡಿ ಷಡಕ್ಷರ ಸ್ವಾಮೀಜಿ, ಮಾತೃಶ್ರೀ ಉಮಾಭಾರತೀ, ಸಾಧ್ವಿ ಉನ್ಮೇಷಭಾರತೀ ಜ್ಯೋತಿಯನ್ನು ಸ್ವಾಗತಿಸಿದರು.

ಜ್ಯೋತಿ ಆಗಮಿಸುತ್ತಲೇ ಪುಳಕಿತಗೊಂಡ ಭಕ್ತರು ಜಯಘೋಷ ಮೊಳಗಿಸಿದರು. ಮಂಗಳವಾದ್ಯ, ವೀರಗಾಸೆ ಹಾಗೂ ಸಾಂಸ್ಕೃತಿಕ ಕಲಾ ತಂಡಗಳು ಯಾತ್ರೆಯ ಸಂತಸ, ಸಂಭ್ರಮವನ್ನು ಇಮ್ಮಡಿಗೊಳಿಸಿದವು.

ಈ ಸಂದರ್ಭದಲ್ಲಿ ಮಾತನಾಡಿದ ಆರೂಢಭಾರತೀ ಸ್ವಾಮೀಜಿ, ‘ಸಿದ್ಧಾರೂಢರು ಬಸವಣ್ಣನವರ ನಂತರದ ಅಪ್ರತಿಮ ಕ್ರಾಂತಿಕಾರಿ. ಅವರು ಹುಟ್ಟಿ ಬರದಿದ್ದಲ್ಲಿ ಸಂಸ್ಕೃತದ ವೇದಾಂತ ವಿದ್ಯೆಯನ್ನು ದ್ವಿಜರಲ್ಲದವರು, ಜನಸಾಮಾನ್ಯರು ತಿಳಿಯಲು ಅಸಾಧ್ಯವಾಗುತ್ತಿತ್ತು‘ ಎಂದರು.

ಮಂಗಳವಾರ ಮುಂಜಾನೆ ರಾಮೋಹಳ್ಳಿಯಿಂದ ಹೊರಟ ರಥಯಾತ್ರೆ ಬೆಂಗಳೂರಿನ ಕೊಡಿಗೇಹಳ್ಳಿ, ಕೆಂಗೇರಿ ಹಾಗೂ ಮೈಸೂರು ರಸ್ತೆಯಲ್ಲಿರುವ ಸಿದ್ಧಾರೂಢ ಮಠದ ಮೂಲಕ ಸಾಗಿ ಜ.10ಕ್ಕೆ ತುಮಕೂರು ತಲುಪಲಿದೆ. ಫೆ.18ಕ್ಕೆ ರಥಯಾತ್ರೆ ಸಂಪನ್ನಗೊಳ್ಳಲಿದೆ.

ಹುಬ್ಬಳ್ಳಿ ಸಿದ್ಧಾರೂಢ ಮಠದ ಅಧ್ಯಕ್ಷ ಬಸವರಾಜ ಕಲ್ಯಾಣ ಶೆಟ್ಟರ್, ಚಲನಚಿತ್ರ ನಟ ಚಿಕ್ಕ ಹೆಜ್ಜಾಜಿ ಮಹಾದೇವ್, ಜ್ಯೋತಿ ಯಾತ್ರಾ ಸಮಿತಿ ಅಧ್ಯಕ್ಷ ಉದಯಕುಮಾರ್ ಡಿ. ನಾಯಕ್, ಸಿ.ಸಂಜಯ ಕುಮಾರ್, ಪ್ರಮೋದ ಕಾಮತ್, ಲಕ್ಷ್ಮೀಮೂರ್ತಿ, ಸಾಹಿತಿ ಎಂ.ಎಚ್. ಜಯರಾಮ್, ಜಿ ಶಿವಣ್ಣ ಮತ್ತಿತರರು ಉಪಸ್ಥಿತರಿದ್ದರು.

ಬೂದಿ ಅವಘಡ- ಕಾರ್ಮಿಕ ಸಾವು: ತನಿಖೆ ಭರವಸೆ

ಪ್ರಜಾವಾಣಿ ವಾರ್ತೆ

ಬಿಡದಿ (ರಾಮನಗರ): ‘ಕರ್ನಾಟಕ ವಿದ್ಯುತ್ ನಿಗಮ (ಕೆಪಿಸಿಎಲ್) ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಸಹಯೋಗದಲ್ಲಿ ನಿರ್ಮಿಸಲಾಗಿರುವ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಸ್ಥಾವರದಲ್ಲಿ ಜ.4ರಂದು ಬಿಸಿ ಬೂದಿ ಸಿಡಿದು ಗಾಯಗೊಂಡಿದ್ದ ಐವರು ಕಾರ್ಮಿಕರಲ್ಲಿ ಒಬ್ಬರು ಮೃತಪಟ್ಟಿರುವ ಘಟನೆ ಕುರಿತು ತಾಂತ್ರಿಕ ತನಿಖೆ ನಡೆಸಲಾಗುವುದು’ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಹೇಳಿದರು.

ಭೈರಮಂಗಲ ರಸ್ತೆಯಲ್ಲಿರುವ ಸ್ಥಾವರಕ್ಕೆ ಮಂಗಳವಾರ ಭೇಟಿ ನೀಡಿ ಪರಿಶೀಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಘಟನೆಗೆ ತಾಂತ್ರಿಕ ದೋಷ ಕಾರಣ ಎನ್ನುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಹಾಗಾಗಿ, ತನಿಖೆಗೆ ತಜ್ಞರ ತಂಡ ರಚಿಸಲಾಗಿದೆ. ವರದಿ ಬಂದ ಬಳಿಕ ನಿರ್ಲಕ್ಷ್ಯ ತೋರಿದವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು’ ಎಂದರು.

‘ತ್ಯಾಜ್ಯವು ಬೂದಿಯಾಗಿ ಹೊರಹೋಗುವ ಪೈಪ್ ಕಟ್ಟಿಕೊಂಡಾಗ, ಕಾರ್ಮಿಕರು ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳದೆ ಪೈಪ್ ಓಪನ್ ಮಾಡಿರುವುದರಿಂದ ಏಕಾಏಕಿ ಬಿಸಿ ಬೂದಿ ಸಿಡಿದು ಅನಾಹುತ ಸಂಭವಿಸಿದೆ. ಘಟನೆಯಲ್ಲಿ ಐವರು ಗಾಯಗೊಂಡಿದ್ದರು. ಈ ಪೈಕಿ ಮಂಗಳವಾರ ಒಬ್ಬರು ಮೃತಪಟ್ಟಿದ್ದಾರೆ’ ಎಂದು ತಿಳಿಸಿದರು.

ತಂತ್ರಜ್ಞಾನ



ಸ್ಮಾರ್ಟ್‌ಫೋನ್ ಬ್ಯಾಟರಿ ಮಿಥ್ಯತಥ್ಯಗಳು

ಅವಿನಾಶ್ ಬಿ.

ಸ್ಮಾರ್ಟ್‌ಫೋನ್‌ಗಳ ಬ್ಯಾಟರಿ ಸಾಮರ್ಥ್ಯವನ್ನು ಹೆಚ್ಚಿಸುವುದು ಗ್ಯಾಜೆಟ್ ತಯಾರಕರಿಗಿರುವ ದೊಡ್ಡ ಸವಾಲು. ಇದಕ್ಕಾಗಿ ಅದೆಷ್ಟೋ ಸಂಶೋಧನೆಗಳು ನಡೆದರೂ, ಹೆಚ್ಚು ಸಾಮರ್ಥ್ಯದ ಬ್ಯಾಟರಿಗಾಗಿ ಫೋನ್ ಗಾತ್ರವನ್ನೇ ಹಿಗ್ಗಿಸಬೇಕಾದ ಅನಿವಾರ್ಯತೆಯಿದೆ. ಚೀನಾದ 'ಬೀಟಾವೋಲ್ಟ್' ಎಂಬ ಸ್ಟಾರ್ಟಪ್ ಕಂಪೆನಿಯೊಂದು ನ್ಯೂಕ್ಲಿಯಾರ್ ಸೆಲ್ ಬ್ಯಾಟರಿ ತಂತ್ರಜ್ಞಾನವೊಂದನ್ನು ಕಂಡುಹುಡುಕಿದೆ. ಈ ತಂತ್ರಜ್ಞಾನ ಸಾಕಾರಗೊಂಡರೆ ಸುಮಾರು 50 ವರ್ಷಗಳ ಕಾಲ ಚಾರ್ಜ್ ಮಾಡಬೇಕಾಗಿರುವುದಿಲ್ಲ ಎಂಬ ಸುದ್ದಿಯೂ ಇತ್ತೀಚೆಗೆ ದೊಡ್ಡ ಸದ್ದು ಮಾಡಿದ್ದರೂ, ಈ ತಂತ್ರಜ್ಞಾನವು ಸಾಕಾರಗೊಳ್ಳಲು ಹಲವು ವರ್ಷಗಳು ಬೇಕಾಗಬಹುದು.

ಫೋನ್‌ಗಳ ಬ್ಯಾಟರಿ ಚಾರ್ಜ್ ಹೆಚ್ಚು ಕಾಲ ಉಳಿಯದಿರುವುದಕ್ಕೆ ಸಾಕಷ್ಟು ಕಾರಣಗಳಿವೆ. ಸಾಧನಗಳ ಗಾತ್ರ, ತೀಕ್ಷ್ಣ ಪ್ರಖರತೆಯಿರುವ ಸ್ಕ್ರೀನ್, ವೇಗದ ಪ್ರೊಸೆಸರ್‌ಗಳು, ಹಿನ್ನೆಲೆಯಲ್ಲಿ ಕೆಲಸ ಮಾಡುವ ಸಾಫ್ಟ್‌ವೇರ್‌ಗಳು, ವೇಗದ ಇಂಟರ್‌ನೆಟ್, ಹೆಚ್ಚಿನ ಪ್ರಮಾಣದ ಗೇಮಿಂಗ್, ವೇಗದ ಚಾರ್ಜಿಂಗ್ ಮತ್ತು ವಿವಿಧ ಕಾರಣಗಳಿಂದಾಗಿ ಬ್ಯಾಟರಿಯು ಬಿಸಿಯಾಗುತ್ತದೆ. ಇವೆಲ್ಲವೂ ಬ್ಯಾಟರಿ ಬಾಳಿಕೆ ಮೇಲೆ ಕೆಟ್ಟ ಪರಿಣಾಮ ಬೀರಬಲ್ಲ ಅಂಶಗಳು.

ಇದರ ಫಲವಾಗಿ, ವಾಹನಗಳು, ಲ್ಯಾಪ್‌ಟಾಪ್, ಮೊಬೈಲ್ ಫೋನ್ ಮತ್ತು ಇತರ ಗ್ಯಾಜೆಟ್‌ಗಳಲ್ಲಿ ಬ್ಯಾಟರಿ ಚಾರ್ಜ್ ಹೆಚ್ಚು ಕಾಲ ಉಳಿಯುವಂತೆ ಮಾಡುವ ಕುರಿತು ವಿಜ್ಞಾನಿಗಳು ಸಂಶೋಧನೆಯನ್ನು ಮುಂದುವರಿಸುತ್ತಲೇ ಇದ್ದಾರೆ. ಆದರೆ ಇದರ ಪ್ರಗತಿಯು ಎಐ ಮುಂತಾದ ಬೇರೆ ತಂತ್ರಜ್ಞಾನಗಳಿಗೆ ಹೋಲಿಸಿದರೆ, ಒಂದಿಷ್ಟು ನಿಧಾನಗತಿಯಲ್ಲೇ ಸಾಗುತ್ತಿದೆ ಎನ್ನಬಹುದು. ಆದರೆ ಪ್ರಸ್ತುತ ವ್ಯವಸ್ಥೆಯಲ್ಲಿ, ಬ್ಯಾಟರಿಯನ್ನು ನಿರಂತರ ಚಾರ್ಜಿಂಗ್ ಮಾಡಬಾರದು, ಪೂರ್ತಿ (ಶೇ 100) ಚಾರ್ಜ್ ಮಾಡಬಾರದು ಎಂಬಿತ್ಯಾದಿ ಸಲಹೆ ಸೇರಿದಂತೆ, ಬ್ಯಾಟರಿ ನಿರ್ವಹಣೆಯ ಬಗ್ಗೆ ಸಾಕಷ್ಟು ಮಿಥ್ಯೆಗಳೂ, ಒಂದಷ್ಟು ತಥ್ಯಗಳೂ ಸಾಮಾಜಿಕ ಮಾಧ್ಯಮಗಳಿಂದಾಗಿ 'ಫಾರ್ವರ್ಡ್' ಆಗಿ ಜನರಲ್ಲಿ ಗೊಂದಲವನ್ನು ಮೂಡಿಸಿದೆ.

ಸ್ಮಾರ್ಟ್‌ಫೋನ್ ಅಥವಾ ಯಾವುದೇ ಗ್ಯಾಜೆಟ್ಟನ್ನು ರಾತ್ರಿಯಿಡೀ ಚಾರ್ಜ್‌ಗೆ ಇಡಬಹುದೇ? ಶೇ 100ರಷ್ಟು ಚಾರ್ಜ್ ಮಾಡಬಾರದೇ? ಕೆಲವೇ ವರ್ಷಗಳ ಹಿಂದೆ, ಚಾರ್ಜ್ ಮಾಡಲು ಇರಿಸಿದ ಮೊಬೈಲ್ ಫೋನ್ ಸ್ಫೋಟವಾದ ವರದಿಗಳು, ಜನರಲ್ಲಿ ಮೊಬೈಲ್ ಬಳಕೆಯ ಬಗ್ಗೆ ಆತಂಕ ಮೂಡಿಸಿದ್ದವು. ಇದಕ್ಕೆ ಕಾರಣ ಅದರಲ್ಲಿರುವ ಬ್ಯಾಟರಿಯೇ ಆಗಿತ್ತು. ಈಗ ಸ್ಮಾರ್ಟ್‌ಫೋನ್ ಬ್ಯಾಟರಿಗಳಿಗೆ ಬಳಕೆಯಾಗುವ ಲೀಥಿಯಂ ಅಯಾನ್ ಕೋಶಗಳಿಗೆ ಸಂಬಂಧಿಸಿದಂತೆ, ಸೂಕ್ತವಾದ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಮತ್ತು ಮೊಬೈಲ್ ಫೋನ್‌ಗಳಲ್ಲಿ ಬಳಕೆಯಾಗುವ ಪ್ರೊಸೆಸರ್‌ಗಳ ತಂತ್ರಜ್ಞಾನಗಳಲ್ಲಿ ಸಾಕಷ್ಟು ಸುಧಾರಣೆ ಆಗಿದೆ. ಹೀಗಾಗಿ, ರಾತ್ರಿಯಿಡೀ ಚಾರ್ಜಿಂಗ್ ಪ್ಲಗ್‌ಗೆ ಮೊಬೈಲನ್ನು ಸಿಕ್ಕಿಸಿಟ್ಟರೂ, ಏನೂ ಆಗದಂಥ ತಂತ್ರಜ್ಞಾನವನ್ನು ಬಹುತೇಕ ಮೊಬೈಲ್ ಫೋನ್ ತಯಾರಕ ಸಂಸ್ಥೆಗಳು ಅಳವಡಿಸಿವೆ. ಅಂದರೆ, ಶೇ 100ರಷ್ಟು ಚಾರ್ಜ್ ಆದ ಬಳಿಕ, ವಿದ್ಯುತ್ ಪ್ರವಾಹವು ಕಡಿತವಾಗುವ ತಂತ್ರಜ್ಞಾನ ಬಂದಿದೆ.

ಇಷ್ಟೇ ಅಲ್ಲದೆ, ಫೋನ್ ಬ್ಯಾಟರಿಯು ದೀರ್ಘ ಕಾಲ ಬಾಳಿಕೆ ಬರುವಂತಾಗಲು, ನಿರ್ದಿಷ್ಟ ಪ್ರಮಾಣದಲ್ಲಿ (ಶೇ 80ರಿಂದ ಶೇ 95ರವರೆಗೆ) ಚಾರ್ಜ್ ಆದಾಗ, ವಿದ್ಯುತ್ ಸಂಪರ್ಕ ಕಡಿತವಾಗುವ 'ಆಪ್ಟಿಮೈಸ್ಡ್ ಬ್ಯಾಟರಿ ಚಾರ್ಜಿಂಗ್' ತಂತ್ರಜ್ಞಾನವು ಇತ್ತೀಚಿನ ಬಹುತೇಕ ಫೋನ್‌ಗಳ ಸೆಟ್ಟಿಂಗ್‌ನಲ್ಲಿ ಇದೆ. ಇದರ ಅರ್ಥ, ಫೋನನ್ನು ಶೇ100ರಷ್ಟು ಚಾರ್ಜ್ ಮಾಡುವುದು ಕೂಡ ಬ್ಯಾಟರಿ ಬಾಳಿಕೆ ದೃಷ್ಟಿಯಿಂದ ಹಿತಕರವಲ್ಲ. ಹಳೆಯ ಫೋನ್‌ಗಳಲ್ಲಿ ಈ ರೀತಿಯ ವೈಶಿಷ್ಟ್ಯ ಇರುವುದಿಲ್ಲ ಎಂಬುದನ್ನು ಗಮನಿಸಬೇಕು.

ಹೀಗಾಗಿ, ಇತ್ತೀಚೆಗಿನ ಫೋನ್‌ಗಳಿಗೆ (ನಿಮ್ಮ ಫೋನ್‌ನಲ್ಲಿಯೂ ಈ ವೈಶಿಷ್ಟ್ಯ ಇದೆಯೇ ಎಂದು ಖಚಿತಪಡಿಸಿಕೊಂಡು) ರಾತ್ರಿಯಿಡೀ ಫೋನ್ ಚಾರ್ಜ್‌ಗಿಟ್ಟರೂ ಸಮಸ್ಯೆಯಾಗದು. ಸ್ವಲ್ಪ ಹಳೆಯ ಫೋನ್‌ಗಳಲ್ಲಿ, ಶೇ 100 ಚಾರ್ಜ್ ಆಗಿ, ಸಹಜವಾಗಿ ಸ್ವಲ್ಪ ಹೊತ್ತಿನ ಬಳಿಕ ಶೇ 99ಕ್ಕೆ ಇಳಿದಾಗ, ಚಾರ್ಜಿಂಗ್ ಪ್ರಕ್ರಿಯೆ ಮತ್ತೆ ಆರಂಭವಾಗುವುದರಿಂದ ಬ್ಯಾಟರಿ ಬಾಳಿಕೆಯ ಮೇಲೆ ಪರಿಣಾಮ ಬೀರುತ್ತದೆ.

ಅದೇ ರೀತಿ, ಚಾರ್ಜ್ ತೀರಾ ಕಡಿಮೆ ಆಗುವುದು ಅಥವಾ ಶೂನ್ಯಕ್ಕೆ ತಲುಪುವುದು ಕೂಡ ಬ್ಯಾಟರಿ ಬಾಳಿಕೆಗೆ ಪೂರಕವಲ್ಲ. ಬ್ಯಾಟರಿ ಚಾರ್ಜ್ ಶೇ 20ಕ್ಕಿಂತ ಕಡಿಮೆಯಾಗದಂತೆ ನೋಡಿಕೊಳ್ಳುವುದು ಶ್ರೇಯಸ್ಕರ. ಅಂದರೆ, 'ಲೋ ಪವರ್' ಮೋಡ್‌ಗೆ ಸ್ವಯಂಚಾಲಿತವಾಗಿ ಹೋಗುವುದರ ಮೊದಲೇ ನಾವು ಚಾರ್ಜ್ ಮಾಡಬೇಕು.

ಇನ್ನು, ಮತ್ತೊಂದು ಗಮನಿಸಬೇಕಾದ ಅಂಶವೆಂದರೆ, ವೇಗದ (ಫಾಸ್ಟ್) ಚಾರ್ಜಿಂಗ್ ಅಡಾಪ್ಟರ್‌ಗಳು ಈಗ ಮಾರುಕಟ್ಟೆಯಲ್ಲಿವೆ. ಫಾಸ್ಟ್ ಚಾರ್ಜಿಂಗ್ ವ್ಯವಸ್ಥೆಯನ್ನು ನಿಮ್ಮ ಫೋನ್ ಬೆಂಬಲಿಸದಿದ್ದರೆ ಅಂಥ ಚಾರ್ಜರ್‌ಗಳನ್ನು ಬಳಸಲೇಬಾರದು. ಇದರಿಂದ ಬ್ಯಾಟರಿಯ ಮೇಲೆ ಹೊರೆಯಾಗುತ್ತದೆ ಎಂದು ಎಚ್ಚರಿಸುತ್ತಾರೆ ತಜ್ಞರು. ವೇಗದ ಚಾರ್ಜಿಂಗ್ ಮಾಡಿದರೆ ಸಾಧನವು ಬಿಸಿಯಾಗುತ್ತದೆ. ಇದಕ್ಕಾಗಿಯೇ ಇತ್ತೀಚಿನ ಐಫೋನ್‌ಗಳನ್ನೇ ಗಮನಿಸಿದರೆ, ಶೇ 80ರಷ್ಟು ವೇಗವಾಗಿಯೇ ಚಾರ್ಜ್ ಆಗುತ್ತದೆ. ನಂತರ, ಬಿಸಿಯಾಗದಂತೆ ನೋಡಿಕೊಳ್ಳುವುದಕ್ಕಾಗಿ ಚಾರ್ಜಿಂಗ್ ನಿಧಾನಗೊಳ್ಳುವ ತಂತ್ರಜ್ಞಾನವನ್ನು ಬಳಸಲಾಗಿದೆ. ❖

ಒಂದಷ್ಟು ಟಿಪ್ಸ್

- ಚಾರ್ಜ್ ಮಾಡುತ್ತಿರುವಾಗ ಸಾಧನದ ಮೇಲೆ ಪುಸ್ತಕ ಮುಂತಾದವನ್ನು ಇರಿಸಬೇಡಿ.
- ಶೇ 100ರಷ್ಟು ಚಾರ್ಜ್ ಮಾಡಬೇಡಿ ಅಥವಾ ಚಾರ್ಜ್ ಪೂರ್ತಿಯಾಗಿ ಖಾಲಿ (ಶೇ 0) ಆಗದಂತೆ ನೋಡಿಕೊಳ್ಳಿ. ಪದೇ ಪದೇ ಚಾರ್ಜ್ ಮಾಡಬಹುದು; ಆದರೆ ಗರಿಷ್ಠ ಶೇ 80ರಿಂದ ಶೇ 90ರಷ್ಟೇ ಚಾರ್ಜ್ ಮಾಡಿಕೊಳ್ಳಿ.
- ಸಾಮಾನ್ಯ ಬಳಕೆಯಲ್ಲಿ ಸ್ಕ್ರೀನ್ ಪ್ರಖರತೆ (ಬ್ರೈಟ್‌ನೆಸ್) ಎಷ್ಟು ಬೇಕೋ ಅಷ್ಟೇ ಇರಿಸಿಕೊಳ್ಳಿ. ಫೋನ್‌ಗಳಲ್ಲಿರುವ 'ಅಡಾಪ್ಟಿವ್ ಬ್ರೈಟ್‌ನೆಸ್' ಎಂಬ ವೈಶಿಷ್ಟ್ಯವನ್ನು ಬಳಸಿಕೊಳ್ಳಿ.
- ಯಾವುದೇ ಕೆಲಸ ಮಾಡದಿರುವಾಗ ಫೋನ್‌ನ ಸ್ಕ್ರೀನ್ ಆಫ್ ಆಗಲು (ಸ್ಕ್ರೀನ್ ಟೈಮ್‌ಔಟ್) ಸಮಯವನ್ನು ಹೊಂದಿಸಿಕೊಳ್ಳಿ.
- ಲೊಕೇಷನ್, ವೈರ್‌ಲೆಸ್, ಬ್ಲೂಟೂತ್ ಸೇವೆಗಳು ಮತ್ತು ಇಂಟರ್ನೆಟ್ (ಮೊಬೈಲ್ ಡೇಟಾ), ವೈಫೈ ಕೂಡ ಸದಾ ಕಾಲ ಆನ್ ಇದ್ದರೆ, ಒಂದಿಷ್ಟು ಬ್ಯಾಟರಿ ಚಾರ್ಜ್ ಖರ್ಚಾಗುತ್ತದೆ. ಇದಕ್ಕಾಗಿ, ಅಗತ್ಯವಿದ್ದಾಗಲಷ್ಟೇ ಅವುಗಳನ್ನು ಆನ್ ಮಾಡಿಕೊಳ್ಳಿ.
- ಬಳಕೆಯಾಗದೇ ಇರುವ ಆ್ಯಪ್‌ಗಳು ಹಿನ್ನೆಲೆಯಲ್ಲಿಯೂ ಕೆಲಸ ಮಾಡದಂತೆ ಇರಿಸಬೇಕು. ಅವುಗಳನ್ನು 'ಸ್ಲೀಪ್' ಮೋಡ್‌ನಲ್ಲಿ ಇರಿಸುವ ಆಯ್ಕೆಯು 'ಸೆಟ್ಟಿಂಗ್ಸ್'ನಲ್ಲಿರುತ್ತದೆ.
- ವಾಯ್ಸ್ ಅಸಿಸ್ಟೆಂಟ್ ಆ್ಯಪ್‌ಗಳನ್ನು (ಸಿರಿ, ಗೂಗಲ್ ಅಸಿಸ್ಟೆಂಟ್, ಅಮೆಜಾನ್ ಅಲೆಕ್ಸಾ ಇತ್ಯಾದಿ) ಅಗತ್ಯವಿದ್ದಾಗ ಮಾತ್ರ ಆನ್ ಮಾಡಬೇಕು.
- ಹೆಚ್ಚು ಸಮಯ ಬ್ಯಾಟರಿ ಅಗತ್ಯವಿದೆ. ಚಾರ್ಜಿಂಗ್ ಅವಕಾಶ ಇಲ್ಲ ಎಂಬುದು ತಿಳಿದಿದ್ದಾಗ, ಸಾಧನದಲ್ಲಿರುವ 'ಪವರ್ ಸೇವಿಂಗ್' ಅಥವಾ 'ಬ್ಯಾಟರಿ ಸೇವರ್' ಮೋಡ್ ಆನ್ ಮಾಡಿಕೊಳ್ಳಿ.
- ಚಾರ್ಜಿಂಗ್ ಮಾಡುತ್ತಿರುವಾಗಲೇ, ಫೋನ್ ಬಿಸಿ ಆಗಲು ಕಾರಣವಾಗುವ ಗೇಮಿಂಗ್, ಸೋಷಿಯಲ್ ಮೀಡಿಯಾ ಇತ್ಯಾದಿ ಬಳಸಬೇಡಿ. ಫೋನ್ (ಬ್ಯಾಟರಿಯೂ) ಬಿಸಿಯಾಗುವುದು ಎಂದರೆ ಬ್ಯಾಟರಿಯ ಬಾಳಿಕೆಗೆ ದೊಡ್ಡ ಹೊಡೆತ ಎಂಬುದು ನೆನಪಿನಲ್ಲಿರಲಿ. 35 ಡಿಗ್ರಿ ಸೆಂಟಿಗ್ರೇಡ್ ತಾಪಮಾನಕ್ಕಿಂತ ಹೆಚ್ಚು ಬಿಸಿ ಇರುವ ಪ್ರದೇಶದಲ್ಲಿ ಫೋನ್ ಬಳಸಬಾರದು ಎಂದು ಆ್ಯಪಲ್ ಸ್ಪಷ್ಟವಾಗಿ ಎಚ್ಚರಿಕೆ ನೀಡಿದೆ. ವೇಗದ ಚಾರ್ಜಿಂಗ್ ಅಥವಾ ಕಾರ್ ಚಾರ್ಜರ್ ಇಲ್ಲವೇ ಪೋರ್ಟೆಬಲ್ ಬ್ಯಾಟರಿ ಮೂಲಕ ಚಾರ್ಜ್ ಮಾಡಬಾರದು ಎನ್ನುವುದು ಇದೇ ಕಾರಣಕ್ಕೆ. ತೀರಾ ಅಗತ್ಯವೆನಿಸಿದರೆ ಮಾತ್ರ ಇವನ್ನು ಬಳಸಿ.

ರೋಬೊ ಆಪರೇಷನ್ 'ಮಂತ್ರ'

ಅಮೃತೇಶ್ವರಿ ಬಿ.

'ಎಸ್‌ಎಸ್‌ಐ ಮಂತ್ರ' (SSI MANTRA) ಎನ್ನುವ ರೋಬೊ ವ್ಯವಸ್ಥೆ ಬಗ್ಗೆ ನಿಮಗೆ ತಿಳಿದಿರಬೇಕಲ್ಲಾ? ಇದೊಂದು ಭಾರತದ ಮೊದಲ ಸ್ವದೇಶಿ ಶಸ್ತ್ರಚಿಕಿತ್ಸಾ ರೋಬೊ. 'ಎಸ್‌ಎಸ್‌ಐ' ಎನ್ನುವುದು ಈ ಮಂತ್ರವನ್ನು ಕಂಡುಹಿಡಿದಿರುವ ಪ್ರಯೋಗಾಲಯವಷ್ಟೆ. 'ಮಂತ್ರ' ಎಂದರೆ 'ಮಲ್ಟಿ ಆರ್ಮ್ ನೋವೆಲ್ ಟೆಲಿ ರೋಬೋಟಿಕ್ ಅಸಿಸ್ಟೆನ್ಸ್' ಎಂದರ್ಥ.

ಈ ಮುಂಚೆ ನಮ್ಮ ದೇಶದಲ್ಲಿ ಸ್ವದೇಶಿ ರೋಬೊಗಳು ಇರಲಿಲ್ಲವೇ? – ಎಂದು ಕೇಳಿದರೆ, ಉತ್ತರ 'ಹೌದು'. ಮಾನವ್, ಕೆಂಪ, ದಕ್ಷ್, ಮಿತ್ರ, ಮುಂತಾದ ರೋಬೊಗಳು ಭಾರತದಲ್ಲಿ ಪರಿಚಯವಾಗಿ ಈಗಾಗಲೇ ದಶಕಗಳೇ ಕಳೆದಿವೆ. ಆದರೆ ಅವೆಲ್ಲ ವೈದ್ಯಕೀಯ ಕ್ಷೇತ್ರಕ್ಕೆ ವಿನ್ಯಾಸ ಮಾಡಿದುದಾಗಿರಲಿಲ್ಲ. ವೈದ್ಯಕೀಯ ಕ್ಷೇತ್ರದಲ್ಲಿ ರೋಬೊಗಳು ಬಳಕೆಯಲ್ಲಿದ್ದರೂ ಪೂರ್ತಿ ಶಸ್ತ್ರಚಿಕಿತ್ಸೆಯನ್ನು ಮಾಡುವಂಥವಾಗಿರಲಿಲ್ಲ. ಈ ಮಂತ್ರವು ಶಸ್ತ್ರಚಿಕಿತ್ಸೆಗೆಂದೇ ಅಭಿವೃದ್ಧಿಪಡಿಸಿರುವ ವ್ಯವಸ್ಥೆ. ಅದುವೂ ಜಟಿಲವಾದ ಆಪರೇಷನ್‌ಗಳು! ಮೊನ್ನೆ ಮಹಾರಾಷ್ಟ್ರದ ಪುಣೆಯ 'ನೋಬಲ್ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ'ದಲ್ಲಿ ಸ್ಥಾಪಿಸಿದ್ದಾರೆ. ಅಲ್ಲಿಯ ಮೊದಲ ಪ್ರಯತ್ನವಾಗಿ ಒಬ್ಬ ರೋಗಿಯ ದೊಡ್ಡ ಕರುಳಿನಲ್ಲಿದ್ದ ಕ್ಯಾನ್ಸರ್‌ನ ಗಂಟನ್ನೂ ಶಸ್ತ್ರಚಿಕಿತ್ಸೆ ಮಾಡಿ ತೆಗೆದಿದ್ದಾರೆ.

ಇದೊಂದು, ಜಟಿಲವಾದ ಶಸ್ತ್ರಚಿಕಿತ್ಸೆಗಳನ್ನು ಮಾಡುವ ಐದು ಕೈಗಳುಳ್ಳ, ಒಂದು 3D HD ಹೆಡ್‌ಸೆಟ್ ಜೋಡಿಸಿರುವ, ಹಾಗೂ 3D 4K ಗುಣಮಟ್ಟದ ಇಮೇಜಿಂಗ್ ಅನ್ನು ಒದಗಿಸುವ ವಿಷನ್ ಕಾರ್ಟ್ ಸೇರಿದಂತೆ ಮೂರು ರೋಬೊಗಳನ್ನೊಳಗೊಂಡ ಒಂದು ವ್ಯವಸ್ಥೆ. ಎಲ್ಲೋ ಇರುವ ರೋಗಿಯನ್ನು ಇನ್ನೆಲ್ಲಿಂದಲೋ ಪರೀಕ್ಷಿಸಿ, ಶಸ್ತ್ರಚಿಕಿತ್ಸೆ ಮಾಡಬಲ್ಲಂಥ, ಸಾಟಿಯಿಲ್ಲದ ನಿಯಂತ್ರಣ ಹಾಗೂ ನಿಖರತೆಯನ್ನು ದೂರದ ಶಸ್ತ್ರಚಿಕಿತ್ಸಾ ಸಿಬ್ಬಂದಿಗೆ ಒದಗಿಸಬಲ್ಲ ರೋಬೊ ಇದಾಗಿದೆ. ಈ ವಿಧಾನದಲ್ಲಿ ವೈದ್ಯರು ಸ್ವತಃ ಕತ್ತರಿ, ಚಾಕುಗಳನ್ನು ಹಿಡಿಯದೇ ರೋಬೋವಿನ ಕೈಗಳ ಮೂಲಕ ಕಿಲೋಮೀಟರುಗಟ್ಟಲೆ ದೂರದಿಂದಲೇ ಶಸ್ತ್ರಕ್ರಿಯೆಯನ್ನು ನಡೆಸುತ್ತಾರೆ. 32 ಇಂಚಿನ ಎಲೆಕ್ಟ್ರಾನಿಕ್ ಪರದೆಯೊಂದು ವೈದ್ಯರ ಮುಂದೆ 3D ದೃಶ್ಯಾವಳಿಯನ್ನು ಪ್ರದರ್ಶಿಸುತ್ತಿರುತ್ತದೆ. ಇದಕ್ಕಾಗಿ ತಡೆಯಿಲ್ಲದ 5G ನೆಟ್‌ವರ್ಕನ್ನು ಬಳಸಲಾಗಿದೆ ಎನ್ನುತ್ತಾರೆ, ಈ ತಂತ್ರಜ್ಞಾನದ ವಿನ್ಯಾಸಕ ಹಾಗೂ ವೈದ್ಯ ಡಾ. ಸುಧೀರ್ ಶ್ರೀವಾತ್ಸವ್. ಜೊತೆಗೆ ವೈದ್ಯರ ಇರುವಿಕೆಯನ್ನು ಖಚಿತಪಡಿಸುವ ಸುರಕ್ಷಾ ಕ್ಯಾಮೆರಾವೂ ಇದೆಯಂತೆ. ಈ ವಿಧಾನವನ್ನೇ 'ಟೆಲಿಸರ್ಜರಿ' ಎನ್ನುತ್ತೇವೆ. ಮೊದಲು ಪ್ರಾಣಿಗಳ ಮೇಲೆ ಪ್ರಯೋಗಿಸಿ ಯಶಸ್ವಿಯಾದ ನಂತರವೇ, ಮನುಷ್ಯರ ಮೇಲೆ ಪ್ರಯೋಗಿಸಿ ಸಫಲರಾಗಿದ್ದಾರೆ, ಭಾರತೀಯ ವೈದ್ಯರು.

ಈ ರೋಬೊವನ್ನು ಬಳಸಿ ಮಾಡುವ ಶಸ್ತ್ರಚಿಕಿತ್ಸೆಯಲ್ಲಿ ಓಪನ್ ಸರ್ಜರಿಯ ಹಾಗೆ ದೇಹದ ಭಾಗವನ್ನು ದೊಡ್ಡದಾಗಿ ಕತ್ತರಿಸುವ ಅವಶ್ಯಕತೆಯಿಲ್ಲ. ಸಣ್ಣದಾಗಿ ಸೀಳಿ ತನ್ನ ಸಣ್ಣ ತಂತಿಯಂತಹ ಕೈಗಳಿಂದಲೇ ಅಚ್ಚುಕಟ್ಟಾಗಿ, ಮತ್ತು ನಿಖರವಾಗಿ ಕೆಲಸ ಮಾಡಿ ಮುಗಿಸುತ್ತದೆ, ಈ ರೋಬೊ. ಇದರಿಂದ ರೋಗಿಗಾಗುವ ನೋವು ಹಾಗೂ ಗಾಯದ ಕಲೆಗಳು ಕಡಿಮೆ ಇರುತ್ತದೆ. ರಕ್ತದ ನಷ್ಟವೂ ಕಡಿಮೆಯಿರುತ್ತದೆ. ಆಸ್ಪತ್ರೆಯಲ್ಲಿ ಹೆಚ್ಚುಕಾಲ ಇರುವ ಅಗತ್ಯವೂ ಇರದೆ ಆರಾಮದಾಯಕವಾಗಿರುತ್ತದೆ. ಅಲ್ಲದೇ ಶೀಘ್ರವಾಗಿ ಸಹಜ ಜೀವನಕ್ಕೆ ಮರಳಬಹುದು. ವಿದೇಶಗಳಿಂದ ಆಮದು ಮಾಡಿಕೊಂಡ ಉಳಿದ ರೋಬೊ ವ್ಯವಸ್ಥೆಗಳಿಗಿಂತ ಸ್ವದೇಶಿ ರೋಬೊಗಳು ಅಗ್ಗವೂ ಹೌದು. ತುರ್ತುಪರಿಸ್ಥಿತಿಗಳಲ್ಲಿ ರೋಗಿ ಎಲ್ಲೇ ಇದ್ದರೂ ವೈದ್ಯರು ತಕ್ಷಣದಲ್ಲಿಯೇ ಕಾರ್ಯಪ್ರವೃತ್ತರಾಗಬಹುದು. ಪ್ರಯಾಣದ ಸಮಯವೂ ಉಳಿಯುತ್ತದೆ.

ಇದುವರೆಗೂ ರೋಬೊಗಳನ್ನು ಬಳಸಿ ಮಾಡುವ ಟೆಲಿಸರ್ಜರಿಯಲ್ಲಿ ಯೂರಾಲಜಿ, ಗೈನಕಾಲಜಿ ಮತ್ತಿತ್ತರ ಸಂಕೀರ್ಣ ಶಸ್ತ್ರಚಿಕಿತ್ಸೆಗಳನ್ನು ನಡೆಸುತ್ತಿದ್ದರು. ಆದರೆ ಹೃದಯದ ಶಸ್ತ್ರಚಿಕಿತ್ಸೆಯನ್ನೂ ಹೀಗೆ ರೋಬೊವನ್ನು ಬಳಸಿ ಮಾಡುವ ಪ್ರಯತ್ನಕ್ಕೆ ಇದೇ ಮೊದಲ ಬಾರಿಗೆ ಭಾರತ ಮುಂದಾಗಿದೆ. ಹೃದಯದ ಸರ್ಜರಿಗೂ ಸೂಕ್ತವೆನಿಸುವಂತೆಯೇ ಈ ರೋಬೊಗಳ ಕೈಗಳನ್ನು ನಿರ್ಮಿಸಲಾಗಿದೆಯಂತೆ. ಹಾಗಾಗಿ ಹೃದಯದ ಸಮಸ್ಯೆ ಕಾಣಿಸಿಕೊಂಡ ತಕ್ಷಣವೇ ವೈದ್ಯರನ್ನು ಸಂಪರ್ಕಿಸಿದರೆ ರೋಗಿಯನ್ನು ಸುಲಭವಾಗಿ ಉಳಿಸಿಕೊಳ್ಳಬಹುದು. ರೋಗಿಯ ಅಥವಾ ವೈದ್ಯರ ಪ್ರಯಾಣದಲ್ಲಿಯೋ, ಇನ್ನಾವುದೋ ಕಾರಣಗಳಿಂದಲೋ ಆ 'ಗೋಲ್ಡನ್ ಟೈಂ' ವ್ಯರ್ಥವಾಗುವುದಿಲ್ಲ. ಒಟ್ಟಾರೆ, ಭವಿಷ್ಯದಲ್ಲಿ ಟೆಲಿಸರ್ಜರಿಯ ಮೂಲಕ ದೇಶದ ಮೂಲೆಮೂಲೆಯಲ್ಲಿರುವ ಪ್ರತಿ ರೋಗಿಗೂ ಈ ಸೌಲಭ್ಯವನ್ನು ಒದಗಿಸುವ ಉದ್ದೇಶ ಈ ವ್ಯವಸ್ಥೆಯದ್ದಾಗಿದೆ. ಭಾರತದಲ್ಲಿ ಮಾತ್ರವಲ್ಲ, ಮುಂದುವರಿದ ರಾಷ್ಟ್ರಗಳಾದ ಅಮೆರಿಕ, ಚೀನಾ, ರಷ್ಯಾ, ಜಪಾನ್ ಸೇರಿದಂತೆ ಎಲ್ಲೆಡೆ ಈ ಪ್ರಯತ್ನ ನಡೆಯುತ್ತಿದ್ದರೂ, ಸದ್ಯ ಮುಂದಿರುವುದು ಮಾತ್ರ ಭಾರತವೇ. ಹೃದಯದ ಟೆಲಿಸರ್ಜರಿಯಲ್ಲಿ ಭಾರತ ಜಗತ್ತಿಗೇ ನಾಯಕನಾಗುವ ಕಾಲ ದೂರ ಉಳಿದಿಲ್ಲ ಎನ್ನಬಹುದು. ಟೆಲಿಸರ್ಜರಿ ಎನ್ನುವುದು ಭಾರತಕ್ಕೆ ಸುಮಾರು ನಾಲ್ಕು ದಶಕಗಳ ಕನಸು, ಈಗ ಅದು ನನಸಾಗಿದೆ. ❖



ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೋತ್ತರ–

4) ಕೆಳಗಿನ ಕೊಟ್ಟಿರುವ ಮೂರು ಬೇರೆ ಬೇರೆ ಪ್ರಾಣಿಗಳ ಹೃದಯವನ್ನು ಪ್ರತಿನಿಧಿಸುತ್ತವೆ. ಅವುಗಳನ್ನು ಗಮನಿಸಿ ಮತ್ತು ಪ್ರಶ್ನೆಗಳಿಗೆ ಉತ್ತರಿಸಿ.



1 2 3

ಇವುಗಳಲ್ಲಿ ಯಾವ ಹೃದಯವು ಅಧಿಕ ಶಕ್ತಿ ಇರುವ ಪ್ರಾಣಿಗಳಿಗೆ ಉಪಯುಕ್ತ? ಮತ್ತು ಏಕೆ?

ಉತ್ತರ:– ಅಧಿಕ ಶಕ್ತಿ ಇರುವ ಪ್ರಾಣಿಗಳಿಗೆ 2ನೇ ಹೃದಯವು ಉಪಯುಕ್ತವಾಗಿದೆ. ಯಾಕೆಂದರೆ ಇವುಗಳಲ್ಲಿ ಆಮ್ಲಜನಕಯುಕ್ತ ರಕ್ತ ಹಾಗೂ ಆಮ್ಲಜನಕ ರಹಿತ ರಕ್ತವು ಮಿಶ್ರಿತವಾಗುವುದಿಲ್ಲ, ಇಂತಹ ಹೃದಯವು ಸಮರ್ಥ ಆಮ್ಲಜನಕದ ಪೂರೈಕೆಗೆ ಹಾಗೂ ದೇಹದಲ್ಲಿ ಉಷ್ಣತೆ ಕಾಪಾಡಿಕೊಳ್ಳಲು ಸಹಕಾರಿಯಾಗಿದೆ

5) ಲೈಂಗಿಕ ಸಂತಾನೋತ್ಪತ್ತಿ ಪ್ರಕ್ರಿಯೆಯು ಏನನ್ನು ಸಂಯೋಜಿಸುತ್ತದೆ?

ಉತ್ತರ:– ಸಂತಾನೋತ್ಪತ್ತಿಯ ಸಮಯದಲ್ಲಿ ಎರಡು ವಿಭಿನ್ನ ಜೀವಿಗಳ ಡಿಎನ್‌ಎ ಅಣುಗಳ ಸೇರುವಿಕೆ ಪ್ರಕ್ರಿಯೆಯನ್ನು ಲೈಂಗಿಕ ಸಂತಾನೋತ್ಪತ್ತಿ ಪ್ರಕ್ರಿಯೆಯು ಸಂಯೋಜಿಸುತ್ತದೆ.

6) ಬಿಳಿಯ ಬೆಳಕಿನ ರೋಹಿತ ಎಂದರೇನು?

ಉತ್ತರ:– ಬಿಳಿಯ ಬೆಳಕಿನ ಕಿರಣದ ವರ್ಣಮಯ ಘಟಕಗಳ ಪಟ್ಟಿಯನ್ನು ಬಿಳಿಯ ಬೆಳಕಿನ ರೋಹಿತ ಎಂದು ಕರೆಯುತ್ತೇವೆ

7) ಏಕಲಿಂಗಿ ಹೂವು ಯಾವುದು?

ಉತ್ತರ:– ಒಂದು ಹೂವು ಕೇವಲ ಕೇಸರಗಳನ್ನೋ ಅಥವಾ ಶಲಾಕಗಳನ್ನೋ ಹೊಂದಿದ್ದರೆ ಅದು ಏಕಲಿಂಗಿ ಹೂವು ಎನ್ನುವರು

ಉದಾ:– ಪಪಾಯ, ಕಲ್ಲಂಗಡಿ

8) ಕಾರಣ ಕೊಡಿ

ಎ) ವಿದ್ಯುತ್ ದೀಪಗಳ ತಂತುಗಳಲ್ಲಿ ಟಂಗ್‌ಸ್ಟನ್ ಅನ್ನು ಬಳಸಲಾಗುತ್ತದೆ

ಬಿ) ಗೃಹಬಳಕೆ ವಿದ್ಯುತ್ ಮಂಡಲಗಳಲ್ಲಿ ವಿದ್ಯುತ್ ಉಪಕರಣಗಳನ್ನು ಸರಣಿಕ್ರಮದಲ್ಲಿ ಜೋಡಿಸುವುದಿಲ್ಲ

ಅಥವಾ

ವಿದ್ಯುತ್ ಮಂಡಲಗಳಲ್ಲಿ ಫ್ಯೂಸ್ ಜೋಡಣೆ ಅವಶ್ಯ ಏಕೆ? ವಿವರಿಸಿ

ಉತ್ತರ:–(ಎ) ಟಂಗ್‌ಸ್ಟಂನ್‌ನ ದ್ರವನಬಿಂದು ಮತ್ತು ರೋಧಶೀಲತೆಯು ಅತಿಹೆಚ್ಚು ಇದು ಅತಿಹೆಚ್ಚಿನ ತಾಪಮಾನದಲ್ಲಿ ಕರಗಲಾರದು

ವಿದ್ಯುತ್ ದೀಪಗಳು ಅತಿಹೆಚ್ಚು ತಾಪಮಾನದಲ್ಲಿ ಬೆಳಗುತ್ತವೆ, ಆದ್ದರಿಂದ ಟಂಗ್‌ಸ್ಟನ್‌ಅನ್ನು ವಿದ್ಯುತ್ ದೀಪಗಳ ತಂತುಗಳಲ್ಲಿ ಮುಖ್ಯವಾಗಿ ಬಳಸಲಾಗುತ್ತದೆ.

ಬಿ) ಗೃಹ ಬಳಕೆಯ ವಿದ್ಯುತ್ ಮಂಡಲಗಳಲ್ಲಿ ವಿವಿಧ ವಿದ್ಯುತ್ ಘಟಕಗಳು ವಿವಿಧ ವಿದ್ಯುತ್ ಪ್ರವಾಹದ ಮೌಲ್ಯದಲ್ಲಿ ಸೂಕ್ತವಾಗಿ ಕಾರ್ಯನಿರ್ವಹಿಸುತ್ತದೆ. ಒಂದು ಘಟಕವು ಹಾನಿಗೊಂಡರೆ, ಮಂಡಲವು ಕಡಿತಗೊಂಡು ಇತರೆ ಯಾವುದೇ ಘಟಕಗಳು ಕಾರ್ಯನಿರ್ವಹಿಸುವುದಿಲ್ಲ, ಆದ್ದರಿಂದ ಗೃಹಬಳಕೆ ವಿದ್ಯುತ್ ಮಂಡಲಗಳಲ್ಲಿ ಸರಣಿಕ್ರಮ ವ್ಯವಸ್ಥೆಯಲ್ಲಿ ವಿದ್ಯುತ್ ಉಪಕರಣಗಳನ್ನು ಜೋಡಿಸುವುದಿಲ್ಲ

ಅಥವಾ

ಫ್ಯೂಸ್ ಒಂದು ಸುರಕ್ಷಾ ಸಾಧನವಾಗಿದ್ದು ಅತಿಹೆಚ್ಚಿನ ವಿದ್ಯುತ್ ಪ್ರವಾಹವು ವಿದ್ಯುತ್ ಮಂಡಲಗಳ ಹಾಗೂ ವಿದ್ಯುತ್ ಉಪಕರಣಗಳ ಮೂಲಕ ಪ್ರವಹಿಸದಂತೆ ತಡೆದು ಅವುಗಳನ್ನು ರಕ್ಷಿಸುತ್ತದೆ. ಇದು ಸೂಕ್ತ ದ್ರವನ ಬಿಂದು ಹೊಂದಿರುವ ಲೋಹ ಅಥವಾ ಮಿಶ್ರಲೋಹದ ತಂತಿಯಿಂದ ಮಾಡಲಾಗಿದ್ದು ವಿದ್ಯುತ್ ಉಪಕರಣಗಳೊಂದಿಗೆ ಸರಣಿಕ್ರಮದಲ್ಲಿ ಇರಿಸಲ್ಪಟ್ಟಿರುತ್ತದೆ. ನಿಗದಿತ ಪ್ರಮಾಣಕ್ಕಿಂತ ಹೆಚ್ಚಿನ ವಿದ್ಯುತ್ ಪ್ರವಾಹವು ಪ್ರವಹಿಸಿದಾಗ ಫ್ಯೂಸ್ ತಂತಿಯ ತಾಪವು ಹೆಚ್ಚಾಗುತ್ತದೆ, ಇದು ಫ್ಯೂಸ್ ತಂತಿಯನ್ನು ಕರಗಿಸಿ ಮಂಡಲವನ್ನು ಕಡಿತಗೊಳಿಸುತ್ತದೆ. ಆದ್ದರಿಂದ ವಿದ್ಯುತ್ ಮಂಡಲಗಳಲ್ಲಿ ಫ್ಯೂಸ್‌ನ ಜೋಡಣೆ ಅವಶ್ಯಕ

9) ಗೋಳೀಯ ದರ್ಪಣದ ವಕ್ರತಾ ಕೇಂದ್ರ ಎಂದರೇನು?

ಉತ್ತರ:– ಗೋಳೀಯ ದರ್ಪಣದ ಪ್ರತಿಫಲಿಸುವ ಮೇಲ್ಮೈ ಗೋಳದ ಒಂದು ಭಾಗವನ್ನು ರೂಪಿಸುತ್ತದೆ. ಈ ಗೋಳದ ಕೇಂದ್ರವನ್ನು ವಕ್ರತಾ ಕೇಂದ್ರ ಎನ್ನುವರು.

10) ಪ್ರಭೇದಿಕರಣಕ್ಕೆ ಕಾರಣವಾಗುವ ಅಂಶಗಳನ್ನು ಹೆಸರಿಸಿ

ಉತ್ತರ:– ಭಿನ್ನತೆಗಳು, ಭೌಗೋಳಿಕ ಬೇರ್ಪಡಿವಿಕೆ.

11) ಕೊಟ್ಟಿರುವ ಚಿತ್ರವನ್ನು ಗಮನಿಸಿ ಚಿತ್ರವು ಸೂಚಿಸುವ ದೃಷ್ಟಿ ದೋಷವನ್ನು ಹೆಸರಿಸಿ. ಮತ್ತು ಆ ದೃಷ್ಟಿ ದೋಷವನ್ನು ಸರಿಪಡಿಸಲು ಉಪಯೋಗಿಸುವ ಮಸೂರವನ್ನು ತಿಳಿಸಿ



ಉತ್ತರ:– * ಸಮೀಪ ದೃಷ್ಟಿದೋಷ(ಮಯೊಪಿಯಾ)
* ನಿಮ್ನ ಮಸೂರ

12) ಪಳೆಯುಳಿಕೆ ಇಂಧನ ಎಂದರೇನು? ಉದಾ ಕೊಡಿ

ಉತ್ತರ:– ಲಕ್ಷಾಂತರ ವರ್ಷಗಳ ಹಿಂದೆ ಭೂಮಿಯಡಿಯಲ್ಲಿ ಹುದುಗಿದ್ದ ಸಸ್ಯ ಮತ್ತು ಪ್ರಾಣಿಗಳು ಆಕ್ಸಿಜನ್ ಸಂಪರ್ಕವಿಲ್ಲದ ಅಪಾರ ಒತ್ತಡ ಮತ್ತು ಉಷ್ಣತೆಗೆ ಒಳಗಾಗಿ ರೂಪುಗೊಂಡ ಇಂಧನಕ್ಕೆ ಪಳೆಯುಳಿಕೆ ಇಂಧನಗಳು ಎನ್ನುವರು

ಉದಾ:– ಕಲ್ಲಿದ್ದಲು ಮತ್ತು ಪೆಟ್ರೋಲಿಯಂ

13) ಪಟ್ಟಿ:1ರಲ್ಲಿ ಸಾಧನಗಳ ಹೆಸರನ್ನು ಪಟ್ಟಿ–2ರಲ್ಲಿ ಅವುಗಳ ಅನುರೂಪ ಕಾರ್ಯಗಳನ್ನು ನೀಡಲಾಗಿದೆ. ಅವುಗಳನ್ನು ಹೊಂದಿಸಿ ಬರೆಯಿರಿ

ಪಟ್ಟಿ: 1

(ಎ) ದಿಕ್ಪರಿವರ್ತಕ
(ಬಿ) ಫ್ಯೂಸ್
(ಸಿ) ಗೆಲ್ವನೋ ಮೀಟರ್
(ಡಿ) ವಿದ್ಯುತ್ ಜನಕ

ಪಟ್ಟಿ–2

1) ಒಂದು ಮಂಡಲದಲ್ಲಿ ವಿದ್ಯುತ್ ಪ್ರವಾಹದ ಉಪಸ್ಥಿತಿಯನ್ನು ಕಂಡುಹಿಡಿಯುತ್ತದೆ.
2) ಯಾಂತ್ರಿಕ ಶಕ್ತಿಯನ್ನು ವಿದ್ಯುತ್ ಶಕ್ತಿಯಾಗಿ ಪರಿವರ್ತಿಸುತ್ತದೆ.
3) ವಿಭವಾಂತರವನ್ನು ಅಳೆಯುತ್ತದೆ.
4) ವಾಹಕದ ಚಲನೆಯ ದಿಕ್ಕನ್ನು ತೋರಿಸುತ್ತದೆ.
5) ವಿದ್ಯುತ್ ಉಪಕರಣಗಳನ್ನು ರಕ್ಷಿಸುತ್ತದೆ.
6) ವಿದ್ಯುತ್ ಪ್ರವಾಹದ ದಿಕ್ಕನ್ನು ಹಿಮ್ಮುಖಗೊಳಿಸುತ್ತದೆ.
7) ವಿದ್ಯುತ್ ಶಕ್ತಿಯನ್ನು ಯಾಂತ್ರಿಕ ಶಕ್ತಿಯನ್ನಾಗಿ ಪರಿವರ್ತಿಸುತ್ತದೆ.

ಉತ್ತರ:– ಎ–6 ಬಿ–5 ಸಿ–1 ಡಿ–2

12) ಕೋಶೀಯ ರಚನೆಗಳ ಮೇಲಿನ ಡಿಎನ್‌ಎಗಳ ನಿಯಂತ್ರಣ ಅಸ್ತವ್ಯಸ್ಥಗೊಳಿಸುವ ಸಂಭವವು ಯಾವುದರಿಂದ ಆಗಬಹುದಾಗಿದೆ?

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

II PUC BIOLOGY

REVISION : MODEL QUESTIONS

24. What are primary lymphoid organs?

Ans:- These organs include the bone marrow and the thymus. They create special immune system cells called lymphocytes.

25. Differences between Active Immunity & Passive Immunity.

Ans:-

Active Immunity	Passive Immunity
It is produced due to contact with pathogen or its antigen.	It is produced due to obtaining antibodies from outside.
Immunity is not immediate. A time lapse occurs for its development.	Immunity develops immediately.
It lasts for sufficiently long period, may be lifelong.	It lasts for a few days.
Antibodies are produced by the body in response to pathogen or antigen.	Antibodies are obtained from outside.
Side effects are very few.	At times the body reacts to the introduction of antisera. It is called serum sickness.

26). Mention the two medical grounds on which the pregnancies are subjected to termination.

Ans:- The two primary medical grounds for pregnancy termination are: risk to the mother's life and severe fetal abnormalities; meaning a pregnancy can be terminated if continuing it poses a serious threat to the mother's health or if prenatal testing reveals significant abnormalities in the fetus that are incompatible with life or would result in severe suffering after birth.

27) How do baculoviruses help in integrated pest management?

Ans;- Baculoviruses bring many benefits and allow reduced use of synthetic insecticides when included in integrated pest management (IPM). They are specific to their target pest and thus do not have any negative effects on plants, mammals, and non-target insects including natural enemies and pollinators

28) Ecological pyramids have limitations. Justify the statement with two reasons

Ans:- The decomposers which are a major part of the food chain, are not given any place in any trophic level. The organisms from the same species may be present in one or more trophic level but are considered in the same level.

29) Draw a neat and labelled diagram of the human sperm.

Ans:- Human sperm



30) What is Placenta?

Ans:- Placenta is an organic connection between the developing feotus and the uterine wall of the mother for purposes of physiological exchange. The whole structure of the placenta is in the form of a large disc, hence it is called metadiscoidal. The embryo is attached to the placenta through a tube called umbilical cord.

31) Draw a neat diagram of the female reproductive system and label the parts associated with the following –

(a) Production of gametes,
(b) Site of fertilization
(c) Site of implantation,
(d) Birth canal

Ans:-



ಧರ್ಮಸ್ಥಳ: ‘ಶ್ರೀಸಾನ್ನಿಧ್ಯ’ ಸರತಿ ಸಾಲು ಸಂಕೀರ್ಣ ಉದ್ಘಾಟಿಸಿದ ಉಪರಾಷ್ಟ್ರಪತಿ ಧನಕರ್

‘ಅಸ್ಥಿರಗೊಳಿಸುವ ಶಕ್ತಿಗಳತ್ತ ಎಚ್ಚರವಿರಲಿ’

ಪ್ರಜಾವಾಣಿ ವಾರ್ತೆ

ಧರ್ಮಸ್ಥಳ ಕ್ಷೇತ್ರದಲ್ಲಿ ‘ಶ್ರೀ ಸಾನ್ನಿಧ್ಯ’ ಸರತಿ ಸಾಲು ಸಂಕೀರ್ಣ ಉದ್ಘಾಟನೆ ಹಾಗೂ ಜ್ಞಾನದೀಪ ಕಾರ್ಯಕ್ರಮದ ಉದ್ಘಾಟನಾ ಸಮಾರಂಭದಲ್ಲಿ ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರು ವಿದ್ಯಾರ್ಥಿನಿ ನಿಶ್ಮಿತಾ ಅವರಿಗೆ ವಿದ್ಯಾರ್ಥಿವೇತನವನ್ನು ವಿತರಿಸಿದರು. ಡಿ.ಹರ್ಷೇಂದ್ರ ಕುಮಾರ್, ಹೇಮಾವತಿ ವಿ.ಹೆಗ್ಗಡೆ, ವೀರೇಂದ್ರ ಹೆಗ್ಗಡೆ, ಸುದೇಶ್ ಧನ್‌ಕರ್, ಕ್ಯಾ.ಬ್ರಿಜೇಶ್ ಚೌಟ ಹಾಗೂ ಡಿ.ಸುರೇಂದ್ರ ಕುಮಾರ್ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

ಧರ್ಮಸ್ಥಳ (ದಕ್ಷಿಣ ಕನ್ನಡ): ‘ಭಾರತ ಹಿಂದೆಂದಿಗಿಂತಲೂ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವಾಗ, ಕೆಲವು ಶಕ್ತಿಗಳು ದೇಶವನ್ನು ಅಸ್ಥಿರಗೊಳಿಸಲು ಯತ್ನಿಸುತ್ತಿವೆ. ಅಂತಹ ಶಕ್ತಿಗಳ ಕುರಿತು ಜನ ಎಚ್ಚರವಾಗಿರಬೇಕು’ ಎಂದು ಉಪರಾಷ್ಟ್ರಪತಿ ಜಗದೀಪ್ ಧನಕರ್ ಹೇಳಿದರು.

ಧರ್ಮಸ್ಥಳ ಕ್ಷೇತ್ರದಲ್ಲಿ ಮಂಜುನಾಥ ಸ್ವಾಮಿಯ ದರ್ಶನಕ್ಕೆ ಬರುವ ಭಕ್ತರು ಸರತಿ ಸಾಲಿನಲ್ಲಿ ಸಾಗುವುದಕ್ಕಾಗಿ ನಿರ್ಮಿಸಿರುವ ಸುಧಾರಿತ ಸೌಲಭ್ಯಗಳನ್ನು ಒಳಗೊಂಡ ಸಂಕೀರ್ಣ ‘ಶ್ರೀ ಸಾನ್ನಿಧ್ಯ’ವನ್ನು ಮಂಗಳವಾರ ಉದ್ಘಾಟಿಸಿದ ಅವರು ಮಾತನಾಡಿದರು.

‘ಜಗತ್ತೇ ನಮ್ಮ ದೇಶದತ್ತ ಮುಖ ಮಾಡಿದೆ. ಇನ್ನೊಂದೆಡೆ ಈ ಅಭಿವೃದ್ಧಿಯನ್ನು ಸಹಿಸದ ಭಾರತ ವಿರೋಧಿ ಶಕ್ತಿಗಳು ಒಗ್ಗೂಡುತ್ತಿವೆ. ಅವು ನಮ್ಮ ಸಾಂವಿಧಾನಿಕ ಸಂಸ್ಥೆಗಳನ್ನು ಅಸ್ಥಿರಗೊಳಿಸಲು ಹಾಗೂ ಸಾಂವಿಧಾನಿಕ ಹುದ್ದೆಗಳಿಗೆ ಕಳಂಕ ಹಚ್ಚಲು ಯತ್ನಿಸುತ್ತಿವೆ’ ಎಂದು ಅವರು ಆರೋಪಿಸಿದರು.

‘ಬೀದಿಗಿಳಿದು ಕಾನೂನು ಸುವ್ಯವಸ್ಥೆಗೆ ಧಕ್ಕೆ ತರುವಷ್ಟು ಕೆಳಮಟ್ಟಕ್ಕೂ ಅವರು ಇಳಿಯುತ್ತಾರೆ. ಸಾರ್ವಜನಿಕ ಸ್ವತ್ತುಗಳನ್ನು ನಾಶ ಪಡಿಸುವುದಕ್ಕೂ ಹೇಸುವುದಿಲ್ಲ. ಇದು ನಾಚಿಕೆಗೇಡಿನ ವಿಷಯ. ಇದನ್ನೆಲ್ಲ ಸಹಿಸಲು ಸಾಧ್ಯವೇ? ಇಂತಹವರು ದೇಶದ ಶತ್ರುಗಳು. ಅವರಿಂದಾಗಿ 145 ಕೋಟಿ ಜನ ಸಮಸ್ಯೆ ಎದುರಿಸುವುದಕ್ಕೆ ಅವಕಾಶ ನೀಡಬಾರದು. ಅಂತಹವರನ್ನು ಒಂಟಿಯಾಗಿಸಬೇಕು. ದೇಶದ ಕೆಲವು ಕಡೆ ಇದನ್ನು ಮಾಡಿತೋರಿಸಲಾಗಿದೆ. ದೇಶದ ಎಲ್ಲ ಕಡೆಯೂ ಇದು ಸಾಧ್ಯವಾಗಬೇಕು’ ಎಂದರು.

ಸಾನ್ನಿಧ್ಯ ಸಂಕೀರ್ಣದ ಅತ್ಯಾಧುನಿಕ ಸೌಕರ್ಯಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಅವರು, ‘ಇದು ಕಟ್ಟಡ ಮಾತ್ರವಲ್ಲ. ಸೇವೆಯ ದ್ಯೋತಕ’ ಎಂದರು.

‘ವಿಐಪಿ ಸಂಸ್ಕೃತಿ ಸಮಾನತೆಯ ತತ್ವಕ್ಕೆ ವಿರುದ್ಧವಾದುದು. ಧಾರ್ಮಿಕ ಕೇಂದ್ರಗಳಲ್ಲಿ ವಿಐಪಿ ದರ್ಶನ ವ್ಯವಸ್ಥೆಯನ್ನು ಕೊನೆಗೊಳಿಸಬೇಕು’ ಎಂದರು.

ಅಧ್ಯಕ್ಷತೆ ವಹಿಸಿದ್ದ ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ, ‘ಭಕ್ತರ ಅವಶ್ಯಕತೆಗೆ ಅನುಗುಣವಾಗಿ ಶ್ರೀಸಾನಿಧ್ಯವನ್ನು ನಿರ್ಮಿಸಲಾಗಿದೆ. ಬೇಸಿಗೆ ತಾಪಮಾನವನ್ನು ಗಮನದಲ್ಲಿಟ್ಟುಕೊಂಡು ವ್ಯವಸ್ಥೆ ಕಲ್ಪಿಸಿದ್ದೇವೆ’ ಎಂದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ‘ಜ್ಞಾನದೀಪ ಶಿಕ್ಷಣ ಕಾರ್ಯಕ್ರಮ’ದ 2024-25ನೇ ಸಾಲಿನ ಚಟುವಟಿಕೆಗಳಿಗೆ ಉಪರಾಷ್ಟ್ರಪತಿಯವರು ಚಾಲನೆ ನೀಡಿದರು. ಸಂಸದ ಕ್ಯಾ. ಬ್ರಿಜೇಶ್ ಚೌಟ, ಧನಕರ್ ಅವರ ಪತ್ನಿ ಸುದೇಶ್ ಧನಕರ್, ಹೇಮಾವತಿ ವಿ. ಹೆಗ್ಗಡೆ, ಎಸ್‌ಡಿಎಂ ಶಿಕ್ಷಣ ಸಂಸ್ಥೆಗಳ ಸೊಸೈಟಿಯ ಉಪಾಧ್ಯಕ್ಷ ಡಿ.ಸುರೇಂದ್ರ ಕುಮಾರ್, ಕಾರ್ಯದರ್ಶಿ ಡಿ.ಹರ್ಷೇಂದ್ರ ಕುಮಾರ್ ಭಾಗವಹಿಸಿದ್ದರು.

ಅಂಕಿ ಅಂಶಗಳು

2,75,177
ಚದರ ಅಡಿ
ಶ್ರೀ ಸಾನ್ನಿಧ್ಯ ಸಂಕೀರ್ಣದ ವಿಸ್ತೀರ್ಣ

12,000
ಏಕಕಾಲದಲ್ಲಿ ಇರಬಹುದಾದ ಭಕ್ತರ ಸಂಖ್ಯೆ

‘16 ನಿರೀಕ್ಷಣಾ ಕೊಠಡಿಗಳು’

‘ಶ್ರೀಸಾನ್ನಿಧ್ಯ ಸಂಕೀರ್ಣವು ವೃತ್ತಾಕಾರದಲ್ಲಿದ್ದು, ಎರಡು ಅಂತಸ್ತು ಒಳಗೊಂಡಿದೆ. ಈ ಸಂಕೀರ್ಣದಲ್ಲಿ 16 ವಿಶಾಲ ನಿರೀಕ್ಷಣಾ ಕೊಠಡಿಗಳಿವೆ. ಪ್ರತಿ ನಿರೀಕ್ಷಣಾ ಕೊಠಡಿಯಲ್ಲಿ ಸುಮಾರು 800 ಜನರು ಕುಳಿತುಕೊಳ್ಳುವುದಕ್ಕೆ ಅವಕಾಶ ಕಲ್ಪಿಸಲಾಗಿದೆ’ ಎಂದು ವೀರೇಂದ್ರ ಹೆಗ್ಗಡೆ ಮಾಹಿತಿ ನೀಡಿದರು.

‘ಪ್ರತಿ ನಿರೀಕ್ಷಣಾ ಕೊಠಡಿಯೂ ಕುಡಿಯುವ ನೀರು, ಶೌಚಾಲಯ ಸೌಲಭ್ಯ, ಶಿಶುಪಾಲನಾ ಕೊಠಡಿ ಮತ್ತು ಕೆಫೆಟೇರಿಯಾ ಸೌಲಭ್ಯಗಳನ್ನು ಹೊಂದಿದೆ. ಡಿಜಿಟಲ್ ಟಿ.ವಿ.ಗಳ ಮೂಲಕ ಆಧ್ಯಾತ್ಮಿಕ ಮಾಹಿತಿ ನೀಡುವ ವ್ಯವಸ್ಥೆ ಇದೆ. ಇದರ ನಿರ್ವಹಣೆಗೆ ಸುಧಾರಿತ ಸರದಿ ನಿರ್ವಹಣೆ ವ್ಯವಸ್ಥೆ (ಕ್ಯುಎಂಎಸ್) ತಂತ್ರಜ್ಞಾನ ಅಳವಡಿಸಲಾಗಿದೆ. ಕೃತಕ ಬುದ್ಧಿಮತ್ತೆ ಆಧರಿತ 160 ಕ್ಯಾಮೆರಾಗಳ ಕಣ್ಗಾವಲು ಇದೆ’ ಎಂದರು.

ಚನ್ನಗಿರಿ ಕಾಂಗ್ರೆಸ್ ಶಾಸಕ ಧರಣಿ

ಅಧಿಕಾರಿಗಳ ಕಾರ್ಯವೈಖರಿ ವಿರುದ್ಧ ತೀವ್ರ ಅಸಮಾಧಾನ

ಪ್ರಜಾವಾಣಿ ವಾರ್ತೆ

ಬಸವರಾಜು ವಿ.ಶಿವಗಂಗಾ

ದಾವಣಗೆರೆ: ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ನಲ್ಲೂರು ಕೃಷಿ ಪತ್ತಿನ ಸಹಕಾರ ಸಂಘದ ಮತದಾರರ ಪಟ್ಟಿ ಸಿದ್ಧಪಡಿಸುವಲ್ಲಿ ಅಕ್ರಮ ನಡೆಸಿದ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಜರುಗಿಸುವಂತೆ ಆಗ್ರಹಿಸಿ ಜಿಲ್ಲಾಧಿಕಾರಿ ಕಚೇರಿ ಎದುರು ಕಾಂಗ್ರೆಸ್ ಶಾಸಕ ಬಸವರಾಜು ವಿ.ಶಿವಗಂಗಾ ಅವರು ಮಂಗಳವಾರ ಧರಣಿ ನಡೆಸಿದರು.

‘ಜಿಲ್ಲೆಯ ಯಾವೊಬ್ಬ ಅಧಿಕಾರಿಯೂ ಶಾಸಕರಿಗೆ ಸ್ಪಂದಿಸುತ್ತಿಲ್ಲ. ಶಿಷ್ಟಾಚಾರವನ್ನೂ ಪಾಲಿಸಲಾಗುತ್ತಿಲ್ಲ. ಕ್ಷೇತ್ರದ ಜನರಿಗೆ ನ್ಯಾಯ ದೊರಕಿಸಿಕೊಡಲು ಧರಣಿಯೊಂದೇ ಮಾರ್ಗ’ ಎಂದು ಅಸಹಾಯಕತೆ ವ್ಯಕ್ತಪಡಿಸಿದರು.

‘ಜಿಲ್ಲಾ ಮಟ್ಟದ ಅಧಿಕಾರಿಗಳ ವರ್ಗಾವಣೆಯಲ್ಲಿ ಶಾಸಕರ ಅಭಿಪ್ರಾಯಗಳಿಗೆ ಮನ್ನಣೆ ಸಿಗುತ್ತಿಲ್ಲ. ಯಾವುದೇ ಅಧಿಕಾರಿ ನಮಗೆ ಗೌರವ ನೀಡುತ್ತಿಲ್ಲ. ರಾಜ್ಯದಲ್ಲಿ ಕಾಂಗ್ರೆಸ್ ಶಾಸಕರ ಮಾತು, ಅಭಿಪ್ರಾಯಗಳಿಗೂ ಗೌರವ ಸಿಗುವಂತೆ ಆಗಬೇಕು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಕುರಿತು ಗಮನ ಹರಿಸಬೇಕು’ ಎಂದು ಮನವಿ ಮಾಡಿದರು.

‘ಲೋಕೋಪಯೋಗಿ ಇಲಾಖೆಯು ಕ್ಷೇತ್ರ ವ್ಯಾಪ್ತಿಯಲ್ಲಿ ನಿರ್ಮಿಸಿದ್ದ ಕಟ್ಟಡದ ಉದ್ಘಾಟನೆ ಸಂದರ್ಭ ಶಿಷ್ಟಾಚಾರ ಉಲ್ಲಂಘನೆ ಆಗಿದೆ. ಅನಾಮಧೇಯ ವ್ಯಕ್ತಿಯೊಬ್ಬರು ಕಟ್ಟಡ ಉದ್ಘಾಟಿಸಿ ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ. ಈ ಕುರಿತು ದೂರು ನೀಡಿದರೂ ಪ್ರಯೋಜನವಾಗಿಲ್ಲ. ಜಿಲ್ಲಾಧಿಕಾರಿ ಕೂಡ ಸ್ಪಂದಿಸುತ್ತಿಲ್ಲ’ ಎಂದು ಅವರು ಆರೋಪಿಸಿದರು.

ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರನ್ನು ಜಿಲ್ಲಾ ಉಸ್ತುವಾರಿ ಹೊಣೆಗಾರಿಕೆಯಿಂದ ಬದಲಾಯಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಶಾಸಕ ಶಿವಗಂಗಾ ಬಸವರಾಜು ಇತ್ತೀಚೆಗೆ ಪತ್ರ ಬರೆದು ಬಹಿರಂಗವಾಗಿ ಅಸಮಾಧಾನ ಹೊರಹಾಕಿದ್ದರು.

ಬಿಎಸ್‌ವೈ ಪ್ರಕರಣ: ವಿಚಾರಣೆ ಮುಂದೂಡಿಕೆ

ಬೆಂಗಳೂರು: ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ಬಿಜೆಪಿ ನಾಯಕ ಬಿ.ಎಸ್.ಯಡಿಯೂರಪ್ಪ ವಿರುದ್ಧದ ದೂರನ್ನು ರದ್ದುಗೊಳಿಸಬೇಕು ಎಂದು ಕೋರಲಾಗಿರುವ ಅರ್ಜಿಯ ವಿಚಾರಣೆಯನ್ನು ಹೈಕೋರ್ಟ್ ಇದೇ 10ಕ್ಕೆ ಮುಂದೂಡಿದೆ.

‘ನನ್ನ ವಿರುದ್ಧ ದಾಖಲಾಗಿರುವ ಪೋಕ್ಸೊ ಪ್ರಕರಣ ರದ್ದುಪಡಿಸಬೇಕು’ ಎಂದು ಕೋರಿ ಬಿ.ಎಸ್.ಯಡಿಯೂರಪ್ಪ ಸಲ್ಲಿಸಿರುವ ರಿಟ್ ಅರ್ಜಿಯನ್ನು, ‘ಶಾಸಕರು– ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠದ (ಧಾರವಾಡ) ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಮಂಗಳವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಯಡಿಯೂರಪ್ಪ ಪರ ಪದಾಂಕಿತ ಹಿರಿಯ ವಕೀಲ ಸಿ.ವಿ.ನಾಗೇಶ್, ‘ಸತ್ಯವನ್ನು ಬಯಲು ಮಾಡಲಿಕ್ಕಾಗಿ ತನಿಖೆ ನಡೆಸಲಾಗುತ್ತದೆ. ಆದರೆ, ತನಿಖೆ ಪಕ್ಷಪಾತಿಯಾಗಿರಬಾರದು. ನ್ಯಾಯಯುತವಾಗಿರಬೇಕು’ ಎಂದರು.

‘ದೂರಿಗೆ ಸಂಬಂಧಿಸಿದಂತೆ ಸಂಜ್ಞೇಯ ಅಪರಾಧ ಪರಿಗಣಿಸುವ ಸಂದರ್ಭದಲ್ಲಿ ವಿಚಾರಣಾ ನ್ಯಾಯಾಲಯವು ತನಿಖಾಧಿಕಾರಿಯ ಅಭಿಪ್ರಾಯವನ್ನು ಒಪ್ಪಲಾಗದು. ದೂರು ದಾಖಲಿಸುವುದಕ್ಕೂ ಮುನ್ನ ದೂರುದಾರೆ (ಸಂತ್ರಸ್ತೆಯ ತಾಯಿ; ಈಗ ಮೃತಪಟ್ಟಿದ್ದಾರೆ) ಮತ್ತು ಸಂತ್ರಸ್ತೆಯು ಹಲವು ಬಾರಿ ಯಡಿಯೂರಪ್ಪ ಅವರನ್ನು ಭೇಟಿ ಮಾಡಿದ್ದಾರೆ’ ಎಂಬುದನ್ನು ಪುನರುಚ್ಚರಿಸಿದರು.

ಒಂದು ಹಂತದಲ್ಲಿ ನ್ಯಾಯಪೀಠವು ನಾಗೇಶ್ ಅವರಿಗೆ, ‘ನೀವು ಉಲ್ಲೇಖಿಸುತ್ತಿರುವ ಸಾಕ್ಷಿಗಳ ಹೇಳಿಕೆಯನ್ನು ಪರಿಗಣಿಸಬೇಕು ಎಂದಾದರೆ ಸಂತ್ರಸ್ತೆಯ ಹೇಳಿಕೆಯನ್ನೂ ಪರಿಗಣಿಸಬೇಕಾಗುತ್ತದೆ. ಇಡೀ ಘಟನೆಯನ್ನು ಸಂತ್ರಸ್ತೆ ವಿವರಿಸಿದ್ದಾರೆ. ಆಗ ಇದು ಹೇಳಿಕೆ ವರ್ಸಸ್ ಹೇಳಿಕೆ ಎಂತಾಗುವುದಿಲ್ಲವೇ’ ಎಂದು ಪ್ರಶ್ನಿಸಿತು. ಇದಕ್ಕೆ ನಾಗೇಶ್ ವಾದ ಮಂಡನೆಗೆ ಮತ್ತಷ್ಟು ಸಮಯಾವಕಾಶ ಕೋರಿದ ಕಾರಣ ನ್ಯಾಯಪೀಠ ವಿಚಾರಣೆಯನ್ನು ಇದೇ 10ಕ್ಕೆ ಮುಂದೂಡಿತು.

ಸಂಕ್ಷಿಪ್ತ ಸುದ್ದಿ

ಟೆಂಡರ್ ಇಲ್ಲದೆ ಆದೇಶ: ಬೆಲ್ಲದ

ಅರವಿಂದ ಬೆಲ್ಲದ

ಹುಬ್ಬಳ್ಳಿ: ‘ರಾಜ್ಯದ ಪೊಲೀಸ್ ಠಾಣೆ ಆವರಣದಲ್ಲಿ ಇರುವ ಅನುಪಯುಕ್ತ ವಾಹನಗಳನ್ನು ತಿಪಟೂರಿನ ರೈತ ಸೇವಾ ಅಗ್ರಿಕಲ್ಚರ್ ಡೆವಲಪ್‌ಮೆಂಟ್ ಇಂಡಸ್ಟ್ರೀಸ್ ಸಂಸ್ಥೆಗೆ ವಿಲೇವಾರಿ ಮಾಡುವಂತೆ ರಾಜ್ಯ ಸರ್ಕಾರ ಟೆಂಡರ್ ಇಲ್ಲದೆ ಆದೇಶ ಹೊರಡಿಸಿದೆ’ ಎಂದು ವಿಧಾನಸಭೆ ವಿರೋಧಪಕ್ಷದ ಉಪನಾಯಕ ಅರವಿಂದ ಬೆಲ್ಲದ ಆರೋಪಿಸಿದರು.

‘ಟೆಂಡರ್ ಕರೆಯದೆ ಸರ್ಕಾರದ ವಸ್ತುಗಳನ್ನು ವಿಲೇವಾರಿ ಮಾಡಲು ಅವಕಾಶವಿಲ್ಲ. ಈ ಸಂಸ್ಥೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಜಿಲ್ಲೆಯ ಮೈಸೂರಿನ ಸಯ್ಯದ್ ಸಮಿಉಲ್ಲಾ ಹೆಸರಲ್ಲಿದೆ’ ಎಂದು ಅವರು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಗುಜರಿ ವ್ಯವಹಾರದಲ್ಲಿ ಸಾಕಷ್ಟು ವಂಚನೆ ಜೊತೆಗೆ ಕೋಟಿಗಟ್ಟಲೆ ಅವ್ಯವಹಾರ ನಡೆಯುತ್ತದೆ. ಮುಸ್ಲಿಮರು ತಮ್ಮ ಪಕ್ಷಕ್ಕೆ ಮತ ಹಾಕುತ್ತಾರೆ ಎಂಬ ಕಾರಣಕ್ಕೆ ಟೆಂಡರ್ ಇಲ್ಲದೆ ಆದೇಶ ಮಾಡಲಾಗಿದೆ. ಹಾಗೆ ಮಾಡುವುದಿದ್ದರೆ, ಅವರಿಗಾಗಿಯೇ ವಿಶೇಷ ಕಾನೂನು ತರುತ್ತೇವೆ ಎಂದು ಮುಖ್ಯಮಂತ್ರಿ ಹೇಳಿಕೆ ನೀಡಲಿ’ ಎಂದರು.

ನರೇಂದ್ರಸ್ವಾಮಿಗೆ ಸಚಿವ ಸ್ಥಾನಕ್ಕಾಗಿ ಹರಕೆ ಹೊತ್ತ ಜಡ್ಜ್

ಮಳವಳ್ಳಿ (ಮಂಡ್ಯ ಜಿಲ್ಲೆ): ‘ಪಟ್ಟಣದ ನ್ಯಾಯಾಲಯಕ್ಕೆ ಹೊಸ ಕಟ್ಟಡ ನಿರ್ಮಾಣ ಕಾರ್ಯ ತ್ವರಿತಗತಿಯಲ್ಲಿ ನಡೆಯುವ ನಿಟ್ಟಿನಲ್ಲಿ ಕ್ರಿಯಾಶೀಲವಾಗಿ ಕೆಲಸ ಮಾಡಿರುವ ಶಾಸಕ ಪಿ.ಎಂ. ನರೇಂದ್ರಸ್ವಾಮಿ ಅವರಿಗೆ ಸಚಿವ ಸ್ಥಾನ ಸಿಗಲಿ ಎಂದು ದೇವರಲ್ಲಿ ಹರಕೆ ಹೊರುವೆ’ ಎಂದು ಹೈಕೋರ್ಟ್ ನ್ಯಾಯಮೂರ್ತಿ ಟಿ.ಜಿ. ಶಿವಶಂಕರೇಗೌಡ ಹೇಳಿದರು.

ಪಟ್ಟಣದಲ್ಲಿ ಮಂಗಳವಾರ ವಕೀಲರ ಸಂಘ ಆಯೋಜಿಸಿದ್ದ ವಕೀಲರ ದಿನಾಚರಣೆಯಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿ, ‘ಮಳವಳ್ಳಿಯಲ್ಲಿ ಹೊಸ ಕಟ್ಟಡ ನಿರ್ಮಿಸಲು ತೊಡಕಾಗಿದ್ದ ಜಾಗದ ಸಮಸ್ಯೆಯನ್ನು ಶಾಸಕರು ಬಗೆಹರಿಸಿದ್ದಾರೆ. ಈ ಭಾಗದ ಅಭಿವೃದ್ಧಿಯ ದೃಷ್ಟಿಯಿಂದ ಅವರಿಗೆ ಸಚಿವ ಸ್ಥಾನ ಸಿಗಲೆಂದು ಮುಡುಕುತೊರೆ ಮಲ್ಲಿಕಾರ್ಜುನಸ್ವಾಮಿ– ಪಾರ್ವತಿ ದೇವರಲ್ಲಿ ಹರಕೆ ಹೊರುವೆ, ಅವರು ಸಚಿವರಾದ ನಂತರ ನಾನೇ ಖುದ್ದು ದೇವಸ್ಥಾನಕ್ಕೆ ತೆರಳಿ ಹರಕೆ ತೀರಿಸುವೆ’ ಎಂದರು.

ಕ್ವಾರಿಯಲ್ಲಿ ಬಿದ್ದು ಯುವಕ ಸಾವು

ಮಾರುತಿ

ಕುಕನೂರು(ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಗಾವರಾಳ ಗ್ರಾಮದಲ್ಲಿರುವ ಕಲ್ಲಿನ ಕ್ವಾರಿಯಲ್ಲಿ ನಿಂತ ನೀರಿನ ಹೊಂಡದಲ್ಲಿ ಕುರಿಗಳಿಗೆ ಸ್ನಾನ ಮಾಡಿಸುವ ವೇಳೆ ಕಾಲು ಜಾರಿ ಬಿದ್ದು ಕುರಿಗಾಹಿ ಮಾರುತಿ ತಳಬಾಳ (20) ಮೃತಪಟ್ಟಿದ್ದಾರೆ.

ಮಂಗಳವಾರ ಬೆಳಿಗ್ಗೆ ಯುವಕ ನೀರಿನಲ್ಲಿ ಮುಳುಗಿದ್ದು, ಅಲ್ಲಿಯೇ ಇದ್ದ ಯುವಕರು ಕಾಪಾಡಲು ಪ್ರಯತ್ನಿಸಿದರೂ ಯಶಸ್ವಿಯಾಗಲಿಲ್ಲ. ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಈ ಕಲ್ಲಿನ ಕ್ವಾರಿ ಸಚಿವ ಶಿವರಾಜ ತಂಗಡಗಿ ಅವರ ಸಹೋದರ ವೆಂಕಟೇಶ್ ತಂಗಡಗಿಗೆ ಸೇರಿದ್ದಾಗಿದೆ ಎಂದು ಮೂಲಗಳು ತಿಳಿಸಿವೆ.

ಕ್ಯಾಥೊಲಿಕ್ ಕ್ರಿಶ್ಚಿಯನ್ ಸಂಪ್ರದಾಯದಂತೆ ಅಂತ್ಯಕ್ರಿಯೆ

ಮಲೆನಾಡಿನ ಮಣ್ಣಿನಲ್ಲಿ ನಾ.ಡಿಸೋಜ ಲೀನ

ಪ್ರಜಾವಾಣಿ ವಾರ್ತೆ

ಸಾಗರದಲ್ಲಿ ಸಾಹಿತಿ ನಾ.ಡಿಸೋಜ ಅವರ ಅಂತ್ಯಕ್ರಿಯೆ ಮಂಗಳವಾರ ನಡೆಯಿತು

ಸಾಗರ: ಮಲೆನಾಡಿನ ‘ಮಣ್ಣಿನ ವಾಸನೆ’ ಹಿಡಿದ ಬರಹಗಾರ ಎಂದೇ ಪರಿಚಿತರಾಗಿದ್ದ ನಾಡಿನ ಹಿರಿಯ ಸಾಹಿತಿ ನಾ.ಡಿಸೋಜ ಅವರ ಅಂತ್ಯಕ್ರಿಯೆ ಇಲ್ಲಿನ ಸಂತ ಜೋಸೆಫರ ದೇವಾಲಯದ ಪಕ್ಕದಲ್ಲಿರುವ ಸಮಾಧಿ ಸ್ಥಳದಲ್ಲಿ ಮಂಗಳವಾರ ಸಂಜೆ ನಡೆಯಿತು.

ಧರ್ಮಗುರು ಫಾದರ್ ಫೆಲಿಕ್ಸ್ ಜೋಸೆಫ್ ನರೋನಾ, ಸಹಾಯಕ ಧರ್ಮಗುರು ವಿನುತ್, ಕಿರಣ್ ಲೀಮಾ ಕ್ಯಾಥೊಲಿಕ್ ಕ್ರಿಶ್ಚಿಯನ್ ಸಂಪ್ರದಾಯದಂತೆ ವಿಧಿವಿಧಾನ ಪೂರೈಸಿದರು.

ಡಿಸೋಜ ಅವರ ಪತ್ನಿ ಫಿಲೊಮಿನಾ, ಪುತ್ರರಾದ ನವೀನ್, ಸಂತೋಷ್, ಪುತ್ರಿ ಶೋಭಾ ಮತ್ತಿತರರು ಹಾಜರಿದ್ದರು.

ಬೆಳಿಗ್ಗೆ ಡಿಸೋಜ ಅವರ ಪಾರ್ಥಿವ ಶರೀರದ ಮೆರವಣಿಗೆ ತೆರೆದ ವಾಹನದಲ್ಲಿ ನಗರದ ಪ್ರಮುಖ ಬೀದಿಗಳಲ್ಲಿ ನಡೆಯಿತು. ರಸ್ತೆಯ ಇಕ್ಕೆಲಗಳಲ್ಲಿ ನಿಂತ ಸಾರ್ವಜನಿಕರು ಮೆರವಣಿಗೆ ವೀಕ್ಷಿಸಿ ಅಂತಿಮ ನಮನ ಸಲ್ಲಿಸಿದರು. ನಂತರ ಗಾಂಧಿ ಮೈದಾನದಲ್ಲಿ ಸಾರ್ವಜನಿಕರಿಗೆ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು.

ತಾಲ್ಲೂಕು ಆಡಳಿತದ ವತಿಯಿಂದ ಕುಶಾಲತೋಪು ಹಾರಿಸುವ ಮೂಲಕ ಡಿಸೋಜ ಅವರಿಗೆ ಸರ್ಕಾರಿ ಗೌರವ ಸಲ್ಲಿಸಲಾಯಿತು. ಶಾಸಕ ಗೋಪಾಲಕೃಷ್ಣ ಬೇಳೂರು, ಉಪವಿಭಾಗಾಧಿಕಾರಿ ಯತೀಶ್ ಆರ್., ತಹಶೀಲ್ದಾರ್ ಚಂದ್ರಶೇಖರ್ ನಾಯ್ಕ ಉಪಸ್ಥಿತರಿದ್ದರು.

ಮೂಲೆಗದ್ದೆ ಮಠದ ಅಭಿನವ ಚನ್ನಬಸವ ಸ್ವಾಮೀಜಿ, ರಂಗಕರ್ಮಿಗಳಾದ ಚಿದಂಬರರಾವ್ ಜಂಬೆ, ಕೆ.ವಿ.ಅಕ್ಷರ, ಕೆ.ಜಿ.ಕೃಷ್ಣಮೂರ್ತಿ, ಇಕ್ಬಾಲ್ ಅಹ್ಮದ್, ಕುಪ್ಪಳಿಯ ಕುವೆಂಪು ಪ್ರತಿಷ್ಠಾನದ ಸಮ ಕಾರ್ಯದರ್ಶಿ ಕಡಿದಾಳ್ ಪ್ರಕಾಶ್ ಸೇರಿದಂತೆ ಹಲವು ಗಣ್ಯರು ಡಿಸೋಜ ಅವರ ಅಂತಿಮ ದರ್ಶನ ಪಡೆದರು.

Infosys®
Navigate your next

Infosys Limited
CIN : L85110KA1981PLC013115
44, Infosys Avenue, Electronics City, Hosur Road, Bengaluru - 560 100
Phone: 91 80 2852 0261, Fax: 91 80 2852 0362
investors@infosys.com, www.infosys.com

NOTICE OF LOSS OF SHARE CERTIFICATES

Notice is hereby given that the following share certificate(s) issued by the Company are stated to have been lost or misplaced and the registered share holder(s) thereof have applied for issue of duplicate share certificate(s).

Notice is hereby given that the Company will proceed to **issue letter of confirmation in lieu of duplicate share certificate(s)** unless a valid objection is received by the Company within 15 days from the date of publication of this notice. No claims will be entertained by the Company with respect to the original share certificate(s) subsequent to the issue of duplicates thereof.

Name of Shareholder	Folio No.	Certificate No.	Distinctive Nos.		No. of Shares
			From	To	
SUNEEL KRISHNASWAMY	ITL000991	145295	537541	537940	400
		151225	277517753	277518152	400
		2386571	4480096028	4480097627	1600

Any person who has/have a claim in respect of the said certificate(s) should lodge his/her/their claim with all supporting documents with the Company at its registered office. If no valid and legitimate claim is received within 15 days from the date of publication of this notice, the Company will proceed to issue Letter of Confirmation in lieu of duplicate share certificate(s) to the person listed above and no further claim would be entertained from any other person(s).

Registered Office:
Electronics City, Hosur Road,
Bengaluru - 560 100

January 07, 2025
Bengaluru, India

For **Infosys Limited**
Sd/-
A.G.S. Manikantha
Company Secretary
Membership No. A21918

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
(“ವಿ ಟಿ ಯು ಅಧಿನಿಯಮ 1994” ರ ಅಡಿಯಲ್ಲಿ ಕರ್ನಾಟಕ ಸರ್ಕಾರದಿಂದ ಸ್ಥಾಪಿತವಾದ ರಾಜ್ಯ ವಿಶ್ವವಿದ್ಯಾಲಯ)
“ಜ್ಞಾನ ಸಂಗಮ”, ಬೆಳಗಾವಿ - 590 018, ಕರ್ನಾಟಕ ರಾಜ್ಯ
ಫೋನ್ :(0831)2405468 ಫ್ಯಾಕ್ಸ್ : (0831)2405467

ಉಲ್ಲೇಖ : ವಿತಾವಿ/ಆ.ಸ./2024-25/ 126 ದಿನಾಂಕ : 02-01-2025

ಅಧಿಸೂಚನೆ

ವಿಷಯ :ವಿ.ತಾ.ವಿ.ಯ ಇಪತ್ನಾಲ್ಕನೇಯ ವಾರ್ಷಿಕ ಘಟಿಕೋತ್ಸವ (ಭಾಗ–II) ಸಮಾರಂಭ – ಸ್ನಾತಕೋತ್ತರ (PG) ಹಾಗೂ ಪಿಹೆಚ್.ಡಿ. ಪದವಿ ಪ್ರದಾನ
******

ಮೇಲ್ಕಾಣಿಸಿದ ವಿಷಯದನ್ವಯ, ಈ ಮೂಲಕ ತಿಳಿಸುವುದೇನೆಂದರೆ, ಸ್ನಾತಕೋತ್ತರ (PG) ಹಾಗೂ ಪಿಹೆಚ್.ಡಿ. ಪದವಿ ಪ್ರದಾನ ಮಾಡಲು ವಿ.ತಾ.ವಿ.ಯ ಇಪ್ಪತ್ನಾಲ್ಕನೇಯ ಘಟಿಕೋತ್ಸವ (ಭಾಗ–II) ಸಮಾರಂಭವು , ಶನಿವಾರ, ದಿನಾಂಕ 08 ಫೆಬ್ರವರಿ, 2025ರಂದು, ಪೂರ್ವಾಹ್ನ 11–00 ಗಂಟೆಗೆ ವಿ.ತಾ.ವಿ.ಯ ಡಾ. ಎ.ಪಿ.ಜೆ. ಅಬ್ದುಲ್ ಕಲಾಮ್ ಪ್ರೇಕ್ಷಾಗೃಹ, “ಜ್ಞಾನ ಸಂಗಮ”, ಬೆಳಗಾವಿಯಲ್ಲಿ ಏರ್ಪಡಿಸಲಾಗಿದೆ. ಮೇಲೆ ಉಲ್ಲೇಖಿತ ಪದವಿಗಳಿಗೆ ಅರ್ಹ ಅಭ್ಯರ್ಥಿಗಳನ್ನು ಈ ಮೂಲಕ ಘಟಿಕೋತ್ಸವದಲ್ಲಿ ಪಾಲ್ಗೊಳ್ಳಲು ಆಹ್ವಾನಿಸಲಾಗಿದೆ.

ಈ ಘಟಿಕೋತ್ಸವ ಸಮಾರಂಭದಲ್ಲಿ 2023–24ನೇ ಸಾಲಿನ ಸ್ನಾತಕೋತ್ತರ (PG) ವಿಭಾಗದಲ್ಲಿ ಸುವರ್ಣ ಪದಕ ವಿಜೇತರಿಗೆ ಹಾಗೂ ರ್‍ಯಾಂಕ ವಿಜೇತರಿಗೆ ಮತ್ತು ಪಿಹೆಚ್.ಡಿ. ಪದವಿಗೆ ಅರ್ಹತೆ ಪಡೆದಿರುವ ಅಭ್ಯರ್ಥಿಗಳಿಗೆ ಮಾತ್ರ ಪದವಿ ಪ್ರದಾನ ಮಾಡಲಾಗುವುದು.

:ಅಭ್ಯರ್ಥಿಗಳು ಈ ಕೆಳಗಿನವುಗಳನ್ನು ಗಮನಿಸಬೇಕು:

* ವಿಶ್ವವಿದ್ಯಾಲಯದ ವೆಬ್ ಸೈಟಿನಲ್ಲಿ ತಿಳಿಸಿರುವಂತೆ ಶುಭ್ರವಾದ ಬಿಳಿಬಟ್ಟೆಗಳನ್ನು ಧರಿಸಿಕೊಂಡು ಪ್ರೇಕ್ಷಾಗೃಹದಲ್ಲಿ ಹಾಜರಿರಬೇಕು
* ಘಟಿಕೋತ್ಸವ ಸಮಾರಂಭವು ಪ್ರಾರಂಭವಾಗುವುದಕ್ಕಿಂತ ಅರ್ಧಘಂಟೆ ಮುಂಚಿತವಾಗಿ ಪ್ರೇಕ್ಷಾಗೃಹದಲ್ಲಿ ಹಾಜರಿದ್ದು ತಮ್ಮ ಆಸನಗಳಲ್ಲಿ ಕುಳಿತುಕೊಳ್ಳಬೇಕು
* ಶೀತ, ಕೆಮ್ಮು, ಜ್ವರ ಮುಂತಾದ ಲಕ್ಷಣಗಳು ಕಂಡುಬಂದಲ್ಲಿ ಈ ಘಟಿಕೋತ್ಸವ ಸಮಾರಂಭದಲ್ಲಿ ಪಾಲ್ಗೊಳ್ಳದಿರಲು ಸಲಹೆ ನೀಡಲಾಗಿದೆ.
* ಸನ್ಮಾನ್ಯ ರಾಜ್ಯಪಾಲರು ಹಾಗೂ ಕುಲಾಧಿಪತಿಗಳು ಮತ್ತು ಇತರ ಗಣ್ಯರು ಸಭಾಂಗಣವನ್ನು ಪ್ರವೇಶಿಸುತ್ತಿದ್ದಂತೆ ಹಾಗೂ ಆಸೀನರಾಗುವವರೆಗೆ ಎಲ್ಲರೂ ಎದ್ದು ನಿಂತು ಗೌರವ ಸೂಚಿಸಬೇಕು
* ಘಟಿಕೋತ್ಸವ ಸಮಾರಂಭವು ಪೂರ್ತಿ ಮುಗಿಯುವವರೆಗೆ ಶಾಂತತೆಯನ್ನು ಮತ್ತು ಶಿಸ್ತನ್ನು ಕಾಪಾಡಿಕೊಳ್ಳಬೇಕು
* ಸಭಾಂಗಣದಲ್ಲಿ ಮೊಬೈಲ್‌ಫೋನ್ ಚಾಲನೆಯಲ್ಲಿಡಬಾರದು
* ಘಟಿಕೋತ್ಸವ ಮುಗಿದಮೇಲೆ ಮೆರವಣಿಗೆಯು ಸಭಾಂಗಣವನ್ನು ಬಿಟ್ಟು ತೆರಳುವವರೆಗೆ ಎಲ್ಲರೂ ತಮ್ಮ ಸ್ಥಳಗಳಲ್ಲಿಯೇ ದಯವಿಟ್ಟು ಎದ್ದು ನಿಂತಿರಬೇಕು
* ಕುಲಸಚಿವರು(ಪರಿಕ್ಷಾಂಗ) ಇವರು ಘಟಿಕೋತ್ಸವದಲ್ಲಿ ಪಾಲ್ಗೊಳ್ಳುವ ಸಂಬಂಧವಾಗಿ ನೀಡುವ ನಿರ್ದೇಶನವನ್ನು ಪಾಲಿಸುವುದು

ಪದವಿ ಪ್ರಮಾಣ ಪತ್ರಗಳನ್ನು ವೈಯಕ್ತಿಕವಾಗಿ ಪಡೆಯಬಯಸುವ ಇತರ ಅಭ್ಯರ್ಥಿಗಳು ಕಛೇರಿಯ ಮುಂದಿನ ಕೆಲಸದ ದಿನ, ಅಂದರೆ ಸೋಮವಾರ ದಿ:10–02–2025ರಂದು ಕಛೇರಿ ಸಮಯದಲ್ಲಿ, ಕಾಲೇಜಿನಿಂದ ಕೊಡಲ್ಪಟ್ಟ ಗುರುತಿನ ಚೀಟಿಯನ್ನು ತೋರಿಸಿ ಪರೀಕ್ಷಾ ವಿಭಾಗದಿಂದ ಪಡೆದುಕೊಳ್ಳಬಹುದು. ಉಳಿದವರಿಗೆ ಪದವಿ ಪ್ರಮಾಣ ಪತ್ರಗಳನ್ನು ಘಟಿಕೋತ್ಸವದ ನಂತರ ಆಯಾ ಕಾಲೇಜುಗಳಿಗೆ ಕಳುಹಿಸಿಕೊಡಲಾಗುವುದು.

ಆಜ್ಞೆಯ ಮೇರೆಗೆ
(ಡಾ.ಬಿ. ಈ. ರಂಗಸ್ವಾಮಿ)
ಕುಲಸಚಿವರು

ವಿದ್ಯಾರ್ಥಿ ವೇತನ ವಿಳಂಬ: ಪರಿಶಿಷ್ಟ, ಅಲ್ಪಸಂಖ್ಯಾತ, ಹಿಂದುಳಿದ ವರ್ಗಗಳ 87 ಸಾವಿರ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಹೊಡೆತ

ಬಾರದ ನೆರವು: ಅಡಕತ್ತರಿಯಲ್ಲಿ ಉನ್ನತ ಶಿಕ್ಷಣ

• ಸಂತೋಷ ಈ. ಚಿನಗುಡಿ

ಬೆಳಗಾವಿ: ಪರಿಶಿಷ್ಟ, ಹಿಂದುಳಿದ ಮತ್ತು ಅಲ್ಪಸಂಖ್ಯಾತ ವರ್ಗಗಳಿಗೆ ಸೇರಿದ ಬಹುತೇಕ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನಕ್ಕಾಗಿ ಪರದಾಡುತ್ತಿದ್ದಾರೆ. ಮೂರು ವರ್ಷಗಳಿಂದ ರಾಜ್ಯ ಸರ್ಕಾರದಿಂದ ಬರೀ ಭರವಸೆ ಸಿಕ್ಕಿದೆಯೇ ಹೊರತು ವಿದ್ಯಾರ್ಥಿ ವೇತನ ಸಿಕ್ಕಿಲ್ಲ ಎಂದು ವಿದ್ಯಾರ್ಥಿಗಳು ಆರೋಪಿಸಿದ್ದಾರೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಪರಿಶಿಷ್ಟ ಮತ್ತು ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯಡಿ ಬರುವ ಎಂಜಿನಿಯರಿಂಗ್ ಮತ್ತು ವೈದ್ಯಕೀಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಸರಿಯಾಗಿ ಲಭ್ಯವಾಗಿಲ್ಲ.

‘ಕೋವಿಡ್ ಸಮಸ್ಯೆಯಿಂದ ಎಂಜಿನಿಯರಿಂಗ್ ಮತ್ತಿತರ ಪದವಿಗಳ ಅವಧಿ ಕಡಿಮೆ ಮಾಡಲಾಯಿತು. ಆದರೆ, ವೈದ್ಯಕೀಯ ಶಿಕ್ಷಣದಲ್ಲಿ ಇದು ಸಾಧ್ಯವಾಗಲಿಲ್ಲ. ಪೂರ್ಣ ಅವಧಿ ಮುಗಿಸಲೇಬೇಕು ಎಂದು ಸರ್ಕಾರ ಆದೇಶ ಹೊರಡಿಸಿತು. ಅವಧಿ ಕಡಿಮೆ ಮಾಡಿದ ಪದವಿಗಳ ವಿದ್ಯಾರ್ಥಿ ವೇತನ ನಿಲ್ಲಿಸಲಾಯಿತು. ಅದರೊಂದಿಗೆ ವೈದ್ಯಕೀಯ ವಿದ್ಯಾರ್ಥಿಗಳ ವೇತನವೂ ನಿಲ್ಲಿಸಲಾಗಿದೆ. 2024ನೇ ಸಾಲಿಗೆ ಬರಬೇಕಿದ್ದ ₹55,500 ನಮ್ಮ ಕೈ ಸೇರಿಲ್ಲ’ ಎಂಬುದು ವಿದ್ಯಾರ್ಥಿಗಳ ಅಳಲು.

‘ರಾಜ್ಯದ ಖಾಸಗಿ ಎಂಜಿನಿಯರಿಂಗ್ ಹಾಗೂ ವೈದ್ಯಕೀಯ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಇಂಥ ವಿದ್ಯಾರ್ಥಿಗಳ ಸಂಖ್ಯೆ 80 ಸಾವಿರಕ್ಕೂ ಹೆಚ್ಚಿದೆ. 7,000ಕ್ಕೂ ಹೆಚ್ಚು ಎಂಬಿಎ ಎಂಸಿಎ ಮತ್ತು ಎಂಟೆಕ್ ವಿದ್ಯಾರ್ಥಿಗಳು ಇದ್ದಾರೆ. ಶಿಷ್ಯವೇತನ ನಂಬಿ ಪ್ರವೇಶ ಪಡೆದವರು ಸಾಕಷ್ಟಿದ್ದಾರೆ. ಸರ್ಕಾರದ ಧೋರಣೆಯ ಕಾರಣ ರೈತರು, ಕೂಲಿ ಕಾರ್ಮಿಕರು, ಬಡವರ ಮಕ್ಕಳ ಉನ್ನತ ಶಿಕ್ಷಣ ಅಡಕತ್ತರಿಗೆ ಸಿಕ್ಕಿಕೊಂಡಿದೆ’ ಎಂಬುದು ಹಲವರ ದೂರು.

‘ಎರಡು ವರ್ಷಗಳ ಹಿಂದೆ ವೈದ್ಯಕೀಯ ವಿದ್ಯಾರ್ಥಿಗಳಲ್ಲಿ ಶೇ 30ರಷ್ಟು ಮಂದಿಗೆ ಮಾತ್ರ ಹಣ ಬಂದಿದೆ. ಉಳಿದವರಿಗೆ ಕೈ ತಪ್ಪಿದೆ. ಇದಕ್ಕೆ ಸ್ಪಷ್ಟ ಕಾರಣವನ್ನೇ ನೀಡಿಲ್ಲ. ಕಳೆದ ವರ್ಷವಂತೂ ಎಲ್ಲರ ವಿದ್ಯಾರ್ಥಿ ವೇತನ ನಿಲ್ಲಿಸಲಾಗಿದೆ. ಈ ಬಗ್ಗೆ ಹೋರಾಡಿದರೂ ಕಿವಿಗೊಟ್ಟಿಲ್ಲ. ಸಚಿವ ಶಿವರಾಜ್ ತಂಗಡಗಿ ಅವರಿಗೆ ಹಲವು ಬಾರಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ’ ಎಂದು ಎಐಡಿಎಸ್‌ಒ ಸಂಘಟನೆ ಜಿಲ್ಲಾ ಸಂಚಾಲಕ ಮಹಾಂತೇಶ ಬಿಳೂರ ತಿಳಿಸಿದರು.

ಇದರ ಬಗ್ಗೆ ಕೇಳಿದಾಗ, ಇಲಾಖೆ ಮತ್ತು ವಿಶ್ವವಿದ್ಯಾಲಯದ ಅಧಿಕಾರಿಗಳು, ‘ಸರ್ಕಾರ ಹಣ ಸಂದಾಯ ಮಾಡಿಲ್ಲ’ ಎಂಬ ಉತ್ತರ ನೀಡಿದರು.

> **ಸರ್ಕಾರಿ ಹಾಗೂ ಖಾಸಗಿ ವೈದ್ಯಕೀಯ ಕಾಲೇಜುಗಳ ವಿದ್ಯಾರ್ಥಿಗಳಿಗೆ ಶುಲ್ಕವಿದ್ದಷ್ಟೇ ಶಿಷ್ಯವೇತನ ಬರುತ್ತಿತ್ತು. ಈಗ ಕಡಿತ ಮಾಡಲಾಗಿದೆ. ಅದನ್ನೂ ನೀಡಲು ವಿಳಂಬ ಮಾಡಲಾಗುತ್ತಿದೆ**
> **ಸುಮುಖ್ ಚೇತನ್**
> ಎಂಬಿಬಿಎಸ್ ವಿದ್ಯಾರ್ಥಿ, ಬೆಂಗಳೂರು

> **ಒಂದೆಡೆ ಶಿಷ್ಯವೇತನ ಕೊಡುತ್ತಿಲ್ಲ. ಇನ್ನೊಂದೆಡೆ ಕಾಲೇಜು ಶುಲ್ಕ ಕಟ್ಟಬೇಕು. ಸಂಕಷ್ಟದಿಂದ ಪಾರಾಗಲು ಪಾರ್ಟ್ ಟೈಮ್ ಕೆಲಸ ಮಾಡಬೇಕಾದ ಅನಿವಾರ್ಯ ಬಂದಿದೆ**
> **ಎಚ್.ಎಂ. ಅಂಜಲಿ**
> ಪದವಿ ವಿದ್ಯಾರ್ಥಿನಿ, ಮೈಸೂರು

> **ರಾಜ್ಯ ಸರ್ಕಾರ ಬೇರೆ ಯೋಜನೆಗಳಿಗೆ ಸಾವಿರಾರು ಕೋಟಿ ಸುರಿಯುತ್ತದೆ. ಶಿಕ್ಷಣಕ್ಕೆ ಆದ್ಯತೆ ನೀಡದೇ ವಿದ್ಯಾರ್ಥಿವೇತನ ನಿಲ್ಲಿಸಿದೆ.**
> **ಮಹಾಂತೇಶ ಬಿಳೂರ**
> ಜಿಲ್ಲಾ ಸಂಚಾಲಕ, ಎಐಡಿಎಸ್‌ಒ ಸಂಘಟನೆ



ವೈದ್ಯಕೀಯ ವಿದ್ಯಾರ್ಥಿಗಳು (2023-24)

73 ರಾಜ್ಯದಲ್ಲಿರುವ ವೈದ್ಯಕೀಯ ಕಾಲೇಜುಗಳು

12,345 ಎಂಬಿಬಿಎಸ್‌ಗೆ ಪ್ರವೇಶ ಪಡೆದವರ ಸಂಖ್ಯೆ

₹1.10 ಲಕ್ಷ ಕೇಂದ್ರ ಸರ್ಕಾರದ ಕಾಲೇಜುಗಳು ಕಳೆದ ವರ್ಷ ಬಾಕಿ ಉಳಿಸಿದ ವಿದ್ಯಾರ್ಥಿ ವೇತನ

₹67,000 ರಾಜ್ಯ ಸರ್ಕಾರದ ಕಾಲೇಜುಗಳು ಬಾಕಿ ಉಳಿಸಿಕೊಂಡ ವಿದ್ಯಾರ್ಥಿ ವೇತನ

(ಪ್ರತಿ ವಿದ್ಯಾರ್ಥಿಗೆ)

ಸುದ್ದಿ 2 ನಿಮಿಷ

‘ರಾಜ್ಯ ಲಾಂಛನದಲ್ಲಿ ಕನ್ನಡ ಕಡೆಗಣನೆ’

ಬೆಂಗಳೂರು: ‘ರಾಜ್ಯ ಲಾಂಛನದಲ್ಲಿ ಕನ್ನಡ ಭಾಷೆಗೆ ಸ್ಥಾನವಿಲ್ಲ ಎನ್ನುವುದು ಕರ್ನಾಟಕದಲ್ಲಿ ಕನ್ನಡದ ಪರಿಸ್ಥಿತಿಗೆ ಸಾಕ್ಷಿಯಾಗಿದೆ. ಕೂಡಲೇ ಲಾಂಛನದಲ್ಲಿ ಕನ್ನಡ ಬರಹವನ್ನು ಅಳವಡಿಸಬೇಕು’ ಎಂದು ಕನ್ನಡ ಗೆಳೆಯರ ಬಳಗ ಸರ್ಕಾರವನ್ನು ಆಗ್ರಹಿಸಿದೆ.

‘ಭಾಷಾವಾರು ರಾಜ್ಯ ರಚನೆಯಾಗಿ 70 ವರ್ಷ ಸಮೀಪಿಸುತ್ತಿದ್ದರೂ ರಾಜ್ಯ ಲಾಂಛನದಲ್ಲಿ ಕನ್ನಡ ಭಾಷೆಗೆ ಸ್ಥಾನ ಒದಗಿಸಿಲ್ಲ. ಎರಡು ಸಾವಿರಕ್ಕೂ ಹೆಚ್ಚು ವರ್ಷಗಳ ಇತಿಹಾಸವುಳ್ಳ, ದೇಶದ ಪ್ರಾಚೀನ ಭಾಷೆಯಾದ ಕನ್ನಡವನ್ನು ಕಡೆಗಣಿಸಿರುವುದು ಭಾಷೆಗೆ ಎಸಗಿರುವ ಅಪಮಾನ. ಇತರ ಎಲ್ಲ ರಾಜ್ಯಗಳು ತಮ್ಮ ಲಿಪಿಯನ್ನು ಲಾಂಛನದಲ್ಲಿ ಬಳಸಿ, ಸೂಕ್ತ ಗೌರವ ಸಲ್ಲಿಸಿವೆ. ಕೇರಳ, ಪಂಜಾಬ್, ಪಶ್ಚಿಮ ಬಂಗಾಳ, ಗುಜರಾತ್ ರಾಜ್ಯಗಳು ದೇವನಾಗರಿಯ ‘ಸತ್ಯಮೇವ ಜಯತೆ’ ವಾಕ್ಯ ಉಳಿಸಿಕೊಂಡು, ರಾಜ್ಯ ಭಾಷೆ ಲಿಪಿಯಲ್ಲಿ ಇತರ ವಿವರ ನಮೂದಿಸಿವೆ’ ಎಂದು ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ ತಿಳಿಸಿದ್ದಾರೆ.

‘1956ರಿಂದ ಆಡಳಿತ ನಡೆಸಿದ ಯಾವ ಸರ್ಕಾರವೂ ಲಾಂಛನದಲ್ಲಿ ಕನ್ನಡಕ್ಕೆ ಸ್ಥಾನ ಇಲ್ಲ ಎಂಬುದನ್ನು ಗಮನಿಸಿಲ್ಲ. ಕರ್ನಾಟಕದ ಲಾಂಛನ ಕನ್ನಡ ಲಾಂಛನ ಆಗಬೇಕು. ಕನ್ನಡಾಭಿಮಾನಿಯಾದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೂಕ್ತ ಕ್ರಮಕೈಗೊಂಡು, ಕನ್ನಡದ ಅಸ್ಮಿತೆ ಮತ್ತು ಹಿರಿಮೆ ಎತ್ತಿ ಹಿಡಿಯಬೇಕು’ ಎಂದು ಪ್ರಕಟಣೆಯಲ್ಲಿ ಒತ್ತಾಯಿಸಿದ್ದಾರೆ.

209 ತಾಲ್ಲೂಕುಗಳಲ್ಲಿ ‘ಭೂ ಸುರಕ್ಷಾ’

ಬೆಂಗಳೂರು: ತಾಲ್ಲೂಕು ಕಚೇರಿಗಳಲ್ಲಿರುವ ಪ್ರಮುಖ ಭೂ ದಾಖಲೆಗಳನ್ನು ಗಣಕೀಕರಣಗೊಳಿಸುವ ‘ಭೂ ಸುರಕ್ಷತಾ ಯೋಜನೆ’ಯ ಎರಡನೇ ಹಂತಕ್ಕೆ ಜನವರಿಯಿಂದಲೇ ಚಾಲನೆ ನೀಡಲಾಗುವುದು ಎಂದು ಕಂದಾಯ ಇಲಾಖೆ ಹೇಳಿದೆ.

ತಾಲ್ಲೂಕು ಕಚೇರಿಗಳಲ್ಲಿರುವ ಪ್ರಮುಖವಾದ, ಸ್ವಾತಂತ್ರ್ಯ ಪೂರ್ವ ಮತ್ತು ನಂತರದ ಭೂದಾಖಲೆಗಳ ಗಣಕೀಕರಣ ಕಾರ್ಯಕ್ಕೆ ಕಳೆದ ವರ್ಷ ಚಾಲನೆ ನೀಡಲಾಗಿತ್ತು. ಮೊದಲ ಹಂತದಲ್ಲಿ ಎಲ್ಲ ಜಿಲ್ಲೆಗಳ ತಲಾ ಒಂದು ತಾಲ್ಲೂಕಿನಲ್ಲಿ ಪ್ರಾಯೋಗಿಕವಾಗಿ ಜಾರಿಗೊಳಿದ್ದು, ಈವರೆಗೂ 7.95 ಕೋಟಿ ಪುಟಗಳ, 14.87 ಲಕ್ಷ ಕಡತಗಳನ್ನು ಕಂಪ್ಯೂಟರ್‌ಗೆ ಅಪ್‌ಲೋಡ್ ಮಾಡಲಾಗಿದೆ.

ಎರಡನೇ ಹಂತದಲ್ಲಿ 209 ತಾಲ್ಲೂಕುಗಳಲ್ಲೂ ಏಕಕಾಲಕ್ಕೆ ‘ಭೂ ಸುರಕ್ಷಾ ಯೋಜನೆ’ಗೆ ಚಾಲನೆ ನೀಡಲಾಗುತ್ತಿದೆ. ಯೋಜನೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅನುದಾನ ಒದಗಿಸಿವೆ. ಈಗಾಗಲೇ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಅಗತ್ಯ ತರಬೇತಿಯನ್ನೂ ನೀಡಲಾಗಿದೆ.

ಹಳೆಯ, ಶಿಥಿಲಗೊಂಡ ದಾಖಲೆಗಳನ್ನು ಡಿಜಿಟಲ್ ರೂಪದಲ್ಲಿ ಉಳಿಸಲು, ನಕಲಿ ದಾಖಲೆಗಳ ಹಾವಳಿ ತಡೆಯಲು, ಸಾರ್ವಜನಿಕರ ಅನಗತ್ಯ ಅಲೆದಾಟ ತಪ್ಪಿಸಲು ಮತ್ತು ಮೂಲ ದಾಖಲೆಗಳು ಜನತೆಗೆ ಆನ್‌ಲೈನ್ ಮೂಲಕ ಲಭಿಸುವಂತೆ ಮಾಡುವುದು ಇದರ ಉದ್ದೇಶ’ ಎಂದು ಇಲಾಖೆ ಪ್ರಕಟಣೆ ಹೇಳಿದೆ.

ಶೀತಗಾಳಿ: ರಾಜ್ಯದಲ್ಲಿ ಚಳಿ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕನಿಷ್ಠ ತಾಪಮಾನ 2ರಿಂದ 4 ಡಿಗ್ರಿ ಸೆಲ್ಸಿಯಸ್‌ನಷ್ಟು ಕುಸಿತವಾಗುತ್ತಿದೆ. ಇದರಿಂದಾಗಿ ಚಳಿ ಹೆಚ್ಚಳವಾಗುತ್ತಿದೆ.

ಹವಾಮಾನ ಇಲಾಖೆ ಪ್ರಕಾರ, ವಾರದಿಂದ ಕನಿಷ್ಠ ತಾಪಮಾನ ಇಳಿಮುಖವಾಗಿದೆ. ಕಳೆದ 24 ಗಂಟೆಗಳಲ್ಲಿ 20 ಜಿಲ್ಲೆಗಳಲ್ಲಿ ಕನಿಷ್ಠ ಉಷ್ಣಾಂಶ 15 ಡಿಗ್ರಿ ಸೆಲ್ಸಿಯಸ್ ಒಳಗೆ ವರದಿಯಾಗಿದೆ. ವಿಜಯಪುರದಲ್ಲಿ ಅತೀ ಕಡಿಮೆ ಉಷ್ಣಾಂಶ (10.9 ಡಿಗ್ರಿ ಸೆಲ್ಸಿಯಸ್) ದಾಖಲಾಗಿದೆ.

2024ರ ಡಿಸೆಂಬರ್ ಅಂತ್ಯಕ್ಕೆ ಕೋಲಾರ ಮತ್ತು ಬೆಂಗಳೂರು ಗ್ರಾಮಾಂತರ ಹೊರತುಪಡಿಸಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಕನಿಷ್ಠ ಉಷ್ಣಾಂಶ 15 ಡಿಗ್ರಿ ಸೆಲ್ಸಿಯಸ್‌ಗಿಂತ ಅಧಿಕವಿತ್ತು.

ಮುಂದಿನ ಎರಡು ದಿನ ಉತ್ತರ ಕನ್ನಡ, ಬೀದರ್, ವಿಜಯಪುರ, ಧಾರವಾಡ, ಹಾವೇರಿ, ರಾಯಚೂರು, ಚಿಕ್ಕಮಗಳೂರು, ಮಂಡ್ಯ, ಮೈಸೂರು ಜಿಲ್ಲೆಯಲ್ಲಿ ಕನಿಷ್ಠ ತಾಪಮಾನ 2ರಿಂದ 4 ಡಿಗ್ರಿ ಸೆಲ್ಸಿಯಸ್ ಕಡಿಮೆಯಾಗುವ ಸಾಧ್ಯತೆಯಿದೆ. ಉಳಿದ ಜಿಲ್ಲೆಗಳಲ್ಲಿ ದೊಡ್ಡ ಬದಲಾವಣೆಯಿಲ್ಲ ಎಂದು ತಿಳಿಸಿದೆ.

ಮುಖ್ಯವಾಹಿನಿಗೆ ಇಂದು ಆರು ನಕ್ಸಲರು

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಆರು ನಕ್ಸಲರು ಮುಖ್ಯವಾಹಿನಿಗೆ ಸೇರಲು ವೇದಿಕೆ ಸಜ್ಜಾಗಿದೆ. ಆ ಮೂಲಕ ರಾಜ್ಯದಲ್ಲಿ ನಕ್ಸಲ್ ಹೋರಾಟದ ಹಾದಿ ಸಂಪೂರ್ಣ ಅಂತ್ಯದ ಬಾಗಿಲಿಗೆ ಬಂದು ನಿಂತಿದೆ.

ರಾಜ್ಯದ ಬೀದರ್‌ನಲ್ಲಿ ಆರಂಭವಾದ ನಕ್ಸಲ್ ಹೋರಾಟ ಚಿಕ್ಕಮಗಳೂರು ಜಿಲ್ಲೆಯಲ್ಲಿ ಹೆಚ್ಚು ರಕ್ತಸಿಕ್ತ ಹಾದಿ ಉಳಿಸಿದೆ. ಈಗ ಕೊನೆಯ ಹಂತಕ್ಕೆ ತಲುಪಿದೆ. ಕೊನೆಯ ಸಾಲಿನ ಆರು ಜನರು ಮುಖ್ಯವಾಹಿನಿಗೆ ಬರಲು ಒಪ್ಪಿದ್ದಾರೆ. ರಾಜ್ಯದಲ್ಲಿ ನಕ್ಸಲ್ ಹಾದಿಯ ಕೊನೆಯ ಪುಟಕ್ಕೆ ಬುಧವಾರ ಮುದ್ರೆಬೀಳಲಿದೆ.

ಬೀದರ್ ಬಳಿಕ ರಾಯಚೂರು, ಕಲಬುರಗಿ ಜಿಲ್ಲೆಗೆ ವಿಸ್ತರಿಸಿತು. ರಾಯಚೂರು ಜಿಲ್ಲೆ ಕೇಂದ್ರೀಕರಿಸಿ 10 ವರ್ಷಗಳಿಗೂ ಹೆಚ್ಚು ಕಾಲ ನಕ್ಸಲ್ ಚಳವಳಿ ನಡೆದಿತ್ತು.

‘ಶೋಷಣೆಗೆ ಒಳಗಾದ ಪ್ರದೇಶ ಮತ್ತು ಅದು ಕಾಡಿನೊಂದಿಗೆ ಹೊಂದಿಕೊಂಡಿರಬೇಕು ಎಂಬ ಕಾರಣಕ್ಕೆ ಮಲೆನಾಡು ಪ್ರದೇಶವನ್ನು ಅಂದಿನ ನಕ್ಸಲ್ ಚಳವಳಿಗಾರರು ಆಯ್ಕೆ ಮಾಡಿಕೊಂಡರು’ ಎಂದು ನಕ್ಸಲ್ ಚಳವಳಿಯ ಮಾಜಿ ಹೋರಾಟಗಾರರು ನೆನಪಿಸಿಕೊಳ್ಳುತ್ತಾರೆ.

ಅದರ ಫಲವಾಗಿ ಚಿಕ್ಕಮಗಳೂರು, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯ ಕಾಡಂಚಿನಲ್ಲಿ ಚಳವಳಿ ತೀವ್ರಗೊಂಡಿತು. ಈ ಜಿಲ್ಲೆಯಲ್ಲಿ ಬೇರೆ ಚಳವಳಿಗಳಲ್ಲಿ ಇದ್ದವರು ನಕ್ಸಲ್ ಚಳವಳಿಗೆ ಸೇರಿಕೊಂಡರು. 2002ರಲ್ಲಿ ತರಬೇತಿ ವೇಳೆ ಹಾರಿದ ಗುಂಡಿನಿಂದ ಇಲ್ಲಿ ಶಸ್ತ್ರಾಸ್ತ್ರ ಚಟುವಟಿಕೆ ಇರುವುದು ಮೊದಲ ಬಾರಿಗೆ ಬಯಲಾಯಿತು. ಕೊಪ್ಪ ತಾಲ್ಲೂಕಿನ ಮೆಣಸಿನಹಾಡ್ಯ ಗ್ರಾಮದ ಚೀರಮ್ಮ ಅವರ ಕಾಲಿಗೆ ಗುಂಡು ತಗುಲಿತ್ತು. ಅವರು ಚಿಕಿತ್ಸೆ ಪಡೆಯಲು ಆಸ್ಪತ್ರೆಗೆ ಬಂದ ಬಳಿಕ ಪ್ರಕರಣ ಬಯಲಿಗೆ ಬಂದಿತ್ತು.

2005ರಲ್ಲಿ ನಕ್ಸಲ್ ನಾಯಕ ಸಾಕೇತ್ ರಾಜನ್ ಮತ್ತು ಶಿವಲಿಂಗು ಪೊಲೀಸರ ಗುಂಡಿಗೆ ಬಲಿಯಾಗಿದ್ದರು. ದಿನ ಕಳೆದಂತೆ ರಾಜ್ಯದಲ್ಲಿ ನಕ್ಸಲ್ ಹೋರಾಟ ಕಡಿಮೆ ಆಯಿತು. ಇತ್ತೀಚೆಗೆ ಕೇರಳದಲ್ಲಿದ್ದ ನಕ್ಸಲರ ತಂಡದಲ್ಲಿ ಬಹುತೇಕರ ಬಂಧನವಾಯಿತು. ಉಳಿದ ಎಂಟು ಜನರಲ್ಲಿ ಕರ್ನಾಟಕದವರೇ ಹೆಚ್ಚಿನವರಿದ್ದರು. ಮತ್ತೆ ತಾಯ್ನಾಡಿನತ್ತ ಮರಳಲು ಈ ತಂಡ ಯತ್ನಿಸಿತು.

‘ಇಲ್ಲಿ ಹೋರಾಟ ವಿಸ್ತರಣೆಗೆ ಅಷ್ಟೊಂದು ಬೆಂಬಲ ಸಿಗಲಿಲ್ಲ. ಇದರ ನಡುವೆ ವಿಕ್ರಂ ಗೌಡ ಎನ್‌ಕೌಂಟರ್ ಆಯಿತು. ಆರೋಗ್ಯ ಸಮಸ್ಯೆಗಳು ಇದ್ದವು. ಈ ಎಲ್ಲಾ ಕಾರಣಗಳಿಂದ ಅವರು ಮುಖ್ಯವಾಹಿನಿಗೆ ಬರಲು ಒಪ್ಪಿದ್ದಾರೆ’ ಎಂದು ಅವರನ್ನು ಹತ್ತಿರದಿಂದ ಬಲ್ಲವರು ಹೇಳುತ್ತಾರೆ.

ಈಗ ಆರು ಜನ ಮುಖ್ಯವಾಹಿನಿಗೆ ಬಂದರೆ ಸದ್ಯಕ್ಕೆ ಕರ್ನಾಟಕ, ಕೇರಳ, ತಮಿಳುನಾಡು ರಾಜ್ಯಗಳಲ್ಲಿ ನಕ್ಸಲ್ ಚಳವಳಿ ಅಂತ್ಯವಾದಂತೆ ಎಂದು ಅಧಿಕಾರಿಗಳು ಹೇಳುತ್ತಾರೆ.

ಆರು ನಕ್ಸಲರ ಜೊತೆ ಶಾಂತಿಗಾಗಿ ನಾಗರಿಕ ವೇದಿಕೆಯ ನೂರ್ ಶ್ರೀಧರ್, ನಗರಗೆರೆ ರಮೇಶ್, ಶರಣಾಗತಿ ಮತ್ತು ಪುನರ್ವಸತಿ ಸಮಿತಿಯ ಕೆ.ಪಿ.ಶ್ರೀಪಾಲ್ ಚರ್ಚಿಸಿದರು

> **ನಕ್ಸಲ್‌ಪೀಡಿತ ಪ್ರದೇಶಗಳ ಅರಣ್ಯ ಪ್ರದೇಶದಲ್ಲಿ ವಿಶೇಷ ಶೋಧ ಕಾರ್ಯಾಚರಣೆ ನಿಲ್ಲಿಸಲಾಗಿದೆ. ಆದರೆ, ಸಾಮಾನ್ಯ ಶೋಧ ನಡೆಯುತ್ತಿದೆ**
> **ಜಿತೇಂದ್ರ ದಯಾಮ,** ನಕ್ಸಲ್ ನಿಗ್ರಹ ದಳದ ಪೊಲೀಸ್ ವರಿಷ್ಠಾಧಿಕಾರಿ

> **ಮುಖ್ಯವಾಹಿನಿಗೆ ಬರಲು ಆರೂ ಜನ ಒಪ್ಪಿದ್ದೇವೆ. ಕೊನೆ ಉಸಿರಿನ ತನಕ ಜನಪರ ಹೋರಾಟಕ್ಕೆ ಹಿಂಜರಿಯುವುದಿಲ್ಲ. ಸರ್ಕಾರ ಬೇಡಿಕೆ ಈಡೇರಿಸುವ ಭರವಸೆ ಇದೆ**
> **ಲತಾ ಮುಂಡಗಾರು**
> ನಕ್ಸಲ್ ಹೋರಾಟಗಾರ್ತಿ

ಶರಣಾಗತಿ, ಪುನರ್ವಸತಿ ಸಮಿತಿ ಮಧ್ಯಸ್ಥಿಕೆ

ಆರು ನಕ್ಸಲರು ಮುಖ್ಯವಾಹಿನಿಗೆ ಬರಲು ಸಿದ್ಧತೆಗಳು ಪೂರ್ಣಗೊಂಡಿದ್ದು, ಬುಧವಾರ ಬೆಳಿಗ್ಗೆ ಚಿಕ್ಕಮಗಳೂರು ಜಿಲ್ಲಾಧಿಕಾರಿ ಕಚೇರಿಯಲ್ಲಿ ಪ್ರಕ್ರಿಯೆಗಳು ನಡೆಯಲಿವೆ. ನಕ್ಸಲ್ ಶರಣಾಗತಿ, ಪುನರ್ವಸತಿ ಸಮಿತಿಯ ಬಂಜಗೆರೆ ಜಯಪ್ರಕಾಶ್, ಕೆ.ಪಿ. ಶ್ರೀಪಾಲ್, ಪಾರ್ವತೀಶ್, ಶಾಂತಿಗಾಗಿ ನಾಗರಿಕ ವೇದಿಕೆಯ ನೂರ್ ಶ್ರೀಧರ್, ಕೆ.ಎಲ್.ಅಶೋಕ್, ವಿ.ಎಸ್.ಶ್ರೀಧರ್, ನಗರಗೆರೆ ರಮೇಶ್, ಎನ್.ವೆಂಕಟೇಶ್, ತಾರಾರಾವ್ ಅವರ ತಂಡವು ಸರ್ಕಾರ ಮತ್ತು ನಕ್ಸಲರ ನಡುವೆ ಮಧ್ಯಸ್ಥಿಕೆ ವಹಿಸಿದೆ.

ಯಾರ ವಿರುದ್ಧ ಎಷ್ಟು ಪ್ರಕರಣ

ಹೆಸರು	ಜಿಲ್ಲೆ/ರಾಜ್ಯ	ಪ್ರಕರಣಗಳ ಸಂಖ್ಯೆ	ಪ್ರಕರಣಗಳ ವಿಭಾಗ
ಲತಾ ಮುಂಡಗಾರು	ಚಿಕ್ಕಮಗಳೂರು	85	ಎ
ಸುಂದರಿ ಕುತ್ಲೂರು	ದಕ್ಷಿಣ ಕನ್ನಡ	71	ಎ
ವನಜಾಕ್ಷಿ ಬಾಳೆಹೊಳೆ	ಚಿಕ್ಕಮಗಳೂರು	29	ಎ
ಮಾರೆಪ್ಪ ಅರೋಟಿ	ರಾಯಚೂರು	50	ಎ
ಕೆ.ವಸಂತ	ವೆಲ್ಲೂರು(ತಮಿಳುನಾಡು)	8	ಬಿ
ಜಿಷಾ	ವಯನಾಡು(ಕೇರಳ)	17	ಬಿ

‘ಅಮಿತ್ ಶಾ ಕರೆದರೂ, ನಿರ್ಧಾರ ನನ್ನದು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕ್ರಾಂತಿವೀರ ಬ್ರಿಗೇಡ್ ಬಿಟ್ಟು ಪಕ್ಷಕ್ಕೆ ಬನ್ನಿ ಎಂದು ಅಮಿತ್ ಶಾ ಕರೆದರೂ, ಹೋಗಬೇಕೇ ಅಥವಾ ಬೇಡವೇ ಎಂಬುದನ್ನು ನಿರ್ಧರಿಸಬೇಕಾದವನು ನಾನು’ ಎಂದು ಕೆ.ಎಸ್. ಈಶ್ವರಪ್ಪ ಹೇಳಿದರು.

ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಕ್ರಾಂತಿವೀರ ಬ್ರಿಗೇಡ್ ಕುರಿತು ಮಾಹಿತಿ ನೀಡಿದ ಅವರು, ‘ಈ ಹಿಂದೆ ಆರಂಭಿಸಿದ್ದ ರಾಯಣ್ಣ ಬ್ರಿಗೇಡ್ ಯಶಸ್ವಿಯಾಗಿ ನಡೆಯುತ್ತಿತ್ತು. ಕೆಲವರು ಆ ಬಗ್ಗೆ ದೂರು ನೀಡಿದ್ದರು. ಅಮಿತ್ ಶಾ ಕರೆದು, ನಿಲ್ಲಿಸಿಬಿಡಿ ಎಂದರು. ಏಕೆ ನಿಲ್ಲಿಸಬೇಕು ಎಂದು ಪ್ರಶ್ನಿಸಿದಾಗ ಅವರಲ್ಲಿ ಉತ್ತರವಿರಲಿಲ್ಲ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಕೆ.ಎಸ್.ಈಶ್ವರಪ್ಪ

ಔತಣ ‘ರಾಜಕೀಯ’ಕ್ಕೆ ಬ್ರೇಕ್...

ಒಂದನೇ ಪುಟದಿಂದ...

ಸಂಜೆ ನಿರ್ಣಯ ಬದಲು: ‘ಪಕ್ಷದ ವ್ಯಾಪ್ತಿಯಲ್ಲಿಯೇ ಅನುಮತಿ ಪಡೆದು ಪರಿಶಿಷ್ಟ ಮತ್ತು ಪರಿಶಿಷ್ಟ ಪಂಗಡದ ಸಚಿವರು, ಶಾಸಕರಿಗೆ ಔತಣಕೂಟ ಸಭೆ ಏರ್ಪಡಿಸಿದ್ದೇನೆ’ ಎಂದು ಸುದ್ದಿಗಾರರಿಗೆ ಮಂಗಳವಾರ ಬೆಳಿಗ್ಗೆ ಮಾಹಿತಿ ನೀಡಿದ್ದ ಗೃಹ ಸಚಿವ ಜಿ. ಪರಮೇಶ್ವರ ಅವರು, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರ ಸೂಚನೆ ಮೇರೆಗೆ ಸಭೆ ಮುಂದೂಡಿರುವುದಾಗಿ ಸಂಜೆ ಪ್ರಕಟಿಸಿದರು.

ಸದಾಶಿವನಗರದ ತಮ್ಮ ನಿವಾಸದಲ್ಲಿ ಸುದ್ದಿಗಾರರ ಜೊತೆ ಬೆಳಿಗ್ಗೆ ಮಾತನಾಡಿದ್ದ ಅವರು, ‘ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಬುಧವಾರ ಸಂಜೆ ಸಭೆ ಕರೆದಿದ್ದೇನೆ. ಎಸ್‌ಸಿ, ಎಸ್‌ಟಿ ಸಚಿವರು, ಶಾಸಕರನ್ನಷ್ಟೆ ಆಹ್ವಾನಿಸಿದ್ದೇನೆ. ಹಿಂದೆ ಚಿತ್ರದುರ್ಗದಲ್ಲಿ ನಡೆದಿದ್ದ ಎಸ್ ಸಿ, ಎಸ್‌ಟಿ ಸಮಾವೇಶದಲ್ಲಿ ತೆಗೆದುಕೊಂಡಿದ್ದ ನಿರ್ಣಯಗಳ ಕುರಿತು ಈ ಸಭೆಯಲ್ಲಿ ಚರ್ಚೆ ಮಾಡುತ್ತೇವೆ’ ಎಂದಿದ್ದರು.

‘ಮುಂದೆ ಎಸ್‌ಸಿ, ಎಸ್‌ಟಿ ಸಮಾವೇಶ ಮಾಡಬೇಕು ಅಂದುಕೊಂಡಿದ್ದೇವೆ. ಅದಕ್ಕೆ ಸಮುದಾಯದ ಎಲ್ಲ ಸಚಿವರು, ಶಾಸಕರನ್ನು ಕರೆದಿದ್ದೇನೆ. ನಾನು ಔತಣ ಮಾತ್ರ ಕೊಡುತ್ತಿದ್ದೇನೆ. ಔತಣಕೂಟ ಅಲ್ಲ. ಚಿತ್ರದುರ್ಗದಲ್ಲಿ ಸಮಾವೇಶದ ನಂತರ ಒಂದೆಡೆ ಸೇರಲು ನಮಗೆ ಆಗಿರಲಿಲ್ಲ ಮುಂದಿನ ಸಮಾವೇಶ ಎಲ್ಲಿ ಮಾಡಬೇಕು ಎಂದೂ ಚರ್ಚೆ ಮಾಡುತ್ತೇವೆ’ ಎಂದೂ ಹೇಳಿದ್ದರು.

ಪರಮೇಶ್ವರ ಆಯೋಜಿಸಿದ ಸಭೆಯ ಕುರಿತು ಮಂಗಳವಾರ ಮಧ್ಯಾಹ್ನ ಪ್ರತಿಕ್ರಿಯಿಸಿದ್ದ ಸಮಾಜ ಕಲ್ಯಾಣ ಸಚಿವ ಎಚ್. ಸಿ. ಮಹದೇವಪ್ಪ, ‘ಊಟಕ್ಕೆ ಸೇರೋಣ ಎಂದು ಪರಮೇಶ್ವರ ಹೇಳಿದ್ದಾರೆ. ಸಮುದಾಯ ಸೇರಿದ ಮೇಲೆ ನಾನೂ ಹೋಗುತ್ತೇನೆ. ಸಮುದಾಯದ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುತ್ತೇವೆ’ ಎಂದಿದ್ದರು.

ಮೊದಲೇ ತೀರ್ಮಾನವಾಗಿದ್ದ ಸಭೆ?: ಸತೀಶ ಜಾರಕಿಹೊಳಿ ಅವರ ನಿವಾಸದಲ್ಲಿ ನಡೆದ ಚರ್ಚೆಯ ಸಂದರ್ಭದಲ್ಲಿಯೇ ಮುಖ್ಯಮಂತ್ರಿಯ ಸಲಹೆಯಂತೆ ಪರಮೇಶ್ವರ ನೇತೃತ್ವದಲ್ಲಿ ದಲಿತ ಸಚಿವರು, ಶಾಸಕರ ಸಭೆ ಆಯೋಜಿಸಲು ತೀರ್ಮಾನಿಸಲಾಗಿತ್ತು. ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ‘ಅಧಿಕಾರ ಹಂಚಿಕೆ’ ಕುರಿತ ಸುಳಿ ಇನ್ನಷ್ಟು ಬಿರುಸು ಪಡೆಯುವ ಸಾಧ್ಯತೆಯಿದ್ದು, ಅದರ ಮುಂದುವರಿದ ಭಾಗವಾಗಿ ಸತೀಶ ಜಾರಕಿಹೊಳಿ ನಿವಾಸದಲ್ಲಿ ಮುಖ್ಯಮಂತ್ರಿ ಆಪ್ತ ಸಚಿವರ ಸಭೆ ನಡೆದಿತ್ತು. ಅಲ್ಲದೆ, ಪರಮೇಶ್ವರ ನೇತೃತ್ವದಲ್ಲಿ ದಲಿತ ಸಮುದಾಯದ ಸಚಿವರು, ಶಾಸಕರ ಸಭೆ ಆಯೋಜಿಸಲೂ ನಿರ್ಧರಿಸಲಾಗಿತ್ತು ಎಂದು ಮೂಲಗಳು ತಿಳಿಸಿವೆ.

‘ಡಿನ್ನರ್ ಪಾರ್ಟಿಯಿಂದ ಬದಲಾವಣೆ ಅಸಾಧ್ಯ’

ಮಂಡ್ಯ: ‘ಡಿನ್ನರ್ ಪಾರ್ಟಿಯಲ್ಲಿ ಸಿಎಂ ಬದಲಾವಣೆ ಮಾಡಲು ಆಗಲ್ಲ. ಅದನ್ನು ಹೈಕಮಾಂಡ್ ತೀರ್ಮಾನಿಸುತ್ತದೆ’ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಹೇಳಿದರು.

ಮಾಧ್ಯಮದವರೊಂದಿಗೆ ಅವರು ಮಾತನಾಡಿ, ‘ಡಿನ್ನರ್ ಪಾರ್ಟಿ ಮಾಡೋದ್ರಲ್ಲಿ ತಪ್ಪಿಲ್ಲ ಎಂದು ಸಿಎಂ ಹೇಳಿದ್ದಾರೆ. ನಾವು ಮಂತ್ರಿಗಳಿಗೆ ಊಟ ಕೊಡ್ತಿದ್ದೀವಿ ಅಷ್ಟೇ’ ಎಂದರು.

ಸಿದ್ದರಾಮಯ್ಯ ಪರ ಒತ್ತಡ

ಒಂದನೇ ಪುಟದಿಂದ...

ಸತೀಶ ಜಾರಕಿಹೊಳಿಯವರ ನಿವಾಸದಲ್ಲಿ ನಡೆದ ಸಭೆ ಅದರ ಮುಂದುವರಿದ ಭಾಗ ಎಂದೂ ಹೇಳಲಾಗಿದೆ. ಅಧಿಕಾರ ಹಂಚಿಕೆ ಸೂತ್ರದ ಅನ್ವಯ ಸಿ.ಎಂ ಸ್ಥಾನಕ್ಕೆ ಡಿ.ಕೆ. ಶಿವಕುಮಾರ್ ಪಟ್ಟು ಹಿಡಿಯುವುದು ಖಚಿತ. ‘ದಲಿತ ಮುಖ್ಯಮಂತ್ರಿ’ ವಿಚಾರ ಮುನ್ನೆಲೆಗೆ ಬರುವ ಸಾಧ್ಯತೆಯೂ ಇದೆ. ದಲಿತ-ವರ್ಗಕ್ಕೆ ಅವಕಾಶ ಬಂದರೆ ಪರಮೇಶ್ವರ ಹೆಸರು ಮುಂಚೂಣಿಗೆ ಬರಬಹುದು. ಆಪ್ತ ಎಚ್.ಸಿ. ಮಹದೇವಪ್ಪ ಬದಲು ಪರಮೇಶ್ವರ ಪರ ಸಿದ್ದರಾಮಯ್ಯ ಹೆಚ್ಚು ಒಲವು ವ್ಯಕ್ತಪಡಿಸಬಹುದು.

ಈ ನಿರೀಕ್ಷೆಯಿಂದ ಪರಮೇಶ್ವರ ಅವರ ತಮ್ಮವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಔತಣಕೂಟ ನಡೆಸಲು ತೀರ್ಮಾನಿಸಿದ್ದರು ಎಂದೂ ವಿಶ್ಲೇಷಿಸಲಾಗಿದೆ.

ಔತಣಕೂಟ: ಹೈಕಮಾಂಡ್‌ಗೆ ಡಿಕೆಶಿ ದೂರು

ನವದೆಹಲಿ: ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಆಪ್ತ ಸಚಿವರ ಜತೆಗೆ ನಡೆಸಿದ ಔತಣಕೂಟದ ಬಗ್ಗೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೈಕಮಾಂಡ್‌ಗೆ ದೂರು ನೀಡಿದ್ದಾರೆ. ಸಿದ್ದರಾಮಯ್ಯ ಬೆಂಬಲಿಗರು ನಡೆಸುತ್ತಿರುವ ಇಂತಹ ಚಟುವಟಿಕೆಗೆ ಕಡಿವಾಣ ಹಾಕುವಂತೆ ಆಗ್ರಹಿಸಿದ್ದಾರೆ.

ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಅವರನ್ನು ಸೋಮವಾರ ರಾತ್ರಿ ಭೇಟಿಯಾದ ಅವರು, ಸುಮಾರು 45 ನಿಮಿಷ ಸಮಾಲೋಚನೆ ನಡೆಸಿದರು. ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲಾ ಅವರಿಗೂ ರಾಜ್ಯದ ಬೆಳವಣಿಗೆಗಳ ಕುರಿತು ಮಾಹಿತಿ ನೀಡಿದರು.

ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ನಡೆಸಿದ ಔತಣಕೂಟದ ಬಗ್ಗೆ ರಾಷ್ಟ್ರೀಯ ನಾಯಕರಲ್ಲಿ ಪ್ರಸ್ತಾಪಿಸಿದ ಅವರು, ‘ಸಿದ್ದರಾಮಯ್ಯ ಅವರಿಗೆ ಎಲ್ಲ ಸಹಕಾರ ನೀಡುತ್ತಿದ್ದೇನೆ. ಮುಡಾ ಹಗರಣದಲ್ಲಿ ಮುಖ್ಯಮಂತ್ರಿ ಸಂಕಷ್ಟಕ್ಕೆ ಸಿಲುಕಿದ್ದಾಗ ಬಂಡೆಯಂತೆ ಬೆನ್ನಿಗೆ ನಿಂತಿದ್ದೇನೆ. ಆದರೆ, ಸಿದ್ದರಾಮಯ್ಯ ಬೆಂಬಲಿಗರು ಅನಗತ್ಯ ಗೊಂದಲ ಸೃಷ್ಟಿಸುತ್ತಿದ್ದಾರೆ. ಸಿದ್ದರಾಮಯ್ಯ ಪರೋಕ್ಷವಾಗಿ ಕುಮ್ಮಕ್ಕು ನೀಡುತ್ತಿದ್ದಾರೆ’ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಹಾಗೂ ಹೆಚ್ಚುವರಿ ಉಪಮುಖ್ಯಮಂತ್ರಿ ಹುದ್ದೆ ಸೃಷ್ಟಿ ಕುರಿತು ಸಿದ್ದರಾಮಯ್ಯ ಬೆಂಬಲಿಗರು ಹೇಳಿಕೆ ನೀಡುತ್ತಿದ್ದಾರೆ. ಇಂತಹ ಹೇಳಿಕೆ ನೀಡದಂತೆ ನಿರ್ದೇಶನ ನೀಡಬೇಕು’ ಎಂದು ಹೈಕಮಾಂಡ್ ನಾಯಕರಿಗೆ ಮನವಿ ಮಾಡಿದರು ಎಂದು ಮೂಲಗಳು ತಿಳಿಸಿವೆ.

ಆಯ್ದ ನಾಯಕರ ಜೊತೆ ಮುಖ್ಯಮಂತ್ರಿ ಆಗಾಗ ಸಭೆ ನಡೆಸುವುದರಿಂದ ಪಕ್ಷದ ಕಾರ್ಯಕರ್ತರಲ್ಲಿ ಗೊಂದಲ ಸೃಷ್ಟಿಯಾಗಲಿದ್ದು, ಸರ್ಕಾರದ ವರ್ಚಸ್ಸಿಗೆ ಧಕ್ಕೆಯಾಗಲಿದೆ ಎಂದು ಶಿವಕುಮಾರ್ ಅವರು ವೇಣುಗೋಪಾಲ್ ಗಮನಕ್ಕೆ ತಂದರು.

ಸುದ್ದಿಗಾರರ ಜತೆಗೆ ಮಾತನಾಡಿದ ಶಿವಕುಮಾರ್, ‘ವೇಣುಗೋಪಾಲ್ ಅವರನ್ನು ಭೇಟಿ ಮಾಡಿ ರಾಜ್ಯದ ರಾಜಕೀಯ ಬೆಳವಣಿಗೆಗಳ ಕುರಿತು ಮಾಹಿತಿ ನೀಡಿದ್ದೇನೆ’ ಎಂದರು. ಭೇಟಿಯ ವಿವರಗಳನ್ನು ಬಹಿರಂಗಪಡಿಸಲು ನಿರಾಕರಿಸಿದರು.

ಕಮಿಷನ್ ದಂಧೆಗೆ ರಾಜ್ಯ ಕತ್ತಲೆಗೆ: ಅಶೋಕ ಟೀಕೆ

ಬೆಂಗಳೂರು: ‘ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಆಡಳಿತದಿಂದಾಗಿ ರಾಜ್ಯ ದಿವಾಳಿಯತ್ತ ಸಾಗುತ್ತಿದೆ. ಕಮಿಷನ್ ದಂಧೆಗಾಗಿ ಇಡೀ ರಾಜ್ಯವನ್ನು ಈ ಸರ್ಕಾರ ಕತ್ತಲೆಗೆ ದೂಡಿದೆ’ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಆಕ್ರೋಶ ಮಂಗಳವಾರ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಅವರು, ‘ಗುತ್ತಿಗೆದಾರರಿಗೆ ಪಾವತಿಸಲು ಸರ್ಕಾರದ ಬಳಿ ಹಣವಿಲ್ಲ. ಬಿಜೆಪಿ ಸರ್ಕಾರದ ವಿರುದ್ಧ ಶೇ 40 ಲಂಚದ ಆರೋಪ ಹೊರಿಸಿದ್ದ ಗುತ್ತಿಗೆದಾರರು, ಈಗ ಕಾಂಗ್ರೆಸ್ ಸರ್ಕಾರ ಶೇ 60 ಕಮಿಷನ್ ಸರ್ಕಾರ ಎಂದು ಹೇಳಿ ದಯಾಮರಣಕ್ಕೆ ಅರ್ಜಿ ಸಲ್ಲಿಸಲು ಮುಂದಾಗಿದ್ದಾರೆ’ ಎಂದರು.

ಅನುದಾನ ಕಡಿತ, ಬಳಕೆಯೂ ಇಲ್ಲ: ‘ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ₹3.22 ಲಕ್ಷ ಕೋಟಿಯಲ್ಲಿ ಈವರೆಗೆ ₹ 1.79 ಲಕ್ಷ ಕೋಟಿ (ಶೇ 55.69) ಮಾತ್ರ ಖರ್ಚಾಗಿದೆ. ಮುಂದಿನ ಎರಡು ತಿಂಗಳಲ್ಲಿ ಶೇ 45ರಷ್ಟು ಖರ್ಚು ಮಾಡಬೇಕಿದೆ. ಎಸ್‌ಸಿ ಎಸ್‌ಪಿ ಅನುದಾನ ₹ 28,527 ಕೋಟಿಯಲ್ಲಿ ₹ 13,923 ಕೋಟಿ (ಶೇ 48.81), ಟಿಎಸ್‌ಪಿಯಲ್ಲಿ ₹ 11,515 ಕೋಟಿಯಲ್ಲಿ ₹ 4,937 ಕೋಟಿ (ಶೇ 42.88) ಖರ್ಚಾಗಿದೆ. ವಿಶೇಷ ಅಭಿವೃದ್ಧಿ ಯೋಜನೆಯಡಿ ₹ 3,077 ಕೋಟಿಯಲ್ಲಿ ₹ 1,076 ಕೋಟಿ (ಶೇ 34) ಖರ್ಚಾಗಿದೆ’ ಎಂದು ಹೇಳಿದರು.

ಒಳ ಮೀಸಲಾತಿ ತ್ವರಿತ ಜಾರಿಗೆ ಚರ್ಚೆ

ನ್ಯಾ. ನಾಗಮೋಹನದಾಸ್ ಭೇಟಿ ಮಾಡಿದ ಕಾರಜೋಳ ನೇತೃತ್ವದ ನಿಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಸಂಸದ ಗೋವಿಂದ ಕಾರಜೋಳ, ಮಾಜಿ ಕೇಂದ್ರ ಸಚಿವ ಎ. ನಾರಾಯಣಸ್ವಾಮಿ ನೇತೃತ್ವದ ಒಳ ಮೀಸಲಾತಿ ಹೋರಾಟಗಾರರ ನಿಯೋಗ ಮಂಗಳವಾರ ನ್ಯಾ. ನಾಗಮೋಹನದಾಸ್ ಅವರನ್ನು ಭೇಟಿ ಮಾಡಿ, ಒಳ ಮೀಸಲಾತಿ ತ್ವರಿತ ಜಾರಿಯ ಅಗತ್ಯ ಕುರಿತು ಚರ್ಚೆ ನಡೆಸಿತು.

ಸುಪ್ರೀಂಕೋರ್ಟ್ ತೀರ್ಪಿನಂತೆ ಒಳ ಮೀಸಲಾತಿಯನ್ನು ತ್ವರಿತವಾಗಿ ಜಾರಿ ಮಾಡಬೇಕಿದೆ. ಅದಕ್ಕಾಗಿ ಆದಿ ಕರ್ನಾಟಕ, ಆದಿದ್ರಾವಿಡ ವಿಷಯದಲ್ಲಿನ ದತ್ತಾಂಶಗಳ ನಿಖರತೆ ಬಗ್ಗೆ ಹಲವು ಆಯಾಮದ ಚರ್ಚೆ ನಡೆಸಬೇಕು ಎಂದು ಸಲಹೆ ನೀಡಿದರು.

‘ತಾವೇ ಮಾಡಿದ (ನಾಗಮೋಹನದಾಸ್) ಶಿಫಾರಸಿನ ಅನ್ವಯ ಹಿಂದಿನ ಬಿಜೆಪಿ ಸರ್ಕಾರ ಪರಿಶಿಷ್ಟರ ಮೀಸಲಾತಿ ಹೆಚ್ಚಳಕ್ಕೆ ಕ್ರಮ ಕೈಗೊಂಡಿತ್ತು. ಅಂದಿನ ಕಾನೂನು ಸಚಿವ ಮಾಧುಸ್ವಾಮಿ ಅವರು 2011ರ ಜಾತಿಗಣತಿ ಆಧಾರದಲ್ಲಿ ವರ್ಗೀಕರಣ ಮಾಡಿದ್ದರು. ಈ ಮಾಹಿತಿಯನ್ನು ಪರಿಶೀಲಿಸಬೇಕು’ ಎಂದು ಗೋವಿಂದ ಕಾರಜೋಳ ಮನವಿ ಮಾಡಿದರು.

ಆದಿದ್ರಾವಿಡ, ಆದಿಕರ್ನಾಟಕ ಪಂಗಡಗಳ ಗೊಂದಲ ಸರಿಪಡಿಸಲು ಮಾಧುಸ್ವಾಮಿ ಸಮಿತಿ ತಾಲೂಕು, ಜಿಲ್ಲೆಗಳ ದತ್ತಾಂಶ ಬಳಸಿರುವ ವಿವರಗಳನ್ನು ಎ.ನಾರಾಯಣಸ್ವಾಮಿ ನೀಡಿದರು.

‘ತ್ವರಿತವಾಗಿ, ಸಮರ್ಪಕವಾಗಿ ವರದಿ ಸಿದ್ಧಪಡಿಸಲಾಗುವುದು. ಮಾದಿಗ ಸಮಾಜ ಹಾಗೂ ಪರಿಶಿಷ್ಟರ ಪಟ್ಟಿಯಲ್ಲಿನ ಎಲ್ಲ ಜಾತಿಗಳಿಗೂ ಸಾಮಾಜಿಕ ನ್ಯಾಯ ಒದಗಿಸಲಾಗುವುದು’ ಎಂದು ನಾಗಮೋಹನದಾಸ್ ಭರವಸೆ ನೀಡಿದರು.

ಒಳ ಮೀಸಲಾತಿ ಹೋರಾಟಗಾರರಾದ ಎಂ. ಶಂಕರಪ್ಪ, ಬಳ್ಳಾರಿ ಹನುಮಂತಪ್ಪ, ರಾಯಚೂರಿನ ನರಸಪ್ಪ, ಬೀದರ್‌ನ ಫರ್ನಾಂಡೀಸ್ ಹಿಪ್ಪಳಗಾವ್, ಮೈಸೂರಿನ ಅನಂದಕುಮಾರ್, ಶಾಸಕರಾದ ದುರ್ಯೋಧನ ಐಹೊಳೆ, ಬಸವರಾಜ ಮತ್ತಿಮಡು, ಮಾಜಿ ಶಾಸಕರಾದ ಬಸವರಾಜ್ ಧಡೇಸುಗೂರು, ಬಿಜೆಪಿ ಮುಖಂಡರಾದ ಬಿ.ಎಚ್. ಅನಿಲ್ ಕುಮಾರ್, ಲಕ್ಷ್ಮಿನಾರಾಯಣ, ವೆಂಕಟೇಶ ದೊಡ್ಡೇರಿ, ಬಳ್ಳಾಹುಣ್ಸಿ ರಾಮಣ್ಣ, ಗವಿಸಿದ್ದಪ್ಪ ದ್ಯಾಮಣ್ಣನವರ್, ಸಾಮಾಜಿಕ ಕಾರ್ಯಕರ್ತ ವಾದಿರಾಜ್ ನಿಯೋಗದಲ್ಲಿದ್ದರು.

ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಕಲ್ಪಿಸುವ ಸಂಬಂಧ ಸೂಕ್ತ ಶಿಫಾರಸುಗಳೊಂದಿಗೆ ವರದಿ ಸಲ್ಲಿಸಲು ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಅಧ್ಯಕ್ಷತೆಯ ಏಕ ಸದಸ್ಯ ಆಯೋಗವನ್ನು ಸರ್ಕಾರ ರಚಿಸಿತ್ತು.

ಬಿಜೆಪಿ ಸಂಸದ ಗೋವಿಂದ ಕಾರಜೋಳ, ಮಾಜಿ ಕೇಂದ್ರ ಸಚಿವ ಎ. ನಾರಾಯಣಸ್ವಾಮಿ ನೇತೃತ್ವದ ಒಳಮೀಸಲಾತಿ ಹೋರಾಟಗಾರರ ನಿಯೋಗ ನ್ಯಾ.ನಾಗಮೋಹನದಾಸ್ ಅವರನ್ನು ಮಂಗಳವಾರ ಭೇಟಿ ಮಾಡಿತು

ಕನಿಷ್ಠ ವೇತನ, ಗ್ರ್ಯಾಚ್ಯುಟಿ, ವಿಮೆ ಸೌಲಭ್ಯಕ್ಕೆ ಒತ್ತಾಯ

ಮುಷ್ಕರ ಆರಂಭಿಸಿದ ಆಶಾ ಕಾರ್ಯಕರ್ತೆಯರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಸಿಕ ಕನಿಷ್ಠ ₹ 15 ಸಾವಿರ ಗೌರವಧನ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಆಶಾ ಕಾರ್ಯಕರ್ತೆಯರು ಮಂಗಳವಾರದಿಂದ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಿದ್ದಾರೆ.

ರಾಜ್ಯದ ವಿವಿಧೆಡೆಯಿಂದ ಬಂದಿದ್ದ ಸಾವಿರಾರು ಕಾರ್ಯಕರ್ತೆಯರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ರಾಜ್ಯದಲ್ಲಿರುವ 42 ಸಾವಿರ ಆಶಾ ಕಾರ್ಯಕರ್ತೆಯರ ಬೇಡಿಕೆಗಳು ಹಲವು ವರ್ಷಗಳಿಂದ ಈಡೇರಿಲ್ಲ. ಕೂಡಲೇ ಬೇಡಿಕೆ ಈಡೇರಿಸಬೇಕು ಎಂದು ಪ್ರತಿಭಟನೆನಿರತರು ಆಗ್ರಹಿಸಿದರು.

‘ಹಗಲಿರುಳು ಆರೋಗ್ಯ ಸೇವೆಯಲ್ಲಿ ನಿರತರಾಗಿರುವ ಆಶಾ ಕಾರ್ಯಕರ್ತೆಯರಿಗೆ ಜೀವನ ನಿರ್ವಹಣೆಗೆ ಸಾಕಾಗುವಷ್ಟು ಗೌರವಧನ ಇಲ್ಲ. ಕಳೆದ ವರ್ಷ ಅಹೋರಾತ್ರಿ ಧರಣಿ ನಡೆದ ವೇಳೆ ಬೇಡಿಕೆ ಈಡೇರಿಸುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದ್ದರು. ನಂತರ ಅಧಿಕಾರಿಗಳ ಜೊತೆಗೆ 15 ಬಾರಿ ಸಭೆ ನಡೆದಿದೆ. ಬೆಳಗಾವಿಯಲ್ಲಿ ನಡೆದ ವಿಧಾನ ಮಂಡಲದ ಚಳಿಗಾಲದ ಅಧಿವೇಶನದ ವೇಳೆ ಸಚಿವರು, ಶಾಸಕರಿಗೆ ಮನವಿ ನೀಡಿದರೂ ಪರಿಹಾರ ಮಾತ್ರ ಮರೀಚಿಕೆ ಆಗಿದೆ’ ಎಂದು ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು.

ಕೇಂದ್ರ ಮತ್ತು ರಾಜ್ಯ ಸರ್ಕಾರ ನೀಡುವ ಗೌರವಧನದ ಜೊತೆಗೆ ಪ್ರೋತ್ಸಾಹಧನ ಸೇರಿಸಿ ಮಾಸಿಕ ಕನಿಷ್ಠ ₹15 ಸಾವಿರ ಗೌರವಧನ ನಿಗದಿಪಡಿಸಬೇಕು. ನಗರ ಪ್ರದೇಶಗಳ ಆಶಾ ಕಾರ್ಯಕರ್ತೆಯರಿಗೆ ಹೆಚ್ಚಿನ ಜೀವನ ನಿರ್ವಹಣೆ ವೆಚ್ಚ ಭರಿಸುವುದಕ್ಕಾಗಿ ₹2 ಸಾವಿರ ಹೆಚ್ಚುವರಿ ಭತ್ಯೆ ನೀಡಬೇಕು. ಎಂಟು ವರ್ಷಗಳಿಂದ ಆಶಾನಿಧಿ ಪೋರ್ಟಲ್‌ನಲ್ಲಿ ಆಶಾ ಕಾರ್ಯಕರ್ತೆಯರು ಮಾಡಿದ ಕೆಲಸಗಳು ದಾಖಲಾಗದೇ, ಪ್ರೋತ್ಸಾಹಧನವೂ ಬಂದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ಮೊಬೈಲ್ ಆಧಾರಿತ ಕೆಲಸಗಳನ್ನು ಒತ್ತಾಯಪೂರ್ವಕವಾಗಿ ಮಾಡಿಸಿಕೊಳ್ಳಬಾರದು. ಇಲ್ಲದಿದ್ದರೆ ಮೊಬೈಲ್ ಆಧಾರಿತ ಕೆಲಸಗಳಿಗೆ ಪ್ರೋತ್ಸಾಹಧನ ನಿಗದಿಪಡಿಸಬೇಕು. ಪಶ್ಚಿಮ ಬಂಗಾಳದ ಮಾದರಿಯಲ್ಲಿ ಸೇವಾ ನಿವೃತ್ತಿ ಪಡೆಯುವ ಆಶಾ ಕಾರ್ಯಕರ್ತೆಯರಿಗೆ ವರ್ಷಕ್ಕೆ ₹5 ಲಕ್ಷ ನೀಡಬೇಕು. ಆರೋಗ್ಯ ತಪಾಸಣೆ ಸೌಲಭ್ಯ ಕಲ್ಪಿಸಬೇಕು. ಕಾರ್ಮಿಕರೆಂದು ಪರಿಗಣಿಸಿ ಕನಿಷ್ಠ ವೇತನ, ಗ್ರ್ಯಾಚ್ಯುಟಿ, ಭವಿಷ್ಯನಿಧಿ, ವಿಮೆ ಸೌಲಭ್ಯ ಒದಗಿಸಬೇಕು’ ಎಂದು ಒತ್ತಾಯಿಸಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ನಿರ್ದೇಶಕಿ ಡಾ. ಎಂ.ಜಿ. ತ್ರಿವೇಣಿ, ಉಪ ನಿರ್ದೇಶಕ (ಇಎಂಎಸ್-ಆಶಾ) ಡಾ. ಪ್ರಭುದೇವ ಬಿ. ಗೌಡ ಅವರು ಸ್ಥಳಕ್ಕೆ ಬಂದು ಮನವಿ ಸ್ವೀಕರಿಸಿದರು.

ಪ್ರತಿಭಟನಕಾರರನ್ನು ಉದ್ದೇಶಿಸಿ ಸಾಮಾಜಿಕ ಹೋರಾಟಗಾರ ಅಲ್ಲಮಪ್ರಭು ಬೆಟ್ಟದೂರು, ಎಸ್‌ಯುಸಿಐ (ಸಿ) ರಾಜ್ಯ ಮಂಡಳಿ ಕಾರ್ಯದರ್ಶಿ ಕೆ.ಉಮಾ, ಎಐಯುಟಿಯುಸಿ ರಾಷ್ಟ್ರೀಯ ಘಟಕದ ಅಧ್ಯಕ್ಷ ಕೆ.ರಾಧಾಕೃಷ್ಣ ಅವರು ಮಾತನಾಡಿದರು.

‘ಮುಷ್ಕರ ವಾಪಸ್ ಇಲ್ಲ’

‘ಸರ್ಕಾರ ಭರವಸೆ ನೀಡಿ, ಬೇಡಿಕೆ ಈಡೇರಿಸಿಲ್ಲ. ಹಾಗಾಗಿ ಬೇಡಿಕೆ ಈಡೇರುವವರೆಗೂ ಮುಷ್ಕರ ವಾಪಸ್ ಪಡೆಯುವುದಿಲ್ಲ. ಇತರೆ ಜಿಲ್ಲೆಗಳಿಂದ ಬುಧವಾರ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತೆಯರು ಮುಷ್ಕರದಲ್ಲಿ ಪಾಲ್ಗೊಳ್ಳಲಿದ್ದಾರೆ’ ಎಂದು ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ಅಧ್ಯಕ್ಷ ಕೆ.ಸೋಮಶೇಖರ್ ಯಾದಗಿರಿ, ರಾಜ್ಯ ಕಾರ್ಯದರ್ಶಿ ಡಿ.ನಾಗಲಕ್ಷ್ಮೀ ತಿಳಿಸಿದರು.

2 ಲಕ್ಷ ಪಂಪ್‌ಸೆಟ್‌: ವರ್ಷದೊಳಗೆ ವಿದ್ಯುತ್ ಸಂಪರ್ಕಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಕೆ.ಜೆ. ಜಾರ್ಜ್

ಮಂಡ್ಯ: 'ಅಕ್ರಮ- ಸಕ್ರಮ ಯೋಜನೆಯಡಿ ಸಲ್ಲಿಕೆಯಾಗಿದ್ದ 4.5 ಲಕ್ಷ ಅರ್ಜಿಗಳಲ್ಲಿ 2.5 ಲಕ್ಷ ಕೃಷಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿದ್ದು, ಬಾಕಿ 2 ಲಕ್ಷ ಪಂಪ್‌ಸೆಟ್‌ಗಳಿಗೆ ಒಂದು ವರ್ಷದೊಳಗೆ ಮೂಲಸೌಕರ್ಯ ಕಲ್ಪಿಸಬೇಕು' ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಅಧಿಕಾರಿಗಳಿಗೆ ಸೂಚಿಸಿದರು.

ನಗರದಲ್ಲಿ ಮಂಗಳವಾರ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, 'ಯೋಜನೆಗೆ ಸರ್ಕಾರ ₹1 ಸಾವಿರ ಕೋಟಿ ಮೀಸಲಿಟ್ಟಿದ್ದು, ಹೊಸ ಅರ್ಜಿಗಳು ಮತ್ತೆ ಸಲ್ಲಿಕೆಯಾಗುತ್ತಿದ್ದು, ಸಚಿವ ಸಂಪುಟದಲ್ಲಿ ಚರ್ಚಿಸಿ ತೀರ್ಮಾನಿಸಲಾಗುವುದು' ಎಂದರು.

'ಗ್ರಿಡ್‌ನಿಂದ 500 ಮೀಟರ್ ಒಳಗಿರುವ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಸಂಪರ್ಕ ನೀಡಲಾಗುವುದು. ಅದಕ್ಕಿಂತ ದೂರವಿರುವ ಪಂಪ್‌ಸೆಟ್‌ಗಳಿಗೆ 'ಸೌರ ವಿದ್ಯುತ್ ಸಂಪರ್ಕ' ನೀಡಲಾಗುವುದು. ಇದಕ್ಕೆ ರಾಜ್ಯ ಸರ್ಕಾರ ಶೇ 50ರಷ್ಟು ಮತ್ತು ಕೇಂದ್ರ ಶೇ 30ರಷ್ಟು ಸಹಾಯಧನ ನೀಡುತ್ತವೆ. ಶೇ 20ರಷ್ಟನ್ನು ರೈತರು ಭರಿಸಬೇಕು' ಎಂದರು.

'ಶರಾವತಿ ಜಲಾಶಯದಲ್ಲಿ 'ಪಂಪ್ಡ್ ಸ್ಟೋರೇಜ್' ವಿನೂತನ ಯೋಜನೆ ಜಾರಿಗೊಳಿಸಿ, ಹೆಚ್ಚುವರಿಯಾಗಿ 2 ಸಾವಿರ ಮೆಗಾವಾಟ್‌ನಷ್ಟು ವಿದ್ಯುತ್ ಉತ್ಪಾದಿಸಲು ಉದ್ದೇಶಿಸಲಾಗಿದೆ. ಹರಿಯುವ ನೀರನ್ನು ಮೋಟರ್ ಪಂಪ್‌ಗಳ ಮೂಲಕ ಮೇಲಕ್ಕೆ ಹರಿಸಿ ವಿದ್ಯುತ್ ಉತ್ಪಾದಿಸಲಾಗುವುದು. ₹9 ಸಾವಿರ ಕೋಟಿ ಮೊತ್ತದ ಯೋಜನೆಗೆ ಪರಿಸರ ಇಲಾಖೆ ಅನುಮತಿ ಪಡೆಯಲು ಕೆ.ಪಿ.ಟಿ.ಸಿ.ಎಲ್‌.ನಿಂದ ಪ್ರಸ್ತಾವ ಸಲ್ಲಿಸಲಾಗಿದೆ' ಎಂದರು.

ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಮಾತನಾಡಿ, 'ಕಳೆದ ಬಾರಿ ಹೊರ ರಾಜ್ಯಗಳಲ್ಲಿ ವಿದ್ಯುತ್ ಲಭ್ಯವಿರಲಿಲ್ಲ. ಪ್ರತಿ ಯೂನಿಟ್‌ಗೆ ₹10 ದರದಲ್ಲಿ ಖರೀದಿಸಿದ್ದೇವೆ. ಈ ಬಾರಿ ಉತ್ತಮ ಮಳೆಯಾಗಿದ್ದು, ಜಲಾಶಯಗಳಲ್ಲೂ ನೀರಿದೆ. ಬೇಸಿಗೆಯಲ್ಲಿ (ಮಾರ್ಚ್ ಮತ್ತು ಏಪ್ರಿಲ್) 1 ಸಾವಿರ ಮೆಗಾವ್ಯಾಟ್ ವಿದ್ಯುತ್‌ಗೆ ಹೆಚ್ಚುವರಿ ಬೇಡಿಕೆಯಿದೆ. ಅಗತ್ಯಬಿದ್ದರೆ ಪ್ರತಿ ಯೂನಿಟ್‌ಗೆ ₹6 ದರದಲ್ಲಿ ವಿದ್ಯುತ್ ಖರೀದಿಸಲಾಗುವುದು' ಎಂದರು.

'ಬಹುರೂಪಿ' ರಾಷ್ಟ್ರೀಯ ನಾಟಕೋತ್ಸವ 14ರಿಂದ

ಪ್ರಜಾವಾಣಿ

ಮೈಸೂರು: ಇಲ್ಲಿನ ರಂಗಾಯಣದಲ್ಲಿ ಜ.14ರಿಂದ 19ರವರೆಗೆ 'ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ'ವನ್ನು ಆಯೋಜಿಸಿದ್ದು, ವಿವಿಧ ಭಾಷೆಗಳ ನಾಟಕಗಳ ಪ್ರದರ್ಶನ ನಡೆಯಲಿದೆ.

'ವಿಧಾನದ: ಸಾಮಾಜಿಕ ನ್ಯಾಯ- ಚಳವಳಿಗಳು ಮತ್ತು ರಂಗಭೂಮಿ' ಪರಿಕಲ್ಪನೆಯಲ್ಲಿ ಉತ್ಸವ ರೂಪಿಸಲಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಚಲನಚಿತ್ರನಟ, ರಂಗಕರ್ಮಿ ಅತುಲ್ ಕುಲಕರ್ಣಿ ಉದ್ಘಾಟಿಸುವರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ಪಾಲ್ಗೊಳ್ಳುವರು' ಎಂದು ರಂಗಾಯಣದ ನಿರ್ದೇಶಕ ಸತೀಶ್ ತಿಪಟೂರು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'6 ರಾಜ್ಯಗಳ 7 ಬಹುಭಾಷೆ ನಾಟಕಗಳು, ಕನ್ನಡದ 13, ಇಂಗ್ಲಿಷ್‌ನ 2 ಸೇರಿ ಒಟ್ಟು 22 ನಾಟಕಗಳು ಭೂಮಿಗೀತ, ವನರಂಗ, ಕಿರುರಂಗಮಂದಿರ ಹಾಗೂ ಕಲಾಮಂದಿರದಲ್ಲಿ ಪ್ರದರ್ಶನಗೊಳ್ಳಲಿವೆ. ಇದೇ ಮೊದಲ ಬಾರಿಗೆ 'ಮಕ್ಕಳ ಬಹುರೂಪಿ' ಆಯೋಜಿಸಲಾಗಿದ್ದು, ಕಲಾಮಂದಿರದಲ್ಲಿ 15ರಂದು ನಡೆಯಲಿದೆ. 6ಕ್ಕೆ ಚಲನಚಿತ್ರನಟ ಪ್ರಕಾಶ್ ರಾಜ್ ಉದ್ಘಾಟಿಸುವರು' ಎಂದರು.

'13ರಿಂದ ಕಿಂದರಜೋಗಿ ಆವರಣದಲ್ಲಿ ಜಾನಪದೋತ್ಸವ, 14ರಿಂದ ಶ್ರೀರಂಗದಲ್ಲಿ ಚಲನಚಿತ್ರೋತ್ಸವ, 18ರಿಂದ ರಾಷ್ಟ್ರೀಯ ವಿಚಾರ ಸಂಕಿರಣ ಆರಂಭವಾಗಲಿದೆ. ನಾಟಕದ ಟಿಕೆಟ್ ಬೆಲೆ ₹100 ಆಗಿದ್ದು, 'ಮಕ್ಕಳ ಬಹುರೂಪಿ'ಯ ಮಕ್ಕಳಿಗೆ ಟಿಕೆಟ್ ₹50 ಇರಲಿದೆ. ₹25 ಲಕ್ಷ ಅನುದಾನವಿದ್ದು, ಟಿಕೆಟ್, ಮಳಿಗೆಗಳು ಸೇರಿದಂತೆ ವಿವಿಧ ಮೂಲಗಳಿಂದ ಹಣ ಸಂಗ್ರಹಿಸಲಾಗುತ್ತಿದೆ' ಎಂದರು.

ಎಫ್.ಟಿ.ಹಳ್ಳಿಕೇರಿಗೆ ಹಾಲುಮತ ಭಾಸ್ಕರ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠ ಕಲಬುರಗಿ ವಿಭಾಗದ ದೇವದುರ್ಗ ತಾಲ್ಲೂಕಿನ ತಿಂಥಿಣಿ ಬ್ರಿಡ್ಜ್ ಮಠ ನೀಡುವ ಸಾಹಿತ್ಯ ಕ್ಷೇತ್ರದ 'ಹಾಲುಮತ ಭಾಸ್ಕರ' ಪ್ರಶಸ್ತಿಗೆ ಹಂಪಿ ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿಶಾಸ್ತ್ರ ವಿಭಾಗದ ಹಿರಿಯ ಪ್ರಾಧ್ಯಾಪಕ ಪ್ರೊ. ಎಫ್.ಟಿ.ಹಳ್ಳಿಕೇರಿ ಆಯ್ಕೆಯಾಗಿದ್ದಾರೆ.

ಸಮಾಜ ಜಾಗೃತಿ ನೀಡಲಾಗುವ 'ಕನಕರತ್ನ' ಪ್ರಶಸ್ತಿಗೆ ನ್ಯೂಸ್‌ಫಸ್ಟ್ ಚಾನೆಲ್‌ನ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ರವಿಕುಮಾರ್, ಸಮಾಜ ಸೇವೆಗೆ ನೀಡಲಾಗುವ 'ಸಿದ್ಧಶ್ರೀ' ಪ್ರಶಸ್ತಿಗೆ ಬೆಂಗಳೂರಿನ ಶ್ರೀ ಕಾಳಿದಾಸ ಹೆಲ್ತ್ ಎಜುಕೇಶನ್ ಮತ್ತು ಅಹಿಲ್ಯಾ ಟ್ರಸ್ಟ್ ಆಯ್ಕೆಯಾಗಿದೆ.

ಪ್ರಶಸ್ತಿಗಳು ತಲಾ ₹50 ಸಾವಿರ ನಗದು ಒಳಗೊಂಡಿರುತ್ತವೆ. ಜನವರಿ 13ರಂದು ಮಠದಲ್ಲಿ ನಡೆಯುವ ಹಾಲುಮತ (ಸಿದ್ಧ-ನಾಥ) ಸಂಸ್ಕೃತಿ ವೈಭವದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಸಂಸತ್ ಮುತ್ತಿಗೆಗೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಮೈಸೂರು/ಮಂಡ್ಯ: 'ಅಂಬೇಡ್ಕರ್ ವಿರುದ್ಧ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಅವಹೇಳನಕಾರಿ ಹೇಳಿಕೆ ನೀಡಿರುವುದನ್ನು ಖಂಡಿಸಿ' ಮೈಸೂರಿನಲ್ಲಿ ನಡೆದ ಬಂದ್‌ಗೆ ಉತ್ತಮ ಪ್ರತಿಕ್ರಿಯೆ ದೊರೆಯಿತು. ಮಂಡ್ಯದಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಯಿತು.

ಫೆಬ್ರುವರಿಯಲ್ಲಿ ಅಧಿವೇಶನ ಸಂದರ್ಭದಲ್ಲಿ ಸಂಸತ್‌ಗೆ ಮುತ್ತಿಗೆ ಹಾಕಲು ಸಂಘಟನೆಗಳು ನಿರ್ಧರಿಸಿವೆ. ಮೈಸೂರಿನಲ್ಲಿ ಬಂದ್ ಬೆಂಬಲಿಸಿ ಕಾಂಗ್ರೆಸ್ ಮುಖಂಡರು ಪಕ್ಷದ ಕಚೇರಿಯಿಂದ ಪುರಭವನದವರೆಗೆ ಮೆರವಣಿಗೆ ನಡೆಸಿದರು. ವಿವಿಧ ಧರ್ಮಗಳ ಗುರುಗಳೂ ಹೆಜ್ಜೆ ಹಾಕಿದರು.

ವಾಣಿಜ್ಯ ಚಟುವಟಿಕೆ ಸ್ಥಗಿತಗೊಂಡಿದ್ದವು. ಹೋಟೆಲ್, ರೆಸ್ಟೋರೆಂಟ್, ಶಾಲೆ- ಕಾಲೇಜುಗಳು, ಬ್ಯಾಂಕ್‌ಗಳು ಬಾಗಿಲು ಮುಚ್ಚಿದ್ದವು. ಕೆಎಸ್‌ಆರ್‌ಟಿಸಿ ಸಂಚಾರವೂ ಇರಲಿಲ್ಲ. 'ಅಮಿತ್ ಶಾ ಅವರನ್ನು ಸಂಪುಟದಿಂದ ವಜಾಗೊಳಿಸಲು ಪ್ರಧಾನಿ ನರೇಂದ್ರ ಮೋದಿ ಅವರಿಗೆ ನಿರ್ದೇಶನ ನೀಡಬೇಕು' ಎಂದು ವಿವಿಧ ಸಂಘಟನೆಗಳ ಮುಖಂಡರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಆಗ್ರಹಿಸಿದರು.

ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮ್ ಹಾಗೂ ಲೇಖಕ ಬನ್ನೂರು ಕೆ.ರಾಜು ಚಮರಂ ಅವರು, 'ಶಾ ವಿರುದ್ಧ ಅಸ್ಪೃಶ್ಯತೆ ಆಚರಣೆ ಕಾಯ್ದೆಯಡಿ ಪ್ರಕರಣ ದಾಖಲಿಸಬೇಕು' ಎಂದು ಒತ್ತಾಯಿಸಿದರು.

ಮಂಡ್ಯ ಜಿಲ್ಲೆಯಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಕೆಲವು ಅಂಗಡಿ ಮಾಲೀಕರು ಮಳಿಗೆಗಳನ್ನು ಮುಚ್ಚಿದ್ದರು. ತೆರೆದಿದ್ದ ಅಂಗಡಿಗಳನ್ನು ಪ್ರತಿಭಟನಕಾರರು ಮುಚ್ಚಿಸಿದರು. ವ್ಯಾಪಾರ ನಡೆಸುತ್ತಿದ್ದವರಿಗೆ ಬಿಜೆಪಿ ಮುಖಂಡರು ಗುಲಾಬಿ ನೀಡಿ, ಧೈರ್ಯ ಹೇಳಿದರು.

ಭದ್ರಾ ಮೇಲ್ದಂಡೆ ಅನುದಾನ ಕಡಿತ ಸಂಭವ: ಡಿಕೆಶಿ

ನವದೆಹಲಿ: 'ಭದ್ರಾ ಮೇಲ್ದಂಡೆ ಯೋಜನೆಗೆ ₹5,300 ಕೋಟಿ ನೀಡುವುದಾಗಿ ಕೇಂದ್ರ ಸರ್ಕಾರ ಪ್ರಕಟಿಸಿತ್ತು. ಆದರೆ, ಈ ಅನುದಾನ ಕಡಿತವಾಗುವ ಸಂಭವ ಇದೆ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಕೇಂದ್ರ ಜಲಶಕ್ತಿ ಹಾಗೂ ರೈಲ್ವೆ ಖಾತೆಗಳ ರಾಜ್ಯ ಸಚಿವ ವಿ. ಸೋಮಣ್ಣ ಅವರನ್ನು ಮಂಗಳವಾರ ಇಲ್ಲಿ ಭೇಟಿಯಾದ ಬಳಿಕ ಅವರು ಮಾತನಾಡಿದರು.

ಕರ್ನಾಟಕ ಸರ್ಕಾರ

ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ

(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)

ಇ-ಮೇಲ್: directorgimsgulbarga@gmail.com ದೂ.08472-260252

ಸಂಖ್ಯೆ:GIMS/KLB/Tender/Surgical/CR/111/2024-25/2115 ದಿನಾಂಕ:-06/01/2025

:: ಟೆಂಡರ್ ಪ್ರಕಟಣೆ ::

ಜಿಮ್ಸ್ ಆಸ್ಪತ್ರೆ ಹಾಗೂ ಟ್ರಾಮಾಕೇರ್ ಆಸ್ಪತ್ರೆಗಳಲ್ಲಿ ಉಪಯೋಗಿಸಲು ಬೇಕಾಗಿರುವ Surgical Item ಗಳನ್ನು ಖರೀದಿಸಲು ಅರ್ಹತೆಯುಳ್ಳ ಏಜೆನ್ಸಿ (ಸಂಸ್ಥೆ) ಯವರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ (KTPP Act) ಅಧಿನಿಯಮ 1999 ಮತ್ತು ನಿಯಮಗಳು 2000 ರ ಪ್ರಕಾರ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದೆ. ಎಲ್ಲ ವಿವರಗಳು https://kppp.karnataka.gov.in ಜಾಲತಾಣದಲ್ಲಿ ನೋಡಬಹುದಾಗಿದೆ.

1) ಟೆಂಡರ್ ಪ್ರಕಟಣೆ ದಿನಾಂಕ: No. GIMS/KLB/Tender/Surgical/CR/111/2024-25, Date:06.01.2025. IND. No: DME/2024-25/IND1049, 2) ಆನ್‌ಲೈನ್‌ನಲ್ಲಿ ಟೆಂಡರ್ ಫಾರಂಗಳನ್ನು ಡೌನ್‌ಲೋಡ್ ಮಾಡಿಕೊಂಡು, ಟೆಂಡರ್ ಅನ್ನು ಇ-Procurement Portal ಮುಖಾಂತರ ಸಲ್ಲಿಸಲು ಕೊನೆಯ ದಿನಾಂಕ: 05-02-2025 ಸಾಯಂಕಾಲ 4:30ಕ್ಕೆ, 3) ಆನ್‌ಲೈನ್ ಮುಖಾಂತರ ಪ್ರಶ್ನೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 20-01-2025 ಸಾಯಂಕಾಲ 5.00 ಗಂಟೆಯವರೆಗೆ, 4) ಟೆಂಡರ್ ಪೂರ್ವಭಾವಿ ಸಭೆ ದಿನಾಂಕ: 22-01-2025 ಮಧ್ಯಾಹ್ನ 12:30ಕ್ಕೆ, 5) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ: 06-02-2025 ಸಾಯಂಕಾಲ 5:00ಕ್ಕೆ, 6) ಹಣಕಾಸಿನ ಲಕೋಟೆಯನ್ನು ತೆರೆಯುವ ದಿನಾಂಕ: 07-02-2025 11:30ಕ್ಕೆ, 7) ಟೆಂಡರ ಮೊತ್ತ : ರೂ. 5,46,60,519/-, 8) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ: ರೂ.2,00,000/-, 9) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ (ರಜಾ ದಿನಗಳನ್ನು ಹೊರತುಪಡಿಸಿ): ನಿರ್ದೇಶಕರು, ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ. ದೂರವಾಣಿ ಸಂಖ್ಯೆ: 08472-260252, Office Email: directorgimsgulbarga@gmail.com, Cell:+91 9482093568, Tender Section Email: gimstenderklb22@gmail.com Cell:+91 9972688602

ಸಹಿ/- ನಿರ್ದೇಶಕರು,
ಗುಲಬರ್ಗಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/819/ಕೆ.ಎಸ್.ಎಂ.ಸಿ.&ಎ/2024-25

DEPARTMENT OF PRISONS AND CORRECTIONAL SERVICE, KARNATAKA STATE

Office of the Chief Superintendent Central Prison, Parappana Agrahara, Electronic City Post, Bengaluru-560100.

No.CPB/TENDER/17580/2024-25 Date: 06.01.2025

SHORT TIME KPP Portal Notice (Call-2)

The purchases of Factory Machinery to be procured through Short Time KPP Portal (Call-2) as per the KTPP Act and Rules. **(1) Tender Indent No.** : As per Kpp Portal. **Brief details of Tender** : The purchases of Factory Machinery. **EMD (Amount (₹)** : As per KPP Portal. **Last Date for submission** : As per KPP Portal. Bidders can also take KPP Portal details from **website : kppp.karnataka.gov.in** or **Helpline +91-8046010000, +91-8068948777.**

Sd/-
Chief Superintendent
Central Prison, Bengaluru
Prisons and Correctional Services
Karnataka Stage

DIPR/CP/RO4165/AAPL/2024-25

ಕರ್ನಾಟಕ ಸರ್ಕಾರ, ಪೊಲೀಸ್ ಇಲಾಖೆ

ಪೊಲೀಸ್ ಅಧೀಕ್ಷಕರ ಕಛೇರಿ, ಕರಾವಳಿ ಕಾವಲು ಪೊಲೀಸ್, ಬಂದರು ರೋಡ್ ಮಲ್ಪೆ, ಉಡುಪಿ, ಕರ್ನಾಟಕ-576108

ಇ-ಪ್ರೊಕ್ಯೂರಮೆಂಟ್ ನೋಟಿಸ್

ಕರಾವಳಿ ಕಾವಲು ಪೊಲೀಸ್, ಕರ್ನಾಟಕ ಘಟಕಕ್ಕೆ 25 ಹೆಚ್‌ಪಿ ಒಬಿಎಂ ಹೊಂದಿರುವ ಎಫ್‌ಆರ್‌ಪಿ ಬೋಟ್ ಗಳನ್ನು ಖರೀದಿಸುವ ಬಗ್ಗೆ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದ ಪ್ರಕಾರ ಎರಡು ಲಕೋಟೆ ವ್ಯವಸ್ಥೆಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ.

ಕ್ರ ಸಂ.	ಟೆಂಡರ್ ಸಂಖ್ಯೆ	ಟೆಂಡರ್ ಹೆಸರು
1	KSP/2024-25/IND0260	Procurement of FRP Boats with 25HP OBM for Coastal Security Police Karnataka
ಬಿಡ್ ಸಲ್ಲಿಸಲು ಕೋನೆಯ ದಿನಾಂಕ : 24.01.2025 ರಂದು 17:30 ಗಂಟೆ		

ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರ್ಮ್‌ನಲ್ಲಿ ಭಾಗವಹಿಸಲು ಬಯಸುವ ಎಲ್ಲಾ ಟೆಂಡರ್‌ದಾರರು ಇ-ಪ್ರೊಕ್ಯೂರ್ ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು. ಟೆಂಡರ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರ್ಮ್ ನಲ್ಲಿ ನೊಂದಾಯಿಸಿಕೊಳ್ಳುವುದು ಕಡ್ಡಾಯವಾಗಿದೆ.

ದಯವಿಟ್ಟು https://kppp.karnataka.gov.inಗೆ ಭೇಟಿ ನೀಡಿ ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ +91-8046010000/+91-8068948777

Sd/- ಪೊಲೀಸ್ ಅಧೀಕ್ಷಕರು, ಕರಾವಳಿ ಕಾವಲು ಪೊಲೀಸ್, ಉಡುಪಿ.

ಕರ್ನಾಟಕ ಸರ್ಕಾರ

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ

ಆಯುಕ್ತರವರ ಕಛೇರಿ, ಪಶುಪಾಲನಾ ಭವನ, ಮೊದಲನೇ ಮಹಡಿ, ಸಿ.ಬಿ.ಐ ಕಛೇರಿ ಮುಂಭಾಗ, ಬಳ್ಳಾರಿ ಮುಖ್ಯರಸ್ತೆ, ಹೆಬ್ಬಾಳ, ಬೆಂಗಳೂರು – 560024.
ಇ–ಮೇಲ್: commissionerahvs@gmail.com ಫೋನ್: 080–23412767

ಸಂಖ್ಯೆ: ಆಪಸಂ/ಅನಿ(ಜಾ.ಆ)/ವಿವ–25/Cold Chain Management/2024–25 ದಿನಾಂಕ: 03.01.2025

ಟೆಂಡರ್ ನೋಟಿಫಿಕೇಷನ್

(ಜೆಮ್ ಪೋರ್ಟಲ್ ಮೂಲಕ ಮಾತ್ರ)

2024–25 ನೇ ಸಾಲಿನಲ್ಲಿ ಜಾನುವಾರು ಆರೋಗ್ಯ ಮತ್ತು ರೋಗ ನಿಯಂತ್ರಣ ಕಾರ್ಯಕ್ರಮದ NADCP ಯೋಜನೆಯಡಿ ವಿವಿಧ ಲಸಿಕೆಗಳ ದಾಸ್ತಾನನ್ನು ನಿರ್ವಹಿಸಲು ಅಗತ್ಯವಿರುವ ಶೀತಲ ಸರಪಳಿ ಉಪಕರಣಗಳಾದ Walk In Cooler, Active Cooling Boxes ಮತ್ತು Ice Lined Refrigeratorನ್ನು, Gem portal ಮುಖಾಂತರ ಖರೀದಿಸಿ ಜಿಲ್ಲೆಗಳಿಗೆ ಸರಬರಾಜು ಮಾಡಲು Walk In Cooler: Gem Bid No. GEM/2024/B/5762126 for Rs.500.00 lakhs, Active Cooling Boxes : GEM/2024/B/5763244 for Rs. 150.23 lakhs and Ice Lined Refrigerator: GEM/2024/B/5762925 for Rs. 987.29 Lakhs dated 03-01-2025 ರ ಮೂಲಕ ಟೆಂಡರ್ ಕರೆಯಲಾಗಿದೆ.

ಪೂರ್ಣ ಟೆಂಡರ್ ದಾಖಲೆಯನ್ನು ಮೇಲಿನ GEM portal ನಲ್ಲಿ ದಿನಾಂಕ: 03–01–2025 ರಿಂದ ವೀಕ್ಷಿಸಬಹುದಾಗಿದ್ದು, ಟೆಂಡರುದಾರರು GEM portal ನಲ್ಲಿ ದಿನಾಂಕ: 03–01–2025 ರಿಂದ 24–01–2025 ರಂದು ಬಿಡ್ ಅವಧಿ ಮುಗಿಯುವ ವರೆಗೂ ಅಪ್‌ಲೋಡ್ ಮಾಡಬಹುದಾಗಿದೆ.

ಹೆಚ್ಚಿನ ವಿವರಗಳಿಗಾಗಿ GEM portal ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/– ಉಪ ನಿರ್ದೇಶಕರು, ಜಾನುವಾರು ರೋಗಗಳ ಕಣ್ಗಾವಲು ಯೋಜನೆ,
ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ

DIPR/CP/4177/Zen/2024-25

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಕನ್ನಡ ಭವನ, 1ನೇ ಮಹಡಿ, ಜೆ.ಸಿ.ರಸ್ತೆ, ಬೆಂಗಳೂರು – 560 002
ದೂರವಾಣಿ : 080–22107704, 22484516. ವೆಬ್‌ಸೈಟ್ :https://kpp.karnataka.gov.in
ಇ–ಮೇಲ್ : kannadappradhikara@gmail.com

ಸಂಖ್ಯೆ: ಕಪುಪ್ರಾ/59/ಪ್ರಾ.ಪು.ಟೆಂ/2024–25 ದಿನಾಂಕ: 07.01.2025

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಕನ್ನಡ ಪುಸ್ತಕ ಪ್ರಾಧಿಕಾರದಿಂದ ವಿವಿಧ ಕನ್ನಡ ಕೃತಿಗಳ ಮುದ್ರಣಕ್ಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅಲ್ಪಾವಧಿ ಇ–ಟೆಂಡರ್ ಕರೆಯಲಾಗಿದ್ದು, ಅಂದಾಜು ಮೊತ್ತ **ರೂ.58,00,000–00ಗಳು, ದಿನಾಂಕ: 08.01.2025 ರಿಂದ 23.01.2025ರ** ಒಳಗೆ ಅಲ್ಪಾವಧಿ ಇ–ಟೆಂಡರ್ ಭರ್ತಿಮಾಡಬಹುದು. ಅಲ್ಪಾವಧಿ ಟೆಂಡರ್ ದಾಸ್ತಾವೇಜು ಹಾಗೂ ಇತರೆ ಮಾಹಿತಿಗೆ **https://kppp.karnataka.gov.in**ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಮೊದಲನೇ ಮಹಡಿ, ಜೆ.ಸಿ.ರಸ್ತೆ, ಬೆಂಗಳೂರು–560002. **ದೂರವಾಣಿ ಸಂಖ್ಯೆ: 080–22484516/22107704** ಹಾಗೂ **https://kpp.karnataka.gov.in-** ಇಲ್ಲಿ ಸಂಪರ್ಕಿಸುವುದು.

ಸಹಿ/–
ಆಡಳಿತಾಧಿಕಾರಿ,
ಕನ್ನಡ ಪುಸ್ತಕ ಪ್ರಾಧಿಕಾರ

ವಾಸಾಸಂಇ/ವಾ.ಪ್ರ/4189/ಎಸ್‌ಎಸ್‌ಸಿ/2024–25

ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆ

ಕಾರ್ಯನಿರ್ವಾಹಕ ಅಭಿಯಂತರರವರ ಕಾರ್ಯಾಲಯ, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ,ವಿಜಯಪುರ

ದೂರವಾಣಿ ಸಂ:08352–277816, ಫ್ಯಾಕ್ಸ್:08352–277817
ಇ–ಮೇಲ್:zpebjp9@yahoo.co.in

ಸಂಖ್ಯೆ:ಕಾಇಂ/ಪಂ.ರಾ.ಇಂ.ವಿ/ವಿಜ/ಇಪ್ರಾ/ಟೆಂಡರ್/2024–25/6819 ದಿನಾಂಕ:04.01.2025

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ ಇವರು ಶಿಕ್ಷಣ ಇಲಾಖೆಯ ಶಾಲೆಗಳಿಗೆ ಶೌಚಾಲಯ ನಿರ್ಮಾಣ ಲೆಕ್ಕ ಶಿರ್ಷಿಕೆ ಯೋಜನೆಯಡಿಯಲ್ಲಿ **ಸಾಮಾನ್ಯ ಗುತ್ತಿಗೆದಾರರ** 2 ಕಾಮಗಾರಿ ಇಂಡೆಂಟ ನಂ. RDPR/2024-25/BD/WORK_INDENT11956 & 11908 ರೂ. 10.00 ಲಕ್ಷದಿಂದ ರೂ. 14.00 ಲಕ್ಷಗಳವರೆಗೆ ಒಟ್ಟು 2 ಕಾಮಗಾರಿಗಳಿಗೆ ಕೆ.ಡಬ್ಲೂ–1 ಮತ್ತು 2 ರ ಪ್ರಕಾರ ಈ ಕಚೇರಿಯ ಟೆಂಡರ್ ಪ್ರಕಟಣೆ **ಸಂಖ್ಯೆ: 6819 ದಿನಾಂಕ: 04.01.2025** ರಂತೆ ಕಾಮಗಾರಿಗಳನ್ನು ಇ–ಟೆಂಡರ್‌ನ್ನು ಆಹ್ವಾನಿಸಿದ್ದು, ಕೆ.ಪಿ.ಪಿ ಪ್ರೋಟಲ್ ಮುಖಾಂತರ ಟೆಂಡರನ್ನು ಸಲ್ಲಿಸುವ ಕೊನೆಯ ದಿನಾಂಕ: 13.01.2025 ಸಾಯಂಕಾಲ 5.30 ಗಂಟೆಯವರೆಗೆ ಮಾತ್ರ ನಿಗದಿಪಡಿಸಿರುತ್ತದೆ.

ಟೆಂಡರಿನ ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್ www.kppp.karnataka.gov.in ನಲ್ಲಿ ಅಥವಾ ಕಛೇರಿ ಸಮಯದಲ್ಲಿ ಸದರಿ ವಿಭಾಗ ಕಾರ್ಯಾಲಯಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಬಹುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ.

ವಾಸಾಸಂಇ/ವಿಜಯಪುರ/588/ಕೆಎಸ್‌ಎಂಸಿಎ/2024–25

ದಿ ಜಯನಗರ ಕೋ–ಆಪರೇಟಿವ್ ಹೌಸಿಂಗ್ ಸೊಸೈಟಿ ಲಿ.,

ನಂ–902, 8ನೇ ಮುಖ್ಯ ರಸ್ತೆ, 2ನೇ ಬ್ಲಾಕ್, ಜಯನಗರ, ಬೆಂಗಳೂರು–11

ಪ್ರಕಟಣೆ

ಮೇಲ್ಕಂಡ ಸಂಘದ ಆಡಳಿತ ಮಂಡಳಿಗೆ ಮುಂದಿನ ಐದು ವರ್ಷಗಳ ಅವಧಿಗೆ ಚುನಾವಣೆಯನ್ನು ದಿನಾಂಕ: 12.01.2025 ರಂದು ನಿಗದಿಪಡಿಸಲಾಗಿತ್ತು. ಆದರೆ ದಿನಾಂಕ: 06.01.2025 ರಂದು ಅಂತಿಮವಾಗಿ ಕಣದಲ್ಲಿ ಉಳಿದವರು ಆಡಳಿತ ಮಂಡಳಿ ಸದಸ್ಯರ ಸಂಖ್ಯೆಗೆ ಸಮನಾದ್ದರಿಂದ, ಈ ಕೆಳಕಂಡ ಅಭ್ಯರ್ಥಿಗಳು ಆಡಳಿತ ಮಂಡಳಿಗೆ ಅವಿರೋಧವಾಗಿ ಆಯ್ಕೆಯಾಗಿರುವರೆಂದು ಚುನಾವಣಾಧಿಕಾರಿಗಳು ಘೋಷಿಸಿರುತ್ತಾರೆ. ಈ ವಿಷಯವನ್ನು ತಿಳಿಸಲು ಹರ್ಷಿಸುತ್ತೇನೆ ಹಾಗೂ ಅವಿರೋಧ ಆಯ್ಕೆಗೆ ಸಹಕರಿಸಿದಂತಹ ಎಲ್ಲರಿಗೂ ಸಂಘದ ಪರವಾಗಿ ಅಭಿನಂದನೆಗಳು ಮತ್ತು **ದಿನಾಂಕ: 12.01.2025 ರಂದು ಚುನಾವಣೆ** ಇರುವುದಿಲ್ಲ. ಮಾನ್ಯ ಸದಸ್ಯರು ಗಮನಿಸಬೇಕಾಗಿ ಕೋರುತ್ತೇನೆ.

ಕ್ರ.ಸಂ.	ಅಭ್ಯರ್ಥಿಯ ಹೆಸರು	ಮತಕ್ಷೇತ್ರ
01	ಶ್ರೀ. ಬಿ.ಆರ್. ವಾಸುದೇವ್(ವಾಸು)	ಸಾಮಾನ್ಯ
02	ಶ್ರೀ. ಕೆ.ಎಸ್. ಕೋದಂಡರಾಮ್	ಸಾಮಾನ್ಯ
03	ಶ್ರೀ. ಎಂ.ಪಿ. ಜಯರಾಮ್	ಸಾಮಾನ್ಯ
04	ಡಾ॥ ರಮೇಶ್. ಎನ್	ಸಾಮಾನ್ಯ
05	ಶ್ರೀ. ಕೆ. ವರದಪ್ಪ	ಸಾಮಾನ್ಯ
06	ಶ್ರೀ. ಕೆ.ಎನ್. ಚಂದ್ರಶೇಖರ್	ಸಾಮಾನ್ಯ
07	ಶ್ರೀ. ಕೆ.ಎಂ. ಕೇಶವಚಂದ್ರ	ಸಾಮಾನ್ಯ
08	ಶ್ರೀ. ಬಿ. ಬೋರಯ್ಯ	ಪರಿಶಿಷ್ಟ ಜಾತಿ
09	ಶ್ರೀ. ಪಿ. ಸುರೇಶ್	ಪರಿಶಿಷ್ಟ ಪಂಗಡ
10	ಶ್ರೀಮತಿ. ಎಂ.ಪಿ. ಗಾಯತ್ರಿದೇವಿ	ಮಹಿಳಾ ಮೀಸಲು ಸ್ಥಾನ
11	ಶ್ರೀಮತಿ. ಎಂ. ಸಾವಿತ್ರಿ	ಮಹಿಳಾ ಮೀಸಲು ಸ್ಥಾನ
12	ಶ್ರೀ. ಎಲ್. ಸುಬ್ರಮಣ್ಯ	ಹಿಂದುಳಿದ ವರ್ಗ ಪ್ರವರ್ಗ ಎ
13	ಶ್ರೀ. ವಿ. ವಿಶ್ವನಾಥ್	ಹಿಂದುಳಿದ ವರ್ಗ ಪ್ರವರ್ಗ ಬಿ

ತಮ್ಮ ವಿಶ್ವಾಸಿ,
ಸಹಿ/– ಎಂ, ಶಿವಣ್ಣ,
ಕಾರ್ಯದರ್ಶಿ

ಕರ್ನಾಟಕ ಸರ್ಕಾರ

Office of the Executive Engineer, Panchayat Raj Engineering Division, HAVERI-581 110

ಕಾರ್ಯನಿರ್ವಾಹಕ ಇಂಜಿನೀಯರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಹಾವೇರಿ – 581110

ಕ್ರ.ಸಂ./ಪಂ.ರಾ.ಇಂ./ವಿ.ಹಾ/ಪಿ.ಬಿ.–2/ಟೆಂಡರ್/2024–25/3334 ದಿನಾಂಕ: 04–01–2025

ಟೆಂಡರ ಪ್ರಕಟಣೆ ನಂ: 28/2024–25

(E-GOK ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಮಾತ್ರ)

ಜಿಲ್ಲಾ ಪಂಚಾಯತ್ ಕಛೇರಿ ಕಟ್ಟಡಗಳ ನಿರ್ಮಾಣ/ನಿರ್ವಹನೆ ಲೆಕ್ಕಶೀರ್ಷಿಕೆ ಯೋಜನೆಯಡಿ ರಟ್ಟಿಹಳ್ಳಿ & ಶಿಗ್ಗಾಂವ ಕಟ್ಟಡ ಕಾಮಗಾರಿಗಳಿಗೆ ಟೆಂಡರ ಕರೆಯಲಾಗಿದೆ.

1) ರಟ್ಟಿಹಳ್ಳಿ ತಾಲೂಕಿನ ಹಿರೇಮಾದಾಪುರ ಗ್ರಾಮದ ನಂ–1ನೇ ಅಂಗನವಾಡಿ ಕೇಂದ್ರ ನಿರ್ಮಾಣ ಕಾಮಗಾರಿ, (Indet 1155) 2) ಶಿಗ್ಗಾಂವ ತಾಲೂಕು ಧುಂಡಶಿ ಗ್ರಾಮದ ಯಲ್ಲಪ್ಪ ಮಾದರ ಮನೆಯಿಂದ ಶಿವು ಕೋರಿಶೆಟ್ಟರ ಮನೆಯವರೆಗೆ ಸಿ.ಸಿ ರಸ್ತೆ ನಿರ್ಮಾಣ 200 ಮೀ. (Indet 11906) 3) ಶಿಗ್ಗಾಂವ ತಾಲೂಕು ಶಿವಪೂರ ತಾಂಡಾದ ಶಾಲೆಯಿಂದ ಶಿವಪೂರ ಪ್ಲಾಟ್–ಕಿತ್ತೂರ ರಾಣಿಚೆನ್ನಮ್ಮ ಶಾಲೆ ರಸ್ತೆಗೆ ಕೂಡುವ ರಸ್ತೆ ಸಿ.ಸಿ ರಸ್ತೆ ನಿರ್ಮಾಣ 300 ಮೀ. (Indet 11904) 4) ಶಿಗ್ಗಾಂವ ತಾಲೂಕು ಯತ್ನಹಳ್ಳಿ ತಾಂಡಾದಿಂದ ತಡಸ–ಗೊಂದಿ ರಸ್ತೆಗೆ ಕೂಡು ರಸ್ತೆ ಮಧ್ಯ ಚಿಕ್ಕ ಸೇತುವೆ ನಿರ್ಮಾಣ ಮತ್ತು ರಸ್ತೆ ಅಭಿವೃದ್ಧಿ 01 ಸೇತುವೆ. (Indet 11924).

1) ಟೆಂಡರ್ ಫಾರಂಗಳನ್ನು ಕರ್ನಾಟಕ ಪಬ್ಲಿಕ್ ಪ್ರಾಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಪಡೆದುಕೊಳ್ಳಬಹುದಾದ **ದಿನಾಂಕ : 04–01–2025**
2) ಖಾಲಿ ಟೆಂಡರ್ ಫಾರಂಗಳಿಗಾಗಿ ಅರ್ಜಿ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್ ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 10–01–2025, 16:00:00** ಗಂಟೆಯವರೆಗೆ
3) ಕರ್ನಾಟಕ ಪಬ್ಲಿಕ್ ಪ್ರಾಕ್ಯೂರಮೆಂಟ್ ಪೋರ್ಟಲ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ (ಸಾಧ್ಯವಾದಲ್ಲಿ) : **13–01–2025, 17:00:00 ಗಂಟೆಗೆ**
4) ಕರ್ನಾಟಕ ಪಬ್ಲಿಕ್ ಪ್ರಾಕ್ಯೂರಮೆಂಟ್ ಪೋರ್ಟಲ್ ಆರ್ಥಿಕ ಬಿಡ್ ತೆರೆಯುವ ದಿನಾಂಕ (ಸಾಧ್ಯವಾದಲ್ಲಿ) : **15–01–2025, 11:00:00 ಗಂಟೆಗೆ**

ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು E-GOK ಇ–ಪ್ರಕ್ಯೂರಮೆಂಟ್ ಪ್ಲಾಟ್ ಫಾರಂನಲ್ಲಿ www.kppp.karnataka.gov.in ರಲ್ಲಿ ಪಡೆಯಬಹುದು ಹಾಗೂ ವಿಭಾಗ ಕಛೇರಿಯಲ್ಲಿ ಹೆಚ್ಚಿನ ಮಾಹಿತಿಗಳನ್ನು ಪಡೆಯತಕ್ಕದ್ದು.

ಸಹಿ/–
ಕಾರ್ಯನಿರ್ವಾಹಕ ಇಂಜಿನೀಯರ್
ಪಂ.ರಾ.ಇಂ.ವಿಭಾಗ, ಹಾವೇರಿ

dipr/hvr/dipo/453/2024-25

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಎಕ್ಸಿಕ್ಯೂಟಿವ್ ಇಂಜಿನಿಯರವರ ಕಛೇರಿ, ನಂ. 06, ಹೇಮಾವತಿ ಎಡದಂಡೆ ನಾಲಾ ವಿಭಾಗ. ಕಾವೇರಿ ನೀರಾವರಿ ನಿಗಮ ನಿಯಮಿತ, ಪಾಂಡವಪುರ, ಮಂಡ್ಯ ಜಿಲ್ಲೆ.

ಇ–ಟೆಂಡರ್ ಪ್ರಕಟಣೆ ಸಂ:06/2024–25/ದಿ:04.01.2025
(ಏಕ ಲಕೋಟೆ ಪದ್ಧತಿ)

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ (KW-4) ಹಾಗೂ ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ತಿದ್ದುಪಡಿ) ಅಧಿನಿಯಮ ನಿಬಂಧನೆಗೊಳಪಟ್ಟಂತೆ ಲೋಕೋಪಯೋಗಿ ಇಲಾಖೆ ಇಲ್ಲಿ ನೋಂದಾಯಿಸಿರುವ 1ನೇ ದರ್ಜೆ ಗುತ್ತಿಗೆದಾರರಿಂದ (ದ್ವಿ ಲಕೋಟೆ ಪದ್ಧತಿಯಲ್ಲಿ) 1 ಕಾಮಗಾರಿಗೆ ಐಟಂವಾರು (kppp ಪೋರ್ಟಲ್ ಮೂಲಕ ಮಾತ್ರ) ಟೆಂಡರ್‌ನ್ನು ಕರೆಯಲಾಗಿದೆ. ಅಂದಾಜು ಮೊತ್ತ, ಮುಂಗಡ ಠೇವಣಿ (ಇ.ಎಂ.ಡಿ) ಮತ್ತು ಟೆಂಡರ್ ಪ್ರೊಸೆಸಿಂಗ್ ಶುಲ್ಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಿರುವಂತೆ, ಕಾಮಗಾರಿಗಳಿಗೆ ಸಂಬಂಧಿಸಿದ ಹೆಚ್ಚಿನ ವಿವರಗಳು, ಸೂಚನೆಗಳು ಮತ್ತು ನಿಬಂಧನೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ http://kppp.kamataka.gov.in ಪೋರ್ಟಲ್‌ನಲ್ಲಿ ದಿ:06.01.2025 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ ಗುತ್ತಿಗೆದಾರರು ಹೆಚ್ಚಿನ ಮಾಹಿತಿಯನ್ನು ಸದರಿ ಕಛೇರಿಯಿಂದ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ನಂ.06, ಹೇ.ಎ.ದ.ನಾಲಾ ವಿಭಾಗ, ಕಾ.ನೀ.ನಿ.ನಿ. ಪಾಂಡವಪುರ

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/535/2024–25

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಮುಇಂವಿ(ಟಿಮತ್ತುಪಿ)/ಅಇ(ವಿ)-1/ಕಾನಿಇ-3/ಸಕಾನಿಇಂ-(ಪಿ 3)/2024-25/7403-11 ದಿನಾಂಕ: 07.01.2025

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ (ಮರು ಟೆಂಡರ್)

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಈ ಕೆಳಕಂಡ ವಿಚಾರಣಾ ಸಂಖ್ಯೆಯ ಮೂಲಕ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ:

ವಿಚಾರಣಾ ಸಂಖ್ಯೆ ಮತ್ತು ವಿವರ
ಟೆಂಡರ್ ವಿಚಾರಣಾ ಸಂಖ್ಯೆ: **KPTCL/2024-25/IND0152**
ಕವಿಪ್ರನಿನಿ ತಾಂತ್ರಿಕ ನಿರ್ದಿಷ್ಟತೆಗೆ ಅನುಗುಣವಾಗಿ **13 ಸಂಖ್ಯೆಗಳ 400ಕೆವಿ ಕ್ಲಾಸ್ ಕರೆಂಟ್ ಟ್ರಾನ್ಸ್‌ಫಾರ್ಮರ್‌ಗಳ ಮತ್ತು 232 ಸಂಖ್ಯೆಗಳ 220ಕೆವಿ ಕ್ಲಾಸ್ ಕರೆಂಟ್ ಟ್ರಾನ್ಸ್‌ಫಾರ್ಮರ್‌ಗಳ** ವಿನ್ಯಾಸ, ತಯಾರಿಕೆ, ಪರೀಕ್ಷಿಸುವುದು, ಮತ್ತು ಸರಬರಾಜು F.O.R.D ಉಗ್ರಾಣ/ಪ್ರದೇಶದ ಆಧಾರದಲ್ಲಿ ಇನ್ಶೂರೆನ್ಸ್, ಸಾಗಾಣಿಕೆ ಮತ್ತು ಇಳಿಸುವಿಕೆಯನ್ನು ಒಳಗೊಂಡಂತೆ.

ಬಿಡ್‌ಗಳನ್ನು ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ **https://kptcl.karnataka.gov.in** ನ ಹೈಪರ್‌ಲಿಂಕ್ "E Procurement KPTCL" ಅಥವಾ **https://kppp.karnataka.gov.in** ನಲ್ಲಿ ಲಾಗಿನ್ ಆಗಿ ದಿನಾಂಕ **13.01.2025 ರಂದು ಅಪರಾಹ್ನ 15.00 ಗಂಟೆ** ಅಥವಾ ನಂತರದಿಂದ ಪಡೆಯಬಹುದು. ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ **28.01.2025 ರಂದು ಅಪರಾಹ್ನ 15.00 ಗಂಟೆ. ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದ್ದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಿಳಿಸಲಾಗುವುದು.** ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳ ಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಬಿಡ್ಡುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು/ ಸೇರ್ಪಡೆಗಳನ್ನು ಗಮನಿಸತಕ್ಕದ್ದು.

ಸಹಿ/– **ಮುಖ್ಯ ಇಂಜಿನಿಯರ್ (ವಿದ್ಯುತ್), ಟೆಂಡರಿಂಗ್ ಮತ್ತು ಪ್ರೊಕ್ಯೂರ್‌ಮೆಂಟ್, ಕವಿಪ್ರನಿನಿ, 3ನೇ ಮಹಡಿ, 'ಬಿ' ಬ್ಲಾಕ್, ಕಾವೇರಿ ಭವನ, ಬೆಂಗಳೂರು-560009. ಫೋನ್: 080-22274744.**

ನೆಫ್ರೋ–ಯುರಾಲಜಿ ಸಂಸ್ಥೆ

(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ ನೋಂ. ಸಂ.1052/03-04)
ವಿಕ್ಟೋರಿಯಾ ಆಸ್ಪತ್ರೆ ಆವರಣ, ಬೆಂಗಳೂರು–560 002.
ಇ–ಮೇಲ್: nephrourology.institute@gmail.com ವೆಬ್‌ಸೈಟ್: www.nephrourology.in
ದೂರವಾಣಿ: 080-26700527 ಫ್ಯಾಕ್ಸ್: 080-26706777

ಸಂ: ನೆಯುಸಂ/ಟೆಂಡರ್/ಐಎಂಜೆ/09/2024–25 ದಿನಾಂಕ: 07.01.2025

ಟೆಂಡರ್ ಪ್ರಕಟಣೆ

ನೆಫ್ರೋ–ಯುರಾಲಜಿ ಸಂಸ್ಥೆ, ವಿಕ್ಟೋರಿಯಾ ಆಸ್ಪತ್ರೆ ಆವರಣ, ಬೆಂಗಳೂರು–560002, ಇಲ್ಲಿಗೆ ಈ ಕೆಳಗೆ ನಮೂದಿಸಿರುವ ವಿಷಯಗಳಿಗೆ ಅರ್ಹ ಟೆಂಡರ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ.

1. Procurement of Medical Journals for the year 2025.
2. Procurement of Digital Radiography System.
3. Procurement of Nephrology Department Equipments.
4. Procurement of Equipments for Department of Anesthesiology (CALL-II).
   a. Video Laryngoscope & Flexible Intubation Video Endoscope & Brochoscope -01 No.
   b. Anaesthesia Workstation with Multiparameter Monitor - 01 No.
5. HLA Typing Cross Matching for Renal Patients (CALL-II).

Last Date For Online Submission of Tender is 22.01.2025 @ 5.30 P.M

1. Procurement of Drugs, Disposables, Sutures and Misc., Items RC-II.
2. Procurement of Post Renal Transplant Drugs- (CALL-II).
3. Providing Group 'C' Services.
4. Providing Security & House Keeping Services.

Last Date For Online Submission of Tender is 05.02.2025 @ 5.30 P.M

ಟೆಂಡರ್‌ಗೆ ಸಂಬಂಧಪಟ್ಟಂತೆ ಹೆಚ್ಚಿನ ಮಾಹಿತಿಯನ್ನು ಕರ್ನಾಟಕ ಸರ್ಕಾರದ ಅಂತರ್ಜಾಲ ತಾಣ **https://kppp.karnataka.gov.in** ದಲ್ಲಿ ಪಡೆದುಕೊಳ್ಳಬಹುದು.

ಸೂಚನೆ:– ಈ ಟೆಂಡರ್‌ಗೆ ಸಂಬಂಧಪಟ್ಟಂತೆ, ಮುಂದಿನ ಪ್ರಕ್ರಿಯೆಗಳ ಬಗ್ಗೆ **(further information and announcements)** ತಿಳಿದುಕೊಳ್ಳಲು ನಮ್ಮ ಸಂಸ್ಥೆಯ ಅಂತರ್ಜಾಲ **https://nephrourology.karnataka.gov.in** ದಲ್ಲಿ ವೀಕ್ಷಿಸಬಹುದು.

ಸಹಿ/- ನಿರ್ದೇಶಕರು, ನೆಫ್ರೋ–ಯುರಾಲಜಿ ಸಂಸ್ಥೆ, ಬೆಂಗಳೂರು.

KARNATAKA NEERAVARI NIGAM LIMITED

(Government of Karnataka Enterprises)

ಕಾರ್ಯಾಲಯ ಕಾರ್ಯನಿರ್ವಾಹಕ ಅಭಿಯಂತರರು ಕನೀನಿನಿ, ಘಟಕಾನಿ ವಿಭಾಗ ನಂ. 2, ಹಿಡಕಲ್‌ಡ್ಯಾಂ

Office Tel. No. 08333-2200119 / Fax No. 08333-263405 /
e-mail: eegrbc2@gmail/yahoo.com Postal Index Number (PIN): 591107

ಕ್ರ.ಸಂ:ಕಾಇಂ/ಕನೀನಿನಿ/ಘಬದಂಕಾನಿ ನಂ.2/ಎಸ್.ಕೆ/ದರವಿಚಾರಣೆ/2024–25/2308 ದಿನಾಂಕ:06/01/2025

: ದರ ವಿಚಾರಣೆ ಅಧಿಸೂಚನೆ:

ಕೆಳಗೆ ಸಹಿ ಮಾಡಿದ ಕಾರ್ಯಪಾಲಕ ಅಭಿಯಂತರರ ಕಛೇರಿ, ಕನೀನಿನಿ ಘಬದಂಕಾನಿ ವಿಭಾಗ ನಂ. 2 ಹಿಡಕಲ್–ಡ್ಯಾಮ – 591107 ಇವರು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ನಾಲ್ಕನೇ ಮಹಡಿ, ಕಾಫಿ ಬೋರ್ಡಕಟ್ಟಡ, ಡಾ. ಬಿ. ಆರ್. ಅಂಬೇಡ್ಕರ ವೀಧಿ ಬೆಂಗಳೂರು–560001, ಇವರ ಪರವಾಗಿ ಈ ಕೆಳಕಂಡ ಕಾಮಗಾರಿಯ ಅಂದಾಜು ಪತ್ರಿಕೆಗೆ ದರಗಳನ್ನು ಅಳವಡಿಸಿ ಕೊಳ್ಳವ ಸಲುವಾಗಿ ಮೂಲ ದರ ಹಾಗೂ ಜಿ.ಎಸ್.ಟಿ ಪ್ರತ್ಯೇಕವಾಗಿ ದರಗಳನ್ನು ನಮೂದಿಸಿದ ಮೊಹರಬಂದ ಮಾಡಿದ ಲಕೋಟೆಯಲ್ಲಿ ಸ್ಪರ್ಧಾತ್ಮಕ ದರಗಳನ್ನು ಆಹ್ವಾನಿಸಿ ಈ ದರ ವಿಚಾರಣೆ ಅಧಿಸೂಚನೆಯನ್ನು ಹೊರಡಿಸಲಾಗಿದೆ.

Name of Work: Consultancy services and conducting suitable tests required for Rehabilitation of Markandey Dam at Hukkeri taluk, Disk: Belgaum.

ಆಸಕ್ತಿಯುಳ್ಳ ಅರ್ಹತೆ ಹೊಂದಿದ ನೊಂದಾಯಿತ ಏಜೆನ್ಸಿ/ಅನುಭವವುಳ್ಳ ಗುತ್ತಿಗೆದಾರರು ಪ್ರತ್ಯೇಕವಾಗಿ ದಿನಾಂಕ:13–01–2025ರ ಸಂಜೆ 4–00 ಗಂಟೆಯೊಳಗಾಗಿ ಅಂಚೆ ಮೂಲಕವಾಗಲಿ ಅಥವಾ ಖುದ್ದಾಗಿಯಾಗಲಿ ಮೇಲಿನ ವಿಳಾಸದ ಕಛೇರಿಗೆ ತಲುಪುವಂತೆ ಕಳುಹಿಸಿಕೊಡಲು ಈ ಮೂಲಕ ಕೋರಲಾಗಿದೆ. ದರ ಕೋರಿರುವ Item ಗಳ ವಿವರಗಳನ್ನೊಂಡ ಪಟ್ಟಿಯ ನಮೂನೆಯು, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕನೀನಿನಿ, ಜಿಆರ್‌ಬಿಸಿಸಿ ಉಪ ವಿಭಾಗ ಸಂ.1 ಹಿಡಕಲ್ ಡ್ಯಾಂ ಇವರ ಕಛೇರಿಯಲ್ಲಿ ಲಭ್ಯವಿರುವುದು. ಹೆಚ್ಚಿನ ಮಾಹಿತಿಯನ್ನು ಕೆಳಗೆ ಸಹಿ ಮಾಡಿದವರನ್ನು ಮತ್ತು ಮೇಲೆ ತಿಳಿಸಲಾದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರವರನ್ನು ಕಛೇರಿ ವೇಳೆಯಲ್ಲಿ ಖುದ್ದಾಗಿಯಾಗಲಿ ಅಥವಾ ದೂರವಾಣಿ ಸಂ: 08333–2200119 ಮುಖಾಂತರವಾಗಲಿ ಸಂಪರ್ಕಿಸಿ ಪಡೆಯಬಹುದಾಗಿದೆ ಹಾಗೂ ದರಗಳನ್ನು ಮೇಲೆ ತಿಳಿಸಲಾದ ಈ ಕಛೇರಿಯ E-mail ಮುಖಾಂತರ ಸಹ ನಿಗದಿತ ದಿನಾಂಕದೊಳಗೆ ಸಲ್ಲಿಸಬಹುದಾಗಿದೆ.

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು
ಕನೀನಿನಿ, ಘಬದಂಕಾನಿ ವಿಭಾಗ ನಂ.2 ಹಿಡಕಲ್–ಡ್ಯಾಮ

DIPR/BGM/RO-NO-1421/KSMCA/2024-25

ಜಿಲ್ಲಾ ಪಂಚಾಯತ ಬಾಗಲಕೋಟೆ

ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಬಾಗಲಕೋಟೆ

ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ 126, ನವನಗರ, ಬಾಗಲಕೋಟೆ.
ದೂರವಾಣಿ : 08354–235042, ಇ–ಮೇಲ್: bgkeezpe@yahoo.com

ಸಂಖ್ಯೆ : ಕಾ.ನಿ.ಇಂ./ಪಂ.ರಾ.ಇಂ.ವಿ./ಬಿ.ಜಿ.ಕೆ./ಪಿಬಿ–1/ಟೆಂಡರ್/2024–25/4055
ದಿನಾಂಕ : 07–01–2025

ಅಲ್ಪಾವಧಿ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
(ಏಕ - ಲಕೋಟೆ) ಕೆ.ಡಬ್ಲ್ಯೂ. 1 & 2 ಬಿಡ್ ಡಾಕ್ಯೂಮೆಂಟ್

ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ ವಿವಿಧ ಲೆಕ್ಕ ಶೀರ್ಷಿಕೆಯಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿನ ಈ ಕೆಳಕಂಡ ಕಾಮಗಾರಿಗಳಿಗೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ. – 1 & 2 ರ ನಿಬಂಧನೆಗೊಳಪಟ್ಟಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999 – 2000 ರ ಪ್ರಕಾರ ಆ್ಯಕ್ಟ್ 2000 ರ ನಿಯಮದಂತೆ ಏಕ–ಲಕೋಟೆ ಪದ್ದತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟರ್ನಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

01) ಸನ್ 2023–24 ನೇ ಸಾಲಿನ ಕರ್ನಾಟಕ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ ಅಡಿ (ಶ್ರೀ. ವಿಜಯಾನಂದ ಎಸ್. ಕಾಶಪ್ಪನವರ.) ಅನುದಾನದಡಿ 02) ಸನ್ 2022–23 ನೇ ಸಾಲಿನಲ್ಲಿ ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಡಿ ಕೇಂದ್ರ ಸರ್ಕಾರದ ವಾರ್ಷಿಕ ಕ್ರಿಯಾಯೋಜನೆಯಡಿ ಅನುಮೋದಿತ ಮೇಜರ್ ದುರಸ್ಥಿ ಕಾಮಗಾರಿಗಳ ಅನುದಾನದಡಿ 03) ಸನ್ 2022–23 ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 88(ಊ) ರಂತೆ ಮಹತ್ವಾಕಾಂಕ್ಷೀಯ ತಾಲೂಕೂಗಳಲ್ಲಿ (ಐಸಿಡಿಎಸ್) ಹಾಗೂ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಒಗ್ಗೂಡಿಸುವಿಕೆಯ ಅಂಗನವಾಡಿ ಕಟ್ಟಡ ಅಭಿವೃದ್ಧಿ ಯೋಜನೆಯ ಅನುದಾನ ಅಡಿಯಲ್ಲಿ 04) 2022–23 ನೇ ಸಾಲಿನ ವಿವೇಕಶಾಲಾ ಯೋಜನೆಅಡಿ ಆಯ್ಕೆಯಾದ ಭೋಧನಾ ಕೊಠಡಿಗಳ ನಿರ್ಮಾಣದ ಶಿಕ್ಷಣ ಇಲಾಖೆಗೆ ಮಂಜೂರಾದ ರೂ. 200.70 ಲಕ್ಷ ಅನುದಾನದಡಿ ಆಯ್ಕೆಯಾದ ಶಾಲೆಗಳಲ್ಲಿನ ಭೋಧನಾ ಕೊಠಡಿಗಳ ನಿರ್ಮಾಣದ ಯೋಜನೆ ಅಡಿಯಲ್ಲಿ 05) 2022–23 ನೇ ಸಾಲಿನ ಮುಂದುವರಿದ ಕಾರ್ಯಕ್ರಮಗಳಡಿಯಲ್ಲಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಶೌಚಾಲಯ ನಿರ್ಮಾಣಕ್ಕಾಗಿ ಯೋಜನೆ ಅನುದಾನದಡಿ ಆಯ್ಕೆಯಾದ ಶಾಲೆಗಳಲ್ಲಿನ ಶೌಚಾಲಯ ನಿರ್ಮಾಣದ ಅಡಿಯಲ್ಲಿ ಮಂಜೂರಾಗಿರುತ್ತವೆ.

ಬಾಗಲಕೋಟೆ ಜಿಲ್ಲೆ ಬಾಗಲಕೋಟೆ, ಹುನಗುಂದ, ಬೀಳಗಿ, ಇಲಕಲ್ಲ ತಾಲೂಕು ವ್ಯಾಪ್ತಿಯಲ್ಲಿ ಇತರೆ ವರ್ಗಕ್ಕೆ ಮೀಸಲಾದ ಕಾಮಗಾರಿಗಳ ಇಂಡೆಂಟ್ ನಂ. : **RDPR/2024-25/BD/WORK_INDENT11280, RDPR/2024-25/BD/WORK_INDENT 11175, RDPR/2024-25/BD/WORK_INDENT11699, RDPR/2024-25/BD/WORK_INDENT11516, RDPR/2024-25/BD/WORK_INDENT 11517, RDPR/2024-25/BD/WORK_INDENT11522, RDPR/2024-25/BD/WORK_INDENT11914.**

ಪರಿಶಿಷ್ಟ ಜಾತಿ ವರ್ಗಕ್ಕೆ ಮೀಸಲಾದ ಕಾಮಗಾರಿಗಳ ಇಂಡೆಂಟ್ ನಂ. : **RDPR/2024-25/BD/WORK_INDENT11169, RDPR/2024-25/BD/WORK_INDENT11174, RDPR/2024-25/BD/WORK_INDENT10397, RDPR/2024-25/BD/WORK_INDENT11518, RDPR/2024-25/BD/WORK_INDENT 11389, RDPR/2024-25/BD/WORK_INDENT11520, RDPR/2024-25/BD/WORK_INDENT11911.**

ಪರಿಶಿಷ್ಟ ಪಂಗಡ ವರ್ಗಕ್ಕೆ ಮೀಸಲಾದ ಕಾಮಗಾರಿಗಳ ಇಂಡೆಂಟ್ ನಂ. : **RDPR/2024-25/BD/WORK_INDENT11176, RDPR/2024-25/BD/WORK_INDENT7306/CALL-2** ಇದ್ದು, ಟೆಂಡರ್ ಕಾಮಗಾರಿ ವಿವರ, ಗುತ್ತಿಗೆದಾರರ ಅರ್ಹತೆ ವಿವರ, ಟೆಂಡರ್‌ಗಿಟ್ಟ ಮೊತ್ತ ರೂ. 5.20 ರಿಂದ 46.80 ಲಕ್ಷಗಳ ಮಿತಿಗೊಳಪಟ್ಟು) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತ ಎಲ್ಲ ವಿವರಗಳು ಇ–ಪೋರ್ಟಲ್‌ನಲ್ಲಿ ಇದ್ದಂತೆ.

1) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್ – ಬಿಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ : 20–01–2025 ರ ಸಂಜೆ 5.30 ಗಂಟೆವರೆಗೆ. 2) ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ & ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ : 22–01–2025 ರ ಬೆಳಿಗ್ಗೆ 11.00 ಗಂಟೆಯ ನಂತರ.

ಸೂಚನೆ : ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಛೇರಿಗೆ ಅಥವಾ **ವೆಬ್‌ಸೈಟ್ : https://kppp.karnataka.gov.in** ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಪಂಚಾಯತ ರಾಜ್ (ಇಂ) ವಿಭಾಗ,
ಬಾಗಲಕೋಟೆ.

ಡಿಐಪಿಆರ್/ಬಾಗಲಕೋಟ/417/ಮಣಿಪಾಲ್/2024–25

❦ ಸುಭಾಷಿತ ❦

ಅಹಂ ಎಂಬುದು ಆಲದ ಮರದ ಬೇರಿದ್ದಂತೆ. ಅದನ್ನು ತೆಗೆದುಹಾಕಿದ್ದೇನೆ ಎಂದುಕೊಂಡಿರುತ್ತೀರಿ. ಆದರೆ ಒಂದು ಮುಂಜಾನೆ ದಿಢೀರನೆ ಅದು ಮತ್ತೆ ಮೊಳೆತಿರುವುದನ್ನು ಕಾಣುತ್ತೀರಿ. -ರಾಮಕೃಷ್ಣ ಪರಮಹಂಸ

ಎಚ್‌ಎಂಪಿವಿ: ಕಳವಳಕ್ಕೆ ಕಾರಣವಿಲ್ಲ ಸೋಂಕು ಕುರಿತು ಎಚ್ಚರ ಇರಲಿ

ಭಾರತದಲ್ಲಿ ಹ್ಯೂಮನ್ ಮೆಟಾನ್ಯುಮೋ ವೈರಸ್ (ಎಚ್‌ಎಂಪಿವಿ) ಸೋಂಕಿನ ಮೊದಲ ಪ್ರಕರಣಗಳು ಬೆಂಗಳೂರು ಮತ್ತು ಅಹಮದಾಬಾದ್‌ನಲ್ಲಿ ಪತ್ತೆಯಾಗಿವೆ. ಇದು, ಕೋವಿಡ್ ಸಾಂಕ್ರಾಮಿಕ ಕಾಲದ ಕಹಿಘಟನೆಗಳು ಮತ್ತೆ ನೆನಪಾಗುವಂತೆ ಮಾಡಿರಬಹುದು. ಎಚ್‌ಎಂಪಿವಿ ಮತ್ತು ಅದೇ ರೀತಿಯ ಇತರ ವೈರಾಣುಗಳಿಂದ ಚೀನಾದಲ್ಲಿ ದೊಡ್ಡ ಸಂಖ್ಯೆಯ ಜನರಿಗೆ ಉಸಿರಾಟಕ್ಕೆ ಸಂಬಂಧಿಸಿದ ತೊಂದರೆಗಳು ಕಾಣಿಸಿಕೊಂಡಿವೆ. ಚೀನಾದಲ್ಲಿ ಜನರು ಮಾಸ್ಕ್ ಧರಿಸಿ ಆಸ್ಪತ್ರೆಗಳಲ್ಲಿ ಇರುವ ಚಿತ್ರಗಳು ಮತ್ತು ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಕೋವಿಡ್ ಸಾಂಕ್ರಾಮಿಕ ಸೃಷ್ಟಿಸಿದ ಅನಾಹುತಗಳಿಂದಾಗಿ ಸಾಂಕ್ರಾಮಿಕದಂತೆ ಗೋಚರಿಸುವ ಯಾವುದರ ಬಗ್ಗೆಯೂ ಜನ ಆತಂಕಗೊಳ್ಳುವುದು ಸಹಜವೇ ಆಗಿದೆ. ಎಚ್‌ಎಂಪಿವಿ ಸೋಂಕಿನ ಕುರಿತು ಭಾರತವೂ ಸೇರಿ ಜಗತ್ತಿನ ವಿವಿಧ ಭಾಗಗಳಲ್ಲಿ ಚರ್ಚೆ ಆರಂಭವಾಗಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಈ ವೈರಸ್ ಕುರಿತು ಜನ ಆತಂಕಗೊಳ್ಳುವ ಅಗತ್ಯವೇ ಇಲ್ಲ ಎಂದು ತಜ್ಞರು ಹೇಳಿದ್ದಾರೆ. ಇದು ಹೊಸ ವೈರಸ್ ಅಲ್ಲ. ಬಹಳ ಹಿಂದಿನಿಂದಲೂ ನಮ್ಮ ದೇಶದಲ್ಲಿ ಈ ವೈರಸ್ ಇತ್ತು ಮತ್ತು ಮೊದಲ ಬಾರಿಗೆ 2001ರಲ್ಲಿ ಇದನ್ನು ಪತ್ತೆ ಮಾಡಲಾಗಿತ್ತು. ಈ ವೈರಾಣುವಿನ ಗುಣ ಲಕ್ಷಣಗಳು ಕೂಡ ತಿಳಿದಿವೆ. ಈ ಸೋಂಕು ಹೆಚ್ಚಾಗಿ ಐದು ವರ್ಷದೊಳಗಿನ ಮಕ್ಕಳಲ್ಲಿ ಕಾಣಿಸಿಕೊಳ್ಳುತ್ತದೆ. ರೋಗನಿರೋಧಕ ಶಕ್ತಿ ಕಡಿಮೆ ಇರುವವರಲ್ಲಿ ಮತ್ತು ವೃದ್ಧರಲ್ಲಿ ಕೂಡ ಕಾಣಿಸಿಕೊಳ್ಳಬಹುದು.



ಕೆಲವು ಒಳ್ಳೆಯ ಅಭ್ಯಾಸಗಳನ್ನು ರೂಢಿಸಿಕೊಂಡರೆ ಯಾವುದೇ ವೈರಾಣುವಿನ ಸೋಂಕಿನಿಂದ ರಕ್ಷಣೆ ಪಡೆಯಲು ಸಾಧ್ಯ

ಉಸಿರಾಟಕ್ಕೆ ಸಂಬಂಧಿಸಿದ ಅನಾರೋಗ್ಯದ ಮೇಲಿನ ನಿಗಾದ ಭಾಗವಾಗಿ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್) ನಿಯತವಾಗಿ ಪರಿಶೀಲನೆ ನಡೆಸುತ್ತಿದೆ. ಈ ಪರಿಶೀಲನೆಯ ಸಂದರ್ಭದಲ್ಲಿ ಕರ್ನಾಟಕ ಮತ್ತು ಗುಜರಾತ್‌ನಲ್ಲಿ ಎಚ್‌ಎಂಪಿವಿ ಸೋಂಕಿನ ಮೂರು ಪ್ರಕರಣಗಳು ಪತ್ತೆಯಾಗಿವೆ. ದೇಶದಲ್ಲಿ ಉಸಿರಾಟಕ್ಕೆ ಸಂಬಂಧಿಸಿದ ಅನಾರೋಗ್ಯದಲ್ಲಿ ಭಾರಿ ಏರಿಕೆ ಕಂಡುಬಂದಿಲ್ಲ ಮತ್ತು ಅಂತಹ ಸನ್ನಿವೇಶ ಎದುರಾದರೂ ಅದನ್ನು ನಿಭಾಯಿಸಲು ಸಜ್ಜಾಗಿದ್ದೇವೆ ಎಂದು ಐಸಿಎಂಆರ್ ಹೇಳಿದೆ. ಉಸಿರಾಟದ ತೊಂದರೆಗಳು ಮತ್ತು ಋತುಮಾನಕ್ಕೆ ಅನುಸಾರವಾಗಿ ಕಂಡುಬರುವ ವೈರಾಣು ಸೋಂಕು ಸಮಸ್ಯೆಗಳ ಮೇಲೆ ನಿಯತವಾಗಿ ಕಣ್ಗಾವಲು ಇರಿಸಲಾಗುತ್ತಿದೆ ಎಂದು ಆರೋಗ್ಯ ಸಚಿವಾಲಯದ ಅಧಿಕಾರಿಗಳು ಹೇಳಿದ್ದಾರೆ. ಎಚ್‌ಎಂಪಿವಿ ಸೋಂಕಿಗೆ ಸಂಬಂಧಿಸಿ ಅಂತರರಾಷ್ಟ್ರೀಯ ಸಂಸ್ಥೆಗಳ ಜೊತೆಗೆ ಸಂಪರ್ಕದಲ್ಲಿ ಇದ್ದೇವೆ ಎಂದೂ ತಿಳಿಸಿದ್ದಾರೆ. ದೇಶದಲ್ಲಿ ಈಗ ಪತ್ತೆಯಾಗಿರುವುದು ಎಚ್‌ಎಂಪಿವಿ ಸೋಂಕಿನ ಮೊದಲ ಪ್ರಕರಣಗಳು ಎಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ, ಈ ವೈರಾಣು ದೇಶದಲ್ಲಿ ಈ ಮೊದಲೇ ಪತ್ತೆಯಾಗಿತ್ತು ಎಂದೂ ತಜ್ಞರು ಹೇಳಿದ್ದಾರೆ. ಈಗ ಸೋಂಕು ಪತ್ತೆಯಾಗಿರುವ ಮಕ್ಕಳು ಮತ್ತು ಅವರ ಕುಟುಂಬದವರು ವಿದೇಶ ಪ್ರಯಾಣ ಮಾಡಿರುವ ಹಿನ್ನೆಲೆಯನ್ನೂ ಹೊಂದಿಲ್ಲ. ‘ಇದೊಂದು ಗಂಭೀರ ಆರೋಗ್ಯ ಸಮಸ್ಯೆಯೇ ಮತ್ತು ಪಿಸಿಆರ್ ಪರೀಕ್ಷೆ ಅಗತ್ಯವಿದೆಯೇ ಎಂಬುದನ್ನು ಇನ್ನೂ ನಿರ್ಧಾರ ಮಾಡಿಲ್ಲ’ ಎಂದು ಕರ್ನಾಟಕದ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ.

ಸಾಮಾನ್ಯ ನೆಗಡಿಗೆ ಕಾರಣವಾಗುವ ಇತರ ಯಾವುದೇ ವೈರಾಣುವಿನ ರೀತಿಯಲ್ಲಿಯೇ ಎಚ್‌ಎಂಪಿವಿ ಕೂಡ ಇದೆ ಎಂದು ತಜ್ಞರು ವಿವರಿಸಿದ್ದಾರೆ. ಇದು ಸಣ್ಣ ಮಕ್ಕಳು ಹಾಗೂ ವೃದ್ಧರಲ್ಲಿ ಜ್ವರ ಮತ್ತು ನೆಗಡಿಯಂತಹ ಲಕ್ಷಣಗಳಿಗೆ ಕಾರಣವಾಗಬಹುದು. ಚಳಿಗಾಲದಲ್ಲಿ ಇಂತಹ ಸೋಂಕುಗಳು ಸಾಮಾನ್ಯ. ವಿಶ್ವ ಆರೋಗ್ಯ ಸಂಸ್ಥೆಯು ಈಗ ಪತ್ತೆಯಾಗಿರುವ ಸೋಂಕಿಗೆ ಸಂಬಂಧಿಸಿ ಹೇಳಿಕೆಯನ್ನು ಬಿಡುಗಡೆ ಮಾಡಿಲ್ಲ ಅಥವಾ ಯಾವುದೇ ಸಲಹೆಯನ್ನೂ ಕೊಟ್ಟಿಲ್ಲ. ತನ್ನ ಪ್ರಜೆಗಳು ಮತ್ತು ದೇಶಕ್ಕೆ ಬರುವ ವಿದೇಶಿಯರ ಆರೋಗ್ಯ ರಕ್ಷಣೆಗೆ ಬದ್ಧ ಎಂಬ ಭರವಸೆಯನ್ನು ಚೀನಾ ದೇಶ ಕೊಟ್ಟಿದೆ. ಆದರೆ, ಈ ವಿಚಾರದಲ್ಲಿ ಚೀನಾದ ಹೇಳಿಕೆಗಳ ಬಗ್ಗೆ ಜಗತ್ತಿನ ಇತರ ದೇಶಗಳಿಗೆ ಅಪನಂಬಿಕೆ ಇದೆ. ಎಚ್ಚರ ತಪ್ಪಬಾರದು ಎಂಬ ಪಾಠವನ್ನು ಕೋವಿಡ್ ಸಾಂಕ್ರಾಮಿಕವು ಇಡೀ ಜಗತ್ತಿಗೆ ಕಲಿಸಿಕೊಟ್ಟಿದೆ. ಭಾರತದಲ್ಲಿ ಪರೀಕ್ಷಾ ಸೌಲಭ್ಯಗಳನ್ನು ಹೆಚ್ಚಿಸಬೇಕಿದೆ. ಮಾಸ್ಕ್ ಧರಿಸುವುದು ಮತ್ತು ಆಗಾಗ ಕೈತೊಳೆದುಕೊಳ್ಳುವುದು ಒಳ್ಳೆಯದು. ಕೋವಿಡ್ ಇರಲಿ ಇಲ್ಲದಿರಲಿ, ಎಚ್‌ಎಂಪಿವಿ ಅಥವಾ ಇನ್ನಾವುದೇ ವೈರಾಣು ಇರಲಿ ಇಂತಹ ಅಭ್ಯಾಸಗಳು ಇದ್ದರೆ ಸೋಂಕಿನಿಂದ ರಕ್ಷಣೆ ಪಡೆಯುವುದು ಸಾಧ್ಯ.

ದಿನದ ಟ್ವೀಟ್

ಕಸದ ಮಾಫಿಯಾ ಕೊನೆಗಾಣಿಸಿ

ಆಂಧ್ರಪ್ರದೇಶವು ‘ಶಕ್ತಿ’ ಯೋಜನೆ ಅನುಷ್ಠಾನದಿಂದ ಕಲಿಯಲು ಬಯಸುತ್ತದೆಯಾದರೆ, ತ್ಯಾಜ್ಯ ಸಂಗ್ರಹ ಮತ್ತು ಸಂಸ್ಕರಣೆಗೆ ವಿಶೇಷ ಗಮನ ನೀಡುವಂತಹ ಮಾದರಿಯಲ್ಲಿ ಹೈದರಾಬಾದನ್ನು ಬೆಂಗಳೂರು ಅನುಸರಿಸಬಾರದೇಕೆ?... ಬೆಂಗಳೂರಿನ ಕಸದ ಮಾಫಿಯಾದ ಬಿಗಿ ಹಿಡಿತವನ್ನು ಕಿತ್ತೊಗೆಯಬೇಕಾಗಿದೆ. ಕಸದ ಮಾಫಿಯಾ ಕೊನೆಗಾಣಿಸಲು ಕ್ರಮ ಕೈಗೊಳ್ಳದಿದ್ದರೆ ಎಷ್ಟು ಹಣ ಹೂಡಿಕೆ ಮಾಡಿದರೂ ಪ್ರಯೋಜನವಿಲ್ಲ.

ಕವಿತಾ ರೆಡ್ಡಿ

ಕಿಡಿನುಡಿ

ಕೊರೊನಾಗಿಂತಲೂ ಭಯಾನಕ, ಈ ವೈರಸ್‌ನ ವದಂತಿಗಳು. ಚೀನಾ ವೈರಸ್ ವದಂತಿ ಹರಡುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ. ಎಚ್‌ಎಂಪಿವಿ ಪರೀಕ್ಷೆಯ ಹೆಸರಲ್ಲಿ ಹಣ ಸುಲಿಗೆ ನಡೆಯಲಿದೆ.

ಡಾ. ಶ್ರೀನಿವಾಸ ಕಕ್ಕಿಲ್ಲಾಯ, ವೈದ್ಯ

25 ವರ್ಷಗಳ ಹಿಂದೆ

ಶನಿವಾರ, 8-1-2000

• ರಾಜ್ಯದ ಆರ್ಥಿಕ ಅಧ್ಯಯನಕ್ಕೆ ತಜ್ಞರ ನೇಮಕ

ನವದೆಹಲಿ, ಜ. 7– ಕರ್ನಾಟಕದಲ್ಲಿನ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ಚುರುಕುಗೊಳಿಸಲು ಸರ್ಕಾರದ ವಿವಿಧ ಇಲಾಖೆಗಳ ಆರ್ಥಿಕ ಸ್ಥಿತಿಗತಿ, ಅವುಗಳ ಬೇಡಿಕೆ ಮತ್ತು ಒಟ್ಟಾರೆ ರಾಜ್ಯದ ಆರ್ಥಿಕ ಸ್ಥಿತಿಯ ಅಧ್ಯಯನ ಮಾಡಿ ಸಮಗ್ರ ವರದಿ ನೀಡುವ ಕಾರ್ಯವನ್ನು ರಾಜ್ಯ ಸರ್ಕಾರವು ಅರ್ಥತಜ್ಞರೊಬ್ಬರಿಗೆ ವಹಿಸಿದೆ.

ಕಾಂಗ್ರೆಸ್ ನೇತೃತ್ವದ ಸರ್ಕಾರವು ಮುಂದಿನ ಆರ್ಥಿಕ ವರ್ಷದಿಂದ ಕೈಗೊಳ್ಳಲಿರುವ ಯೋಜನೆಗಳಿಗೆ ಮತ್ತು ಹೊಸ ಶತಮಾನದ ಬೇಡಿಕೆಗಳಿಗೆ ತಕ್ಕಂತೆ ಹಣಕಾಸು ಒದಗಿಸಲು ಆರ್ಥಿಕ ಮುನ್ನೋಟದ ಅವಶ್ಯಕತೆ ಇದೆ ಎಂದು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು ಇಲ್ಲಿ ತಿಳಿಸಿದರು.

ಈ ಅಧ್ಯಯನ ಕಾರ್ಯವನ್ನು ಬೆಂಗಳೂರಿನ ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆ ಸಂಸ್ಥೆಯ ನಿರ್ದೇಶಕ ಮತ್ತು ಅರ್ಥತಜ್ಞರಾದ ಗೋವಿಂದ ರಾವ್ ಅವರಿಗೆ ವಹಿಸಲಾಗಿದೆ. ಅವರು ಫೆಬ್ರುವರಿ ಎರಡನೇ ವಾರದಲ್ಲಿ ತಮ್ಮ ವರದಿ ನೀಡುವ ಸಾಧ್ಯತೆಗಳಿವೆ ಎಂದು ತಿಳಿಸಿದರು.

• ಚುನಾವಣೆ ಮುಂದೂಡಿದರೆ ರಾಜೀನಾಮೆ: ಘೋರ್ಪಡೆ

ಬೆಂಗಳೂರು, ಜ. 7– ಗ್ರಾಮ ಪಂಚಾಯಿತಿ ಚುನಾವಣೆಯನ್ನು ಮುಂದೂಡುವ ಪ್ರಶ್ನೆಯೇ ಇಲ್ಲ. ಒಂದು ವೇಳೆ ಈ ಚುನಾವಣೆ ನಡೆಸದಂತೆ ಬಾಹ್ಯ ಅಥವಾ ಆಂತರಿಕ ಒತ್ತಡ ಬಂದರೆ ತಾವು ಸಂಪುಟಕ್ಕೆ ರಾಜೀನಾಮೆ ನೀಡಿ ನೇರವಾಗಿ ಮನೆಗೆ ಹೋಗುವುದಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಎಂ.ವೈ. ಘೋರ್ಪಡೆ ಇಂದು ಇಲ್ಲಿ ತಿಳಿಸಿದರು.

‘ಈ ಚುನಾವಣೆ ನಡೆಯದಂತೆ ನಿಮ್ಮ ಪಕ್ಷದ ಒಳಗಿನಿಂದ ಅಥವಾ ಹೊರಗಿನಿಂದ ಒತ್ತಡ ಬಂದು ಅದಕ್ಕೆ ಮಣಿಯಬೇಕಾದ ಸಂದರ್ಭ ಬಂದರೆ ನಿಮ್ಮ ನಿಲುವೇನು?’ ಎಂದು ಸುದ್ದಿಗಾರರು ಇಂದು ಪ್ರಶ್ನಿಸಿದಾಗ ‘ಅಂಥ ಸಂದರ್ಭ ಬಂದರೆ ನಾನು ರಾಜೀನಾಮೆ ನೀಡುವುದಕ್ಕೂ ಸಿದ್ಧ. ನನ್ನ ಊರಾದ ಸಂಡೂರಿನ ವಾತಾವರಣ ರಾಜಧಾನಿಯ ಹವಾಗುಣಕ್ಕಿಂತ ಉತ್ತಮವಾಗಿದೆ’ ಎಂದವರು ಮುಗುಳ್ನಕ್ಕರು.

50 ವರ್ಷಗಳ ಹಿಂದೆ

ಬುಧವಾರ, 8-1-1975

• ಪಂಚಾಯಿತಿಯಲ್ಲಿ ನ್ಯಾಯಾಲಯ ವಿಧಾನ ಅನಪೇಕ್ಷಣೀಯ: ಅಹಮದ್

ನವದೆಹಲಿ, ಜ. 7– ವಾಣಿಜ್ಯ ವಿವಾದಗಳ ಇತ್ಯರ್ಥಕ್ಕಾಗಿ ಪಂಚಾಯಿತಿ ನಡೆಸುವಾಗ ನ್ಯಾಯಾಲಯಗಳಲ್ಲಿನಂತೆ ಕಾನೂನು ತೊಡಕುಗಳು ಹಾಗೂ ಕ್ಲಿಷ್ಟ ಮತ್ತು ಸುದೀರ್ಘವಾದ ವಿಧಾನಗಳನ್ನು ಬಳಸುವುದಕ್ಕೆ ರಾಷ್ಟ್ರಪತಿ ಫಕ್ರುದ್ದೀನ್ ಅಲಿ ಅಹಮದ್ ಅವರು ಇಂದು ವಿರೋಧ ವ್ಯಕ್ತಪಡಿಸಿದ್ದಾರೆ.

ಐದನೆಯ ಅಂತರರಾಷ್ಟ್ರೀಯ ಪಂಚಾಯಿತಿ ಪರಿಷತ್ತನ್ನು ಉದ್ಘಾಟಿಸಿದ ಅವರು, ಪಂಚಾಯಿತಿಗಳನ್ನು ನ್ಯಾಯಾಲಯದ ವಿಧಾನಗಳಲ್ಲಿ ನಡೆಸಿದರೆ ಆಗುವ ಪ್ರಗತಿ ಬಹಳ ಕಡಿಮೆ ಎಂದರು.

ಭಾರತದ ಪಂಚಾಯಿತಿ ಮಂಡಳಿ ಆತಿಥೇಯವಾಗಿರುವ ಈ ಪರಿಷತ್ತು ಅಭಿವೃದ್ಧಿಶೀಲ ರಾಷ್ಟ್ರವೊಂದರಲ್ಲಿ ನಡೆಯುತ್ತಿರುವುದು ಇದೇ ಮೊದಲು.

ಕಾನೂನು ಮಾರ್ಗ ಹಿಡಿದರೆ ವಿಳಂಬ ಉಂಟಾಗಿ ತೊಡಕುಗಳು ಎದುರಾಗುವುದರಿಂದ ವರ್ತಕರು ವಿವಾದಗಳ ಸೌಹಾರ್ದಯುತ ಇತ್ಯರ್ಥಕ್ಕಾಗಿ ಪಂಚಾಯಿತಿ ಮಾರ್ಗವನ್ನು ಹೆಚ್ಚಾಗಿ ಅವಲಂಬಿಸುವರೆಂದು ಅವರು ಆಶಿಸಿದರು.

ಹಣದ ಅಮಲು, ಸೂಪರ್‌ಸ್ಟಾರ್ ಸಂಸ್ಕೃತಿಗೆ ನಲುಗದಿರಲಿ ಆಟ

ಕ್ರಿಕೆಟ್‌ಗೆ ‘ತಾರೆ’ಯರು ಭಾರವಾದರೇ?

ವಿಶ್ಲೇಷಣೆ

ಗಿರೀಶ ದೊಡ್ಡಮನಿ

‘ಭಾರತ ಕ್ರಿಕೆಟ್ ತಂಡದಲ್ಲಿ ಸೂಪರ್‌ಸ್ಟಾರ್ ಸಂಸ್ಕೃತಿ ಕೊನೆಯಾಗಬೇಕು...’

ಭಾರತ ಕ್ರಿಕೆಟ್ ತಂಡದಲ್ಲಿ ಈ ಹಿಂದೆ ತಾರೆಗಳಾಗಿ ಮಿನುಗಿದ ಸುನಿಲ್ ಗಾವಸ್ಕರ್, ಇರ್ಫಾನ್ ಪಠಾಣ್ ಮತ್ತು ಹರಭಜನ್ ಸಿಂಗ್ ಅವರು ಈಗ ವೀಕ್ಷಕ ವಿವರಣೆಗಾರರಾಗಿ ಹೇಳುತ್ತಿರುವ ಮಾತಿದು.

ಆಸ್ಟ್ರೇಲಿಯಾದಲ್ಲಿ ನಡೆದ ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯಲ್ಲಿ ಭಾರತ ತಂಡವು ಸೋತ ಬಳಿಕ ಈ ಬಗೆಯ ಮಾತುಗಳು ಬಿಸುಪು ಪಡೆದಿವೆ. ಕೆಲವು ಹಿರಿಯ ಆಟಗಾರರು ಸತತ ವೈಫಲ್ಯ ಅನುಭವಿಸಿದರೂ ‘ತಾರಾಮೌಲ್ಯ’ದಿಂದಾಗಿ ತಂಡದಲ್ಲಿ ಸ್ಥಾನ ಉಳಿಸಿಕೊಳ್ಳುತ್ತಿದ್ದಾರೆ. ಇದರಿಂದಾಗಿ ಕೆಲವು ಪ್ರತಿಭಾನ್ವಿತ ಆಟಗಾರರು ಅವಕಾಶವಂಚಿತರಾಗುತ್ತಿದ್ದಾರೆ. ಈ ಪರಿಪಾಟವು ತಂಡದ ಪ್ರದರ್ಶನದ ಮೇಲೆ ಪರಿಣಾಮ ಬೀರುತ್ತಿರುವುದರಿಂದ ಈ ಮಾತುಗಳಿಗೆ ವಿಶೇಷ ಅರ್ಥ ಲಭಿಸಿದೆ.

ಈ ಬಗೆಯ ಟೀಕೆಗಳು ಭಾರತ ತಂಡದ ನಾಯಕ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರನ್ನು ಪ್ರಮುಖವಾಗಿ ಗುರಿಯಾಗಿಸಿಕೊಂಡಿರುವುದು ಕ್ರೀಡಾ ಅಭಿಮಾನಿಗಳಿಗೂ ತಿಳಿಯುವಂತಹುದೇ. ಸತತ ವೈಫಲ್ಯದ ಹೊರತಾಗಿಯೂ ಈ ಆಟಗಾರರ ಸ್ಥಾನಕ್ಕೆ ಚ್ಯುತಿ ಒದಗದಿರುವುದರ ಹಿಂದೆ ಸೂಪರ್‌ಸ್ಟಾರ್ ಸಂಸ್ಕೃತಿಯ ಪ್ರಭಾವ ಕೆಲಸ ಮಾಡಿದೆ ಎಂಬುದರತ್ತ ಈ ಟೀಕೆಗಳು ಬೊಟ್ಟು ಮಾಡುತ್ತವೆ. ‘2024ರಲ್ಲಿ ಭಾರತ ತಂಡವು ಆಡಿದ ಪಂದ್ಯಗಳ ಮೊದಲ ಇನಿಂಗ್ಸ್‌ನಲ್ಲಿ ಕೊಹ್ಲಿಯ ರನ್ ಗಳಿಕೆ ಸರಾಸರಿ 15 ಮಾತ್ರ. ಈ ಐದು ವರ್ಷಗಳ ಅವರ ಸರಾಸರಿ 30 ದಾಟುವುದಿಲ್ಲ. ಅವರ ಬದಲಿಗೆ ಯುವ ಆಟಗಾರರಿಗೆ ಅವಕಾಶ ಕೊಡಿ. ಹೊಸದಾಗಿ ಆಡುವ ಆಟಗಾರರೇ 25ರಿಂದ 30ರ ಸರಾಸರಿಯಲ್ಲಿ ರನ್ ಗಳಿಸುತ್ತಾರೆ. ತಂಡ ಮೊದಲು, ವ್ಯಕ್ತಿ ಅಲ್ಲ’ ಎಂದು ಇರ್ಫಾನ್ ಖಾರವಾಗಿಯೇ ಹೇಳಿದ್ದಾರೆ.

ಬಾರ್ಡರ್–ಗಾವಸ್ಕರ್ ಟ್ರೋಫಿ ಆರಂಭಕ್ಕೂ ಮುನ್ನವೇ ಆಸ್ಟ್ರೇಲಿಯಾದಲ್ಲಿ ಭಾರತ ಎ ಹಾಗೂ ಆಸ್ಟ್ರೇಲಿಯಾ ಎ ನಡುವಣ ಸರಣಿ ನಡೆದಿತ್ತು. ಅದರಲ್ಲಿ ಮಿಂಚಿದ್ದ ಬ್ಯಾಟರ್ ದೇವದತ್ತ ಪಡಿಕ್ಕಲ್, ಅಭಿಮನ್ಯು ಈಶ್ವರನ್, ವೇಗಿ ಪ್ರಸಿದ್ಧಕೃಷ್ಣ ಅವರನ್ನೂ ಸೀನಿಯರ್ ತಂಡಕ್ಕೆ ಸೇರ್ಪಡೆ ಮಾಡಿಕೊಳ್ಳಲಾಯಿತು. ದೇವದತ್ತ ಒಂದು ಪಂದ್ಯ ಆಡಿದರು. ಪ್ರಸಿದ್ಧ ಅವರಿಗೆ ಕೊನೆಯ ಟೆಸ್ಟ್‌ನಲ್ಲಿ ಅವಕಾಶ ಲಭಿಸಿತು. ಅದರಲ್ಲಿ ಅವರು ಎರಡೂ ಇನಿಂಗ್ಸ್ ಸೇರಿ 6 ವಿಕೆಟ್‌ಗಳನ್ನು ಗಳಿಸಿ ಗಮನ ಸೆಳೆದರು. ಸತತ ವೈಫಲ್ಯ ಅನುಭವಿಸಿದ ಶುಭಮನ್ ಗಿಲ್ ಅವರಿಗೆ ಅವಕಾಶ ನೀಡಿದ್ದರಿಂದ ಅಭಿಮನ್ಯು ಈಶ್ವರನ್ ಮತ್ತು ಪಡಿಕ್ಕಲ್ ಬೆಂಚ್‌ನಲ್ಲಿಯೇ ಇರಬೇಕಾಯಿತು.

ವಿರಾಟ್ ಮತ್ತು ರೋಹಿತ್ ಅವರು ಈ ಹಿಂದೆ ತಂಡಕ್ಕೆ ನೀಡಿರುವ ಕೊಡುಗೆ ಬಹಳ ದೊಡ್ಡದು ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ದೀರ್ಘಕಾಲದಿಂದ ಆಟದಲ್ಲಿ ವಿಫಲರಾಗುತ್ತಿರುವ ಈ ‘ತಾರೆ’ಗಳಿಂದ ತಂಡದ ಪ್ರದರ್ಶನಕ್ಕೆ ತೊಡಕು ಉಂಟಾಗುತ್ತಿರುವುದನ್ನು ತಡೆಯಬೇಕಲ್ಲವೇ? ತಮ್ಮ ವೈಫಲ್ಯವನ್ನು ಅರಿತು ಯುವ ಆಟಗಾರರಿಗೆ ದಾರಿಬಿಡುವ ಔದಾರ್ಯವನ್ನು ತಾರೆಗಳೂ ತೋರಬೇಕಲ್ಲವೇ?

ಭಾರತದ ಕ್ರಿಕೆಟ್‌ನಲ್ಲಿ ಸೂಪರ್‌ಸ್ಟಾರ್ ಸಂಸ್ಕೃತಿ ಹೊಸದೇನಲ್ಲ. ಟೆಸ್ಟ್ ತಂಡದ ಮೊದಲ ನಾಯಕ ಕರ್ನಲ್ ಸಿ.ಕೆ. ನಾಯ್ಡು ಅವರಿಂದ ಹಿಡಿದು ಇಂದಿನ ವಿರಾಟ್ ಕೊಹ್ಲಿ ಅವರವರೆಗೆ ಹಲವರು ‘ಸೂಪರ್‌ಸ್ಟಾರ್’ ಆಗಿದ್ದಾರೆ. ಆದರೆ ನಿವೃತ್ತಿಯನ್ನು ಮುಂದೂಡುವ ಪ್ರವೃತ್ತಿಯು 2008ರಲ್ಲಿ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಆರಂಭವಾದ ಮೇಲೆ ಹೆಚ್ಚಾಗಿದೆ. ಜಾಹೀರಾತು ಮತ್ತಿತರ ಮೂಲಗಳ ಆದಾಯ ಮತ್ತು ಖ್ಯಾತಿಯನ್ನು ಉಳಿಸಿಕೊಳ್ಳಲು ಈ ಧೋರಣೆ ಎಂಬುದು ಗುಟ್ಟೇನಲ್ಲ.

ಕ್ರಿಕೆಟಿಗರು ಹಣ ಮತ್ತು ಹೆಸರು ಗಳಿಸುವುದರಿಂದ ಯಾರಿಗೂ ಸಮಸ್ಯೆ ಇಲ್ಲ. ಆದರೆ ತಂಡ ಮತ್ತು ಕ್ರಿಕೆಟ್‌ಗಿಂತ ತಾವೇ ದೊಡ್ಡವರು ಎಂಬ ಅಹಂಭಾವ ಅವರಲ್ಲಿ ಮೂಡಿದಾಗ ಇಂತಹ ಚರ್ಚೆಗಳು ಮುನ್ನೆಲೆಗೆ ಬರುತ್ತವೆ. ಇದರಿಂದಾಗಿ ತಂಡದ ಡ್ರೆಸಿಂಗ್ ರೂಮ್‌ನಲ್ಲಿ ಎಲ್ಲವೂ ಸರಿಯಿಲ್ಲ ಎಂಬ ಗುಮಾನಿ ಮೂಡುವುದು ಸಹಜ.

ಇತಿಹಾಸಕಾರ ರಾಮಚಂದ್ರ ಗುಹಾ ಅವರು 2017ರಲ್ಲೇ ಸೂಪರ್‌ಸ್ಟಾರ್ ಸಂಸ್ಕೃತಿ ಬಗ್ಗೆ ಹೇಳಿದ್ದರು. ಆಗ ಸುಪ್ರೀಂ ಕೋರ್ಟ್ ನೇಮಕ ಮಾಡಿದ್ದ ಕ್ರಿಕೆಟ್ ಆಡಳಿತ ಸಮಿತಿಯ (ಸಿಎಟಿ) ಸದಸ್ಯತ್ವವನ್ನು ತೊರೆದು ಬಂದಿದ್ದ ಗುಹಾ ಅವರು ತಮ್ಮ ರಾಜೀನಾಮೆ ಪತ್ರದಲ್ಲಿ, ಅನಿಲ್ ಕುಂಬ್ಳೆಯವರು ಮುಖ್ಯ ಕೋಚ್ ಸ್ಥಾನ ಬಿಟ್ಟು ಬರುವಲ್ಲಿ ನಾಯಕರಾಗಿದ್ದ ಕೊಹ್ಲಿಯವರ ಪಾತ್ರದ ಕುರಿತು ಗಮನ ಸೆಳೆದಿದ್ದರು. ಶಿಸ್ತಿನ ಸಿಪಾಯಿ ಹಾಗೂ ಮೌಲ್ಯಯುತ ಕೋಚ್ ಆಗಿದ್ದ ಕುಂಬ್ಳೆಯವರು ರಾಜೀನಾಮೆ ನೀಡಿದ್ದಾಗಲೂ ಇಂತಹ ಚರ್ಚೆಗಳು ನಡೆದಿದ್ದವು. ಅಷ್ಟೇ ಅಲ್ಲ, ತಾರಾ ವರ್ಚಸ್ಸಿನ ಆಟಗಾರರು ವಾರ್ಷಿಕ ಗುತ್ತಿಗೆಯಲ್ಲಿ ಅಗ್ರಸ್ಥಾನ ಪಡೆಯುವ ಬಗ್ಗೆಯೂ ಗುಹಾ ಆಕ್ಷೇಪಿಸಿದ್ದರು. ಚೇತೇಶ್ವರ್ ಪೂಜಾರ ಅವರು ಹಲವು ಪಂದ್ಯಗಳಲ್ಲಿ ಭಾರತದ ಗೆಲುವಿಗೆ ಕಾರಣರಾಗಿದ್ದರು. ಆದರೂ ಬಿಸಿಸಿಐ ಗುತ್ತಿಗೆಯ ಎ ಪ್ಲಸ್‌ನಲ್ಲಿ ಅವರ ಹೆಸರು ಇರಲಿಲ್ಲ. ಮಹೇಂದ್ರಸಿಂಗ್ ಧೋನಿ ಟೆಸ್ಟ್ ಕ್ರಿಕೆಟ್‌ನಿಂದ ನಿವೃತ್ತರಾಗಿ, ಏಕದಿನ ಮತ್ತು ಟಿ20 ಮಾದರಿಗಳಲ್ಲಿ ಮಾತ್ರ ಆಡುವಾಗಲೂ ಎ ಕೆಟಗರಿಯಲ್ಲಿ ಇದ್ದರು. ಈ ಸ್ಥಿತಿ ಈಗಲೂ ಬದಲಾಗಿಲ್ಲ. ಸುಮಾರು ಒಂದು ವರ್ಷದಿಂದ ಟೆಸ್ಟ್ ಕ್ರಿಕೆಟ್‌ನಲ್ಲಿ 29ಕ್ಕಿಂತಲೂ ಕಡಿಮೆ ಸರಾಸರಿಯಲ್ಲಿ ರನ್ ಗಳಿಸುತ್ತಿರುವ ವಿರಾಟ್ ಮತ್ತು ರೋಹಿತ್ ಅವರು ಗುತ್ತಿಗೆ ಪಟ್ಟಿಯ ಎ ಪ್ಲಸ್ ವಿಭಾಗದಲ್ಲಿದ್ದಾರೆ. ಪೂಜಾರ ಅವರು ಕಾಮೆಂಟ್ರಿ ಬಾಕ್ಸ್‌ನಲ್ಲಿದ್ದಾರೆ. ಈ ಎರಡು ವರ್ಷಗಳಲ್ಲಿ ಪೂಜಾರ ಅವರು ರಣಜಿ ಟ್ರೋಫಿ, ಇಂಗ್ಲಿಷ್ ಕೌಂಟಿ ಟೂರ್ನಿಗಳಲ್ಲಿ ಆಡಿ ರನ್‌ಗಳನ್ನು ಗಳಿಸಿದ್ದಾರೆ. ಆದರೂ ಅವರಿಗೆ ಅವಕಾಶವಿಲ್ಲ.

2020–21ರಲ್ಲಿ ಆಸ್ಟ್ರೇಲಿಯಾದಲ್ಲಿ ನಡೆದ ಟೆಸ್ಟ್ ಸರಣಿಯಲ್ಲಿ ಜಯಿಸಲು ಕಾರಣರಾಗಿದ್ದ ಪೂಜಾರ, ಅಜಿಂಕ್ಯ ರಹಾನೆ ಹಾಗೂ ಹನುಮವಿಹಾರಿ ಈಗ ತಂಡಕ್ಕೆ ಸೇರುವ ‘ಅರ್ಹತೆ’ ಹೊಂದಿಲ್ಲ. ಆ ಸರಣಿಯ ಮೊದಲ ಪಂದ್ಯದಲ್ಲಿ ಭಾರತ ತಂಡವು 36 ರನ್‌ಗಳಿಗೆ ಆಲೌಟ್ ಆಗಿತ್ತು. ಅದರಲ್ಲಿ ಸೋತ ನಂತರ ನಾಯಕರಾಗಿದ್ದ ವಿರಾಟ್, ಪಿತೃತ್ವ ರಜೆ ಪಡೆದು ಸ್ವದೇಶಕ್ಕೆ ಮರಳಿದ್ದರು. ನಂತರದ ಪಂದ್ಯಗಳಲ್ಲಿ ತಂಡ ಮುನ್ನಡೆಸಿದ್ದ ರಹಾನೆ ಐತಿಹಾಸಿಕ ಸರಣಿ ಜಯ ಸಾಧಿಸಿದ್ದರು. ಅದರ ನಂತರವೂ ಅವರು ದೇಶಿ ಕ್ರಿಕೆಟ್‌ನಲ್ಲಿ ರನ್ ಗಳಿಸುತ್ತಲೇ ಇದ್ದಾರೆ. ಆದರೆ ಈಗ ರಾಷ್ಟ್ರೀಯ ತಂಡದ ಆಟಗಾರರೂ ದೇಶಿ ಕ್ರಿಕೆಟ್‌ನಲ್ಲಿ ಆಡುವುದು ಕಡ್ಡಾಯ ಎಂದು ಮುಖ್ಯ ಕೋಚ್ ಗೌತಮ್ ಗಂಭೀರ್ ಮತ್ತು ಮಾಜಿ ಕ್ರಿಕೆಟಿಗರು ಹೇಳುತ್ತಿದ್ದಾರೆ. ದೇಶಿ ಕ್ರಿಕೆಟ್‌ನಲ್ಲಿ ಚೆನ್ನಾಗಿ ಆಡಿದವರಿಗೆ ಯಾವ ಸ್ಥಾನ ನೀಡಲಾಗಿದೆ?

ಮೊದಲಿಗೆ ಆಯ್ಕೆ ಸಮಿತಿಯು ಆಟಗಾರರನ್ನು ‘ಸೂಪರ್‌ಸ್ಟಾರ್’ ಎಂದು ಪರಿಗಣಿಸುವುದನ್ನು ಬಿಡಬೇಕು. ರೋಹಿತ್ ಬಳಗವು ತವರಿನಲ್ಲಿಯೇ ನ್ಯೂಜಿಲೆಂಡ್ ಎದುರು ಹೀನಾಯವಾಗಿ ಸೋತಾಗ ಅಜಿತ್ ಅಗರ್ಕರ್ ನೇತೃತ್ವದ ಆಯ್ಕೆ ಸಮಿತಿಯು ನಾಯಕತ್ವ ಬದಲಾವಣೆಗೆ ಚಿತ್ತ ಹರಿಸಿದ್ದರೆ ಪರಿಸ್ಥಿತಿ ಬೇರೆಯೇ ಇರುತ್ತಿತ್ತು. ಆ ಸರಣಿಯ ಮೊದಲ ಪಂದ್ಯ ಬೆಂಗಳೂರಿನಲ್ಲಿ ನಡೆದಾಗ ರೋಹಿತ್ ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿದ್ದರು. ತಂಡವು ಬರೀ 46 ರನ್‌ಗಳಿಗೆ ಆಲೌಟ್ ಆಗಿತ್ತು. ಮೇಲ್ನೋಟಕ್ಕೇ ಬೌಲರ್‌ಗಳಿಗೆ ಅನುಕೂಲವಾಗುವಂತೆ ಕಂಡಿದ್ದ ಪಿಚ್‌ನಲ್ಲಿ ‘ಬ್ಯಾಟಿಂಗ್ ಆಯ್ಕೆ ಮಾಡಿದ್ದು ನನ್ನದೇ ತಪ್ಪು’ ಎಂದೂ ರೋಹಿತ್ ಒಪ್ಪಿಕೊಂಡಿದ್ದರು. ಆ ಸರಣಿಗೂ ಮುನ್ನ ಮತ್ತು ನಂತರವೂ ಅವರ ಬ್ಯಾಟಿಂಗ್ ವೈಫಲ್ಯ ಮುಂದುವರಿದಿದೆ. ವಿರಾಟ್, ರೋಹಿತ್, ರಿಷಭ್, ಬೂಮ್ರಾ ಯಾರೇ ಆಗಲಿ ಅವರ ಸಾಧನೆಗೆ ತಕ್ಕ ಅವಕಾಶಗಳು ದೊರೆಯಬೇಕು. ಹಿರಿತನ, ಸಿರಿತನ ಅಥವಾ ತಾರಾ ವರ್ಚಸ್ಸು ಪರಿಗಣಿಸುವ ಅವಶ್ಯಕತೆ ಏನಿದೆ?

ಆದರೆ ಪ್ರಸ್ತುತ ಆಟಗಾರರು ಸಾಮಾಜಿಕ ಮಾಧ್ಯಮಗಳ ಮೂಲಕ ತಮ್ಮನ್ನು ತಾರೆಗಳಂತೆ ಬಿಂಬಿಸಿಕೊಳ್ಳುವ ತಂತ್ರ ಕರಗತ ಮಾಡಿಕೊಂಡಿದ್ದಾರೆ. ಅವರಿಗೆ ನೆರವು ನೀಡುವ ಪರಿಣತರಿದ್ದಾರೆ. ಇನ್ನೊಂದು ವಾರ ಕಳೆದರೆ ಮತ್ತೊಂದು ಕ್ರಿಕೆಟ್ ಸರಣಿ ನಡೆಯುತ್ತದೆ. ಆ ಗುಂಗಿನಲ್ಲಿ ಈ ಸೋಲು ಮರೆಯಾಗುತ್ತದೆ. ಮತ್ತೊಂದು ಐಪಿಎಲ್ ಟೂರ್ನಿಯು ಎಲ್ಲ ಸೋಲು, ಗೆಲುವುಗಳನ್ನು ಮರೆಸಿಬಿಡುತ್ತದೆ. ಮತ್ತಷ್ಟು ಸೂಪರ್‌ಸ್ಟಾರ್ ಆಟಗಾರರು ಮುನ್ನೆಲೆಗೆ ಬರುತ್ತಾರೆ!

ಚುರುಮುರಿ

ಥಂಡಿ ಮಾರುತ

• ಮಣ್ಣೆ ರಾಜು

‘ರೀ, ಬೆಂಗಳೂರಿನಲ್ಲಿ ವಿಪರೀತ ಚಳಿ ಅಂತೆ, ಥಂಡಿಯ ಹೊಡೆತಕ್ಕೆ ಜನ ಥಂಡಾ ಹೊಡೆದಿದ್ದಾರಂತೆ...’ ಕಾಫಿ ತಂದುಕೊಟ್ಟಳು ಸುಮಿ.

‘ನಡುಗಿಸುವುದೇ ಚಳಿಯ ಚಾಳಿ. ಬೇಸಿಗೆಯಲ್ಲಿ ಬೆವರುವುದು, ಚಳಿಗಾಲದಲ್ಲಿ ನಡುಗುವುದು ಕಾಲಧರ್ಮ. ಸಹಿಸಿಕೊಂಡು ಬಾಳಬೇಕು’ ಶಂಕ್ರಿ ಕಾಫಿ ಹೀರಿದ.

‘ಬೆಂಗಳೂರಿನ ತಾಪಮಾನ ಕುಸಿತ ದೊಡ್ಡ ಸಮಸ್ಯೆ ಆಗಿದೆಯಂತೆರೀ...’

‘ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿತ, ಆಸ್ಟ್ರೇಲಿಯಾ ಎದುರು ನಮ್ಮ ಬ್ಯಾಟರ್‌ಗಳ ಕುಸಿತಕ್ಕಿಂತ ಬೆಂಗಳೂರಿನ ತಾಪಮಾನ ಕುಸಿತ ದೊಡ್ಡ ವಿಷಯನಾ?’

‘ಮೈ ಬಗ್ಗಿಸಿ ದುಡಿದರೆ ಮೌಲ್ಯ ಗಳಿಸಿಕೊಂಡು ರೂಪಾಯಿ ತಲೆ ಎತ್ತಬಹುದು, ಮೈಚಳಿ ಬಿಟ್ಟು ಆಡಿದರೆ ಬ್ಯಾಟರ್‌ಗಳು ಬ್ಯಾಟ್ ಎತ್ತಬಹುದು. ಆದರೆ ಬೆಂಗಳೂರಿನ ಚಳಿ ಪ್ರಾಬ್ಲಂಗೆ ಪರಿಹಾರವೇ ಸಿಗ್ತಿಲ್ಲವಂತೆ’.

‘ತೆರಿಗೆ ಬಾಧೆ, ಟ್ರಾಫಿಕ್ ಕಿರಿಕಿರಿಗೆ ಹೆದರಿ ನಡುಗದವರು ಚಳಿಗೆ ನಡುಗುತ್ತಿದ್ದಾರೆಂದರೆ, ಬೆಂಗಳೂರು ಜನರ ಚಳಿ ನಿರೋಧಕ ಶಕ್ತಿ ಹೆಚ್ಚಿಸಬೇಕು. ಸರ್ಕಾರ ರಾಜಧಾನಿಯಲ್ಲಿ ಕಾವೇರಿಸುವ ಕಾರ್ಯಕ್ರಮ ರೂಪಿಸಬೇಕು’.

‘ಥಂಡಿ ಮಾರುತ ಜನರನ್ನು ಥರಗುಟ್ಟಿಸುತ್ತಿದೆ. ಈಗಂತೂ ಹೊಸಹೊಸ ಕಾಯಿಲೆಗಳು ಹುಟ್ಟಿಕೊಳ್ಳುತ್ತಿವೆ. ಯಾವ ಸೀನಿನಲ್ಲಿ ಯಾವ ವೈರಸ್ ಇರುತ್ತೋ? ಎಚ್‌ಎಂಪಿವಿ ಅನ್ನೋ ವೈರಾಣು ಜ್ವರ ಕಾಣಿಸಿಕೊಂಡು, ಕೆಮ್ಮುವಂತಿಲ್ಲ ಸೀನುವಂತಿಲ್ಲ ಎನ್ನುವಂತಾಗಿದೆ’.

‘ಎಚ್‌ಎಂಪಿವಿ ವೈರಾಣು ಅಪಾಯಕಾರಿ ಅಲ್ಲ, ಹೆದರಬೇಡಿ ಅಂತ ಆರೋಗ್ಯ ಮಂತ್ರಿ ಹೇಳಿದ್ದಾರೆ. ಮನೆಗೆ ನೆಂಟರು ಬಂದು ಹೋಗುವಂತೆ ಬಂದ ಜ್ವರ ಒಂದೆರಡು ದಿನ ಇದ್ದು ಆರೈಕೆ, ಪೂರೈಕೆ ಮಾಡಿಸಿಕೊಂಡು ಹೋಗಿಬಿಡುತ್ತದಂತೆ’.

‘ಅಪಾಯಕಾರಿ ಅಲ್ಲದಿದ್ದರೂ ಆನಂದಕಾರಿ ಅಲ್ಲ, ಕಾಯಿಲೆ ಬಂದವರು ನರಳಲೇಬೇಕು’.

‘ಕಾಯಿಲೆಯಿಂದ ಅಪಾಯವಿದೆಯೋ ಇಲ್ವೋ, ಕಾಯಿಲೆ ನೆಪದಲ್ಲಿ ಜನರನ್ನು ಗಾಬರಿ ಮಾಡುವವರು, ರಾಬರಿ ಮಾಡುವವರ ಬಗ್ಗೆ ನಾವು ಎಚ್ಚರ ವಹಿಸಬೇಕು...’ ಅಂದ ಶಂಕ್ರಿ.

ಸಂಗತ

ಭೂಗ್ರಹದ ಸ್ಥಿರತೆ ಕಾಪಾಡೋಣ

ಭೂಗ್ರಹದ ಸ್ಥಿರತೆ ಕಾಪಾಡಿಕೊಳ್ಳಲು ಮನುಷ್ಯ ತನ್ನ ಅಗತ್ಯಗಳನ್ನು ಪ್ರಕೃತಿಯೊಂದಿಗೆ ಪರಿಷ್ಕರಿಸಿಕೊಳ್ಳಬೇಕು, ಹೊಂದಿಸಿಕೊಳ್ಳಬೇಕು

• ಬಿ.ಎಸ್.ಭಗವಾನ್

ಶಾಲಾ ಹುಡುಗರು ‘ನಮಗೆ ಭೂಮಿಯ ಚಲನೆಯ ಅರಿವೇಕೆ ಆಗದು?’ ಎಂದು ಮಾಸ್ತರರನ್ನು ಕೇಳಿ ಅವರ ಸಿಟ್ಟಿಗೆ ಗುರಿಯಾಗುವುದುಂಟು. ಏಕರೂಪದ ವೇಗವೇ ಚಲನೆ ಗೊತ್ತಾಗದಿರುವುದರ ರಹಸ್ಯ ಎಂದು ಅವರು ವಿವರಿಸಿರುತ್ತಾರೆ. ಸೂರ್ಯ ಏಕೆ ಪಶ್ಚಿಮ ದಿಕ್ಕಿನಲ್ಲೇ ಉದಯಿಸುತ್ತಾನೆ ಎಂಬ ಪ್ರಶ್ನೆ ಬಾಲಿಶವೇನಲ್ಲ. ಈ ಶಿಸ್ತಿಗೆ ನಮ್ಮ ವಾಸನೆಲೆಯಾದ ಭೂಮಿಯ ಕ್ರಮಬದ್ಧ ಚಲನೆಯೇ ಕಾರಣ.

ಭೂಮಿಗೆ ಎರಡು ಬಗೆಯ ಚಲನೆಗಳಿವೆ. ಬುಗುರಿಯಂತೆ ಗಿರಕಿ ಹೊಡೆಯುತ್ತಲೇ ಭೂಮಿಯು ಸೂರ್ಯನನ್ನು ಸುತ್ತುವುದು. ಈ ಚಲನೆಗಳಿಗೆ ಕ್ರಮವಾಗಿ ಆವರ್ತನ ಮತ್ತು ಪರಿಭ್ರಮಣ ಎನ್ನಲಾಗುತ್ತದೆ. ಅಕ್ಷದಲ್ಲಿ ಆವರ್ತನ ಮತ್ತು ಕಕ್ಷೆಯಲ್ಲಿ ಪರಿಭ್ರಮಣ. ಆವರ್ತನ ಅಕ್ಷವು ಉತ್ತರ ಮತ್ತು ದಕ್ಷಿಣ ಧ್ರುವಗಳನ್ನು ಜೋಡಿಸುವ ಒಂದು ಊಹಾತ್ಮಕ ಸರಳರೇಖೆ. ಭೂಮಿಯು ತನ್ನ ಕಕ್ಷೆಯಲ್ಲಿ ಪಶ್ಚಿಮದಿಂದ ಪೂರ್ವಕ್ಕೆ ಹೊರಳುವುದು. ಹಾಗಾಗಿ, ಸ್ಥಿರವಾಗಿರುವ ಸೂರ್ಯನೇ ಪೂರ್ವದಲ್ಲಿ ಹುಟ್ಟಿ ಪಶ್ಚಿಮದಲ್ಲಿ ಮುಳುಗಿದಂತೆ ನಮಗೆ ಭಾಸವಾಗುತ್ತದೆ. ಒಂದು ವೇಳೆ ಭೂಮಿ ಆವರ್ತಿಸದಿದ್ದರೆ ಅದರ ಅರ್ಧಭಾಗ ಸದಾ ಅತಿ ತಾಪದಲ್ಲೂ ಉಳಿದರ್ಧ ಅತಿ ಶೈತ್ಯದಲ್ಲೂ ಇರುತ್ತಿತ್ತು. ಧರೆಯಲ್ಲಿ ಜೀವವೈವಿಧ್ಯವೇ ಸಾಧ್ಯವಿರುತ್ತಿರಲಿಲ್ಲ.

1851ರ ಜನವರಿ 8ರಂದು ಫ್ರಾನ್ಸ್‌ನ ಭೌತವಿಜ್ಞಾನಿ ಲಿಯಾನ್ ಫೌಕಾಲ್ಟ್, ಭೂಮಿ ತನ್ನ ಅಕ್ಷದ ಸುತ್ತ ಬುಗುರಿಯಂತೆ ಸುತ್ತುವುದಾಗಿ ಕಂಡುಹಿಡಿದ. ಈ ಬಹು ಮಹತ್ವದ ವಿದ್ಯಮಾನವನ್ನು ಸಂಭ್ರಮಿಸಲು ಪ್ರತಿ ವರ್ಷವೂ ವಿಶ್ವದೆಲ್ಲೆಡೆ ‘ಭೂಮಿಯ ಆವರ್ತನ ದಿನ’ ಆಚರಿಸಲಾಗುತ್ತದೆ. ‘ನಮ್ಮ ಶಕ್ತಿ, ನಮ್ಮ ಗ್ರಹ’ ಎನ್ನುವುದು ಈ ಬಾರಿಯ ಧ್ಯೇಯವಾಕ್ಯ. ಭೂನಿವಾಸಿಗಳಿಗೆ ಇರಬೇಕಾದ ಒಗ್ಗಟ್ಟು ಮತ್ತು ಸಾಮೂಹಿಕ ಜವಾಬ್ದಾರಿಯನ್ನು ಈ ಕೂಗು ಎತ್ತಿ ಹಿಡಿಯುತ್ತದೆ. ಅದು ಆತನೇ ರೂಪಿಸಿದ ಉಪಕರಣ. 28 ಕಿಲೊ ಗ್ರಾಂ ತೂಕದ ಹಿತ್ತಾಳೆ ಗುಂಡನ್ನು 67 ಮೀಟರ್ ಉದ್ದದ ತಂತುವಿನಿಂದ ತೂಗುಹಾಕಿದ್ದ ಲೋಲಕ. ಪ್ಯಾರಿಸ್‌ನಲ್ಲಿ ಫೌಕಾಲ್ಟ್ ಸಾರ್ವಜನಿಕವಾಗಿ ನೀಡಿದ ಪ್ರಾತ್ಯಕ್ಷಿಕೆ ಸರಳವಾಗಿದ್ದರೂ ಅದ್ಭುತವಾಗಿತ್ತು. ಗುಂಡು ಹಿಂದಕ್ಕೂ ಮುಂದಕ್ಕೂ ಓಲಾಡುತ್ತಲೇ ಪ್ರದಕ್ಷಿಣಾಕಾರ ದಲ್ಲಿ ಚಲಿಸುತ್ತಿತ್ತು.

ಭೂಮಿಯ ಚಲನವಲನವನ್ನು ಅರ್ಥೈಸಿಕೊಳ್ಳುವುದೆಂದರೆ ಬ್ರಹ್ಮಾಂಡದ ಅರಿವಿನತ್ತ ಹೆಜ್ಜೆಗಳನ್ನಿಟ್ಟಂತೆ. ಅಂದಹಾಗೆ ಈ ಸಡಗರದ ಬೆನ್ನಲ್ಲೇ ಧರೆಯ ಎಲ್ಲ ನಿವಾಸಿಗಳಿಗೆ ದೊಡ್ಡ ಹೊಣೆಗಾರಿಕೆಯೂ ಇದೆ. ಆವರ್ತನ ಅಕ್ಷದ 23.5 ಡಿಗ್ರಿ ವಾಲಿಕೆ ನಿಸರ್ಗ ಸಹಜ ವಿದ್ಯಮಾನ. ಆದರೆ ಮನುಷ್ಯನ ನಾಗರಿಕತೆಯ ಅತಿ ವ್ಯಾಮೋಹ ಎನ್ನುವುದಿದೆಯಲ್ಲ. ಸೇವನೆ, ಕೃಷಿ, ಕೈಗಾರಿಕೆಯಂತಹ ನಾನಾ ಬಳಕೆಗಳ ನಿಮಿತ್ತ ಎಗ್ಗಿಲ್ಲದೆ ಅಂತರ್ಜಲವನ್ನು ಮೇಲೆತ್ತಲಾಗುತ್ತಿದೆ. ಇದರ ಪರಿಣಾಮ ಗೊತ್ತೇ? ಭೂಮಿಯ ಆವರ್ತನ ಅಕ್ಷ ಅಸಹಜ ಪಲ್ಲಟಕ್ಕೊಳಗಾಗಿದೆ. 1993- 2010ರ ಅವಧಿಯಲ್ಲಿ ಅದು 80 ಸೆಂ.ಮೀ. ಪೂರ್ವಕ್ಕೆ ಕದಲಿದೆ. ಪ್ರತಿವರ್ಷ ಸಾವಿರಾರು ಕೋಟಿ ಟನ್ನುಗಳಷ್ಟು ನೀರನ್ನು ಹೊರತೆಗೆಯುವುದರಿಂದ ಅಕ್ಷವು 4.3 ಸೆಂ.ಮೀ. ವಾಲುತ್ತಿದೆ. ಇದರಿಂದಾಗಿ ಜಾಗತಿಕ ಸಾಗರ ಮಟ್ಟ 1.6 ಸೆಂ.ಮೀ. ಏರಿದೆ. ಭೂಗ್ರಹದ ಸ್ಥಿರತೆ ಕಾಪಾಡಿಕೊಳ್ಳುವ ದೃಷ್ಟಿಯಿಂದ ಮನುಷ್ಯ ತನ್ನ ಅಗತ್ಯಗಳನ್ನು ಪ್ರಕೃತಿಯೊಂದಿಗೆ ಪರಿಷ್ಕರಿಸಿಕೊಳ್ಳಬೇಕು, ಹೊಂದಿಸಿಕೊಳ್ಳಬೇಕು. ನಮ್ಮ ಮನೆಗೆ ಬೋರ್‌ವೆಲ್ ಹಾಕಿಸಿಲ್ಲ ಎನ್ನುವುದೇ ಹೆಗ್ಗಳಿಕೆ ಆಗಬೇಕು. ಏಕೆಂದರೆ ನೀರಿಗಾಗಿ ಒಂದೊಂದು ಅಗೆತವೂ ಆವರ್ತನ ಅಕ್ಷವನ್ನು ಕಿಂಚಿತ್ತಾದರೂ ಪ್ರತಿಕೂಲವಾಗಿ ಕದಲಿಸುವುದು.

ಭೂಮಿಯ ಆವರ್ತನ ಅಕ್ಷವನ್ನು ಸುಸ್ಥಿರಗೊಳಿಸುವ ಪ್ರಮುಖ ಅಂಶಗಳೆಂದರೆ, ಸುಧಾರಿತ ಜಲ ನಿರ್ವಹಣೆ, ಮಳೆ ನೀರಿನ ಸಂಗ್ರಹ, ನೀರಿನ ಮರುಬಳಕೆ ಹಾಗೂ ವ್ಯರ್ಥಕ್ಕೆ ಕಡಿವಾಣ. ನೀರಿನ ವಿತರಣೆಯನ್ನು ಸ್ವಯಂ ನಿರ್ದೇಶಿಸಿಕೊಳ್ಳುವಷ್ಟು ಪ್ರಕೃತಿ ಸಶಕ್ತವಾಗಿದೆ. ಬೃಹತ್ ಅಣೆಕಟ್ಟುಗಳು, ಗೋಪುರಗಳು, ಕಟ್ಟಡಗಳು ಭೂಮಿಯ ಆವರ್ತನಕ್ಕೆ ಸಂಚಕಾರ ಒಡ್ಡುತ್ತವೆ. ಚೀನಾದ ಅತಿ ದೊಡ್ಡದಾದ ಯಾಂಗ್ಟಿಜ್ ನದಿಗೆ ಅಡ್ಡವಾಗಿ ನಿರ್ಮಿಸಿರುವ ಬೃಹತ್ ಅಣೆಕಟ್ಟು ಸೃಷ್ಟಿಸಿರುವ ದುರ್ದೆಸೆ ಎಷ್ಟೆಂದರೆ, ಆವರ್ತನ ಅಕ್ಷ ದಿನಕ್ಕೆ 0.06 ಮೈಕ್ರೊ ಸೆಕೆಂಡ್‌ನಷ್ಟು (ಒಂದು ಸೆಕೆಂಡ್ ಕೋನದ ಮಿಲಿಯನ್ನಿನ ಒಂದು ಅಂಶ) ವಾಲುತ್ತಿದೆ.

ಸಕಲ ಜೀವರಾಶಿಯ ಅಸ್ತಿತ್ವವೂ ಆವರ್ತನ ಅಕ್ಷವನ್ನು ನೆಚ್ಚಿಕೊಂಡಿದೆ. ನಮ್ಮ ಗಡಿಯಾರದ ಸಮಯವೂ ಭೂಮಿಯ ಆವರ್ತನವನ್ನು ಅವಲಂಬಿಸಿದೆ. ಹಗಲು-ಇರುಳಿನ ಲಯಕ್ಕೆ ತಕ್ಕಂತೆ ಉಷ್ಣತೆ- ಆರ್ದ್ರತೆಯ ಲಯ ಉಂಟಾಗುವುದು. ಅಕ್ಷದ ಆವರ್ತನ ಕ್ರಮ ಊನಗೊಂಡರೆ ಎಚ್ಚರ-ನಿದ್ರೆಯ ಲಯಕ್ಕೂ ಭಂಗವಾಗಿ ನಮ್ಮ ದೈಹಿಕ ಮತ್ತು ಮಾನಸಿಕ ಆರೋಗ್ಯ ವ್ಯತ್ಯಯವಾಗುವುದು. ಭೂಮಿಯ ಆವರ್ತನ ಕ್ರಮ ಹದಗೆಟ್ಟರೆ ಶಿಸ್ತಿನ ಋತು, ಹಗಲಿರುಳು, ಮಳೆ, ಬೆಳೆ, ಇಳುವರಿಗೆ ಎಲ್ಲಿದೆ ಭವಿಷ್ಯ? ಎರಡೂ ಧ್ರುವಗಳಲ್ಲಿ ನಡೆದಾಡಿದ ಬ್ರಿಟನ್ನಿನ ಸಾಹಸಿ, ಪರಿಸರವಾದಿ ರಾಬರ್ಟ್ ಚಾರ್ಲ್ಸ್ ಸ್ವಾನ್ ನುಡಿದ ಮಾತಿದು: ‘ಪರಿಸರವನ್ನು ಕಾಡುತ್ತಿರುವ ಅತಿ ದೊಡ್ಡ ಆತಂಕವೆಂದರೆ ಯಾರೋ ಅದನ್ನು ಸಂರಕ್ಷಿಸುತ್ತಾರೆ ಎಂಬ ನಂಬಿಕೆ’.

ವಾಚಕರ ವಾಣಿ

ನಮ್ಮಲ್ಲೂ ಇದ್ದಾರೆ ಅವಿತು ಕಾಯುವವರು!

ವಿಯೆಟ್ನಾಂನಲ್ಲಿ ಸಂಚಾರ ನಿಯಮ ಉಲ್ಲಂಘಿಸುವವರ ಚಿತ್ರವನ್ನು ನಾಗರಿಕರು ಸೆರೆಹಿಡಿದು ಕಳಿಸಿ ಹಣ ಗಳಿಸುವ ನಿಯಮ ಜಾರಿಗೆ ತರಲಾಗಿದ್ದು, ನಮ್ಮಲ್ಲೂ ಅಂತಹುದೇ ನಿಯಮವನ್ನು ಜಾರಿಗೊಳಿಸಬೇಕು ಎಂದು ನಾಗಭೂಷಣ್ ಎನ್ನುವವರು ಅಭಿಪ್ರಾಯಪಟ್ಟಿದ್ದಾರೆ (ದಿನದ ಟ್ವೀಟ್, ಜ. 6). ಆದರೆ ನಮ್ಮ ಚಾಣಾಕ್ಷ ಪೊಲೀಸರು ಈಗಾಗಲೇ ಈ ಕೆಲಸದಲ್ಲಿ ನಿರತರಾಗಿದ್ದಾರೆ. ಸಿಗ್ನಲ್ ಬಳಿ ಯಾವುದಾದರೂ ವಾಹನದ ಹಿಂದೆ ನಿಂತುಕೊಂಡು ಮತ್ತು ದಟ್ಟಣೆಯ ರಸ್ತೆಯಲ್ಲಿ ಯಾರಿಗೂ ಕಾಣದ ರೀತಿಯಲ್ಲಿ ಅವಿತುಕೊಂಡು, ನಿಯಮ ಉಲ್ಲಂಘಿಸುವ ವಾಹನಗಳ ಹಿಂದಿನಿಂದ ಚಿತ್ರ ಸೆರೆಹಿಡಿಯುವುದರಲ್ಲಿ ವಿಯೆಟ್ನಾಂನವರಿಗಿಂತ ಮುಂದೆ ಇದ್ದಾರೆ. ಆದರೆ ಹಣ ಸಂಪಾದಿಸುತ್ತಿದ್ದಾರೋ ಟಾರ್ಗೆಟ್‌ಗಾಗಿ ಸರ್ಕಾರದ ಬೊಕ್ಕಸ ತುಂಬಿಸುತ್ತಿದ್ದಾರೋ ನಿಯಮ ಉಲ್ಲಂಘಿಸುವವರಿಗೆ ಚಳ್ಳೆಹಣ್ಣು ತಿನ್ನಿಸುವುದರ ವಿಚಿತ್ರ ಆನಂದ ಅನುಭವಿಸುತ್ತಿದ್ದಾರೋ ಪೊಲೀಸ್ ಆಯುಕ್ತರಿಗೇ ಗೊತ್ತು!

ವಿ.ಪಾಂಡುರಂಗ, ಬೆಂಗಳೂರು

ಆರೋಪಿಯೊಂದಿಗೆ ಬೀದಿಕಲಹ ತರವಲ್ಲ

ನಾಗಮಂಗಲ ಗ್ರಾಮಾಂತರ ಪೊಲೀಸ್ ಠಾಣೆಯ ಎಎಸ್‌ಐ, ತಾಯಿಗೆ ಕಿರುಕುಳ ನೀಡಿದ ಆರೋಪ ಎದುರಿಸುತ್ತಿದ್ದ ವ್ಯಕ್ತಿಯನ್ನು ವಿಚಾರಣೆಗಾಗಿ ಠಾಣೆಗೆ ಕರೆದೊಯ್ಯಲು ಬಂದಾಗ ಪರಸ್ಪರ ನಡೆದ ಮಾತಿನ ಚಕಮಕಿ ವಿಪರೀತಕ್ಕೆ ಹೋಗಿ, ಇಬ್ಬರೂ ಬೀದಿಜಗಳ ಮಾಡಿಕೊಂಡಿರುವುದು (ಪ್ರ.ವಾ., ಜ. 6) ಆತಂಕಕಾರಿ ಸುದ್ದಿ. ಪುಡಿರೌಡಿಯ ಜೊತೆಯಲ್ಲಿ ಒಬ್ಬ ಎಎಸ್‌ಐ ಹೀಗೆ ಬೀದಿಜಗಳಕ್ಕೆ ನಿಲ್ಲಬೇಕಾದಂತಹ ಸ್ಥಿತಿ ತಲೆದೋರಿದ್ದು ಚಿಂತಿಸಬೇಕಾದ ಸಂಗತಿ. ಠಾಣೆಯಲ್ಲಿ ಕಾನ್‌ಸ್ಟೆಬಲ್‌ಗಳು ಇರುತ್ತಾರೆ. ಅವರೆಲ್ಲ ಎಎಸ್‌ಐ ಅಧೀನಕ್ಕೆ ಒಳಪಡುತ್ತಾರೆ. ಅಂತಹವರ ಮೇಲೆ ರೌಡಿಯೊಬ್ಬ ಹಲ್ಲೆ ನಡೆಸುವುದೆಂದರೆ ಅದು ಸಾಧಾರಣ ಸಂಗತಿಯಲ್ಲ.

ಈ ಬೀದಿಜಗಳವು ಎಎಸ್‌ಐ ಹುದ್ದೆಯ ಘನತೆ ಕಳೆದಿದೆ. ಪ್ರಕರಣದ ಬಗ್ಗೆ ಹಿರಿಯ ಅಧಿಕಾರಿಗಳು ಕೂಲಂಕಷವಾಗಿ ವಿಚಾರಣೆ ನಡೆಸಿ, ಕಾರಣಗಳನ್ನು ಗುರುತಿಸಬೇಕು. ಇಂತಹ ಕೃತ್ಯಗಳು ಮರುಕಳಿಸದಂತೆ ಎಚ್ಚರ ವಹಿಸಬೇಕು.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಕಲಿಸಬೇಕಿದೆ ನೈತಿಕ ಮೌಲ್ಯ

ಸಾಲ ತೀರಿಸಲು ತಂದೆಯ ಹೆಸರಿನಲ್ಲಿ ವಿಮೆ ಮಾಡಿಸಿ, ಬಳಿಕ ಅವರನ್ನು ಕೊಲ್ಲಿಸಿದ ಪ್ರಕರಣ ಕಲಬುರಗಿಯಲ್ಲಿ ನಡೆದಿರುವುದಕ್ಕೆ ಸಂಬಂಧಿಸಿದ ಸುದ್ದಿ ಓದಿ ಆಘಾತವಾಯಿತು. ರಾಜ್ಯದ ಪಟ್ಟಣವೊಂದರಲ್ಲಿ ಇತ್ತೀಚೆಗೆ ಇಂತಹದ್ದೇ ಪ್ರಕರಣ ನಡೆದದ್ದು ವರದಿಯಾಗಿತ್ತು. ಹಣದ ದಾಹ ಜನರನ್ನು ಎಷ್ಟು ಕೀಳುಮಟ್ಟಕ್ಕೆ ಇಳಿಸುತ್ತದೆ ಎಂಬುದನ್ನು ನೆನೆದರೆ ದುಃಖವಾಗುತ್ತದೆ. ತನ್ನನ್ನು ಸಾಕಿ ಸಲಹಿದ ತಂದೆಯನ್ನೇ ಕೊಲ್ಲುವ ಮನಃಸ್ಥಿತಿಯನ್ನು ನೋಡಿದರೆ, ನಮ್ಮ ಸಮಾಜ ಯಾವ ಹಂತಕ್ಕೆ ಬಂದು ಮುಟ್ಟಿದೆ ಎಂದು ಅಂದಾಜಿಸಬಹುದು.

ನೈತಿಕ ಮೌಲ್ಯಗಳನ್ನು ಬಿಂಬಿಸುವ ಸಂದೇಶ ಸಮಾಜದಲ್ಲಿ ಹೆಚ್ಚು ಹೆಚ್ಚು ಬಿತ್ತರಗೊಳ್ಳಬೇಕಾದ ಅಗತ್ಯ ಇರುವುದನ್ನು ಇಂತಹ ಪ್ರಕರಣಗಳು ನೆನಪಿಸುತ್ತವೆ. ಹಣ, ಮೋಜು ಮಸ್ತಿ ಮಾತ್ರವೇ ಜೀವನವೆಂದು ಬಗೆದಿರುವ ಯುವಸಮೂಹಕ್ಕೆ ನೈತಿಕ ಪಾಠದ ಅಗತ್ಯವಿದೆ. ಇಂತಹ ಕುಕೃತ್ಯಗಳು ವ್ಯಾಪಕವಾಗಲು ಜನರಲ್ಲಿ ಕಾನೂನಿನ ಭಯ ಇಲ್ಲದಿರುವುದೇ ಕಾರಣವಾಗಿದೆ. ಆರೋಪಿಗಳಿಗೆ ತ್ವರಿತವಾಗಿ ಶಿಕ್ಷೆಯಾಗದಿರುವುದು, ವಿಚಾರಣೆಯಲ್ಲಿ ಕಾಲಹರಣ, ಬಂಧಿತರ ಬಿಡುಗಡೆಗಾಗಿ ಪ್ರಭಾವಿಗಳ ಮೂಲಕ ಒತ್ತಡ ಹೇರುವ ಪ್ರಕ್ರಿಯೆ ಎಲ್ಲವೂ ಕೆಡುಕು ವ್ಯಾಪಕವಾಗಿ ಹರಡಲು ಕಾರಣವಾಗಿವೆ. ಸಮಾಜದ ಸ್ವಾಸ್ಥ್ಯವನ್ನು ಗಮನದಲ್ಲಿಟ್ಟು ಸರ್ಕಾರ ಪರಿಣಾಮಕಾರಿ ಯೋಜನೆಗಳನ್ನು ಜಾರಿಗೆ ತರಬೇಕು.

ಸಲೀಮ್ ಬೋಳಂಗಡಿ, ಮಂಗಳೂರು

ಅನುತ್ತೀರ್ಣದ ಪರಿಣಾಮ: ನಡೆಯಲಿ ಅಧ್ಯಯನ

ಶಾಲಾ ಮಕ್ಕಳನ್ನು ಅನುತ್ತೀರ್ಣಗೊಳಿಸುವುದರಿಂದ ಲಾಭಕ್ಕಿಂತ ನಷ್ಟವೇ ಹೆಚ್ಚು ಎಂದು ಹರಿಪ್ರಸಾದ್ ಜಿ.ವಿ. ಅವರು ಅಭಿಪ್ರಾಯಪಟ್ಟಿರುವುದು (ಚರ್ಚೆ, ಜ. 6) ಸರಿಯಾಗಿದೆ. ಕಲಿಕಾ ಸಾಮರ್ಥ್ಯ ಕಡಿಮೆ ಇರುವ ಮಕ್ಕಳನ್ನು ಶಿಕ್ಷಕರು ಗುರುತಿಸಿ ಅವರಿಗೆ ವಿಶೇಷ ತರಗತಿಗಳನ್ನು ನಡೆಸಬೇಕು. ಅಂತಹ ಮಕ್ಕಳನ್ನು ಮುಖ್ಯವಾಹಿನಿಗೆ ತರುವ ಕರ್ತವ್ಯವನ್ನು ಆ ಶಾಲೆಯ ಮುಖ್ಯಸ್ಥರಿಗೆ ವಹಿಸಬೇಕು. ಇಂತಹ ವಿದ್ಯಾರ್ಥಿಗಳು ಕಲಿಕೆಯಲ್ಲಿ ಹಿಂದುಳಿಯಲು ಕಾರಣವೇನು ಎಂಬುದನ್ನು ಶಿಕ್ಷಕರು ಮೊದಲು ಅರಿಯಬೇಕು. ಅನುತ್ತೀರ್ಣ ಮಾಡುವುದರಿಂದ ಮಕ್ಕಳ ಮನಸ್ಸಿನ ಮೇಲೆ ಬೀರಬಹುದಾದ ಪರಿಣಾಮಗಳ ಬಗ್ಗೆ ಶಿಕ್ಷಣ ತಜ್ಞರು ಆಳವಾಗಿ ಅಧ್ಯಯನ ನಡೆಸುವಂತಾಗಲಿ.

ಬೂಕನಕೆರೆ ವಿಜೇಂದ್ರ, ಮೈಸೂರು

ಸಾರಿಗೆ ನಿಗಮಗಳಿಗೇಕೆ ಸಾಮಾನ್ಯ ಜ್ಞಾನವಿಲ್ಲ?

ಸಾರಿಗೆ ನಿಗಮಗಳು ಅವೈಜ್ಞಾನಿಕವಾಗಿ ಏರಿಸಿರುವ ಬಸ್ ಪ್ರಯಾಣ ದರದಿಂದಾಗಿ ಜನ ಚಿಲ್ಲರೆ ಸಮಸ್ಯೆಯ ಕಿರಿಕಿರಿ ಎದುರಿಸುವಂತಾಗಿದೆ. ಉದಾಹರಣೆಗೆ, ₹35, 40..., ಇದ್ದ ದರಗಳು ಈಗ ₹41, 46... ಆಗಿವೆ. ಇದರಿಂದ ಪ್ರಯಾಣಿಕರು ಮತ್ತು ನಿರ್ವಾಹಕರ ನಡುವೆ ಚಿಲ್ಲರೆಗಾಗಿ ಮಾತಿನ ಚಕಮಕಿ ನಡೆಯುತ್ತಿದೆ. ಕೆಲವೆಡೆ ನಿಗಮಗಳು ಬಸ್‌ಗಳಲ್ಲಿ ಕ್ಯುಆರ್ ಕೋಡ್ ವ್ಯವಸ್ಥೆ ಅಳವಡಿಸಿವೆಯಾದರೂ ಇದರಿಂದ ಅಲ್ಪಪ್ರಮಾಣದಲ್ಲಷ್ಟೇ ಚಿಲ್ಲರೆ ಸಮಸ್ಯೆಗೆ ಮುಕ್ತಿ ದೊರಕಿದೆ.

ಈ ವ್ಯವಸ್ಥೆಯನ್ನು ಹೊಂದಿಲ್ಲದವರು ಪ್ರಯಾಣಿಸುವಾಗ, ಪ್ರಯಾಣಿಕರ ಸಂಖ್ಯೆ ಹೆಚ್ಚಿದ್ದಾಗ, ನೆಟ್‌ವರ್ಕ್ ಇಲ್ಲದಿದ್ದಾಗ ಚಿಲ್ಲರೆ ಸಮಸ್ಯೆ ಬಾಧಿಸುತ್ತದೆ. ನಿಗಮಗಳು ದರ ಪರಿಷ್ಕರಣೆ ಮಾಡುವಾಗ ಇಂತಹ ಸಮಸ್ಯೆಯ ಬಗ್ಗೆ ಗಮನಹರಿಸುವುದಿಲ್ಲವೇಕೆ? ಖಾಸಗಿ ಸಾರಿಗೆಯವರು ಈ ವಿಚಾರದಲ್ಲಿ ಎಚ್ಚರಿಕೆ ವಹಿಸುವುದರಿಂದ ಅಲ್ಲಿ ಚಿಲ್ಲರೆಗಾಗಿ ಗಲಾಟೆ ನಡೆಯುವುದಿಲ್ಲ. ಬೇರೆ ಕ್ಷೇತ್ರದಲ್ಲಾದರೆ ಚಿಲ್ಲರೆಗೆ ಬದಲಾಗಿ ಚಾಕೊಲೇಟ್, ಬಿಸ್ಕತ್ತಿನ ಪೊಟ್ಟಣಗಳನ್ನು ನೀಡಿ ಸರಿದೂಗಿಸಲಾಗುತ್ತದೆ. ಆದರೆ ಬಸ್‌ಗಳಲ್ಲಿ ಹಾಗೆ ಆಗುವುದಿಲ್ಲ. ನಿಗಮಗಳು ಈ ಸಮಸ್ಯೆಗೆ ಶೀಘ್ರ ಪರಿಹಾರ ಒದಗಿಸಬೇಕಾಗಿದೆ.

ಸುರೇಂದ್ರ ಪೈ, ಭಟ್ಕಳ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಗ್ರಾಮೀಣ ಭಾಗಗಳಲ್ಲಿ ಕೇಂದ್ರದ ಯೋಜನೆಗಳ ಮೇಲ್ವಿಚಾರಣೆಗೆ ಹಿನ್ನಡೆ

ದಿಸೆ ಇಲ್ಲದ 'ದಿಶಾ'

ಗ್ರಾಮೀಣ ಭಾರತದಲ್ಲಿ ಕೇಂದ್ರ ಸರ್ಕಾರದ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಉದ್ದೇಶದಿಂದ ರಚಿಸಲಾದ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿಗಳು (ದಿಶಾ) ತಮ್ಮ ಆಶಯದಿಂದ ವಿಮುಖವಾಗಿವೆ. ಜಿಲ್ಲಾ ಮಟ್ಟದಲ್ಲಿ ನಿಯಮಗಳ ಪ್ರಕಾರ ಸಭೆ ನಡೆಯದಿರುವುದು ಯೋಜನೆಗಳ ಪರಿಣಾಮಕಾರಿ ಅನುಷ್ಠಾನದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ. ಕೇಂದ್ರದ ಮತ್ತೊಂದು ಮಹತ್ವಾಕಾಂಕ್ಷೆಯ ಸಂಸದರ ಆದರ್ಶ ಗ್ರಾಮ ಯೋಜನೆಯ ಉದ್ದೇಶವೂ ಈಡೇರಿಲ್ಲ

ಜಿಲ್ಲಾ ಮಟ್ಟದಲ್ಲಿ ಕೇಂದ್ರ ಸರ್ಕಾರದ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದಕ್ಕಾಗಿ ಸಂಸದರು, ಶಾಸಕರು ಮತ್ತು ಅಧಿಕಾರಿಗಳ ನಡುವೆ ಸಮನ್ವಯ ಸಾಧಿಸುವ ದಿಸೆಯಲ್ಲಿ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿಗಳನ್ನು (ದಿಶಾ) ರಚಿಸಲಾಗಿದೆ. ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯವು ನಾಮನಿರ್ದೇಶನ ಮಾಡುವ ಆಯಾ ಜಿಲ್ಲೆಯ ಸಂಸದರ ನೇತೃತ್ವದಲ್ಲಿ ಈ ಸಮಿತಿ ಕಾರ್ಯನಿರ್ವಹಿಸುತ್ತದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವಾಲಯದ ನಿಯಮಗಳ ಪ್ರಕಾರ, ಯೋಜನೆಗಳ ಪ್ರಗತಿಯನ್ನು ಅವಲೋಕಿಸಲು ಈ ಸಮಿತಿಯು ಮೂರು ತಿಂಗಳಿಗೊಮ್ಮೆಯಂತೆ ವರ್ಷಕ್ಕೆ ನಾಲ್ಕು ಬಾರಿ ಸಭೆ ಸೇರಬೇಕು. ಆದರೆ, ಕರ್ನಾಟಕ ಸೇರಿದಂತೆ ದೇಶದ ಯಾವ ರಾಜ್ಯದಲ್ಲೂ 'ದಿಶಾ' ಸಭೆಗಳು ನಿಯಮಿತವಾಗಿ ನಡೆಯುತ್ತಿಲ್ಲ. ಇದರಿಂದಾಗಿ ಈ ಸಮಿತಿ ರಚನೆಯ ಉದ್ದೇಶವೇ ವಿಫಲವಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವಾಲಯಕ್ಕೆ ಸಂಬಂಧಿಸಿದ ಸಂಸತ್ತಿನ ಸ್ಥಾಯಿ ಸಮಿತಿಯು ಇತ್ತೀಚೆಗೆ ಸಂಸತ್ತಿನಲ್ಲಿ ಮಂಡಿಸಿರುವ ವರದಿಯಲ್ಲಿ ಹೇಳಿದೆ.

'ನರೇಗಾ', ದೀನ ದಯಾಳ್ ಅಂತ್ಯೋದಯ ಯೋಜನೆ–ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್, ವಸತಿ ಸಚಿವಾಲಯದ ಅಡಿಯಲ್ಲಿ ಬರುವ ವಿವಿಧ ವಸತಿ ಯೋಜನೆಗಳು ಸೇರಿದಂತೆ 26 ಇಲಾಖೆಗಳ 67 ಯೋಜನೆಗಳ ಅನುಷ್ಠಾನ ಪ್ರಗತಿಯ ಮೇಲುಸ್ತುವಾರಿ ಮಾಡುವ ಜವಾಬ್ದಾರಿ ಈ ಸಮಿತಿಗೆ ಇದೆ. ಕೇಂದ್ರ ಸರ್ಕಾರ 2016ರಲ್ಲಿ 'ದಿಶಾ' ಸಮಿತಿ ರಚನೆ ಮಾಡಿತ್ತು. ಜಿಲ್ಲಾ ಮಟ್ಟದಲ್ಲಿ ಮಾತ್ರವಲ್ಲ; ರಾಜ್ಯ ಮಟ್ಟದಲ್ಲೂ ಪ್ರತ್ಯೇಕ ಸಮಿತಿ ಇದೆ. ಈ ಸಮಿತಿಯ ಸಭೆಗಳನ್ನು ಆಯೋಜಿಸುವುದಕ್ಕಾಗಿ ಕೇಂದ್ರವು ಅನುದಾನವನ್ನೂ ಬಿಡುಗಡೆ ಮಾಡುತ್ತದೆ.

ನಿಯಮಗಳ ಪ್ರಕಾರ, ಜಿಲ್ಲಾ ಮಟ್ಟದಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ದಿಶಾ ಸಭೆ ನಡೆಯಬೇಕು. ರಾಜ್ಯ ಮಟ್ಟದಲ್ಲಿ ಆರು ತಿಂಗಳಿಗೆ ಒಮ್ಮೆ ಈ ಸಭೆ ನಡೆಯಬೇಕು. ಆದರೆ, ಎರಡೂ ಕಡೆ ನಿಗದಿಯಂತೆ ಸಭೆ ನಡೆಯುತ್ತಿಲ್ಲ ಎಂದು ಸ್ಥಾಯಿ ಸಮಿತಿ ತಿಳಿಸಿದೆ.

ಕರ್ನಾಟಕದಲ್ಲಿ...

ರಾಜ್ಯದಲ್ಲಿ 31 ಜಿಲ್ಲೆಗಳಿವೆ. ಒಂದು ಜಿಲ್ಲೆಯಲ್ಲಿ ವರ್ಷಕ್ಕೆ ನಾಲ್ಕು ಸಭೆಗಳಂತೆ ಎಲ್ಲ ಜಿಲ್ಲೆಗಳಲ್ಲೂ ಸೇರಿ 124 ದಿಶಾ ಸಭೆಗಳು ನಡೆಯಬೇಕು. ದಿಶಾ ಸಮಿತಿ ರಚನೆಯಾದಾಗಿನಿಂದ (2016) ಇಲ್ಲಿಯವರೆಗೆ ವರ್ಷವಾರು ಅದರ ಅರ್ಧದಷ್ಟು ಸಂಖ್ಯೆಯ ಸಭೆಗಳೂ ನಡೆದಿಲ್ಲ. 2022–23ನೇ ಸಾಲಿನಲ್ಲಿ 57 ಸಭೆಗಳು ನಡೆದಿರುವುದೇ ಗರಿಷ್ಠ ಸಂಖ್ಯೆ. 2016–17ನೇ ಸಾಲಿನಿಂದ 2024ರ ಡಿಸೆಂಬರ್ 17ರವರೆಗೆ ಒಟ್ಟು 419 ಸಭೆಗಳು ನಡೆದಿವೆ.

ಶಿವಮೊಗ್ಗದಲ್ಲಿ ಕಳೆದ ನವೆಂಬರ್‌ನಲ್ಲಿ ನಡೆದ ದಿಶಾ ಸಮಿತಿ ಸಭೆಯ ಚಿತ್ರ

ಈವರೆಗೆ ರಾಜ್ಯದಲ್ಲಿ ನಡೆದಿರುವ 'ದಿಶಾ' ಸಭೆಗಳು



2024ರ ಏಪ್ರಿಲ್ ನಂತರದ ಎಂಟು ತಿಂಗಳಲ್ಲಿ 24 ಜಿಲ್ಲೆಗಳಲ್ಲಿ ತಲಾ ಒಂದೊಂದು ಸಭೆ ನಡೆದಿದೆ. ವಿಜಯಪುರ, ಉಡುಪಿ, ಚಿಕ್ಕಮಗಳೂರು, ಕೊಪ್ಪಳ, ಉತ್ತರ ಕನ್ನಡ, ಚಿತ್ರದುರ್ಗ, ಕಲಬುರಗಿ ಜಿಲ್ಲೆಗಳಲ್ಲಿ ಸಭೆ ನಡೆದಿಲ್ಲ ಎಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಖಾತೆ ರಾಜ್ಯ ಸಚಿವ ಕಮಲೇಶ್ ಪಾಸ್ವಾನ್ ಅವರು ಲೋಕಸಭೆಗೆ 2024ರ ಡಿಸೆಂಬರ್ 17ರಂದು ನೀಡಿದ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಮಂಡ್ಯದಲ್ಲಿ ಹೆಚ್ಚು:ರಾಜ್ಯದ ಜಿಲ್ಲೆಗಳ ಪೈಕಿ, ಮಂಡ್ಯ ಜಿಲ್ಲೆಯಲ್ಲಿ ಹೆಚ್ಚು 'ದಿಶಾ' ಸಭೆಗಳು ನಡೆದಿವೆ. ಐದು ವರ್ಷಗಳಲ್ಲಿ 15 ಸಭೆಗಳು ನಡೆದಿವೆ. 2020–21 ಮತ್ತು 2021–22 ಸಾಲಿನಲ್ಲಿ ನಿಯಮಾನುಸಾರ ತಲಾ ನಾಲ್ಕು ಸಭೆಗಳು ನಡೆದಿದ್ದರೆ, ನಂತರದ ಎರಡು ವರ್ಷಗಳಲ್ಲಿ ತಲಾ ಮೂರು ಸಭೆಗಳು ಆಯೋಜನೆಗೊಂಡಿದ್ದವು. 2024 ಏಪ್ರಿಲ್‌ನಿಂದ ಈವರೆಗೆ ಒಂದು ಸಭೆ ನಡೆದಿದೆ. 13 ಸಭೆಗಳು ನಡೆದಿರುವ ತುಮಕೂರು ಜಿಲ್ಲೆ ಎರಡನೇ ಸ್ಥಾನದಲ್ಲಿದೆ. ದಕ್ಷಿಣ ಕನ್ನಡ, ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ತಲಾ 11, ದಾವಣಗೆರೆಯಲ್ಲಿ 10 ದಿಶಾ ಸಭೆಗಳು ನಡೆದಿವೆ. ವಿಜಯಪುರ ಜಿಲ್ಲೆಯಲ್ಲಿ ಐದು ವರ್ಷಗಳಲ್ಲಿ ಕೇವಲ ನಾಲ್ಕು ಸಭೆಗಳು ನಡೆದಿವೆ. ಬೆಂಗಳೂರು ನಗರ, ಚಾಮರಾಜನಗರ, ಧಾರವಾಡ, ರಾಯಚೂರು ಜಿಲ್ಲೆಗಳಲ್ಲಿ ತಲಾ ಐದು ಸಭೆಗಳು, ಯಾದಗಿರಿಯಲ್ಲಿ ಆರು ಸಭೆಗಳು ನಡೆದಿವೆ. ಒಬ್ಬ ಸಂಸದರ ವ್ಯಾಪ್ತಿಗೆ ಬರುವ ಚಿಕ್ಕಮಗಳೂರು–ಉಡುಪಿ ಜಿಲ್ಲೆಗಳಲ್ಲಿ ಕ್ರಮವಾಗಿ 3 ಮತ್ತು 4 ಸಭೆಗಳು ಆಯೋಜನೆಗೊಂಡಿವೆ.

ಸಮಿತಿಯಲ್ಲಿ ಯಾರ‍್ಯಾರು?

ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯ ನಾಮನಿರ್ದೇಶನ ಮಾಡುವ, ಆಯಾ ಜಿಲ್ಲೆಗಳ ಸಂಸದರು ದಿಶಾ ಸಮಿತಿ ಅಧ್ಯಕ್ಷರಾಗಿರುತ್ತಾರೆ. ಜಿಲ್ಲೆಯಲ್ಲಿ ಒಬ್ಬರಿಗಿಂತ ಹೆಚ್ಚು ಸಂಸದರಿದ್ದರೆ, ಹಿರಿಯ ಸಂಸದರನ್ನು ಅಧ್ಯಕ್ಷರನ್ನಾಗಿ ನಾಮ ನಿರ್ದೇಶನ ಮಾಡಲಾಗುತ್ತದೆ. ಉಳಿದವರು ಸಹ–ಅಧ್ಯಕ್ಷರಾಗಿರುತ್ತಾರೆ. ಜಿಲ್ಲೆಗಳ ಜಿಲ್ಲಾಧಿಕಾರಿಗಳು ಸಮಿತಿಯ ಸದಸ್ಯ ಕಾರ್ಯದರ್ಶಿ ಆಗಿರುತ್ತಾರೆ.

ಸದಸ್ಯರು: ಜಿಲ್ಲೆಯ ಎಲ್ಲ ಶಾಸಕರು, ರಾಜ್ಯದ ಒಬ್ಬ ಪ್ರತಿನಿಧಿ, ನಗರ ಪಾಲಿಕೆಗಳ ಎಲ್ಲ ಮೇಯರ್‌ಗಳು ಅಥವಾ ಅಧ್ಯಕ್ಷರು (ಇವರಲ್ಲಿ ಒಬ್ಬ ಮಹಿಳೆ ಇರಬೇಕು), ಐದು ಗ್ರಾಮ ಪಂಚಾಯಿತಿಗಳ ಮುಖ್ಯಸ್ಥರು (ಇವರಲ್ಲಿ ಇಬ್ಬರು ಮಹಿಳೆಯರು ಆಗಿರಬೇಕು), ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲೆಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ (ಡಿಆರ್‌ಡಿಎ) ಯೋಜನಾ ನಿರ್ದೇಶಕ, ಬ್ಲಾಕ್ ಪಂಚಾಯಿತಿಗಳ ಅಧ್ಯಕ್ಷರು, ಪ್ರತಿಷ್ಠಿತ ಎನ್‌ಜಿಒ ಒಂದರ ಪ್ರತಿನಿಧಿ, ಎಸ್‌ಸಿ, ಎಸ್‌ಟಿ ಸಮುದಾಯದಿಂದ ತಲಾ ಒಬ್ಬರು, ಒಬ್ಬ ಮಹಿಳೆ, ಜಿಲ್ಲೆಯ ಲೀಡ್ ಬ್ಯಾಂಕ್ ಮ್ಯಾನೇಜರ್, ಅಂಚೆ ಇಲಾಖೆಯ ಹಿರಿಯ ಸೂಪರಿಂಟೆಂಡೆಂಟ್ ಮತ್ತು ದಿಶಾ ವ್ಯಾಪ್ತಿಗೆ ಬರುವ ಸರ್ಕಾರದ ಎಲ್ಲ ಯೋಜನೆಗಳ ಜಿಲ್ಲಾ ಮಟ್ಟದ ನೋಡಲ್ ಅಧಿಕಾರಿಗಳು ಸಮಿತಿಯ ಸದಸ್ಯರಾಗಿರುತ್ತಾರೆ.

ಐದು ವರ್ಷಗಳಲ್ಲಿ ಹೆಚ್ಚು 'ದಿಶಾ' ಸಭೆ ನಡೆದ ಜಿಲ್ಲೆಗಳು



ಆಧಾರ: ಸಂಸದೀಯ ಸ್ಥಾಯಿ ಸಮಿತಿ ವರದಿ, ಸಂಸತ್ತಿನಲ್ಲಿ ಸಚಿವರ ಹೇಳಿಕೆ, ದಿಶಾ ವೆಬ್‌ಸೈಟ್

ರಾಷ್ಟ್ರ ಮಟ್ಟದಲ್ಲಿ ಐದು ವರ್ಷಗಳಲ್ಲಿ ನಡೆದ ಸಭೆಗಳು



ದೇಶದಲ್ಲೂ ಇದೇ ಸ್ಥಿತಿ

ಭಾರತದ ಉಳಿದ ರಾಜ್ಯಗಳ ಸ್ಥಿತಿಯೂ ಭಿನ್ನವಾಗಿಲ್ಲ. ಕರ್ನಾಟಕದ 31 ಜಿಲ್ಲೆಗಳನ್ನೂ ಸೇರಿಸಿ ದೇಶದಾದ್ಯಂತ ಒಟ್ಟು 785 ಜಿಲ್ಲೆಗಳಿದ್ದು, ಅಲ್ಲೂ ನಿಯಮಿತವಾಗಿ ದಿಶಾ ಸಭೆಗಳು ಜರುಗುತ್ತಿಲ್ಲ.

ಐದು ವರ್ಷಗಳಲ್ಲಿ 3,821 ಸಭೆಗಳು ನಡೆದಿವೆ. ವರ್ಷಕ್ಕೆ ನಾಲ್ಕರಂತೆ ಇಷ್ಟೂ ಜಿಲ್ಲೆಗಳಲ್ಲಿ ಐದು ವರ್ಷಕ್ಕೆ 19,105 (ಒಂದು ವರ್ಷಕ್ಕೆ 3,140ರಂತೆ) ಸಭೆಗಳು ನಡೆಯಬೇಕು (785 ಜಿಲ್ಲೆಗಳ ಪೈಕಿ ಕೆಲವು ಜಿಲ್ಲೆಗಳು ಐದು ವರ್ಷಗಳ ಅವಧಿಯಲ್ಲಿ ರಚನೆಯಾಗಿವೆ. ಹಾಗಾಗಿ, 2021ರಿಂದ ಇಲ್ಲಿಯವರೆಗೆ ಪ್ರತಿ ವರ್ಷ 3,140 ಸಭೆಗಳೇ ನಡೆಯಬೇಕಿತ್ತು ಎಂದು ಹೇಳಲು ಸಾಧ್ಯವಿಲ್ಲ. ಆದರೆ, ರಚನೆಯಾದ ಜಿಲ್ಲೆಗಳ ಸಂಖ್ಯೆ ಬೆರಳೆಣಿಕೆಯಷ್ಟು. ಈ ಹೊಸ ಜಿಲ್ಲೆಗಳನ್ನು ಪರಿಗಣಿಸದಿದ್ದರೂ ನಿಯಮಾನುಸಾರ ಸಭೆಗಳು ನಡೆದಿಲ್ಲ ಎನ್ನುವುದು ಗಮನಾರ್ಹ ಸಂಗತಿ).

ಕೇಂದ್ರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು, ಇಲಾಖೆಯ ಕಾರ್ಯದರ್ಶಿಯವರು ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ, ಸಂಬಂಧಿಸಿದ ಸಂಸದರಿಗೆ ಪತ್ರ ಬರೆದು ನಿಗದಿಯಂತೆ ಸಭೆ ನಡೆಸಲು ಸಂಬಂಧಿಸಿದ ಜಿಲ್ಲಾಧಿಕಾರಿಗಳು, ಜಿಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸುವಂತೆ ಹೇಳಿದರೂ ಸಭೆಗಳು ನಿಯಮಿತವಾಗಿ ನಡೆಯುತ್ತಿಲ್ಲ. ಇದರಿಂದ ಯೋಜನೆಗಳ ಅನುಷ್ಠಾನ, ಅನುದಾನ ಬಳಕೆ ಪರಿಣಾಮಕಾರಿಯಾಗಿ ಆಗುತ್ತಿಲ್ಲ.

ಸಂಸದೀಯ ಸ್ಥಾಯಿ ಸಮಿತಿ ಅತೃಪ್ತಿ

ನಿಯಮಾನುಸಾರ ದಿಶಾ ಸಭೆಗಳು ನಡೆಯದಿರುವುದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಸಂಸದೀಯ ಸ್ಥಾಯಿ ಸಮಿತಿಯು ಅಧಿಕಾರಿಗಳ ನಿರ್ಲಕ್ಷ್ಯದತ್ತ ಬೊಟ್ಟು ಮಾಡಿದೆ. ಸಭೆಗಳಿಗೆ ಜವಾಬ್ದಾರಿಯುತ ಹಿರಿಯ ಅಧಿಕಾರಿಗಳು ಗೈರಾಗುತ್ತಿದ್ದು, ಯೋಜನೆಗಳ ಬಗ್ಗೆ ಮಾಹಿತಿ ಇಲ್ಲದ ಕಿರಿಯ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸುತ್ತಿದ್ದಾರೆ ಎಂದು ಸಮಿತಿಯು ವರದಿಯಲ್ಲಿ ಉಲ್ಲೇಖಿಸಿದೆ. ಈ ವರ್ಷ ರಾಜ್ಯ ಮಟ್ಟದಲ್ಲಿ ಒಂದೂ ಸಭೆ ನಡೆಯದಿರುವುದನ್ನೂ ಅದು ಪ್ರಸ್ತಾಪಿಸಿದೆ.

'ಗ್ರಾಮೀಣ ಭಾಗಗಳಲ್ಲಿ ವಿವಿಧ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ದಿಶಾ ಸಭೆಗಳು ಮಹತ್ವದ ಪಾತ್ರವಹಿಸುತ್ತವೆ. ಇಲಾಖೆಗಳ ಹಿರಿಯ ಮತ್ತು ಯೋಜನೆ ಅನುಷ್ಠಾನ ಜವಾಬ್ದಾರಿ ಹೊತ್ತ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸದೇ ಇರುವುದರಿಂದ ದಿಶಾ ಸಮಿತಿ ರಚನೆಯ ಉದ್ದೇಶಕ್ಕೇ ಸೋಲಾಗಿದೆ' ಎಂದು ಸಮಿತಿ ವರದಿಯಲ್ಲಿ ಹೇಳಿದೆ.

'ಮಾರ್ಗಸೂಚಿಯ ಅನುಸಾರವಾಗಿ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ ಸಭೆಗಳು ನಿಯಮಿತವಾಗಿ ನಡೆಯುವುದನ್ನು ಖಾತರಿಪಡಿಸಬೇಕು ಮತ್ತು ಸಂಬಂಧಿಸಿದ ಇಲಾಖೆಗಳ ಹಿರಿಯ ಅಧಿಕಾರಿಗಳು ಸಮಿತಿ ಸಭೆಯಲ್ಲಿ ಕಡ್ಡಾಯವಾಗಿ ಪಾಲ್ಗೊಳ್ಳುವಂತೆ ಮಾಡಬೇಕು' ಎಂದು ಸಮಿತಿಯು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯಕ್ಕೆ ಸಲಹೆ ನೀಡಿದೆ.

'ಆದರ್ಶ ಗ್ರಾಮ': ಈಡೇರದ ಆಶಯ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯದ ವ್ಯಾಪ್ತಿಗೆ ಬರುವ, ಗ್ರಾಮಗಳನ್ನು ಮಾದರಿಯಾಗಿ ಅಭಿವೃದ್ಧಿಪಡಿಸುವುದಕ್ಕಾಗಿ ರೂಪಿಸಲಾದ 'ಸಂಸದರ ಆದರ್ಶ ಗ್ರಾಮ ಯೋಜನೆ' ಕೂಡ ತನ್ನ ಉದ್ದೇಶ ಈಡೇರಿಸಿಕೊಳ್ಳುವಲ್ಲಿ ವಿಫಲವಾಗಿದೆ ಎಂದೂ ಸಂಸದೀಯ ಸ್ಥಾಯಿ ಸಮಿತಿ ಅಭಿಪ್ರಾಯಪಟ್ಟಿದೆ.

2014ರ ಅಕ್ಟೋಬರ್ 11ರಂದು ಈ ಯೋಜನೆಗೆ ಚಾಲನೆ ನೀಡಲಾಗಿತ್ತು. ಸಂಸದರೇ ಈ ಯೋಜನೆಯಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ. ಆದರ್ಶ ಗ್ರಾಮಗಳನ್ನಾಗಿ ಅಭಿವೃದ್ಧಿ ಪಡಿಸಲು ಅವರೇ ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಯೋಜನೆಗಾಗಿ ಪ್ರತ್ಯೇಕ ಅನುದಾನವನ್ನು ಕೇಂದ್ರ ಸರ್ಕಾರ ನೀಡುವುದಿಲ್ಲ. ಬದಲಿಗೆ ಈಗಾಗಲೇ ಜಾರಿಯಲ್ಲಿರುವ ಅಭಿವೃದ್ಧಿ ಯೋಜನೆಗಳನ್ನು ಪರಸ್ಪರ ಸಮನ್ವಯದಿಂದ ಆದ್ಯತೆ ಮೇರೆಗೆ ಆಯ್ಕೆ ಮಾಡಿದ ಗ್ರಾಮಗಳಲ್ಲಿ ಅನುಷ್ಠಾನಗೊಳಿಸಲಾಗುತ್ತದೆ.

ಆದರೆ, ಯೋಜನೆಗಾಗಿ ಆಯ್ಕೆ ಮಾಡಿಕೊಂಡ ಗ್ರಾಮಗಳಲ್ಲಿ ಯಾವುದೇ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ಅನುಷ್ಠಾನಗೊಳಿಸಿರುವುದು ಸಂಸದರ ಗಮನಕ್ಕೆ ಬಂದಿಲ್ಲ. ಒಂದಲ್ಲ ಒಂದು ಕಾರಣಕ್ಕೆ ಈ ಯೋಜನೆಯ ಆಶಯವು ಪೂರ್ಣವಾಗಿ ಈಡೇರಿಲ್ಲ. ಗ್ರಾಮಗಳ ಅಭಿವೃದ್ಧಿಯಾಗಿಲ್ಲ ಎಂದು ಸಮಿತಿಯು ತನ್ನ ವರದಿಯಲ್ಲಿ ಉಲ್ಲೇಖಿಸಿದೆ. ಈ ಯೋಜನೆಯನ್ನು ತಳಮಟ್ಟದಲ್ಲಿ ಆದ್ಯತೆ ಮೇರೆಗೆ ಅನುಷ್ಠಾನಗೊಳಿಸುವ ತುರ್ತು ಇದೆ ಎಂದು ಅದು ಪ್ರತಿಪಾದಿಸಿದೆ.

ಯೋಜನೆಗಳನ್ನು ಗ್ರಾಮ ಮಟ್ಟದಲ್ಲಿ ಅನುಷ್ಠಾನಗೊಳಿಸುವಾಗ ಸಂಸದರು ಸಕ್ರಿಯವಾಗಿ ತೊಡಗಿಕೊಳ್ಳಬೇಕು. ಸಂಸತ್ ಸದಸ್ಯರಿಗೆ ತಳಮಟ್ಟದಲ್ಲಿರುವ ಅನುಭವಗಳನ್ನು ಯೋಜನೆ ಅನುಷ್ಠಾನದ ಸಂದರ್ಭದಲ್ಲಿ ಅಧಿಕಾರಿಗಳು ಬಳಸಿಕೊಳ್ಳಬೇಕು. ಯೋಜನೆ ಜಾರಿ ಪ್ರಗತಿಯ ಬಗ್ಗೆ ಅವರಿಗೆ ಸದಾ ಮಾಹಿತಿ ನೀಡುತ್ತಿರಬೇಕು ಎಂದು ಸಮಿತಿ ತನ್ನ ಶಿಫಾರಸಿನಲ್ಲಿ ಹೇಳಿದೆ.

ಸಂಸದರ ಆದರ್ಶ ಗ್ರಾಮ ಯೋಜನೆ				
ರಾಷ್ಟ್ರ ಮಟ್ಟದಲ್ಲಿ	3,361 ಯೋಜನೆಗಾಗಿ ಗುರುತಿಸಿರುವ ಗ್ರಾಮಗಳು	3,114 ಗ್ರಾಮ ಅಭಿವೃದ್ಧಿ ಯೋಜನೆಗಳನ್ನು (ವಿಡಿಪಿ) ಸಿದ್ಧಪಡಿಸಿರುವ ಗ್ರಾಮ ಪಂಚಾಯಿತಿಗಳು	2,62,192 ಗ್ರಾಮ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದ್ದ ಕಾಮಗಾರಿಗಳು	2,29,347 ಪೂರ್ಣಗೊಂಡ ಕಾಮಗಾರಿಗಳು
ಕರ್ನಾಟಕದಲ್ಲಿ	134 ಯೋಜನೆ ಅಡಿ ಗುರುತಿಸಿರುವ ಗ್ರಾಮಗಳು	126 ಗ್ರಾಮ ಅಭಿವೃದ್ಧಿ ಯೋಜನೆ (ವಿಡಿಪಿ) ಸಿದ್ಧಪಡಿಸಿರುವ ಗ್ರಾಮ ಪಂಚಾಯಿತಿಗಳು	16,997 ಕೈಗೆತ್ತಿಕೊಳ್ಳಲು ಉದ್ದೇಶಿಸಿದ್ದ ಕಾಮಗಾರಿಗಳು	13,668 ಪೂರ್ಣಗೊಂಡ ಕಾಮಗಾರಿಗಳು



ಯಶ್ ಜನ್ಮದಿನಕ್ಕೆ 'ಟಾಕ್ಸಿಕ್' ಅನಾವರಣ

ಇಂದು (ಜ.8) ನಟ ಯಶ್ ಜನ್ಮದಿನ. ಇದೇ ಸಂದರ್ಭದಲ್ಲಿ ಯಶ್ ಮುಂದಿನ ಸಿನಿಮಾ 'ಟಾಕ್ಸಿಕ್'ನ ಗ್ಲಿಮ್ಸ್ ಬಿಡುಗಡೆಯಾಗಲಿದೆ. ನಾಯಕನ ಪಾತ್ರವನ್ನು ಈ ಮೂಲಕ ಚಿತ್ರತಂಡ ಪರಿಚಯಿಸಲಿದೆ.

ಸಿನಿಮಾ ಕೆಲಸದ ನಿಮಿತ್ತ ಯಶ್ ಬೆಂಗಳೂರಿನಿಂದ ಹೊರಗಿದ್ದಾರೆ. ಹೀಗಾಗಿ ಅಭಿಮಾನಿಗಳಿಗೆ ನಿರಾಸೆಯಾದರೂ 'ಟಾಕ್ಸಿಕ್' ಸಿನಿಮಾದ ಅಪ್‌ಡೇಟ್ ಹೊಸ ಹುರುಪು ನೀಡಿದೆ. 'ಕೆ.ಜಿ.ಎಫ್. ಚಾಪ್ಟರ್–2' ಸಿನಿಮಾ ಬಳಿಕ ಯಶ್ ನಟನೆಯ ಸಿನಿಮಾ ಇದಾಗಿದ್ದು, ಗೀತು ಮೋಹನ್‌ದಾಸ್ ನಿರ್ದೇಶನ ಮಾಡುತ್ತಿದ್ದಾರೆ. 'ಟಾಕ್ಸಿಕ್' ಯಶ್ ನಟನೆಯ 19ನೇ ಸಿನಿಮಾವಾಗಿದೆ. 2023ರ ಡಿಸೆಂಬರ್ 8ರಂದು ಘೋಷಣೆಯಾಗಿದ್ದ ಈ ಚಿತ್ರದ ಚಿತ್ರೀಕರಣ ಆಗಸ್ಟ್ 8ರಂದು ಆರಂಭವಾಗಿತ್ತು. ಬೆಂಗಳೂರಿನ ಎಚ್‌ಎಂಟಿ ಮೈದಾನದಲ್ಲಿ ಮೊದಲ ಹಂತದ ಚಿತ್ರೀಕರಣ ಪೂರ್ಣಗೊಳಿಸಿ ಚಿತ್ರತಂಡ ಮುಂಬೈನಲ್ಲೂ ಚಿತ್ರೀಕರಣ ನಡೆಸಿದೆ.

'A fairy tale for grown-ups' ಎಂಬ ಅಡಿಬರಹವಿರುವ ಈ ಸಿನಿಮಾವನ್ನು ಕೆವಿಎನ್ ಪ್ರೊಡಕ್ಷನ್ಸ್ ಹಾಗೂ ಯಶ್ ಅವರ ಮಾನ್‌ಸ್ಟರ್ ಮೈಂಡ್ ಕ್ರಿಯೇಷನ್ಸ್ ನಿರ್ಮಾಣ ಮಾಡುತ್ತಿದೆ. 2025ರ ಏಪ್ರಿಲ್ 10ರಂದು ಸಿನಿಮಾ ಬಿಡುಗಡೆಯಾಗಲಿದೆ ಎಂದು ಚಿತ್ರತಂಡ ಘೋಷಿಸಿದೆ. ❖

ದ್ವಿಪಾತ್ರದಲ್ಲಿ ವಿಜಯ ರಾಘವೇಂದ್ರ

ವಿಜಯ್ ರಾಘವೇಂದ್ರ, ಪ್ರಿಯಾಂಕ ತಿಮ್ಮೇಶ್

ಇತ್ತೀಚೆಗಷ್ಟೇ ಸೆಟ್ಟೇರಿ ಮೊದಲ ಹಂತದ ಚಿತ್ರೀಕರಣ ಪೂರ್ಣಗೊಳಿಸಿರುವ 'ರುದ್ರಾಭಿಷೇಕಂ' ಚಿತ್ರದಲ್ಲಿ ವಿಜಯ ರಾಘವೇಂದ್ರ ದ್ವಿಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ವಸಂತ್ ಕುಮಾರ್ ನಿರ್ದೇಶನದ ಚಿತ್ರಕ್ಕೆ ಫ್ಯಾನ್ ಇಂಡಿಯಾ ಕ್ರಿಯೇಶನ್ಸ್ ಬಂಡವಾಳ ಹೂಡಿದೆ.

'ನಟ ವಿಜಯ ರಾಘವೇಂದ್ರ ತಂದೆ ಮತ್ತು ಮಗನಾಗಿ ದ್ವಿಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಅವರು ಮೊದಲ ಬಾರಿಗೆ ವೀರಗಾಸೆ ಕಲಾವಿದನ ಪಾತ್ರಕ್ಕೆ ಬಣ್ಣ ಹಚ್ಚಿದ್ದಾರೆ. ನಾಡಿನ ಸಾಂಸ್ಕೃತಿಕ ಹಿನ್ನೆಲೆ, ಇತಿಹಾಸ, ಅದರ ವೈಭವವನ್ನು ಕಮರ್ಷಿಯಲ್ ಆಗಿ ಹೇಳಲು ಪ್ರಯತ್ನಿಸಿದ್ದೇವೆ. ದೇವನಹಳ್ಳಿ ಸುತ್ತಮುತ್ತ ಮೊದಲ ಹಂತದ ಚಿತ್ರೀಕರಣ ನಡೆಸಲಾಗಿದೆ. ಫೆಬ್ರುವರಿ ಎರಡನೇ ವಾರದಿಂದ 2ನೇ ಹಂತದ ಶೂಟಿಂಗ್ ಪ್ರಾರಂಭಿಸಲಾಗುವುದು. ಈ ಹಂತದಲ್ಲಿ ಮಾತಿನಭಾಗ ಹಾಗೂ ಎರಡು ಹಾಡುಗಳನ್ನು ದೇವನಹಳ್ಳಿ, ವಿಜಯಪುರದಲ್ಲಿ ಚಿತ್ರೀಕರಿಸಿ, ಉಳಿದೆರಡು ಹಾಡುಗಳನ್ನು ಮಲ್ಪೆ, ಮಂಗಳೂರು ಹಾಗೂ ಆಗುಂಬೆ ಸುತ್ತಮುತ್ತ ಚಿತ್ರೀಕರಿಸುವ ಯೋಜನೆಯಿದೆ' ಎಂದು ನಿರ್ದೇಶಕರು ತಿಳಿಸಿದ್ದಾರೆ.

ಪ್ರಿಯಾಂಕ ತಿಮ್ಮೇಶ್ ಚಿತ್ರದ ನಾಯಕಿ. ವಿ.ಮನೋಹರ್ ಸಂಗೀತ ಸಂಯೋಜನೆ, ಮುತ್ತುರಾಜ್ ಛಾಯಾಚಿತ್ರಗ್ರಹಣ ಈ ಚಿತ್ರಕ್ಕಿದೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ಮನಸ್ಸಿನ ಕಾಯಿಲೆ!

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

12ನೇ ಶತಮಾನದಲ್ಲಿ ಶರಣೆಯೊಬ್ಬಳು ಒಂದು ಸುಂದರ ಮಾತು ಬರೆಯುತ್ತಾಳೆ. 'ಘನವ ಕಾಂಬುದಕ್ಕೆ ಈ ಮನವು ಎಂತಾಗಬೇಕೆಂದೊಡೆ, ಗಾಳಿ ಬೀಸದ ಜಲದಂತೆ, ಮೋಡ ಮುಸುಕದ ಸೂರ್ಯನಂತೆ, ಬೆಳಗಿದ ದರ್ಪಣದಂತೆ, ಮನ ನಿರ್ಮಲವಾದಲ್ಲದೆ ಘನವ ಕಾಣಬಾರದು ನಮ್ಮ ಅಪ್ಪಣ್ಣಪ್ರಿಯ ಚೆನ್ನಬಸವಣ್ಣ' ಎಂದು. ಏನನ್ನೇ ಸಾಧಿಸಬೇಕು ಅಂದರ ಮನಸ್ಸು ಸ್ವಚ್ಛವಾಗಿರಬೇಕು. ಮನದಲ್ಲಿಯೂ ಮಲ, ವಿಕ್ಷೇಪ, ಆವರಣ ಎಂಬ ದೋಷಗಳಿವೆ. ಈ ದೋಷಗಳು ಇರುವುದರಿಂದ ನಮಗೆ ದುಃಖ, ಅಹಂಕಾರ ಬಂದೈತಿ. ಮಲ ದೋಷ ಎಂದರೆ ಒಳ್ಳೇದು ಅನ್ನೋದು ಗೊತ್ತಿದ್ದರೂ ಅದನ್ನು ಮಾಡಲು ಬಿಡುವುದಿಲ್ಲ. ಕೆಟ್ಟದ್ದು ಅಂತಾ ಗೊತ್ತಿದ್ರೂ ಅದನ್ನು ಮಾಡಿಸುತ್ತದೆ. ಉದಾಹರಣೆಗೆ ಸಿಗರೇಟ್ ಸೇದುವ ಚಟ. ಸಿಗರೇಟ್ ಪ್ಯಾಕಿನ ಮೇಲೆ 'ಆರೋಗ್ಯಕ್ಕೆ ಹಾನಿಕರ' ಎಂದು ಬರೆದಿದ್ದರೂ ಅದನ್ನು ಓದಿಯೂ ಸೇದುತ್ತಾನೆ. ಇದು ಮಲ ದೋಷ. ಮನೆಯಲ್ಲಿ ಹೆಂಡತಿ 'ಸಿಗರೇಟ್ ಸೇದಬ್ಯಾಡಿ' ಅಂತ ಹೇಳಿದರೆ 'ಬಿಟ್ಟರೆ ನಿನ್ನ ಬಿಟ್ಟೇನು, ಇದನ್ನು ಬಿಡಲ್ಲ' ಅಂತಾನೆ ಇವ. ಅದನ್ನು ನೋಡಿ ಸಿಗರೇಟ್ ಹೇಳತ್ತೈತಿ, 'ನೀನೂ ಅಗ್ನಿಸಾಕ್ಷಿಯಾಗೇ ಬಂದಿ, ನಾನೂ ಅಗ್ನಿಸಾಕ್ಷಿಯಾಗೇ ಬಂದಿದ್ದೀನಿ. ವ್ಯತ್ಯಾಸ ಇಷ್ಟೆ ನೀನು ಅಗ್ನಿಸಾಕ್ಷಿಯಾಗಿ ಇವನ ಜೊತೆ ಕೂಡಿರಲು ಬಂದಿದ್ದಿ. ನಾನು ಕರಕೊಂಡು ಹೋಗಾಕೆ ಬಂದೀನಿ' ಅಂತ. ವಿದ್ಯಾರ್ಥಿಗಳಿಗೆ ಮೊಬೈಲ್ ಹಿಡಿದರೆ ಏನಾಗುತ್ತೈತಿ, ಪುಸ್ತಕ ಹಿಡಿದರೆ ಏನಾಗುತ್ತೈತಿ ಅಂತಾ ಗೊತ್ತೈತಿ. ಆದರೂ ಮೊಬೈಲ್ ಹಿಡಿತಾರ. ಇದು ಮಲದೋಷ.

ಸಂತ ಸಿದ್ಧಾರೂಢರು ಪ್ರತಿ ದಿನ ಪ್ರವಚನ ಮಾಡುತ್ತಿದ್ದರು. ಧರ್ಮ, ದೇವರು, ಮೋಕ್ಷ ಅಂತ ಷಟ್ ಶಾಸ್ತ್ರಗಳನ್ನೂ ಹೇಳುತ್ತಿದ್ದರು. ಒಂದು ದಿನ ನಾಗಲಿಂಗಪ್ಪ ಅವಧೂತರು ಬಂದರು. 'ಇವತ್ತು ನಾನೇ ಪ್ರವಚನ ಮಾಡ್ತೀನಿ' ಅಂದರು. ಅದಕ್ಕೆ ಸಿದ್ಧಾರೂಢರು ಒಪ್ಪಿದರು. ನಾಗಲಿಂಗಪ್ಪನವರು ಒಂದು ಗಂಟೆ ಪ್ರವಚನ ಮಾಡಿ ಅಲ್ಲಿದ್ದವರನ್ನು ಬೈದರು. ಪ್ರವಚನದ ತುಂಬಾ ಬರೀ ಬೈಗುಳ ಅಷ್ಟೆ. ಮತ್ತೆ ಮಾರನೇ ದಿನವೂ ನಾಗಲಿಂಗಪ್ಪ ಬಂದು ತಾವೇ ಪ್ರವಚನ ಮಾಡುವುದಾಗಿ ಹೇಳಿದರು. ಅದಕ್ಕೆ ಭಕ್ತರು ವಿರೋಧ ಮಾಡಿದಾಗ, 'ಸಿದ್ಧಾರೂಢರು ಎಷ್ಟು ದಿನದಿಂದ ಪ್ರವಚನ ಮಾಡುತ್ತಿದ್ದಾರೆ' ಎಂದು ನಾಗಲಿಂಗಪ್ಪ ಕೇಳಿದರು. 'ಹತ್ತು ವರ್ಷಗಳಿಂದ' ಎಂದರು ಭಕ್ತರು. 'ಅವರು ಮಾಡಿದ ಪ್ರವಚನ ನಿಮ್ಮ ನೆನಪಲ್ಲಿ ಏತೇನು' ಎಂದು ಪ್ರಶ್ನಿಸಿದಾಗ 'ಇಲ್ರೀ, ದೇವರು, ಧರ್ಮ, ಮೋಕ್ಷ ಅಂತ ಏನೇನೋ ಹೇಳುತ್ತಿದ್ದರು' ಎಂದು ಉತ್ತರಿಸಿದರು ಭಕ್ತರು. 'ಮತ್ತೆ ನಾನು ನಿನ್ನೆ ಮಾಡಿದ ಪ್ರವಚನ ನೆನಪಿನಲ್ಲಿ ಏತೇನು' ಎಂದು ಕೇಳಿದರು ನಾಗಲಿಂಗಪ್ಪ. 'ಅಯ್ಯೋ ಅದು ಪ್ರವಚನ ಏನು? ಬರೀ ಬೈಗುಳ. ಏನೇನು ಬೈದಿರಿ ನೀವು' ಎಂದು ಹೇಳಿ ಎಲ್ಲ ಬೈಗುಳಗಳನ್ನೂ ಪುನರುಚ್ಚರಿಸಿದರು. ಅದನ್ನು ಕೇಳಿದ ಅವಧೂತರು, 'ಇದೇ ಕಾರಣಕ್ಕೆ ನಿಮ್ಮ ಮನೆಯಲ್ಲಿ ದ್ವೇಷ, ಅಸೂಯೆ, ಮನಸ್ತಾಪ ಎಲ್ಲಾ ತುಂಬ್ಯಾವ. ಸಿದ್ಧಾರೂಢರು ಹತ್ತು ವರ್ಷ ಪ್ರವಚನ ಮಾಡಿದರೂ ಅದು ನಿಮ್ಮ ನೆನಪಿನಲ್ಲಿ ಉಳಿಯಲಿಲ್ಲ. ಆದರೆ, ನಿನ್ನೆ ನಾನು ಒಂದು ಗಂಟೆ ಬೈದಿದ್ದು ಸಂಪೂರ್ಣ ನೆನಪೈತಿ ಅಂದರೆ ನಿಮ್ಮ ಅವನತಿಗೆ ಇದೇ ಕಾರಣ' ಎಂದರು. ನಮಗೆ ಕೆಟ್ಟದ್ದು ನೆನಪಿರತ್ತೈತಿ. ಒಳ್ಳೇದು ನೆನಪಿರಲ್ಲ.

ಇದು ಮನಸ್ಸಿನ ಕಾಯಿಲೆ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಜನವರಿ 8, 2025

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಶುಕ್ಲ ನವಮಿ ಗಂ. 14-26 ನಕ್ಷತ್ರ: ಅಶ್ವಿನಿ ಗಂ. 16-30 ಯೋಗ: ಸಿದ್ಧ ಗಂ. 20-23 ಕರಣ: ಕೌಲವ ಗಂ. 14-26, ಧನು ಮಾಸದ 23 ನೇ ದಿನ, ಮಳೆನಕ್ಷತ್ರ: ಪೂರ್ವಾಷಾಢ 4.
ರಾಹುಕಾಲ : ಮಧ್ಯಾಹ್ನ 12-00 – 01-30
ಸೂರ್ಯೋದಯ : 07-00 **ಸೂರ್ಯಾಸ್ತ :** 06-15
ಮುಸ್ಲಿಂ ದಿನಾಂಕ : 07 ರಜಬ್
ಅದೃಷ್ಟ ಸಂಖ್ಯೆ : 7, 12

ಮೇಷ: ಸ್ವಂತ ಉದ್ಯೋಗ ನಡೆಸುವವರಿಗೆ ಸಂಪಾದನೆ ಕಡಿಮೆ ಇದ್ದರೂ ಉದ್ಯೋಗ ಬದಲಾಯಿಸದೇ ಅದನ್ನೇ ಮುಂದುವರಿಸಿ. ಬಂದ ಸಮಸ್ಯೆಗಳು ಆಂಜನೇಯನ ಅನುಗ್ರಹದಿಂದ ಸರಾಗವಾಗಿ ದೂರಾಗಲಿವೆ.

ವೃಷಭ: ಹೂಡಿಕೆಯ ಬಗ್ಗೆ ಮುಂದಾಲೋಚನೆ , ಎಚ್ಚರಿಕೆಯಿಂದ ತೀರ್ಮಾನ ಕೈಗೊಳ್ಳುವುದು ಉತ್ತಮ. ಸಹೋದ್ಯೋಗಿಗಳಿಂದ ಉತ್ತಮ ಸಹಕಾರ ಇರಲಿದೆ. ಮನೆಯಲ್ಲಿ ಸಮಾರಂಭ ನಡೆಸಲು ತಯಾರಿ ನಡೆಸಬಹುದು.

ಮಿಥುನ: ಕುಟುಂಬದ ಮಾರ್ಗಸೂಚಕರ ಮಾರ್ಗಸೂಚಿಯಂತೆ ಕಳೆದು ಹೋಗಿದ್ದ ವಸ್ತುಗಳೂ ಪತ್ತೆಯಾಗುವುವು. ಷರತ್ತುಗಳುಳ್ಳ ವ್ಯವಹಾರಗಳಿಗೆ ಕೈ ಹಾಕಬೇಡಿ. ಕುಟುಂಬದವರ ಜವಾಬ್ದಾರಿ ಇರುತ್ತದೆ.

ಕರ್ಕಾಟಕ: ಒತ್ತಡದ ನಡುವೆಯೂ ಇತರರಿಗೆ ಸಹಾಯ ಮಾಡುವ ಮನಸ್ಥಿತಿ ಬೆಳೆಸಿಕೊಳ್ಳಿ. ಎಲ್ಲಾ ದಾರಿಗಳೂ ಸುಗಮ ಎನಿಸಿ ಕಷ್ಟಗಳೂ ನಿವಾರಣೆ ಆಗಲಿವೆ. ರಾಜಕೀಯದವರಿಗೆ ನಿರೀಕ್ಷಿತ ಕಾರ್ಯ ಸಾಧನೆ ತೃಪ್ತಿ ತರುತ್ತದೆ.

ಸಿಂಹ: ಪೂರ್ವನಿಯೋಜಿತ ಕಾರ್ಯಗಳು ಸರ್ವರ ಸಹಾಯದಿಂದ ಪೂರ್ಣಗೊಳ್ಳುವುದು. ಒದಗಿಬರಲಿರುವ ಅವಕಾಶ ಕೈತಪ್ಪಿ ಹೋಗದಂತೆ ನೋಡಿಕೊಳ್ಳಿ. ಮಾನಸಿಕ ಪೀಡೆಗಳಿಗೆ ಒಳಗಾಗದಂತೆ ಕಾಳಜಿವಹಿಸಿ.

ಕನ್ಯಾ: ಅಜೀರ್ಣದ ಸಮಸ್ಯೆಯಿಂದ ಜೀವನ ಉತ್ಸಾಹ ಕಳೆದುಕೊಂಡು ಆಲಸ್ಯವನ್ನು ಹೊಂದುವಿರಿ. ಗುರಿ ತಲುಪಲು ತಾಳ್ಮೆ ಮತ್ತು ವಿಶ್ವಾಸ ಅತಿ ಅಗತ್ಯ ಎಂದು ತಿಳಿಯುವಿರಿ. ಧನಾಗಮದಲ್ಲಿ ಚಿಂತೆ ಇರದು.

ತುಲಾ: ಭೂ ಖರೀದಿ, ಗೃಹ ನಿರ್ಮಾಣದಂತ ಕಾರ್ಯಗಳನ್ನು ಕೈಗೊಳ್ಳಲು ಉತ್ತಮ ಸಮಯ. ಇನ್ನೊಬ್ಬರಿಗೆ ಹೋಲಿಸಿಕೊಳ್ಳದೇ, ಯಾವುದೇ ಅತಿಯಾಸೆ ಇಲ್ಲದೆ, ನಿಶ್ಚಿಂತೆಯಿಂದ ದುಡಿದಲ್ಲಿ ಆದಾಯ ಹೊಂದುವಿರಿ.

ವೃಶ್ಚಿಕ: ಬಹುಕಾಲ ನೆನಪಿನಲ್ಲಿ ಉಳಿಯುವಂಥ ಮಧುರ ಘಟನೆ ಮನೆಯಲ್ಲಿ ನಡೆಯಲಿದೆ. ಕರ್ತವ್ಯದಲ್ಲಿನ ಕೊರತೆ ಮೇಲಧಿಕಾರಿಗಳಿಗೆ ಎದ್ದು ಕಾಣಲಿದೆ. ಆರೋಗ್ಯವು ಸುಧಾರಿಸುವುದು.

ಧನು: ವಿವಾಹ ಸಂಬಂಧ ವರಾನ್ವೇಷಣೆಗೆ ತೊಡಗುವುದಕ್ಕೆ ಸೂಕ್ತ ದಿನ. ಅನಗತ್ಯ ಮಾತು ಆಡುವುದರಿಂದ ನೆಮ್ಮದಿಗೆ ಭಂಗ ಉಂಟಾಗುವುದು. ಹೊಸ ವಾಹನ ಖರೀದಿಸುವ ಯೋಗವಿದೆ .

ಮಕರ: ಸಹೋದ್ಯೋಗಿಗಳೊಡನೆ ಅಥವಾ ಆಪ್ತ ಸ್ನೇಹಿತರೊಡನೆ ಹಣಕಾಸಿನ ವ್ಯವಹಾರದಿಂದ ಸಂಬಂಧಕ್ಕೆ ಹುಳಿ ಹಿಂಡಿದಂತಾಗಲಿದೆ. ವ್ಯವಹಾರದಲ್ಲಿನ ಲಾಭವು ಅಭಿವೃದ್ಧಿಗೆ ಸಹಕಾರಿ. ಸಾಲಬಾಧೆ ಸ್ವಲ್ಪ ಮಟ್ಟಿಗೆ ತೀರಲಿದೆ.

ಕುಂಭ: ಸಮಸ್ಯೆ ಹೆಚ್ಚುವುದಕ್ಕೆ ಮುಂಚಿತವಾಗಿ ಜಾಣ್ಮೆಯಿಂದ ಪರಿಹಾರದ ಮಾರ್ಗ ಕಂಡುಕೊಳ್ಳಿರಿ. ನೂತನ ಸಂಸ್ಥೆಯಲ್ಲಿ ಉತ್ತಮ ಉದ್ಯೋಗ ಪಡೆದುಕೊಳ್ಳುವಿರಿ. ಮೇಲಧಿಕಾರಿಗಳ ವಿಶ್ವಾಸ ಗಳಿಸುವಲ್ಲಿ ಯಶಸ್ವಿಯಾಗುವಿರಿ.

ಮೀನ: ಜೀವನದಲ್ಲಿನ ಸಮಸ್ಯೆಗಳು ಮತ್ತು ದುಃಖಗಳೆರಡೂ ತನ್ನ ಇರುವಿಕೆಯನ್ನು ತಿಳಿಸಲಿದೆ. ಶುಭ ಕಾರ್ಯ ನಡೆಸಿಕೊಡುವಲ್ಲಿ ಪ್ರಮುಖ ಪಾತ್ರ ನಿಮ್ಮದಾಗಲಿದೆ. ಹಿರಿಯರ ಸಲಹೆ ಸಮಾಧಾನ ತರಲಿದೆ.

ಪದಬಂಧ 5916

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಭೂಮಿಗೆ ಸಂಬಂಧಿಸಿದ್ದು (3)
5.ಯಮನ ಹತ್ತಿರ ಕಳೆದ ವೇಳೆ (3)
6.ಅವಶ್ಯಕ ವಸ್ತು (4)
7.ಉಪ್ಪರಿಗೆಯಲ್ಲಿ ಕಾಣಿಸಿದ ಜ್ವಾಲೆ! (2)
8.ಒತ್ತಾಸೆಗೊಂದು ಪರ್ಯಾಯ ಪದ (3)
10.ಮಂತ್ರಿ ಇಲ್ಲಿದ್ದಾನೆ (3)
12.ಬಾದಾಮಿಯ ಗುಹಾ ದೇವಾಲಯಗಳು ಇರುವ ಜಿಲ್ಲೆ (5)
13.ಸಲೀಸಾಗಿ ಶೇಖರಿಸಿರುವ ನೀರು (3)
14.ಹುಯಿಲಿಡುತ್ತಾ ಓದಿದ ಮರಣಪತ್ರ (3)
16.ಒಂದೇ ಬಗೆಯ ವಸ್ತು ವ್ಯಕ್ತಿ ಮೊದಲಾದವುಗಳ ಗುಂಪು (2)
17.ಚಿಲ್ಲರೆ ಹಣವಿದು (5)
18.ಜರೂರಾಗಿ ನೀಡಿದ ಕಾಣಿಕೆ (3)
19.ಕಪಟ ಅಥವಾ ವಂಚನೆ (3)

ಮೇಲಿಂದ ಕೆಳಕ್ಕೆ
1.ಉತ್ತಮ ಜಾತಿಯ ಜೇನುತುಪ್ಪ (3)
2.ಒಂದು ಬಗೆಯ ಸಿಹಿ ಪೇಯ (3)
3.ಲಯವಾಗಿರುವ ಪ್ರದೇಶ (3)
4.ಆಮೇಲೆ ಕಾಣಿಸಿದ ಕೂರ್ಮ (2)
7.ಆಹಾರವನ್ನು ಸೇವಿಸದಿರುವುದು (4)
9.ಕಹಿ ರುಚಿಯಿರುವ ತರಕಾರಿ (5)
10.ಸೆಟೆದು ನಿಂತು ಹೇಳಿದ ಸುಳ್ಳು! (2)
11.ದಟ್ಟವಾದ ಕಾಡಿನಲ್ಲಿ ರಚಿಸಿದ ಕೋಟೆ(4)
12.ಬಾಲಕ ಹಿಡಿದಿರುವ ಲಾಂಗೂಲ (2)
14.ನಸುಕಿನಲ್ಲಿ ಕಾಣಿಸಿದ ಹೊಯಿಗೆ (3)
15.ತಿರುಗಿ ನಿಂತು ಕೋಪಗೊಳ್ಳು! (3)
16.ನೀರಿನ ಅಧಿದೇವತೆ (3)
17.ಬಿತ್ತನೆಯ ಬೀಜ (2)



5915ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
4.ಬಿಲ 5.ಪ್ರವರ
6.ಅಂಗಾರಕ 7.ಗುಲಾಬಿ
9.ಆಯ್ದಕ್ಕಿಮಾರಯ್ಯಲಕ್ಕಮ್ಮ
11.ಡಬರಿ 14.ದಸರಯ್ಯ
16 ವಾಗ್ಜಾಲ 17. ನೆಣ

ಮೇಲಿಂದ ಕೆಳಕ್ಕೆ:
1.ಸಂಪ್ರತಿ 2.ಅರಗು
3.ದೇಗಾ 4.ಬಿಕರಿ
6.ಅಂಬಿಗರಚೌಡಯ್ಯ
8.ಗುಮ್ಮ 9.ಆಣೆ
10.ಅಂದಣ 12.ರಿವಾಜು
13.ಆಲಸಿ
15.ರವೆ

ಸುಡೊಕು 6301

		4		9		1		8
	1			3			6	
		7	4		1	3		9
2	9				4	6		
1	4						3	
							9	4
3		9			5		7	
	8			1		9		3
4		1	3		9		8	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6300 ಸುಡೊಕು

3	4	8	2	7	9	6	5	1
9	6	1	5	8	3	2	7	4
5	7	2	1	6	4	3	9	8
6	9	4	7	3	5	1	8	2
2	8	5	6	9	1	7	4	3
1	3	7	4	2	8	9	6	5
8	5	9	3	1	6	4	2	7
7	1	6	8	4	2	5	3	9
4	2	3	9	5	7	8	1	6

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಬಸವರಾಜ ಎಲ್., ಭದ್ರಾವತಿ, ಶಿವಮೊಗ್ಗ ಜಿಲ್ಲೆ.

• **ಪ್ರಶ್ನೆ: ನಾನು ಮಾಜಿ ಸೈನಿಕ. ಮಾಸಿಕ ₹33 ಸಾವಿರ ಪಿಂಚಣಿ ಪಡೆಯುತ್ತಿದ್ದೇನೆ. ಪ್ರಸ್ತುತ ಸರ್ಕಾರಿ ಉದ್ಯೋಗ ಹೊಂದಿದ್ದೇನೆ. ಇದರಿಂದ ಮಾಸಿಕ ವೇತನವಾಗಿ ₹43 ಸಾವಿರ ಬರುತ್ತಿದೆ. ದಯವಿಟ್ಟು ನನಗೆ ಮ್ಯೂಚುಯಲ್ ಫಂಡ್ ಮತ್ತು ಇತರೆ ಉತ್ತಮ ಹೂಡಿಕೆ ಅವಕಾಶಗಳ ಬಗ್ಗೆ ಸಲಹೆ ನೀಡಿ.**

ಉತ್ತರ: ಪ್ರಸ್ತುತ ನೀವು ಪಿಂಚಣಿ ಹಾಗೂ ಮಾಸಿಕ ವೇತನದಿಂದ ಒಟ್ಟಾರೆ ₹76 ಸಾವಿರ ಆದಾಯ ಗಳಿಸುತ್ತಿದ್ದೀರಿ. ನಿಮ್ಮ ಆದಾಯದ ಎಷ್ಟು ಪ್ರಮಾಣವನ್ನು ನೀವು ನಿಮ್ಮ ಉದ್ದೇಶಿತ ಹೂಡಿಕೆಗೆ ಪ್ರತ್ಯೇಕಿಸಿ ಇಡಲು ಸಾಧ್ಯ ಎನ್ನುವುದನ್ನು ಮೊದಲು ನಿರ್ಧರಿಸಿ. ಉದಾಹರಣೆಗೆ ನಿಮ್ಮ ವೈದ್ಯಕೀಯ ವೆಚ್ಚ, ವಿಮಾ ವೆಚ್ಚ, ಮಕ್ಕಳ ವಿದ್ಯಾಭ್ಯಾಸದ ವೆಚ್ಚ, ಮನೆ ನಿರ್ವಹಣೆ, ಇತರೆ ಯಾವುದೇ ವೆಚ್ಚ ಇದ್ದರೂ ಅದನ್ನು ಕಳೆದು ಉಳಿದ ಮೊತ್ತ ಏನೆಂಬುದನ್ನು ನಿರ್ಧರಿಸಿ. ಆ ಉಳಿದ ಮೊತ್ತವನ್ನು ಹೂಡಿಕೆಗೆ ಉಪಯೋಗಿಸಿ.

ಮುಂದಿನ ಕೆಲವು ವರ್ಷ ನೀವು ಹೂಡಿಕೆ ಮಾಡುವ ಮೊತ್ತವನ್ನು ಬೆಳೆಸುವ ಉದ್ದೇಶ ಹೊಂದಿರುವ ಕಾರಣ, ಸದ್ಯದ ಕೆಲವು ವರ್ಷ ನಿಮ್ಮ ದಿನವಹಿ ಅಗತ್ಯಕ್ಕೆ ಅದರ ಅಗತ್ಯ ಇಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಿ. ಏಕೆಂದರೆ, ಮ್ಯೂಚುಯಲ್ ಫಂಡ್‌ಗಳಲ್ಲಿ ದೀರ್ಘಾವಧಿ ಸಮಯಕ್ಕೆ ಹೂಡಿಕೆ ಮಾಡಿದಾಗಲೇ ಸಾಮಾನ್ಯ ಹೂಡಿಕೆಗಳಾದ ಬ್ಯಾಂಕ್ ಎಫ್.ಡಿಗಿಂತ ಹೆಚ್ಚಿನ ಲಾಭ ಬರುತ್ತದೆ.

ನೀವು ಈಗಾಗಲೇ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವ ಬಗ್ಗೆ ನಿರ್ಣಯಿಸಿದ್ದೀರಿ. ಅಲ್ಲದೆ, ಇತರೆ ಹೂಡಿಕೆಗಳಲ್ಲೂ ಆಸಕ್ತಿ ಹೊಂದಿದ್ದೀರಿ. ನಿಮ್ಮ ನಿವೃತ್ತಿಗಾಗಿ ಒಂದಿಷ್ಟು ಮೊತ್ತವನ್ನು ಪಿಂಚಣಿ ಫಂಡ್‌ಗಳಲ್ಲಿ ತೊಡಗಿಸಿ. ಉತ್ತಮ ಕಂಪನಿಯ ಷೇರುಗಳನ್ನು ಮಾರುಕಟ್ಟೆಯು ಇಳಿಕೆ ಹಂತದಲ್ಲಿದ್ದಾಗ ಖರೀದಿಸಿ. ಈ ಬಗ್ಗೆ ದಿನವಹಿ ಮಾಹಿತಿಗಾಗಿ ಸಾಮಾನ್ಯ ಅರಿವು ಪಡೆಯಲು ವಾಣಿಜ್ಯ ವಾರ್ತಾ ಪತ್ರಿಕೆ ಅಥವಾ ಈ ಬಗ್ಗೆ ಮಾಹಿತಿ ನೀಡುವ ಮಾಧ್ಯಮಗಳನ್ನು ಗಮನಿಸುತ್ತಿರಿ.

ನಿಮ್ಮ ನಿರ್ಧಾರ ಈ ಎಲ್ಲ ಹಂತಗಳಿಗಿಂತ ನಿರ್ಣಾಯಕವಾದುದು. ನೀವು ಹೆಚ್ಚಿನ ರಿಸ್ಕ್ ತೆಗೆದುಕೊಳ್ಳುವ ನಿರ್ಣಯ ಈಗಾಗಲೇ ತೆಗೆದುಕೊಂಡಿದ್ದರೆ ಈಕ್ವಿಟಿ ವಿಭಾಗದ ಹೂಡಿಕೆಗಳು ಉತ್ತಮ. ಈ ವರ್ಗದ ಹೂಡಿಕೆಗಳು ದೀರ್ಘಾವಧಿಯಲ್ಲಿ ಎಫ್.ಡಿಗಿಂತ ದುಪ್ಪಟ್ಟು ಲಾಭ ಗಳಿಸಿಕೊಟ್ಟಿವೆ. ಉಳಿದಂತೆ ಈಕ್ವಿಟಿ ಸೇವಿಂಗ್ಸ್ ಫಂಡ್ ದೀರ್ಘಾವಧಿಯಲ್ಲಿ ಸುಮಾರು ಶೇ 9ರಿಂದ ಶೇ 12ರಷ್ಟು ಲಾಭ ನೀಡಿದ ಉದಾಹರಣೆ ಇದೆ. ಈ ಬಗ್ಗೆ ಹೆಚ್ಚಿನ ಅರಿವು ಹೊಂದಿ ಹೂಡಿಕೆ ಮಾಡಿ.

ಮಹೇಶ್, ಬೆಂಗಳೂರು.

• **ಪ್ರಶ್ನೆ: ನನ್ನ ಪತ್ನಿ ಸಾರ್ವಜನಿಕ ವಲಯದ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಶೇ 30ರ ತೆರಿಗೆ ಶ್ರೇಣಿಗೆ ಸೇರಿದ್ದಾರೆ. ಅವರ ಹೆಸರಿನಲ್ಲಿ ಒಂದು ಮನೆ ಇದೆ. ಈಗ ಅದನ್ನು ತಿಂಗಳಿಗೆ ₹25 ಸಾವಿರಕ್ಕೆ ಬಾಡಿಗೆಗೆ ನೀಡಿದ್ದಾರೆ. ಈ ಸಂಬಂಧ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಲು ಕೋರುತ್ತೇನೆ.**

ಈ ಬಾಡಿಗೆಯನ್ನು ಅವರ ಆದಾಯ ತೆರಿಗೆ ರಿಟರ್ನ್ಸ್‌ನಲ್ಲಿ ಬಾಡಿಗೆ ಆದಾಯವಾಗಿ ವರದಿ ಮಾಡುವುದು ಕಡ್ಡಾಯವೇ? ಬಾಡಿಗೆ ಮೊತ್ತದಲ್ಲಿ ಆಸ್ತಿ ಮತ್ತು ಇತರೆ ತೆರಿಗೆಗಳನ್ನು ಕಡಿತಗೊಳಿಸಿ ತೋರಿಸಬಹುದೆ? ಈ ಬಾಡಿಗೆ ಆದಾಯಕ್ಕೆ ತೆರಿಗೆ ಕಡಿತ ಅನ್ವಯಿಸುತ್ತದೆಯೇ? ಹೌದಾದರೆ ಮೂಲದಲ್ಲಿ ಆದಾಯ ತೆರಿಗೆ ಕಡಿತಗೊಳಿಸುವುದಕ್ಕೆ ಏನಾದರೂ ಮಿತಿಯಿದೆಯೇ?

ತೆರಿಗೆ ಕಡಿತ ಅನ್ವಯಿಸಿದರೆ ಅದನ್ನು ಕಡಿತಗೊಳಿಸುವ ಜವಾಬ್ದಾರಿ ಬಾಡಿಗೆದಾರನದೇ ಅಥವಾ ಮಾಲೀಕರದೆ? ತೆರಿಗೆ ಕಡಿತ ರಿಟರ್ನ್ಸ್‌ಗಳನ್ನು ಪ್ರತಿ ತಿಂಗಳು ಸಲ್ಲಿಸಬೇಕೆ? ಬಾಡಿಗೆದಾರ ಮತ್ತು ಮಾಲೀಕರಿಗೆ ಒಂದೇ ರೀತಿಯ ಫಾರ್ಮ್ ಅನ್ವಯಿಸುತ್ತದೆಯೇ? ಬಾಡಿಗೆದಾರರು ತೆರಿಗೆ ಕಡಿತ ಮಾಡಿದ ಮೊತ್ತವನ್ನು ಸಕಾಲದಲ್ಲಿ ಪಾವತಿಸದಿದ್ದರೆ ಮಾಲೀಕರಿಗಿರುವ ಆಯ್ಕೆಗಳೇನು? ಈ ಬಾಡಿಗೆ ಆದಾಯಕ್ಕೆ ಸ್ಟ್ಯಾಂಡರ್ಡ್ ಡಿಡಕ್ಷನ್ ಅನ್ವಯವಾಗುತ್ತದೆಯೇ?

ಉತ್ತರ: ನೀವು ನೀಡಿರುವ ಮಾಹಿತಿಯಂತೆ ನಿಮ್ಮ ಪತ್ನಿ ಹೆಸರಿನಲ್ಲಿರುವ ಮನೆಯ ಒಟ್ಟು ವಾರ್ಷಿಕ ಬಾಡಿಗೆ ಮೊತ್ತ ₹3 ಲಕ್ಷ. ಅಲ್ಲದೆ ನಿಮ್ಮ ಪತ್ನಿ ವೇತನ ಆದಾಯವನ್ನೂ ಪಡೆಯುತ್ತಿದ್ದಾರೆ. ಈ ಎರಡೂ ಆದಾಯ ಸೇರಿ ಒಟ್ಟು ಆದಾಯದ ಮೇಲೆ ಸಂಬಂಧಿತ ವಿನಾಯಿತಿ ಅನ್ವಯವಾದಲ್ಲಿ ಅದನ್ನು ಕಳೆದು ಉಳಿದ ಮೊತ್ತದ ಮೇಲೆ ತೆರಿಗೆ ನಿರ್ಣಯವಾಗುತ್ತದೆ. ಬಾಡಿಗೆ ಆದಾಯ ಹಾಗೂ ವೇತನ ಆದಾಯ ವೈಯಕ್ತಿಕ ತೆರಿಗೆ ದರದ ಶ್ರೇಣಿಯಲ್ಲಿ ತೆರಿಗೆಗೊಳಪಡುತ್ತದೆ.

ನೀವು ಬಾಡಿಗೆ ಆದಾಯದ ಮೇಲಿನ ತೆರಿಗೆ ಕಡಿತದ ಬಗ್ಗೆ ಪ್ರಮುಖವಾಗಿ ಕೇಳಿದ್ದೀರಿ. ಆದಾಯ ತೆರಿಗೆ ಸೆಕ್ಷನ್ 194 ಐಬಿ ಪ್ರಕಾರ ತಿಂಗಳ ಬಾಡಿಗೆ ₹50 ಸಾವಿರ ಮೀರಿದಾಗ ಬಾಡಿಗೆದಾರ ಶೇ 5ರ ದರದಲ್ಲಿ ತೆರಿಗೆ ಕಡಿತಗೊಳಿಸಿ ಆ ಮೊತ್ತವನ್ನು ಪಾವತಿಸಬೇಕಾಗುತ್ತದೆ. ಮೊತ್ತವನ್ನು ಮನೆಯ ಮಾಲೀಕನಿಗೆ ಪಾವತಿಸಿರುವ ಬಗೆಗಿನ ಮಾಹಿತಿಯನ್ನು ಸರ್ಕಾರಕ್ಕೆ 'ಫಾರಂ 26 ಕ್ಯೂಸಿ'ಯನ್ನು ಪ್ರತಿ ತಿಂಗಳು ಸಲ್ಲಿಸಬೇಕು.

ಇಲ್ಲಿ ಗಮನಿಸಬೇಕಾದ ಇನ್ನೊಂದು ಪ್ರಮುಖ ವಿಚಾರವೆಂದರೆ ಈ ತಿಂಗಳ ಬಾಡಿಗೆ ಮಿತಿ ಒಟ್ಟಾರೆಯಾಗಿ ವಾಸದ ಒಂದು ಮನೆಗಿರುವ ಮಿತಿಯಲ್ಲ. ಬದಲಾಗಿ ಪ್ರತ್ಯೇಕ ಪಾವತಿದಾರನಿಗೆ ಸಂಬಂಧಿಸಿದ ಮಿತಿಯಾಗಿದೆ. ಹೀಗಾಗಿ, ಒಂದೇ ಮನೆಯಲ್ಲಿ ಇಬ್ಬರು ವಾಸಿಸಿ ಪ್ರತ್ಯೇಕವಾಗಿ ಬಾಡಿಗೆ ಪಾವತಿಸುವುದಿದ್ದರೆ ಒಬ್ಬ ವ್ಯಕ್ತಿ ವೈಯಕ್ತಿಕವಾಗಿ ₹50 ಸಾವಿರ ಮಿತಿ ಮೀರಿ ಬಾಡಿಗೆ ಪಾವತಿಸುವುದಿದ್ದರೆ ಮಾತ್ರ ಈ ತೆರಿಗೆ ಕಡಿತ ಅಗತ್ಯ.

ಪ್ರಸ್ತುತ ನಿಮ್ಮ ತಿಂಗಳ ಬಾಡಿಗೆ ಮೊತ್ತ ₹25 ಸಾವಿರ ಆಗಿರುವುದರಿಂದ ಈ ವಿಚಾರದಲ್ಲಿ ಯಾವುದೇ ಸಮಸ್ಯೆ ಇಲ್ಲ. ಬಾಡಿಗೆ ಆದಾಯದ ತೆರಿಗೆ ನಿರ್ಣಯಿಸುವಾಗ ಆಸ್ತಿ ತೆರಿಗೆ ಕಳೆದು ಉಳಿದ ಮೊತ್ತದ ಮೇಲೆ ಶೇ 30ರ ಸ್ಟ್ಯಾಂಡರ್ಡ್ ಡಿಡಕ್ಷನ್ ಸಿಗುತ್ತದೆ. ಉಳಿದ ಮೊತ್ತ ತೆರಿಗೆಗೆ ಒಳಪಡುತ್ತದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್: businessdesk@prajavani.co.in

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,616
ಇಂದಿನ ಅಂತ್ಯ	23,707
▲	91
ದಿನದ ಗರಿಷ್ಠ	23,795

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹520
12 ಕ್ಕೆ	₹70
ಮೈಸೂರು	
100ಕ್ಕೆ	₹520

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹445-647
ದ್ವಿತಳಿ (ಬಿ.ವಿ) ₹315-766

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹185
ಆರ್‌ಎಸ್‌ಎಸ್-5 ₹180
ಗುಡ್ ಲಾಟ್ ₹174
(ಪ್ರತಿ ಕೆ.ಜಿಗೆ)

ಮುಂಬೈ ಧಾರಣೆ

ಶೇಂಗಾ
07-01-2025

ಜಾವಾ 70/80(ಹೊಸ)	10500-10600
ಜಾವಾ 80/90(ಹೊಸ)	10000-10100
ದಪ್ಪ ಮಧ್ಯಪ್ರದೇಶ(ಹೊಸ)	8700-8800
ದಪ್ಪ ಗುಜರಾತ್(ಹೊಸ)	9500-9600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1440 (1450)
ಒಂದು ವಾರದ ಡೆಲಿವರಿ	1435 (1445)
ಪಾಮ್ ವಾರದ ಡೆಲಿವರಿ	1338 (1343)
ಸೂರ್ಯಕಾಂತಿ ಎಣ್ಣೆ ಕಚ್ಚಾ	1260 (1270)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹77,000 (76,750)
ಬೆಳ್ಳಿ ಕೆ.ಜಿ ₹89,550 (89,000)
ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹22600
ಎಸಿ	₹12015
ಆರ್‌ಪಿ	₹19100
ಆರ್‌ಸಿ	₹10660

ವಿನಿಮಯ ದರ

$ ಡಾಲರ್	85.74
£ ಪೌಂಡ್	107.72
€ ಯುರೊ	89.42
¥ ಯೆನ್ (100ಕ್ಕೆ)	55

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1430 (1440)
ಸೋಯಾ (ರಿಫೈನ್ಡ್)	₹1260 (1255)
ಸೂರ್ಯಕಾಂತಿ (ರಿಫೈನ್ಡ್)	₹1355 (1355)
ಪಾಮೋಲಿನ್	₹1340 (1345)

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹13500-14400
ಬೆಂಗಳೂರು	₹20000-25000
ದಾವಣಗೆರೆ	₹10700-10700
ತುರುವೇಕೆರೆ	₹14000-14000

ನಾಲ್ಕು ವರ್ಷದಲ್ಲಿ ನಿಧಾನಗತಿ ಬೆಳವಣಿಗೆ ದರ: ಎನ್‌ಎಸ್‌ಒ ಅಂದಾಜು

ಜಿಡಿಪಿ ಶೇ 6.4ಕ್ಕೆ ಕುಸಿತ ಸಾಧ್ಯತೆ

ನವದೆಹಲಿ (ಪಿಟಿಐ): 2024-25ನೇ ಆರ್ಥಿಕ ವರ್ಷದಲ್ಲಿ ದೇಶದ ಒಟ್ಟು ಆಂತರಿಕ ಉತ್ಪನ್ನವು (ಜಿಡಿಪಿ) ಶೇ 6.4ರಷ್ಟು ಪ್ರಗತಿ ಕಾಣುವ ನಿರೀಕ್ಷೆಯಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಅಂದಾಜಿಸಿದೆ. ಇದು ನಾಲ್ಕು ವರ್ಷಗಳಲ್ಲಿನ ಅತ್ಯಂತ ನಿಧಾನಗತಿಯ ಬೆಳವಣಿಗೆ ದರವಾಗಿದೆ.

ತಯಾರಿಕಾ ಮತ್ತು ಸೇವಾ ವಲಯದ ಬೆಳವಣಿಗೆ ಕುಸಿತವೇ ಜಿಡಿಪಿ ಇಳಿಕೆಗೆ ಕಾರಣ ಎಂದು ಮಂಗಳವಾರ ಬಿಡುಗಡೆಯಾಗಿರುವ ಮೊದಲ ಅಂದಾಜು ವರದಿ ತಿಳಿಸಿದೆ.

2020-21ನೇ ಆರ್ಥಿಕ ವರ್ಷದ ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ಜಿಡಿಪಿ ಬೆಳವಣಿಗೆಯು ಶೇ 5.8ರಷ್ಟು ಕಡಿಮೆ ದಾಖಲಾಗಿತ್ತು. ಆ ನಂತರದ ಆರ್ಥಿಕ ವರ್ಷಗಳಲ್ಲಿ ಚೇತರಿಕೆಯ ಹಳಿಗೆ ಮರಳಿತ್ತು. 2021-22ರಲ್ಲಿ ಶೇ 9.7, 2022-23ರಲ್ಲಿ ಶೇ 7 ಹಾಗೂ 2023-24ರಲ್ಲಿ ಶೇ 8.2ರಷ್ಟು ದಾಖಲಾಗಿತ್ತು.

ಕಳೆದ ವರ್ಷದ ಡಿಸೆಂಬರ್‌ನಲ್ಲಿ 2024-25ರ ಜಿಡಿಪಿ ಮುನ್ನೋಟವನ್ನು ಪರಿಷ್ಕರಿಸಿದ್ದ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ), ಶೇ 6.6ರಷ್ಟು ಬೆಳವಣಿಗೆ ಕಾಣಲಿದೆ ಎಂದು ಅಂದಾಜಿಸಿದೆ. ಕೇಂದ್ರ ಹಣಕಾಸು ಸಚಿವಾಲಯವು ಶೇ6.5ರಿಂದ ಶೇ7ರಷ್ಟು ಪ್ರಗತಿ ಕಾಣಲಿದೆ ಎಂದು ಹೇಳಿದೆ. ಆದರೆ, ಸಾಂಖ್ಯಿಕ ಕಚೇರಿಯ ಅಂದಾಜು, ಆರ್‌ಬಿಐ ಹಾಗೂ ಹಣಕಾಸು ಸಚಿವಾಲಯದ ಅಂದಾಜಿಗಿಂತಲೂ ಕಡಿಮೆಯಿದೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, ಫೆಬ್ರುವರಿ 1ರಂದು 2025-26ನೇ ಸಾಲಿನ ಬಜೆಟ್ ಮಂಡಿಸಲಿದ್ದಾರೆ. ಬಜೆಟ್ ಸಿದ್ಧಪಡಿಸುವಿಕೆಗೆ ಈ ಅಂದಾಜನ್ನು ಬಳಸಿಕೊಳ್ಳಲಾಗುತ್ತದೆ.

ಸಾಂಕೇತಿಕ ಜಿಡಿಪಿ ದರ ಎಷ್ಟು?

ಮುಂದಿನ ಆರ್ಥಿಕ ವರ್ಷವನ್ನು ಅದರ ಹಿಂದಿನ ಆರ್ಥಿಕ ವರ್ಷಕ್ಕೆ ಹೋಲಿಸಲು ಜಿಡಿಪಿಯನ್ನು ಮಾರುಕಟ್ಟೆ ಬೆಲೆಗಳಲ್ಲಿ ಲೆಕ್ಕ ಹಾಕುವುದಕ್ಕೆ ಸಾಂಕೇತಿಕ (ನಾಮಿನಲ್) ಜಿಡಿಪಿ ಎಂದು ಕರೆಯಲಾಗುತ್ತದೆ. 2023-24ರಲ್ಲಿ ಶೇ 9.6ರಷ್ಟಿದ್ದ ಈ ಬೆಳವಣಿಗೆ ದರವು, 2024-25ರಲ್ಲಿ ಶೇ 9.7ರಷ್ಟು ಇರಲಿದೆ ಎಂದು ವರದಿ ವಿವರಿಸಿದೆ.

ಸಾಮಾನ್ಯವಾಗಿ ಬೆಲೆಗಳು ಏರುತ್ತಿರುವುದರಿಂದ ಸಾಂಕೇತಿಕ ಜಿಡಿಪಿ ಆಧರಿತ ಬೆಳವಣಿಗೆ ದರವು ಗಣನೀಯವಾಗಿ ಹೆಚ್ಚಳವಾಗುತ್ತದೆ ಎಂದು ಆರ್ಥಿಕ ತಜ್ಞರು ಹೇಳಿದ್ದಾರೆ.

ಕಳೆದ ಆರ್ಥಿಕ ವರ್ಷದಲ್ಲಿ ಸಾಂಕೇತಿಕ ಜಿಡಿಪಿ ಗಾತ್ರ ₹295.36 ಲಕ್ಷ ಕೋಟಿ ಇದ್ದರೆ, ಪ್ರಸಕ್ತ ಆರ್ಥಿಕ ವರ್ಷದಲ್ಲಿ ಇದರ ಗಾತ್ರ ₹324.11 ಲಕ್ಷ ಕೋಟಿ ಆಗಿದೆ ಎಂದು ಹೇಳಿದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಉತ್ಪಾದನೆಯಾಗುವ ಸರಕು ಮತ್ತು ಸೇವೆಗಳ ಒಟ್ಟಾರೆ ಮೌಲ್ಯ ಸೇರ್ಪಡೆಯು (ಜಿವಿಎ) ಹಿಂದಿನ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಶೇ 9.3ರಷ್ಟು ಇರಲಿದೆ ಎಂದು ನಿರೀಕ್ಷಿಸಲಾಗಿದೆ.

ತಯಾರಿಕಾ, ಸೇವಾ ವಲಯ ಇಳಿಕೆ

ಕಳೆದ ಆರ್ಥಿಕ ವರ್ಷದಲ್ಲಿ ತಯಾರಿಕಾ ವಲಯವು ಶೇ 9.9ರಷ್ಟು ದಾಖಲೆ ಪ್ರಮಾಣದಲ್ಲಿ ಏರಿಕೆ ಕಂಡಿತ್ತು. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಶೇ 5.5ಕ್ಕೆ ಇಳಿಕೆಯಾಗಲಿದೆ. ವ್ಯಾಪಾರ, ಹೋಟೆಲ್, ಸಾರಿಗೆ ಮತ್ತು ಸಂವಹನ ವಿಭಾಗವನ್ನು ಒಳಗೊಂಡ ಸೇವಾ ವಲಯದ ಪ್ರಗತಿಯು ಶೇ 6.4ರಿಂದ ಶೇ 5.8ರಷ್ಟಕ್ಕೆ ಇಳಿಯಲಿದೆ ಎಂದು ವರದಿ ಹೇಳಿದೆ.

2023-24ರಲ್ಲಿ ಶೇ 1.4ರಷ್ಟು ಇಳಿಕೆ ದಾಖಲಿಸಿದ್ದ ಕೃಷಿ ವಲಯದ ಬೆಳವಣಿಗೆಯು ಶೇ 3.8ರಷ್ಟು ಪ್ರಗತಿ ಸಾಧಿಸಲಿದೆ ಎಂದು ಹೇಳಿದೆ.

2024-25ನೇ ಆರ್ಥಿಕ ವರ್ಷದಲ್ಲಿ ಜಿಡಿಪಿ ಗಾತ್ರ ₹325.96 ಲಕ್ಷ ಕೋಟಿ ಆಗಿದೆ (3.8 ಟ್ರಿಲಿಯನ್ ಅಮೆರಿಕನ್ ಡಾಲರ್).

ಸಂಕ್ಷಿಪ್ತ ಸುದ್ದಿ

ಇ–ಶ್ರಮ್: 22 ಭಾಷೆಯಲ್ಲಿ ಲಭ್ಯ

ಮನ್ಸುಖ್ ಮಾಂಡವೀಯ

ನವದೆಹಲಿ (ಪಿಟಿಐ): ಅಸಂಘಟಿತ ವಲಯದ ಕಾರ್ಮಿಕರಿಗೆ ಒಂದೇ ಕಡೆ ಸರ್ಕಾರದ ಹಲವು ಯೋಜನೆಯಡಿ ಸವಲತ್ತು ಒದಗಿಸುವ ಇ-ಶ್ರಮ್ ಪೋರ್ಟಲ್ ಇನ್ನು ಮುಂದೆ 22 ಭಾಷೆಗಳಲ್ಲಿ ಲಭ್ಯವಾಗಲಿದೆ.

ಈ ಮೊದಲು ಇಂಗ್ಲಿಷ್, ಹಿಂದಿ, ಕನ್ನಡ ಮತ್ತು ಮರಾಠಿ ಭಾಷೆಯಲ್ಲಿ ಮಾತ್ರ ಇ-ಶ್ರಮ್ ಒನ್ ಸ್ಟಾಪ್-ಒನ್ ಸಲ್ಯೂಷನ್ ಪೋರ್ಟಲ್ ಲಭ್ಯವಿತ್ತು. ಈಗ ಇದನ್ನು ನವೀಕರಿಸಲಾಗಿದ್ದು, ಸಂವಿಧಾನದ 8ನೇ ಪರಿಚ್ಛೇದದಲ್ಲಿ ಮಾನ್ಯತೆ ಪಡೆದಿರುವ ಎಲ್ಲಾ ಭಾಷೆಗಳಲ್ಲಿಯೂ ದೊರೆಯಲಿದೆ.

ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಸಚಿವ ಮನ್ಸುಖ್ ಮಾಂಡವೀಯ ಅವರು ಮಂಗಳವಾರ ಈ ಪೋರ್ಟಲ್‌ಗೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಕಾರ್ಮಿಕರಲ್ಲಿ ಇ-ಶ್ರಮ್ ಪೋರ್ಟಲ್ ಬಗ್ಗೆ ವಿಶ್ವಾಸ ಹೆಚ್ಚಾಗುತ್ತಿದೆ. ದಿನಕ್ಕೆ ಸರಾಸರಿ 30 ಸಾವಿರಕ್ಕೂ ಹೆಚ್ಚು ಕಾರ್ಮಿಕರು ಹೆಸರು ನೋಂದಣಿ ಮಾಡಿಕೊಳ್ಳುತ್ತಿದ್ದಾರೆ ಎಂದರು.

ಷೇರುಪೇಟೆ ಚೇತರಿಕೆ

ಮುಂಬೈ (ಪಿಟಿಐ): ಸತತ ಎರಡು ವಹಿವಾಟುಗಳಲ್ಲಿ ಇಳಿಕೆ ಕಂಡಿದ್ದ ದೇಶದ ಷೇರುಪೇಟೆಯು ಮಂಗಳವಾರ ಚೇತರಿಕೆ ಕಂಡಿದೆ. ರಿಲಯನ್ಸ್ ಇಂಡಸ್ಟ್ರೀಸ್, ಐಸಿಐಸಿಐ ಬ್ಯಾಂಕ್, ಎಲ್ ಆ್ಯಂಡ್ ಟಿ ಕಂಪನಿಗಳ ಷೇರು ಖರೀದಿ ಹೆಚ್ಚಳದಿಂದಾಗಿ ಮಾರುಕಟ್ಟೆಯಲ್ಲಿ ಸಕಾರಾತ್ಮಕ ವಹಿವಾಟು ನಡೆಯಿತು. ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 234 ಅಂಶ ಏರಿಕೆ ಕಂಡು, 78,199 ಅಂಶಗಳಲ್ಲಿ ಸ್ಥಿರಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 91 ಅಂಶ ಏರಿಕೆ ಕಂಡು, 23,707 ಅಂಶಗಳಲ್ಲಿ ವಹಿವಾಟು ಮುಕ್ತಾಯಗೊಂಡಿತು.

ಡಾಲರ್ ಎದುರು ರೂಪಾಯಿ ಮೌಲ್ಯವು 6 ಪೈಸೆ ಕುಸಿತ ಕಂಡಿದೆ. ಪ್ರತೀ ಡಾಲರ್ ಮೌಲ್ಯ ₹85.74 ಆಗಿದೆ.

ಚಿನ್ನ, ಬೆಳ್ಳಿ ದರ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಮಂಗಳವಾರದ ವಹಿವಾಟಿನಲ್ಲಿ ಏರಿಕೆಯಾಗಿದೆ.

ಚಿನ್ನದ ದರವು 10 ಗ್ರಾಂಗೆ (ಶೇ 99.9ರಷ್ಟು ಪರಿಶುದ್ಧತೆ) ₹700 ಏರಿಕೆಯಾಗಿದ್ದು, ₹79,700 ಆಗಿದೆ. ಸ್ಟ್ಯಾಂಡರ್ಡ್ ಚಿನ್ನದ (ಶೇ 99.5 ಶುದ್ಧತೆ) ಬೆಲೆಯು ಇಷ್ಟೇ ಪ್ರಮಾಣದಲ್ಲಿ ಏರಿಕೆಯಾಗಿದ್ದು, ₹79,300 ಆಗಿದೆ.

ಬೆಳ್ಳಿ ಧಾರಣೆಯು ಕೆ.ಜಿಗೆ ₹1,300 ಹೆಚ್ಚಳವಾಗಿದ್ದು, ₹92 ಸಾವಿರ ಆಗಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Teachers/ Professors

WANTED
A Reputed CBSE School up to +2 having 2000 students run by Trust Requires the following positions:
1. PRINCIPAL: (Post Graduate with B.Ed with 5 years' experience as Principal/Vice Principal. We are seeking dynamic candidate with record in guiding teams to success and exceptional communication skills, administrative capacity, with experience.
2. ACCOUNTANT: (Male- Candidate B.Com with Tally and knowledge of PF/ESI/GST/Professional Tax etc. with 3 years of Experience.
How to Apply:- Kindly apply by sending your updated CV with photo and copies of educational documents to mail Id: sreeayyappaedutrust@gmail.com by 20.01.2025 and hard copy may sent to
SREE AYYAPPA EDUCATIONAL & CHARITABLE TRUST
Sree Ayyappan Temple Complex, S.M.Road, Jalahalli West, Bangalore-560015.
Phone: 080-28391638, Mobile No: 9483105248.

Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Cook
ಅನುಭವವುಳ್ಳ ದಕ್ಷಿಣ ಭಾರತ ಶೈಲಿಯ ಅಡುಗೆ ಭಟ್ಟರು ಸಸ್ಯಹಾರಿ ಹಾಗೂ ಮಾಂಸಹಾರಿ ಹೋಟೆಲಿಗೆ ಬೇಕಾಗಿದ್ದಾರೆ. ಕೂಡಲೇ ಸಂಪರ್ಕಿಸಿ. ನೆಲಮಂಗಲ: 9845684631

Domestic Helpers / Housekeeping
ಬೆಂಗಳೂರಿನ ಕಲ್ಯಾಣ ನಗರದಲ್ಲಿರುವ ಆಸ್ಪತ್ರೆಗೆ ಅರ್ಜೆಂಟಾಗಿ ಹೌಸ್ ಕೀಪಿಂಗ್ ಬಾಯ್ಸ್ ಬೇಕಾಗಿದ್ದಾರೆ. ಸಂಬಳ: 19300/-. ಸಂಪರ್ಕಿಸಿ: ಹೇಮಾವತಿ: 9945779607, ಸಂದೀಪ: 9108946691, ಮಿತುನ್: 9112959375.

Wanted
WANTED: ESTATE is near Chickmaglur 26kms from town.Housing, jeep, salary 25,000/- plus spouse and child benefits, Contact on WhatsApp only:+91 9902894433

General
✓ ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ತಕ್ಷಣ ಬೇಕಾಗಿದ್ದಾರೆ. ಟಯೋಟಾ, ಬ್ರಿಟಾನಿಯಾ, TVSಕಂಪನಿಗಳಿಗೆ SSLC, PUC, Degree, Diploma, ITIನವರು 18,000/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9036791033

ಭವಿಷ್ಯ

Astrology
★ಭಾರತದ ಪ್ರಖ್ಯಾತ★ ಬುಡಬುಡಿಕೆ ಜನಾಂಗದ ಲಕ್ಷಾಂತರ ಸಂತುಷ್ಟ ಗ್ರಾಹಕರ ಪರಮಶ್ರೇಷ್ಠ ಬಾಬಾ.ಶ್ರೀ.ದೇವಾನಂದನ ರವರಿಂದ ನಿಮ್ಮೆಲ್ಲಾ ಸರ್ವಸಂಕಷ್ಟಗಳಿಗೆ ಪರಿಹಾರ,ಮಹಮ್ಮಾಯಿ, ಮನ್ಮೋಹಿನಿಮೋಡಿ ವಶೀಕರಣಗಳಿಗೆ #100,ರಾಹೇಜಪಾರ್ಕ್ ಎದುರು,ಮಾಗಡಿ ರಸ್ತೆ ಬೆಂಗಳೂರು.9845005009

★||ಇಷ್ಟಪಟ್ಟವರು||★ ನಿಮ್ಮಂತೆ ಆಗಲು. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ನಿಗೂಢ. ಗುಪ್ತ ಸಮಸ್ಯೆಗಳಿಗೆ. 1 ದಿನದಲ್ಲಿ. ಶಾಶ್ವತ ಪರಿಹಾರ. 9611968471

ಪ್ರವಾಸ

Travel
21.01.2025 ಕುಂಭಮೇಳ ಪ್ರಯುಕ್ತ ರಿಯಾಯಿತಿ ದರದಲ್ಲಿ 6 ದಿನ ವಿಮಾನದಲ್ಲಿ ಕಾಶಿ ಗಯಾ ಅಯೋಧ್ಯಾ ಅಲಹಾಬದ್ (ಕೆಲವೇ ಸೀಟುಗಳಿವೆ) 06/03/2025, 10/14ದಿನಗಳು ರೈಲು/ವಿಮಾನದಲ್ಲಿ ದೆಹಲಿ ಮಥುರ ಆಗ್ರ ಅಲಹಾಬದ್ ಕಾಶಿ,ಗಯಾ,ಅಯೋಧ್ಯೆ ಹರಿದ್ವರ, ಇತ್ಯಾದಿ ಜನವರಿ ಫೆಬ್ರುವರಿಯಲ್ಲಿ ಅಂಡಮಾನ್ Royal Package "ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್" -9739847429/ 9845560219

14.02.2025 ಸೋಮನಾಥ್ ದ್ವಾರಕಾ, ಮಹಾಕಾಳೇಶ್ವರ ಓಂಕಾರೇಶ್ವರ್. 06.03.2025 ಕಾಶಿ,ಅಯೋಧ್ಯ ಬುದ್ಧಗಯಾ,ಅಲಹಾಬಾದ್. 02.04.2025 ಕಾಶ್ಮೀರ್ ವೈಷ್ಣೋದೇವಿ ಕುಲುಮನಾಲಿ ಗುಲ್ಮಾರ್ಗ್. 23.04.2025 ಚಾರ್-ಧಾಮ್ ಸಮೇತ ಪ್ರವಾಸ. ಏಷ್ಯನ್ ಟ್ರಾವಲ್ ಏಜೆನ್ಸಿ ಬೆಂಗಳೂರು.4. 26574131 8431888138 9448508708 9686708171

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9886213331
+91 9845114560 | +91 9900428036

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಕ್ಲೌಡ್, ಎ.ಐ ವಿಸ್ತರಣೆ

₹25 ಸಾವಿರ ಕೋಟಿ ಹೂಡಿಕೆ: ಮೈಕ್ರೊಸಾಫ್ಟ್


ಸತ್ಯ ನಾದೆಲ್ಲಾ

ಬೆಂಗಳೂರು (ಪಿಟಿಐ): 'ಭಾರತದಲ್ಲಿ ಕ್ಲೌಡ್ ಕಂಪ್ಯೂಟಿಂಗ್ ಹಾಗೂ ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನ ಸಾಮರ್ಥ್ಯದ ವಿಸ್ತರಣೆಗಾಗಿ ₹25,700 ಕೋಟಿ ಬಂಡವಾಳ ಹೂಡಿಕೆ ಮಾಡಲಾಗುವುದು' ಎಂದು ಮೈಕ್ರೊಸಾಫ್ಟ್ ಸಿಇಒ ಸತ್ಯ ನಾದೆಲ್ಲಾ ಹೇಳಿದ್ದಾರೆ.

ಮಂಗಳವಾರ ನಡೆದ ನವೋದ್ಯಮಗಳ ಸಂಸ್ಥಾಪಕರು ಮತ್ತು ಸಿಇಒಗಳ ಸಮ್ಮೇಳನದಲ್ಲಿ ಮಾತನಾಡಿದ ಅವರು, '2030ರ ವೇಳೆಗೆ ತಂತ್ರಜ್ಞಾನ ವಲಯದ ಒಂದು ಕೋಟಿ ಭಾರತೀಯರಿಗೆ ಎ.ಐ ಕೌಶಲ ಕುರಿತು ತರಬೇತಿ ನೀಡುವ ಗುರಿ ಹೊಂದಲಾಗಿದೆ' ಎಂದು ತಿಳಿಸಿದರು.

ಭಾರತದಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಬೆಳವಣಿಗೆ ದರ ಉತ್ತಮವಾಗಿದೆ ಎಂದು ಹೇಳಿದ ಅವರು, ಬಂಡವಾಳ ಹೂಡಿಕೆಯ ಅವಧಿ ಬಗ್ಗೆ ಯಾವುದೇ ಮಾಹಿತಿ ನೀಡಲಿಲ್ಲ.

ಮೈಕ್ರೊಸಾಫ್ಟ್ ಕಂಪನಿಯು ಅಜುರೆ ಬ್ರ್ಯಾಂಡ್‌ನಡಿ ಕ್ಲೌಡ್ ಕಂಪ್ಯೂಟಿಂಗ್ ಸೇವೆ ಒದಗಿಸುತ್ತಿದೆ. 60 ಪ್ರದೇಶಗಳಲ್ಲಿ ಅಜುರೆ ಕಾರ್ಯಾಚರಣೆ ನಡೆಸುತ್ತಿದ್ದು, 300ಕ್ಕೂ ಹೆಚ್ಚು ದತ್ತಾಂಶ ಕೇಂದ್ರಗಳನ್ನು ಹೊಂದಿದೆ.

'ಭಾರತದ ಎಲ್ಲಾ ವಲಯಗಳಲ್ಲೂ ಜಿಯೊ ಜೊತೆಗೂಡಿ ತಂತ್ರಜ್ಞಾನ ಸೌಲಭ್ಯ ಕಲ್ಪಿಸುವ ಸಾಮರ್ಥ್ಯ ಹೊಂದಿದ್ದೇವೆ. ಪ್ರಾದೇಶಿಕ ವಲಯಗಳಲ್ಲೂ ಸೇವೆ ಒದಗಿಸಲು ಬದ್ಧ' ಎಂದು ನಾದೆಲ್ಲಾ ಹೇಳಿದರು.

ಕಳೆದ ವರ್ಷದ ಫೆಬ್ರುವರಿಯಲ್ಲಿ ಭಾರತಕ್ಕೆ ಭೇಟಿ ನೀಡಿದ್ದ ವೇಳೆ 2025ರೊಳಗೆ ತಂತ್ರಜ್ಞಾನ ವಲಯದ 20 ಲಕ್ಷ ಜನರಿಗೆ ಎ.ಐ ಕೌಶಲ ತರಬೇತಿ ನೀಡುವುದಾಗಿ ಘೋಷಿಸಿದ್ದರು. ಸಣ್ಣ ನಗರಗಳು ಮತ್ತು ಗ್ರಾಮೀಣ ಪ್ರದೇಶದಲ್ಲಿ ತರಬೇತಿ ನೀಡುವುದಾಗಿ ಘೋಷಿಸಿದ್ದರು.

ನಾದೆಲ್ಲಾ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಸೋಮವಾರ ಭೇಟಿ ಮಾಡಿ ಚರ್ಚಿಸಿದ್ದರು. ಭಾರತದಲ್ಲಿ ಎ.ಐ ಮಿಷನ್ ಅನುಷ್ಠಾನ ಕುರಿತು ಮೋದಿ ಅವರು ಹಲವು ವಿಚಾರಗಳನ್ನು ಹಂಚಿಕೊಂಡಿದ್ದಾರೆ ಎಂದು ಹೇಳಿದ್ದಾರೆ.

ಯಕ್ಷ ಬ್ಲೂಮೂನ್ ವಿಸ್ಕಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೋವಾದ ಬ್ಲಿಸ್‌ವಾಟರ್ ಇಂಡಸ್ಟ್ರೀಸ್‌ನಿಂದ (ಹೌಸ್ ಆಫ್ ಬ್ಲಿಸ್‌ವಾಟರ್) 'ಯಕ್ಷ ಬ್ಲೂಮೂನ್' ಹೆಸರಿನ ವಿಸ್ಕಿಯನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಾಗಿದೆ.

ಬೆಂಗಳೂರಿನ ಡ್ಯೂಟಿ-ಫ್ರೀ ಮಳಿಗೆ ಮತ್ತು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಈ ವಿಸ್ಕಿ ಲಭ್ಯವಿದೆ. 2024-25ನೇ ಆರ್ಥಿಕ ವರ್ಷದಲ್ಲಿ 1,200 ಬಾಟಲಿಗಳನ್ನು ಮಾತ್ರವೇ ತಯಾರಿಸ ಲಾಗಿದೆ ಎಂದು ಕಂಪನಿಯು ಮಂಗಳವಾರ ತಿಳಿಸಿದೆ.

ಪ್ರತಿ ಬಾಟಲಿಯು 92.5 ಶುದ್ಧ ಸ್ಟರ್ಲಿಂಗ್ ಸಿಲ್ವರ್ ಟ್ಯಾಗ್‌ನೊಂದಿಗೆ ದೊರೆಯಲಿದೆ. ಇದರಲ್ಲಿ ಬ್ರ್ಯಾಂಡ್ ಹೆಸರು, ಉತ್ಪಾದನೆಯ ವರ್ಷ, ಬಾಟಲ್ ಮತ್ತು ಬ್ಯಾಚ್ ಸಂಖ್ಯೆ ನಮೂದಿಸಲಾಗಿದೆ. ಡ್ಯೂಟಿ-ಫ್ರೀ ಮಳಿಗೆಯಲ್ಲಿ ಪ್ರತಿ ಬಾಟಲಿಯ ಬೆಲೆಗೆ ₹13,719 (160 ಡಾಲರ್) ಆಗಿದೆ ಎಂದು ತಿಳಿಸಿದೆ.

'ಕಾಶ್ಮೀರದ ಕೇಸರಿ, ನೀಲಗಿರಿಯ ಜಾಯಿಕಾಯಿ ಸೇರಿ ವಿಶಿಷ್ಟ ಸಸ್ಯಜನ್ಯ ಪದಾರ್ಥಗಳಿಂದ ತಯಾರಿಸಿರುವ ಈ ವಿಸ್ಕಿಯು ವಿಭಿನ್ನ ರುಚಿ ಹೊಂದಿದೆ. ಪ್ರೀಮಿಯಂ ಇಂಡಿಯನ್ ಮಾಲ್ಟ್ ಹಾಗೂ ಐದು ವರ್ಷದಷ್ಟು ಹಳೆಯದಾದ ಸ್ಕಾಚ್ ಮಾಲ್ಟ್‌ನೊಂದಿಗೆ ಹದವಾಗಿ ಬೆರೆಸಲಾಗಿದೆ. ಅಪರಿಮಿತ ಸ್ವಾದ ಹಾಗೂ ಸುವಾಸನೆ ಭರಿತವಾಗಿದೆ' ಎಂದು ಬ್ಲಿಸ್‌ವಾಟರ್ ಇಂಡಸ್ಟ್ರೀಸ್ ಸಂಸ್ಥಾಪಕಿ ಮತ್ತು ಮಾಸ್ಟರ್ ಬ್ಲೆಂಡರ್ ವರ್ಣಾ ಭಟ್ ತಿಳಿಸಿದ್ದಾರೆ.

ಫೇಸ್‌ಬುಕ್‌ನಲ್ಲಿ ಸಾಮುದಾಯಿಕ ಟಿಪ್ಪಣಿ

ನ್ಯೂಯಾರ್ಕ್ (ಎಪಿ/ಎಎಫ್‌ಪಿ): 'ಎಕ್ಸ್'ನಲ್ಲಿ ಇರುವಂತೆ ಸುಳ್ಳು ಸುದ್ದಿಯಿಂದ ಕೂಡಿದ ಪೋಸ್ಟ್‌ಗೆ ಬಳಕೆದಾರರೇ ಫ್ಯಾಕ್ಟ್‌ಚೆಕ್ ಮಾಡಿ ಟಿಪ್ಪಣಿ ಬರೆಯುವಂಥ ಕ್ರಮವನ್ನು ಫೇಸ್‌ಬುಕ್ ಹಾಗೂ ಇನ್‌ಸ್ಟಾಗ್ರಾಂನಲ್ಲಿಯೂ ಪರಿಚಯಿಸಲು ಮೆಟಾ ಮುಂದಾಗಿದೆ.

ಈ ಸಾಮಾಜಿಕ ವೇದಿಕೆಗಳಲ್ಲಿ ಇಲ್ಲಿಯವರೆಗೆ ಅಮೆರಿಕ ಮೂಲದ, ಫ್ಯಾಕ್ಟ್‌ಚೆಕ್ ಸಂಸ್ಥೆಗಳಿಂದ ಮಾಡಲಾದ ಫ್ಯಾಕ್ಟ್‌ಚೆಕ್‌ಗಳನ್ನು ಬಳಕೆ ಮಾಡಿಕೊಳ್ಳಲಾಗುತ್ತಿತ್ತು. 'ಫ್ಯಾಕ್ಟ್‌ಚೆಕ್ ಮಾಡುವವರು ಪಕ್ಷಪಾತಿಯಾಗಿದ್ದಾರೆ. ಆದ್ದರಿಂದ ಇಂಥವರು ಮಾಡಿದ ಫ್ಯಾಕ್ಟ್‌ಚೆಕ್‌ಗಳನ್ನು ಬಳಸಿಕೊಳ್ಳದಿರಲು ನಿರ್ಧರಿಸಲಾಗಿದೆ' ಎಂದು ಮೆಟಾ ಹೇಳಿದೆ.

ಅಮೆರಿಕದಿಂದ ಮೊದಲುಗೊಂಡು ಜಗತ್ತಿನಾದ್ಯಂತ ಈ ಕ್ರಮವನ್ನು ಮೆಟಾ ಜಾರಿಗೆ ತರಲಿದೆ.

'ತಮ್ಮ ಸಾಮಾಜಿಕ ವೇದಿಕೆಗಳಲ್ಲಿ ಯಾವ ವಿಷಯದ ಕುರಿತು ಪೋಸ್ಟ್ ಹಾಕಬೇಕು, ಹಾಕಬಾರದು ಎನ್ನುವ ಕುರಿತು ಬಹಳ ಕಠಿಣವಾದ ವ್ಯವಸ್ಥೆಯನ್ನು ಜಾರಿ ಮಾಡಿದ್ದೆವು. ಇದೇ ವ್ಯವಸ್ಥೆಯೊಂದಿಗೆ ಬಹಳ ದೂರ ಬಂದುಬಿಟ್ಟಿದ್ದೇವೆ. ಇಂಥದ್ದೊಂದು ವ್ಯವಸ್ಥೆಯ ಕಾರಣದಿಂದ 'ಹಲವು ತಪ್ಪು'ಗಳನ್ನೂ ಮಾಡಿದ್ದೇವೆ' ಎಂದು ಹೇಳಿದೆ.

ಟ್ರಂಪ್ ಗೆಲುವು: ಮೆಟಾ ಬದಲು

ಮೆಟಾವು ಬಳಸುತ್ತಿರುವ ಫ್ಯಾಕ್ಟ್‌ಚೆಕ್ ಸಂಸ್ಥೆಗಳ ಫ್ಯಾಕ್ಟ್‌ಚೆಕ್‌ಗಳನ್ನು ಅಮೆರಿಕದ ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ರಿಪಬ್ಲಿಕನ್ ಪಕ್ಷ ಹಾಗೂ 'ಎಕ್ಸ್' ಮಾಲೀಕ ಇಲಾನ್ ಮಸ್ಕ್ ಅವರು ಬಹಳ ಹಿಂದಿನಿಂದಲೂ ದೂರುತ್ತಲೇ ಬಂದಿದ್ದರು. ಈ ಫ್ಯಾಕ್ಟ್‌ಚೆಕ್‌ಗಳು ಬಲಪಂಥೀಯ ವಿಚಾರಧಾರೆಯವರ ಧ್ವನಿಗಳನ್ನು ಅಡಗಿಸುತ್ತವೆ ಎಂದು ವಾದಿಸುತ್ತಿದ್ದರು.

ನವೆಂಬರ್‌ನಲ್ಲಿ ಟ್ರಂಪ್ ಅವರು ಚುನಾವಣೆಯಲ್ಲಿ ಗೆಲುವು ಸಾಧಿಸಿದ ಬಳಿಕ ಮೆಟಾದ ಸಿಇಒ ಮಾರ್ಕ್ ಜುಕರ್‌ಬರ್ಗ್ ಅವರು ಟ್ರಂಪ್ ಅವರಿಗೆ ಹತ್ತಿರವಾಗಲು ಹವಣಿಸುತ್ತಿದ್ದಾರೆ. ಟ್ರಂಪ್ ಅವರು ಅಧಿಕಾರ ವಹಿಸಿಕೊಳ್ಳುವ ಜ.20ರಂದು ನಡೆಯುವ ಕಾರ್ಯಕ್ರಮಕ್ಕೆ ಜುಕರ್‌ಬರ್ಗ್ 1 ಮಿಲಿಯನ್ ಡಾಲರ್ (ಸುಮಾರು ₹8.57 ಕೋಟಿ) ನೀಡಿದ್ದಾರೆ.

'ಟ್ರಂಪ್ ಅವರು ಇತ್ತೀಚೆಗೆ ಅಧ್ಯಕ್ಷೀಯ ಚುನಾವಣೆಯಲ್ಲಿ ಗೆದ್ದಿದ್ದು ಮೆಟಾ ಮಾಡುತ್ತಿರುವ ಈ ಬದಲಾವಣೆಗಳಿಗೆ ಕಾರಣ. ವಾಕ್ ಸ್ವಾತಂತ್ರ್ಯಕ್ಕೆ ಆದ್ಯತೆ ಕೊಡಬೇಕಾಗಿದೆ ಎಂಬ ನಿರ್ಧಾರಕ್ಕೆ ಇತ್ತೀಚಿನ ಚುನಾವಣೆಯು ಪ್ರಮುಖ ಕಾರಣಗಳಲ್ಲಿ ಒಂದು' ಎಂದು ಜುಕರ್‌ಬರ್ಗ್ ಹೇಳಿದ್ದಾರೆ.

ಬ್ರೆಜಿಲ್, ಜಿಂಬಾಬ್ವೆಯಲ್ಲಿ ಕುಸಿದ ಇಳುವರಿ

ತಂಬಾಕಿಗೆ ದಾಖಲೆ ಬೆಲೆ

• ಎಚ್.ಎಸ್.ಸಚ್ಚಿತ್

ಹುಣಸೂರು (ಮೈಸೂರು ಜಿಲ್ಲೆ): ರಾಜ್ಯದಲ್ಲಿ ಬೆಳೆಯುವ ವರ್ಜೀನಿಯ ತಂಬಾಕಿಗೆ ಮಾರುಕಟ್ಟೆಯಲ್ಲಿ ಪ್ರತಿ ಕೆ.ಜಿಗೆ ₹311 ಬೆಲೆ ದೊರೆತಿದ್ದು, ಬೆಳೆಗಾರರ ಮೊಗದಲ್ಲಿ ಮಂದಹಾಸ ಮೂಡಿದೆ.

ರಾಜ್ಯದಲ್ಲಿ 1975-76ರಲ್ಲಿ ಹರಾಜು ಮಾರುಕಟ್ಟೆ ಆರಂಭವಾಗಿದ್ದು, 50ನೇ ವರ್ಷದ ಸಂಭ್ರಮಾಚರಣೆಯಲ್ಲಿದೆ. ಅಂದಿನಿಂದಲೂ ಇಷ್ಟು ಪ್ರಮಾಣದ ದರ ಸಿಕ್ಕಿರಲಿಲ್ಲ. ಪ್ರತಿವರ್ಷವೂ ಉತ್ಪಾದನಾ ವೆಚ್ಚಕ್ಕೆ ಅನುಗುಣವಾಗಿ ವೈಜ್ಞಾನಿಕ ದರ ಸಿಗುತ್ತಿಲ್ಲ ಎಂಬ ನೋವು ಸಾಮಾನ್ಯವಾಗಿತ್ತು ಎಂದು ಬೆಳೆಗಾರರು ಹೇಳುತ್ತಾರೆ.

2024-25ನೇ ಸಾಲಿನ ಮಾರುಕಟ್ಟೆ ಆರಂಭಗೊಳ್ಳುತ್ತಿದ್ದಂತೆಯೇ ಉತ್ತಮ ದರಕ್ಕೆ ಬೆಳೆಗಾರರು ಪಟ್ಟು ಹಿಡಿದಿದ್ದರು. ಶಾಸಕ ಜಿ.ಡಿ. ಹರೀಶ್ ಗೌಡ ನೇತೃತ್ವ ನಿಯೋಗವು ಇತ್ತೀಚೆಗೆ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವರನ್ನು ಭೇಟಿ ಮಾಡಿ ಬೆಲೆ ಹೆಚ್ಚಳಕ್ಕೆ ಮನವಿ ಸಲ್ಲಿಸಿತ್ತು. ಸದ್ಯ ಮಾರುಕಟ್ಟೆಯು ಚೇತರಿಕೆ ಕಂಡಿದ್ದು, ಬೆಳೆಗಾರರಿಗೆ ಉತ್ತಮ ಲಾಭ ಸಿಗುತ್ತಿದೆ.

ಮಣ್ಣಿನ ಗುಣ: 'ಹಳೆಯ ಮೈಸೂರು ಭಾಗದ ಮಣ್ಣಿನಲ್ಲಿ ಬೆಳೆಯುವ ತಂಬಾಕು ವಿಶಿಷ್ಟ ಸುವಾಸನೆಯ ಗುಣ ಹೊಂದಿದೆ. ನಿಕೋಟಿನ್ ಪ್ರಮಾಣ ಶೇ 1ರಿಂದ 2ರಷ್ಟಿದೆ. ಹಾಗಾಗಿ, ವಿದೇಶಿ ಮಾರುಕಟ್ಟೆಯಲ್ಲಿ ರಾಜ್ಯದ ತಂಬಾಕಿಗೆ ಹೆಚ್ಚಿನ ಬೇಡಿಕೆ ಇದೆ' ಎಂದು ತಂಬಾಕು ಸಂಶೋಧನಾ ಕೇಂದ್ರದ ವಿಜ್ಞಾನಿ ಡಾ.ರಾಮಕೃಷ್ಣ 'ಪ್ರಜಾವಾಣಿ'ಗೆ ತಿಳಿಸಿದರು.

ಹುಣಸೂರು ತಾಲ್ಲೂಕಿನ ಕಟ್ಟೆಮಳಲವಾಡಿ ಗ್ರಾಮದ ದೇವರಾಜ ಅರಸು ತಂಬಾಕು ಹರಾಜು ಮಾರುಕಟ್ಟೆಗೆ ಬೆಳೆಗಾರರು ಮಾರಾಟಕ್ಕೆ ತಂಬಾಕು ತಂದಿದ್ದರು

> **ಈ ಬಾರಿ ಗುಣಮಟ್ಟದ ತಂಬಾಕು ಉತ್ಪಾದನೆ ಕುಸಿದಿದೆ. 'ಬಿ' ಮತ್ತು 'ಸಿ' ಗ್ರೇಡ್‌ಗೆ ಕೆ.ಜಿ ₹250 ದರ ನೀಡಿದರೆ ರೈತರಿಗೆ ಆರ್ಥಿಕ ನಷ್ಟ ತಪ್ಪಲಿದೆ**
> **ಪುನೀತ್ ಸಾಲಿಗ್ರಾಮ,** ಬೆಳೆಗಾರ

'ಜಾಗತಿಕ ಮಟ್ಟದಲ್ಲಿ ಅತಿಹೆಚ್ಚು ತಂಬಾಕು ಬೆಳೆಯುವ ಚೀನಾವು ವಿಶ್ವದ ಮಾರುಕಟ್ಟೆಯಿಂದ ಹೊರಗುಳಿದಿದೆ. 2023-24ನೇ ಸಾಲಿನಡಿ ಬ್ರೆಜಿಲ್, ಜಿಂಬಾಬ್ವೆ, ಮಲಾವಿ ಮತ್ತು ಬಾಂಗ್ಲಾದೇಶದಲ್ಲಿ ಹವಾಮಾನ ವೈಪರೀತ್ಯದಿಂದ ತಂಬಾಕು ಬೆಳೆ ನಷ್ಟಕ್ಕೀಡಾಗಿತ್ತು. ಪೂರೈಕೆ ಕೊರತೆಯಿಂದಾಗಿ ಆಂಧ್ರಪ್ರದೇಶದ ಮಾರುಕಟ್ಟೆಯಲ್ಲಿ ಕೆ.ಜಿ.ಗೆ ₹400ರಿಂದ ₹410 ದರ ದೊರೆತಿದೆ' ಎಂದು ಐಟಿಸಿ ಕಂಪನಿಯ ರಾಜ್ಯ ತಂಬಾಕು ಲೀಫ್ ವ್ಯವಸ್ಥಾಪಕ ಶ್ರೀನಿವಾಸ್ ರೆಡ್ಡಿ ಮಾಹಿತಿ ನೀಡಿದರು.

'ಈ ಬಾರಿ ಬ್ರೆಜಿಲ್ ಮತ್ತು ಜಿಂಬಾಬ್ವೆಯಲ್ಲಿ ಉತ್ತಮ ಇಳುವರಿಯ ನಿರೀಕ್ಷೆಯಿದೆ. ಬ್ರೆಜಿಲ್‌ನಲ್ಲಿ 675 ಕೋಟಿ ಕೆ.ಜಿ ಹಾಗೂ ಜಿಂಬಾಬ್ವೆಯಲ್ಲಿ 350 ಕೋಟಿ ಕೆ.ಜಿ ಉತ್ಪಾದನೆಯಾಗುವ ಅಂದಾಜಿಸಿದ್ದು, ಕಟಾವು ಆರಂಭವಾಗಿದೆ. ಪೂರೈಕೆ ಹೆಚ್ಚಳಾಗುವುದರಿಂದ ಮುಂದಿನ ಮಾರುಕಟ್ಟೆ ವರ್ಷದಲ್ಲಿ ದೇಶೀಯ ಮಾರುಕಟ್ಟೆಯಲ್ಲಿ ದರ ಕುಸಿಯುವ ಸಾಧ್ಯತೆಯಿದೆ' ಎಂದು ಹೇಳಿದರು.

ಅಮೆರಿಕ: ಹಕ್ಕಿ ಜ್ವರ–ವ್ಯಕ್ತಿ ಸಾವು

ವಾಷಿಂಗ್ಟನ್(ಎಎಫ್‌ಪಿ): ಎಚ್5ಎನ್1 (ಹಕ್ಕಿ ಜ್ವರ) ಸೋಂಕಿನಿಂದ ಲುಯೀಸಿಯಾನ ರಾಜ್ಯದಲ್ಲಿ 65 ವರ್ಷದ ವ್ಯಕ್ತಿಯೊಬ್ಬರು ಸೋಮವಾರ ಮೃತಪಟ್ಟಿದ್ದಾರೆ. ಈ ಸೋಂಕಿನಿಂದ ಅಮೆರಿಕದಲ್ಲಿ ಸಾವು ಸಂಭವಿಸಿದ ಮೊದಲ ಪ್ರಕರಣ ಇದಾಗಿದೆ.

'ಹಕ್ಕಿಗಳ ಹಿಂಡು ತಂಗಿದ್ದ ಜಾಗದ ಸಂಪರ್ಕಕ್ಕೆ ಬಂದಿದ್ದರಿಂದ ವ್ಯಕ್ತಿಗೆ ಸೋಂಕು ತಗುಲಿತ್ತು. ಆದರೆ, ಈ ವ್ಯಕ್ತಿಯಿಂದ ಮತ್ತೊಂದು ವ್ಯಕ್ತಿಗೆ ಸೋಂಕು ತಗುಲಿರುವ ಬಗ್ಗೆ ಮಾಹಿತಿ ಇಲ್ಲ. 2024ರ ಡಿಸೆಂಬರ್‌ನಿಂದಲೇ ವ್ಯಕ್ತಿಯು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು' ಎಂದು ಲುಯೀಸಿಯಾನದ ಆರೋಗ್ಯ ಇಲಾಖೆಯು ಮಾಹಿತಿ ನೀಡಿದೆ.

'ಇದೊಂದು ಗಂಭೀರ ಪ್ರಕರಣ' ಎಂದು ಅಮೆರಿಕದ ಸೆಂಟರ್ಸ್ ಫಾರ್ ಡಿಸೀಸ್ ಕಂಟ್ರೋಲ್ ಆ್ಯಂಡ್ ಪ್ರಿವೆನ್ಷನ್ (ಸಿಡಿಸಿ) ಹೇಳಿದೆ. 'ಈ ಪ್ರಕರಣದಿಂದ ಗಾಬರಿ ಪಡಬೇಕಾಗಿಲ್ಲ. ಕೋಳಿ ಮತ್ತು ಗೋವು ಸಾಕಾಣಿಕೆ ಮಾಡುವವರು, ಪಕ್ಷಿಗಳ ಸಂಪರ್ಕದಲ್ಲಿ ಕೆಲಸ ಮಾಡುವವರು ತುಸು ಎಚ್ಚರಿಕೆ ವಹಿಸಬೇಕು' ಎಂದು ಲುಯೀಸಿಯಾನದ ಆರೋಗ್ಯ ಇಲಾಖೆ ಹೇಳಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹೊಸತು	30000-34500
ಹಳತು	45000-49000
ಪುತ್ತೂರು	
ಕೋಕ	22000-27500
ಹೊಸತು	25000-35500
ಹಳತು	37000-48500
ಸಾಗರ	
ಕೆಂಪುಗೋಟು	29699-29699
ರಾಶಿ	45799-49319
ಸಿಪ್ಪೆಗೋಟು	7101-17189
ಚಾಲಿ	31269-32699
ಕಾರ್ಕಳ	
ಹೊಸತು	25000-35000
ಹಳತು	30000-45000
ಶಿವಮೊಗ್ಗ	
ಬೆಟ್ಟೆ	44509-56319
ಗೊರಬಲು	17509-36189
ರಾಶಿ	33199-51089
ಸರಕು	49440-85440
ಸಿದ್ದಾಪುರ	
ಬಿಳಿಗೋಟು	24389-28609
ಚಾಲಿ	32269-38509
ಕೋಕ	20609-25319
ಹೊಸಚಾಲಿ	22299-32029
ಕೆಂಪುಗೋಟು	21609-21819
ರಾಶಿ	41899-48399
ತಟ್ಟಿಬೆಟ್ಟೆ	26319-34319
ಶಿರಸಿ	
ಬೆಟ್ಟೆ	31098-38398
ಬಿಳಿಗೋಟು	17099-30500
ಚಾಲಿ	35208-39488
ಕೆಂಪುಗೋಟು	16199-24699
ರಾಶಿ	41009-45898

ಭಾರತದ ವಿದ್ಯಾರ್ಥಿನಿ ಸಾವಿಗೆ ಕಾರಣ ಆಗಿದ್ದ ಪೊಲೀಸ್ ಅಧಿಕಾರಿ ವಜಾ

ಜಾಹ್ನವಿ ಕಂದುಲ

ಸಿಯಾಟಲ್ (ನ್ಯೂಯಾರ್ಕ್) (ಪಿಟಿಐ): ಗಸ್ತುವಾಹನದ ಅಪಘಾತದಿಂದಾಗಿ 2023ರ ಜನವರಿಯಲ್ಲಿ ಭಾರತ ಮೂಲದ ವಿದ್ಯಾರ್ಥಿನಿಯೊಬ್ಬಳ ಸಾವಿಗೆ ಕಾರಣರಾಗಿದ್ದ ಸಿಯಾಟಲ್‌ನ ಪೊಲೀಸ್ ಅಧಿಕಾರಿಯೊಬ್ಬರನ್ನು ಸೇವೆಯಿಂದ ವಜಾಗೊಳಿಸಲಾಗಿದೆ.

ಆಂಧ್ರಪ್ರದೇಶದ ಜಾಹ್ನವಿ ಕಂದುಲ ಅವರು ಸಿಯಾಟಲ್‌ನಲ್ಲಿ ರಸ್ತೆ ದಾಟುತ್ತಿದ್ದಾಗ, ಪೊಲೀಸ್ ಅಧಿಕಾರಿ ಕೆವಿನ್ ಡೇವ್ ಅವರು ಚಲಾಯಿಸುತ್ತಿದ್ದ ವಾಹನ ಡಿಕ್ಕಿ ಹೊಡೆದು ಮೃತಪಟ್ಟಿದ್ದರು. ಡೇವ್ ಅವರನ್ನು ಪೊಲೀಸ್ ಇಲಾಖೆಯಿಂದ ವಜಾಗೊಳಿಸಲಾಗಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿರುವುದಾಗಿ 'ಸಿಯಾಟಲ್ ಟೈಮ್ಸ್' ಸೋಮವಾರ ವರದಿ ಮಾಡಿದೆ.

ರಾಷ್ಟ್ರ ರಾಜಧಾನಿಯಲ್ಲಿ ಎಎಪಿ, ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಹಣಾಹಣಿಗೆ ವೇದಿಕೆ ಸಜ್ಜು

ದೆಹಲಿ ವಿಧಾನಸಭೆ ಮತಕ್ಕೆ ಮುಹೂರ್ತ

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿ ವಿಧಾನಸಭಾ ಚುನಾವಣೆಗೆ ಭಾರತೀಯ ಚುನಾವಣಾ ಆಯೋಗ ಮುಹೂರ್ತ ನಿಗದಿಪಡಿಸಿದೆ. ಫೆ.5ರಂದು ಮತದಾನ ಹಾಗೂ 8ರಂದು ಮತ ಎಣಿಕೆ ನಡೆಯಲಿದೆ. ರಾಷ್ಟ್ರ ರಾಜಧಾನಿಯಲ್ಲಿ ಆಮ್ ಆದ್ಮಿ ಪಕ್ಷ (ಎಎಪಿ), ಬಿಜೆಪಿ ಹಾಗೂ ಕಾಂಗ್ರೆಸ್ ನಡುವೆ ಹಣಾಹಣಿಗೆ ವೇದಿಕೆ ಸಿದ್ಧವಾಗಿದೆ.

ಮಂಗಳವಾರ ಇಲ್ಲಿ ಪತ್ರಿಕಾಗೋಷ್ಠಿ ನಡೆಸಿದ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅವರು ವೇಳಾಪಟ್ಟಿ ಪ್ರಕಟಿಸಿದರು. ಇದು ಈ ವರ್ಷದ ಮೊದಲ ಚುನಾವಣೆ. ರಾಜೀವ್ ಕುಮಾರ್ ಅವರು ನಡೆಸುತ್ತಿರುವ ಕೊನೆಯ ಚುನಾವಣೆ. ಮುಂದಿನ ತಿಂಗಳು ಅವರು ಕೆಲಸದಿಂದ ನಿವೃತ್ತ-ರಾಗಲಿದ್ದಾರೆ. ಪ್ರಸ್ತುತ ವಿಧಾನಸಭೆಯ ಅವಧಿ ಫೆಬ್ರುವರಿ 23ಕ್ಕೆ ಕೊನೆಗೊಳ್ಳಲಿದೆ.

ದೆಹಲಿಯಲ್ಲಿ 10 ವರ್ಷಗಳಿಂದ ಎಎಪಿ ಅಧಿಕಾರದಲ್ಲಿದೆ. ಬಿಜೆಪಿ 26 ವರ್ಷಗಳಿಂದ ಅಧಿಕಾರದಿಂದ ದೂರ ಇದೆ. ಕಾಂಗ್ರೆಸ್ ಕಳೆದೆರಡು ಚುನಾವಣೆಗಳಲ್ಲಿ ಖಾತೆ ತೆರೆದಿಲ್ಲ. ಎಎಪಿ ಸರ್ಕಾರವನ್ನು ಪುನರಾವರ್ತನೆ ಮಾಡಬೇಕೇ, ಬಿಜೆಪಿಯ ವನವಾಸ ಅಂತ್ಯಗೊಳಿಸಬೇಕೇ ಅಥವಾ ಕಾಂಗ್ರೆಸ್‌ಗೆ ರಾಜಕೀಯ ಪ್ರಸ್ತುತತೆ ನೀಡಬೇಕೇ ಎಂಬುದನ್ನು ಮತದಾರರು ನಿರ್ಧರಿಸಲಿದ್ದಾರೆ.

ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರ ರಾಜಕೀಯ ಭವಿಷ್ಯವು ಈ ಫಲಿತಾಂಶದ ಮೇಲೆ ನಿಂತಿದೆ. ಹರಿಯಾಣ ಹಾಗೂ ಮಹಾರಾಷ್ಟ್ರ ಚುನಾವಣೆಯ ಫಲಿತಾಂಶದ ಬಳಿಕ 'ಇಂಡಿಯಾ' ಗುಂಪಿನಲ್ಲಿ ಭಿನ್ನಮತ ಆರಂಭವಾಗಿದೆ. ದೆಹಲಿ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಹಿನ್ನಡೆಯಾದರೆ ಮೈತ್ರಿಕೂಟದಲ್ಲಿ ಒಡಕು ಮತ್ತಷ್ಟು ಹೆಚ್ಚಬಹುದು. ಮೈತ್ರಿಕೂಟದ ನಾಯಕತ್ವವನ್ನು ಪ್ರಾದೇಶಿಕ ಪಕ್ಷಗಳಿಗೆ ಹಸ್ತಾಂತರಿಸುವಂತೆ ಇನ್ನಷ್ಟು ಪಕ್ಷಗಳು ಒತ್ತಡ ಹೇರುವ ಸಾಧ್ಯತೆ ಇದೆ.

ಕೇಂದ್ರ ಬಜೆಟ್ ಫೆ.1ರಂದು ಮಂಡನೆಯಾಗುವ ಸಂಭವ ಇದೆ. 'ಕೇಂದ್ರ ಬಜೆಟ್‌ನಲ್ಲಿ ದೆಹಲಿಗೆ ಸಂಬಂಧಿಸಿದ ವಿಷಯ ಸೇರಿಸದಂತೆ ಕ್ಯಾಬಿನೆಟ್ ಕಾರ್ಯದರ್ಶಿ ಅವರಿಗೆ ಆಯೋಗ ಪತ್ರ ಬರೆಯಲಿದೆ' ಎಂದು ಕುಮಾರ್ ಅವರು ತಿಳಿಸಿದರು.

ರಾಜಧಾನಿಯ ರಾಜಕೀಯದಲ್ಲಿ ತಮ್ಮ ಭವಿಷ್ಯ ನಿರ್ಧರಿಸುವ ಈ ಚುನಾವಣೆಯು ಕಾಂಗ್ರೆಸ್, ಬಿಜೆಪಿ ಹಾಗೂ ಎಎಪಿಗೆ ನಿರ್ಣಾಯಕ.

ಕಳೆದ ಬಾರಿ 62 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದ್ದ ಎಎಪಿಯು ಎಲ್ಲ 70 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಪ್ರಕಟಿಸಿದೆ. 24 ಹೊಸ ಮುಖಗಳಿಗೆ ಮಣೆ ಹಾಕಿದೆ. ಬಿಜೆಪಿ 48 ಕ್ಷೇತ್ರಗಳಿಗೆ ಹಾಗೂ ಬಿಜೆಪಿ 29 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಖೈರುಗೊಳಿಸಿವೆ.

ಪ್ರಜಾ ಮತ ಜನತಂತ್ರದ ಹಬ್ಬ

70 ಒಟ್ಟು ಕ್ಷೇತ್ರಗಳು

12 ಎಸ್‌ಸಿ ಮೀಸಲು ಕ್ಷೇತ್ರಗಳು

ವೇಳಾಪಟ್ಟಿ

ಜ.10	ಚುನಾವಣೆ ಅಧಿಸೂಚನೆ ಪ್ರಕಟ
ಜ.18	ನಾಮಪತ್ರ ಸಲ್ಲಿಕೆ ಅಂತ್ಯ
ಜ.18	ನಾಮಪತ್ರ ಪರಿಶೀಲನೆ
ಜ.20	ನಾಮಪತ್ರ ವಾಪಸ್ ಪಡೆಯಲು ಕೊನೆಯ ದಿನಾಂಕ
ಫೆ.5	ಮತದಾನ
ಫೆ.8	ಮತ ಎಣಿಕೆ

1.55 ಕೋಟಿ ಒಟ್ಟು ಮತದಾರರು

83.49 ಲಕ್ಷ ಪುರುಷರು

71.74 ಲಕ್ಷ ಮಹಿಳೆಯರು

1,261 ತೃತೀಯ ಲಿಂಗಿಗಳು

ಎರಡು ಕ್ಷೇತ್ರಗಳಿಗೆ ಉಪಚುನಾವಣೆ

ಉತ್ತರ ಪ್ರದೇಶದ ಮಿಲ್ಕಿಪುರ ಕ್ಷೇತ್ರದ ಶಾಸಕರಾಗಿದ್ದ ಅವಧೇಶ್ ಪ್ರಸಾದ್ ಅವರು ಲೋಕಸಭಾಗೆ ಆಯ್ಕೆಯಾಗಿದ್ದಾರೆ. ತಮಿಳುನಾಡಿನ ಈರೋಡ್ ಕ್ಷೇತ್ರದ ಕಾಂಗ್ರೆಸ್ ಶಾಸಕ ಇವಿಕೆಎಸ್ ಇಳಂಗೋವನ್ ನಿಧನರಾಗಿದ್ದರು. ಈ ಕ್ಷೇತ್ರಗಳಿಗೆ ಫೆ.5ರಂದು ಉಪಚುನಾವಣೆ ನಡೆಯಲಿದೆ.

'ಜಮ್ಮು–ಕಾಶ್ಮೀರದ ಬುದ್ಗಾಮ್ ಮತ್ತು ನಗ್ರೋಟಾದ ಎರಡು ವಿಧಾನಸಭಾ ಕ್ಷೇತ್ರಗಳಿಗೂ ಉಪಚುನಾವಣೆ ಬಾಕಿಯಿದೆ. ಹವಾಮಾನ ವೈಪರೀತ್ಯದಿಂದ ಸದ್ಯ ಚುನಾವಣೆ ನಡೆಸಲು ಸಾಧ್ಯವಿಲ್ಲ' ಎಂದು ರಾಜೀವ್ ಕುಮಾರ್ ತಿಳಿಸಿದರು.

'ಮತದಾರರ ಖಾಸಗಿತನ ರಕ್ಷಣೆ ಉದ್ದೇಶ'

ರಾಜೀವ್ ಕುಮಾರ್

ಚುನಾವಣಾ ನಿಯಮಗಳಿಗೆ ತಿದ್ದುಪಡಿ ತಂದಿರುವುದನ್ನು ಬಲವಾಗಿ ಸಮರ್ಥಿಸಿಕೊಂಡಿರುವ ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ರಾಜೀವ್ ಕುಮಾರ್, 'ಮತದಾರರ ಖಾಸಗಿತನ ರಕ್ಷಿಸುವ ಉದ್ದೇಶದಿಂದ ಮತಗಟ್ಟೆಯಲ್ಲಿನ ಸಿ.ಸಿ.ಟಿವಿ ದೃಶ್ಯಗಳನ್ನು ಸಾರ್ವಜನಿಕ ಪರಿಶೀಲನೆಗೆ ಒಳಪಡಿಸುವುದನ್ನು ನಿರ್ಬಂಧಿಸಲಾಗಿದೆ ಎಂದು ಮಂಗಳವಾರ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, 'ಮತಗಟ್ಟೆಗೆ ಸಂಬಂಧಿಸಿದ ದತ್ತಾಂಶಗಳ ಬಳಸಿ, ಸುಳ್ಳು ಸಂಕಥನ ಸೃಷ್ಟಿಸುವುದನ್ನು ತಡೆಯುವ ಉದ್ದೇಶವೂ ಈ ಕ್ರಮ ತೆಗೆದುಕೊಳ್ಳಲಾಗಿದೆ' ಎಂದು ಹೇಳಿದರು.

'10.5 ಲಕ್ಷ ಮತಗಟ್ಟೆಗಳಲ್ಲಿ 10 ಗಂಟೆಯಷ್ಟು ಮತದಾನ ನಡೆಯುತ್ತದೆ. ಅಂದರೆ, ಅಂದಾಜು ಒಂದು ಕೋಟಿ ಗಂಟೆಗಳಷ್ಟು ದತ್ತಾಂಶ ಸಂಗ್ರಹವಾಗುತ್ತದೆ. ಒಬ್ಬ ವ್ಯಕ್ತಿ ದಿನಕ್ಕೆ 8 ಗಂಟೆ ಈ ದತ್ತಾಂಶ ವೀಕ್ಷಿಸುತ್ತಾನೆ ಅಂದುಕೊಂಡರೂ, ಎಲ್ಲ ದೃಶ್ಯಗಳನ್ನು ವೀಕ್ಷಿಸಲು ಆತನಿಗೆ 3,600 ವರ್ಷ ಬೇಕಾಗುತ್ತದೆ' ಎಂದರು.

ಸಿಇಸಿ ಹೇಳಿದ್ದೇನು?

- ಚುನಾವಣಾ ಪ್ರಚಾರದ ವೇಳೆಯ ಧ್ರುವೀಕರಣದಿಂದಾಗುವ ಗಾಯಗಳು ಶಾಶ್ವತವಾಗಿ ಉಳಿಯುತ್ತವೆ
- ಚುನಾವಣಾ ಪ್ರಚಾರ ಕಾರ್ಯದ ನಿಯಂತ್ರಣ ಅಗತ್ಯ. ರಾಜಕೀಯ ಪಕ್ಷಗಳು ಕೂಡ ಜವಾಬ್ದಾರಿ ಹಾಗೂ ಸಂವೇದನಾಶೀಲವಾಗಬೇಕಿದೆ
- ಕೂಲಂಕಷ ಪರಿಶೀಲನೆ ಇಲ್ಲದೆಯೇ ಮತದಾರರ ಪಟ್ಟಿಯಿಂದ ಹೆಸರುಗಳನ್ನು ತೆಗೆದು ಹಾಕಲು ಸಾಧ್ಯವಿಲ್ಲ
- 'ಉಚಿತ ಕೊಡುಗೆ'ಗಳ ವ್ಯಾಖ್ಯಾನ ಕಷ್ಟ. ಈ ವಿಚಾರ ನ್ಯಾಯಾಲಯದ ಮುಂದಿರುವ ಕಾರಣ ಆಯೋಗ ಪ್ರತಿಕ್ರಿಯೆ ನೀಡದು
- ನಿವೃತ್ತಿ ಬಳಿಕ ಹಿಮಾಲಯ ಪರ್ವತಗಳಲ್ಲಿ ಹಲವು ತಿಂಗಳು ಏಕಾಂಗಿಯಾಗಿ ಕಾಲ ಕಳೆಯುವ ಮೂಲಕ 'ಡಿಟಾಕ್ಸಿಫೈ' ಮಾಡಿಕೊಳ್ಳುವ ಇರಾದೆ ಇದೆ

'ನಿವಾಸ' ಹಂಚಿಕೆ ವಿಚಾರ ಮುಖ್ಯಮಂತ್ರಿ–ಬಿಜೆಪಿ ವಾಕ್ಸಮರ

ನವದೆಹಲಿ (ಪಿಟಿಐ): ಮುಖ್ಯಮಂತ್ರಿ ಅವರಿಗೆ 'ಅಧಿಕೃತ ನಿವಾಸ'ದ ಹಂಚಿಕೆ ವಿಷಯ ಈಗ ರಾಜಧಾನಿಯಲ್ಲಿ ಎಎಪಿ ಮತ್ತು ಬಿಜೆಪಿ ನಡುವೆ ವಾಕ್ಸಮರಕ್ಕೆ ಕಾರಣವಾಗಿದೆ. ದ್ವೇಷದ ರಾಜಕಾರಣ ಎಂದು ಎಎಪಿ ಆರೋಪಿಸಿದ್ದರೆ, 'ಸುಳ್ಳು ಆರೋಪ' ಎಂದು ಬಿಜೆಪಿ ತಳ್ಳಿಹಾಕಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಆತಿಶಿ, 'ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ದ್ವೇಷದ ರಾಜಕಾರಣದಿಂದ ಅಧಿಕೃತ ನಿವಾಸದ ಹಂಚಿಕೆ ರದ್ದುಪಡಿಸಿ, ಕಸಿದುಕೊಂಡಿತು' ಎಂದು ಆರೋಪಿಸಿದರು.

ಇದು ವಾಕ್ಸಮರಕ್ಕೆ ಕಾರಣವಾಗುತ್ತಲೇ ಲೋಕೋಪಯೋಗಿ ಇಲಾಖೆ ಸ್ಪಷ್ಟೀಕರಣ ನೀಡಿದೆ. 'ಹಂಚಿಕೆಯಾಗಿದ್ದ ನಿವಾಸವನ್ನು ನಿಗದಿತ ಕಾಲದಲ್ಲಿ ಆತಿಶಿ ಅವರು ಸುಪರ್ದಿಗೆ ಪಡೆಯದೇ ಇರುವುದೇ ಹಿಂಪಡೆಯಲು ಕಾರಣ'. ಅಲ್ಲದೆ, ಈ ಮನೆಯ ನವೀಕರಣದಲ್ಲಿ ಆಗಿರುವ ಅಕ್ರಮ ಕುರಿತು ಈ ಆಸ್ತಿ ಸದ್ಯ ಸಿಬಿಐ ತನಿಖೆಯಲ್ಲಿದೆ' ಎಂದು ಇಲಾಖೆ ಸ್ಪಷ್ಟನೆ ನೀಡಿದೆ.

ಕೇಂದ್ರ ಸರ್ಕಾರದ ವಿರುದ್ಧ ನೇರ ಆರೋಪ ಮಾಡಿದ ಆತಿಶಿ, 'ನಾನು ಪ್ರಧಾನಿಗೆ ಪತ್ರ ಬರೆದು ಈಗ 'ರಾಜಮಹಲ್' ತೊರೆದು, 131, ನಾರ್ಥ್ ಅವಿನ್ಯೂ (ಎಎಪಿ ರಾಜ್ಯಸಭೆ ಸದಸ್ಯ ಸಂಜಯ್ ಸಿಂಗ್ ನಿವಾಸ) ನಿವಾಸಕ್ಕೆ ಬಂದು ವಾಸಿಸಲು ಕೋರುತ್ತೇನೆ. ಪ್ರಧಾನಿ ಬಂದು ವಾಸ ಮಾಡುತ್ತಾರಾ? ಎಂದರು. 'ಬಿಜೆಪಿ ಅಧಿಕೃತ ನಿವಾಸದಿಂದ ಹೊರದಬ್ಬಿದರೂ ಜನರಿಗಾಗಿ ಕೆಲಸ ಮುಂದುವರಿಸಿದೆ. ಮಹಿಳೆಯರಿಗೆ ₹2,100 ನಗದು, ವಯಸ್ಕರಿಗೆ ಉಚಿತ ಆರೋಗ್ಯ ಚಿಕಿತ್ಸೆ ನೀಡುವ ವಾಗ್ದಾನ ಮಾಡುತ್ತೇನೆ. ಜನರಿಗೆ ಕೆಲಸ ಮಾಡುವುದು ನಿಲ್ಲುವುದಿಲ್ಲ' ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿದ್ದ ಸಂಜಯ್ ಸಿಂಗ್, 'ಸಿ.ಎಂ ಅವರ ಅಧಿಕೃತ ನಿವಾಸ 'ವಿಲಾಸಿ ಮನೆ' ಎಂದು ಬಿಜೆಪಿ ಹೇಳಿದೆ. ಅಲ್ಲಿ ಮಿನಿಬಾರ್, ಚಿನ್ನದ ಶೌಚಾಲಯ, ಈಜುಕೊಳ ಇದೆ ಎಂಬ ಆರೋಪವನ್ನು ಬಿಜೆಪಿ ಸಾಬೀತುಪಡಿಸಲಿ' ಎಂದು ಸವಾಲು ಹಾಕಿದರು.

ಆರೋಪ ನಿರಾಕರಿಸಿದ ಮಾಳವೀಯ

ಅಧಿಕೃತ ನಿವಾಸ ಹಂಚಿಕೆ ರದ್ದು ಕುರಿತು ಮುಖ್ಯಮಂತ್ರಿ ಆತಿಶಿ ಅವರು ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದು ಬಿಜೆಪಿ ಐಟಿ ವಿಭಾಗದ ಮುಖ್ಯಸ್ಥ ಅಮಿತ್ ಮಾಳವೀಯ ಪ್ರತಿಕ್ರಿಯಿಸಿದ್ದಾರೆ.

'ಅವರ ಸುಳ್ಳುಗಳನ್ನು ಯಾರೂ ಕೇಳುವುದಿಲ್ಲ. ನಮಗೆ ತಿಳಿದಂತೆ ನಿಗದಿತ ವೇಳೆಯಲ್ಲಿ ಸುಪರ್ದಿಗೆ ಪಡೆದಿಲ್ಲ ಮತ್ತು ಸಿಬಿಐ ತನಿಖೆ ಇರುವ ಕಾರಣಗಳಿಂದ ಹಂಚಿಕೆ ರದ್ದಾಗಿದೆ' ಎಂದು ಅವರು 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿದ್ದಾರೆ.

'ಉಚಿತ ಕೊಡುಗೆಗಳಿಗೆ ಹಣ ಇರುತ್ತದೆ, ನ್ಯಾಯಾಧೀಶರ ಪಿಂಚಣಿಗೆ ಇರುವುದಿಲ್ಲ'

ನವದೆಹಲಿ: ಕೆಲಸ ಮಾಡದವರಿಗೆ ಉಚಿತ ಕೊಡುಗೆಗಳನ್ನು ನೀಡಲು ರಾಜ್ಯ ಸರ್ಕಾರಗಳ ಬಳಿ ಹಣ ಇರುವಂತೆ ಕಾಣುತ್ತಿದೆ. ಆದರೆ, ಜಿಲ್ಲಾ ಹಂತದ ನ್ಯಾಯಾಲಯಗಳ ನ್ಯಾಯಾಧೀಶರ ಸಂಬಳ ಮತ್ತು ಪಿಂಚಣಿಯ ವಿಚಾರದಲ್ಲಿ ಸರ್ಕಾರಗಳು ಹಣಕಾಸಿನ ಮಿತಿಗಳ ಬಗ್ಗೆ ಮಾತನಾಡುತ್ತವೆ ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಹೇಳಿದೆ.

ನ್ಯಾಯಾಂಗದ ಅಧಿಕಾರಿಗಳ ವೇತನ ಮತ್ತು ನಿವೃತ್ತಿ ಸೌಲಭ್ಯಗಳ ಬಗ್ಗೆ ತೀರ್ಮಾನ ಕೈಗೊಳ್ಳುವಾಗ ಸರ್ಕಾರವು ಹಣಕಾಸಿನ ಮಿತಿಗಳನ್ನು ಕೂಡ ಪರಿಗಣಿಸಬೇಕಾಗುತ್ತ-ದೆ ಎಂದು ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರು ವಾದಿಸಿದಾಗ, ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಆಗಸ್ಟಿನ್ ಜಾರ್ಜ್ ಮಸೀಹ್ ಅವರು ಇರುವ ವಿಭಾಗೀಯ ಪೀಠವು ಈ ಮಾತನ್ನು ಮೌಖಿಕವಾಗಿ ಹೇಳಿತು.

ದೆಹಲಿ ವಿಧಾನಸಭಾ ಚುನಾವಣೆ ಹತ್ತಿರವಾಗುತ್ತಿ-ರುವ ಸಂದರ್ಭದಲ್ಲಿ ರಾಜಕೀಯ ಪಕ್ಷಗಳು ನೀಡಿರುವ ಭರವಸೆಗಳ ಬಗ್ಗೆ, ಮಹಾರಾಷ್ಟ್ರದಲ್ಲಿನ ಲಾಡ್ಲಿ–ಬಹೀಣ್ ಯೋಜನೆ ಬಗ್ಗೆ ಪೀಠವು ಬೊಟ್ಟು ಮಾಡಿತು. ಕೆಲವು ವರ್ಷಗಳಿಂದ ಸರ್ಕಾರದ ಪಿಂಚಣಿ ಹೊರೆಯು ಹೆಚ್ಚಾಗಿದೆ ಎಂದು ವೆಂಕಟರಮಣಿ ತಿಳಿಸಿದರು. ಉಚಿತ ಕೊಡುಗೆಗಳ ಸಂಸ್ಕೃತಿಯನ್ನು ಸಹಜ ಮಾರ್ಗಕ್ಕೆ ಹೊರತಾಗಿದ್ದೆಂದು ಪರಿಗಣಿಸಬಹುದು ಎಂದು ಅವರು ಹೇಳಿದರು.

ಪ್ರಕರಣದಲ್ಲಿ ಅಮೈಕಸ್ ಕ್ಯೂರಿ ಆಗಿರುವ ಹಿರಿಯ ವಕೀಲ ಪರಮೇಶ್ವರ್ ಕೆ. ಅವರು ನ್ಯಾಯಾಂಗದಲ್ಲಿ ಕೆಲಸ ಮಾಡುವವರ ಸೇವಾ ಷರತ್ತುಗಳನ್ನು ನಿಗದಿ ಮಾಡುವ ಅಧಿಕಾರವನ್ನು ಕಾರ್ಯಾಂಗ ಮತ್ತು ಶಾಸಕಾಂಗಕ್ಕೆ ನೀಡಿರುವ ಸಂವಿಧಾನದ 309ನೆಯ ವಿಧಿಯನ್ನು ಉಲ್ಲೇಖಿಸಿ, ಈ ವಿಚಾರದಲ್ಲಿ ನ್ಯಾಯಾಂಗಕ್ಕೆ ಯಾವ ಅಧಿಕಾರವೂ ಇಲ್ಲವೆಂದು ಭಾವಿಸಬೇಕಿಲ್ಲ ಎಂದರು.

'ನ್ಯಾಯಾಂಗವು ಹೆಚ್ಚು ವೈವಿಧ್ಯದಿಂದ ಕೂಡಿರಬೇಕು ಎಂದು ನಾವು ಬಯಸುವುದಾದರೆ ನಾವು ನಮ್ಮ ನ್ಯಾಯಾಧೀಶರಿಗೆ ಹೆಚ್ಚು ಉತ್ತಮ ವೇತನ ನೀಡಬೇಕು' ಎಂದರು. ಅಖಿಲ ಭಾರತ ನ್ಯಾಯಾಧೀಶರ ಸಂಘಟನೆ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದ ಪ್ರಕರಣ ಇದಾಗಿದೆ.

ಅಂಡಮಾನ್: ಬುಡಕಟ್ಟು ಸಮುದಾಯಕ್ಕೆ ಮೊದಲ ಬಾರಿಗೆ ಮತದಾರರ ಗುರುತಿನ ಪತ್ರ

ಜಾರವಾ: 19 ಮಂದಿಗೆ ಮತದಾನ ಹಕ್ಕು

ಪೋರ್ಟ್ ಬ್ಲೇರ್ (ಪಿಟಿಐ): ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ಆಡಳಿತವು ಜಾರವಾ ಸಮುದಾಯಕ್ಕೆ ಸೇರಿದ 19 ಮಂದಿಗೆ ಇದೇ ಮೊದಲ ಬಾರಿಗೆ ಮತದಾರರ ಗುರುತಿನ ಪತ್ರ ನೀಡಿದೆ.

ಈ ಐತಿಹಾಸಿಕ ನಡೆಯಿಂದಾಗಿ, ಹೊರಜಗತ್ತಿನಿಂದ ಪ್ರತ್ಯೇಕವಾಗಿಯೇ ಉಳಿದಿದ್ದ ಹಾಗೂ ಆಕ್ರಮಣಕಾರಿ ಪ್ರವೃತ್ತಿಯ ಈ ಬುಡಕಟ್ಟು ಜನರು ತಮ್ಮ ಹಕ್ಕು ಚಲಾಯಿಸುವ ಅವಕಾಶ ಪಡೆದಂತಾಗಿದೆ.

ದಕ್ಷಿಣ ಅಂಡಮಾನ್ ಜಿಲ್ಲೆಯ ಜಿರ್‌ಕಾಟಾಂಗ್ ವಸತಿ ಪ್ರದೇಶದಲ್ಲಿ ನಡೆದ ಕಾರ್ಯಕ್ರಮದಲ್ಲಿ, ಸರ್ಕಾರದ ಮುಖ್ಯ ಕಾರ್ಯದರ್ಶಿ ಚಂದ್ರಭೂಷಣ್ ಕುಮಾರ್ ಅವರು ಜಾರವಾ ಸಮುದಾಯದ ಜನರಿಗೆ ಮತದಾರರ ಗುರುತಿನ ಪತ್ರ ವಿತರಿಸಿದ್ದಾರೆ.

'ಜಾರವಾ ಸಮುದಾಯದ ವಿಶಿಷ್ಟ ಗುರುತು ಹಾಗೂ ಅವರ ಖಾಸಗಿತ-ನವನ್ನು ಸಂರಕ್ಷಿಸುವುದಕ್ಕಾಗಿ ನಾವು ಸಮಗ್ರ ಕ್ರಮಗಳನ್ನು ಕೈಗೊಂಡಿದ್ದೇವೆ' ಎಂದು ದಕ್ಷಿಣ ಅಂಡಮಾನ್ ಜಿಲ್ಲೆಯ ಚುನಾವಣಾ ಅಧಿಕಾರಿ ಅರ್ಜುನ್ ಶರ್ಮಾ ತಿಳಿಸಿದ್ದಾರೆ.

'ಈ ಸಮುದಾಯದವರ ನೋಂದಣಿ ಪ್ರಕ್ರಿಯೆ ವೇಳೆ, ಅವರ ದೈನಂದಿನ ಚಟು-ವಟಿಕೆಗಳಿಗೆ ಧಕ್ಕೆ ಆಗದಂತೆ ನೋಡಿಕೊಳ್ಳಲಾಗಿದೆ' ಎಂದು ತಿಳಿಸಿದ್ದಾರೆ.

ಈ ಕಾರ್ಯ ಸಾಧನೆಯಲ್ಲಿ, ಅಂಡಮಾನ್ ಆದಿಮ ಜನಜಾತಿ ವಿಕಾಸ ಸಮಿತಿ (ಎಎಜೆವಿಎಸ್) ಮಹತ್ವದ ಪಾತ್ರ ವಹಿಸಿದೆ.

ಇದು ದೇಶದ ಪ್ರಜಾತಾಂತ್ರಿಕ ವ್ಯವಸ್ಥೆಯ ಹೆಗ್ಗುರುತು. ಒಳಗೊಳ್ಳುವಿಕೆ ಹಾಗೂ ಸಮಾನತೆ ಕುರಿತು ದೇಶ ಹೊಂದಿರುವ ಬದ್ಧತೆಯನ್ನು ಈ ನಡೆ ತೋರಿಸುತ್ತದೆ

ಅರ್ಜುನ್ ಶರ್ಮಾ, ದಕ್ಷಿಣ ಅಂಡಮಾನ್ ಜಿಲ್ಲೆಯ ಚುನಾವಣಾ ಅಧಿಕಾರಿ

ಅರೆಅಲೆಮಾರಿಗಳು; ಮುಖ್ಯವಾಹಿನಿಯಿಂದಲೂ ದೂರ



ಅಂಡಮಾನಿನ ಮೂಲನಿವಾಸಿಗಳಾದ ಜಾರವಾ ಬುಡಕಟ್ಟು ಜನರು, ಅರೆ ಅಲೆಮಾರಿಗಳು. ನಿಸರ್ಗದೊಂದಿಗೆ ಆಳವಾದ ನಂಟು ಹೊಂದಿರುವ ಇವರು, ಹೊರ ಜಗತ್ತಿನ ಸಂಪರ್ಕದಿಂದ ದೂರವೇ ಉಳಿದವರು.

ಅವರ ಸಂಸ್ಕೃತಿ ಹಾಗೂ ಸಂಪ್ರದಾಯಗಳು ಕೂಡ ವಿಶಿಷ್ಟ. ದಕ್ಷಿಣ ಮತ್ತು ಮಧ್ಯ ಅಂಡಮಾನ್‌ನ ಪಶ್ಚಿಮ ಕರಾವಳಿಯಲ್ಲಿ ವಾಸಿಸುತ್ತಾರೆ.

1996ರ ಏಪ್ರಿಲ್‌ನಲ್ಲಿ ಹೊರಜಗತ್ತಿನೊಂದಿಗೆ ಜಾರವಾ ಜನರ ಮೊಟ್ಟ ಮೊದಲ ಸಂಪರ್ಕ ಸಾಧ್ಯವಾಯಿತು.

ಜಾರವಾ ಬುಡಕಟ್ಟು ವ್ಯಕ್ತಿ, 21 ವರ್ಷದ ಎನ್‌ಮೈ ಅವರ ಎಡ ಪಾದದ ಮೂಳೆ ಮುರಿದ ಸಂದರ್ಭದಲ್ಲಿ, ಜಿಲ್ಲಾಡಳಿತ ಅವರಿಗೆ ಚಿಕಿತ್ಸೆ ಒದಗಿಸಿತ್ತು.

'ಚಿಕಿತ್ಸೆ ನಂತರ ಎನ್‌ಮೈ ಅವರು ಸುರಕ್ಷಿತವಾಗಿ ತಮ್ಮ ವಾಸಸ್ಥಾನಕ್ಕೆ ಮರಳಿದ್ದರು. ಜಾರವ ಸಮುದಾಯ ಮತ್ತು ಜಿಲ್ಲಾಡಳಿತದ ಮಧ್ಯೆ ಪರಸ್ಪರ ನಂಬಿಕೆ ಮೂಡಿಸುವಲ್ಲಿ ಈ ಘಟನೆ ಮಹತ್ವದ ಪಾತ್ರವಹಿಸಿತ್ತು' ಎಂದು ದಕ್ಷಿಣ ಅಂಡಮಾನ್ ಜಿಲ್ಲೆಯ ಚುನಾವಣಾ ಅಧಿಕಾರಿ ಅರ್ಜುನ್ ಶರ್ಮಾ ಹೇಳುತ್ತಾರೆ.

ತಾಯಂದಿರ ಮರಣ ತಡೆಗೆ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಆಸ್ಪತ್ರೆಗಳಲ್ಲಿ ಸಂಭವಿಸುತ್ತಿರುವ ತಾಯಂದಿರ ಮರಣ ಪ್ರಮಾಣವನ್ನು ಶೂನ್ಯಕ್ಕೆ ಇಳಿಸಲು ವ್ಯಾಪಕ ಅಭಿಯಾನ ಆರಂಭಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಮುಖ ಕಾರ್ಯಕ್ರಮ-ಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ದೇಶಕ್ಕೆ ಹೋಲಿಸಿದರೆ ರಾಜ್ಯದಲ್ಲಿ ತಾಯಂದಿರ ಮರಣ ಅನುಪಾತ ಕಡಿಮೆ ಇದೆ. 2018-20ರ ಅವಧಿಯಲ್ಲಿ ಮರಣ ಪ್ರಮಾಣ ಲಕ್ಷಕ್ಕೆ 69 ಇತ್ತು. ಈಗಲೂ ದೇಶದ ಅನುಪಾತ 97 ಇದೆ. 2022-24ರ ಅವಧಿಯಲ್ಲಿ ರಾಜ್ಯದಲ್ಲಿ ಮರಣ ಪ್ರಮಾಣ 55ಕ್ಕೆ ಇಳಿದಿದೆ ಎಂದರು.

ಪ್ರಸಕ್ತ ಸಾಲಿನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ₹11,182 ಕೋಟಿ ಅನುದಾನ ಒದಗಿಸಲಾಗಿದೆ. ಇದುವರೆಗೆ ₹6,593 ಕೋಟಿ ವೆಚ್ಚ ಮಾಡಲಾಗಿದೆ. ಹೆರಿಗೆ ಪ್ರಮಾಣಕ್ಕೆ ಅನುಗುಣವಾಗಿ ಆಸ್ಪತ್ರೆಗಳಲ್ಲಿ ಪ್ರಸೂತಿ ಮತ್ತು ಅರಿವಳಿಕೆ ತಜ್ಞರನ್ನು ನೇಮಕ ಮಾಡಬೇಕು. ಹೆರಿಗೆ ಪ್ರಮಾಣ ಕಡಿಮೆ ಇರುವ ಆಸ್ಪತ್ರೆಗಳ ವೈದ್ಯರನ್ನು ಅಗತ್ಯ ಇರುವ ಕಡೆ ನಿಯೋಜಿಸಬೇಕು. ತಾಲ್ಲೂಕು ಆಸ್ಪತ್ರೆಗಳಲ್ಲಿ ತಜ್ಞ ವೈದ್ಯರ ಲಭ್ಯತೆ ಖಾತರಿ ಪಡಿಸಬೇಕು ಎಂದು ಸೂಚಿಸಿದರು.

ಔಷಧ ಖರೀದಿ ಪ್ರಕ್ರಿಯೆಯನ್ನು ಇನ್ನಷ್ಟು ಪಾರದರ್ಶಕಗೊಳಿಸಬೇಕು. ಹೆಣ್ಣು ಭ್ರೂಣ ಹತ್ಯೆ ತಡೆಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. 'ನಮ್ಮ ಕ್ಲಿನಿಕ್'ಗಳನ್ನು ಬಲಪಡಿಸಬೇಕು. ಸರ್ಕಾರಿ ಆಸ್ಪತ್ರೆಗಳಲ್ಲಿ ಉತ್ತಮ ಚಿಕಿತ್ಸೆ ದೊರೆತರೆ ಮಾತ್ರ ಖಾಸಗಿ ಆಸ್ಪತ್ರೆಗಳ ಮೇಲಿನ ಅವಲಂಬನೆ ಕಡಿಮೆ ಮಾಡಬಹುದು ಎಂದರು.

ಖಾಲಿ ಇರುವ 3,927 ಎಎನ್‌ಎಂ ಹುದ್ದೆಗಳಲ್ಲಿ 1,205 ಹಾಗೂ 2,990 ಎಚ್‌ಐಒ ಹುದ್ದೆಗಳಲ್ಲಿ 300 ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆ ಅನುಮೋದನೆ ನೀಡಿದೆ ಎಂದು ಮಾಹಿತಿ ನೀಡಿದರು.

ಟಿಬೆಟ್: ಭೂಕಂಪಕ್ಕೆ 126 ಬಲಿ

ಭೂಕಂಪದಿಂದ ಮನೆಗಳು ಹಾನಿಗೊಂಡಿವೆ — ಎಎಫ್‌ಪಿ ಚಿತ್ರ

ಒಂದನೇ ಪುಟದಿಂದ...

ಗಾಯಾಳುಗಳಿಗೆ ಚಿಕಿತ್ಸೆ ಒದಗಿಸಲು ಹಾಗೂ ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸಲು ಪರಿಣಾಮಕಾರಿಯಾಗಿ ಕೆಲಸ ಮಾಡುವಂತೆ ಷಿ ಜಿನ್‌ಪಿಂಗ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಅಗ್ನಿಶಾಮಕ ದಳದ ಸಿಬ್ಬಂದಿ ಒಳಗೊಂಡಂತೆ 1,500ಕ್ಕೂ ಅಧಿಕ ಮಂದಿ ರಕ್ಷಣಾ ಕಾರ್ಯದಲ್ಲಿ ತೊಡಗಿದ್ದಾರೆ. ನಿರ್ವಸಿತರಾದವರಿಗೆ ಟೆಂಟ್‌ಗಳು, ಮಂಚ ಮತ್ತು ಹಾಸಿಗೆ ಒಳಗೊಂಡಂತೆ ಅಗತ್ಯ ಸಾಮಗ್ರಿಗಳನ್ನು ಕಳುಹಿಸಲಾಗಿದೆ.

ತೀವ್ರ ಚಳಿಯಿಂದ ಪಾರಾಗಲು ಸಂತ್ರಸ್ತರಿಗೆ ಸ್ಥಳೀಯರು ದಪ್ಪನೆಯ ಹೊದಿಕೆಗಳನ್ನು ನೀಡಿದ್ದಾರೆ. ಇಲ್ಲಿ ಹಗಲಿನಲ್ಲಿ ಉಷ್ಣಾಂಶವು ಮೈನಸ್ 8 ಡಿಗ್ರಿ ಸೆಲ್ಸಿಯಸ್ ಇದ್ದು, ರಾತ್ರಿಯ ವೇಳೆ ಮೈನಸ್ 18 ಡಿಗ್ರಿ ಸೆಲ್ಸಿಯಸ್‌ಗೆ ಇಳಿಕೆಯಾಗಲಿದೆ ಎಂದು ಚೀನಾದ ಹವಾಮಾನ ಇಲಾಖೆ ತಿಳಿಸಿದೆ.

ಶಿಗಾಸ್ತೆ ಎಂಬ ಹೆಸರಿನಿಂದಲೂ ಕರೆಯುವ ಕ್ಸಿಗಾಸೆಯು ಭಾರತದ ಗಡಿಗೆ ಹತ್ತಿರದಲ್ಲಿದೆ. ಟಿಬೆಟ್‌ನ ಪವಿತ್ರ ಸ್ಥಳಗಳಲ್ಲಿ ಇದೂ ಒಂದಾಗಿದೆ. ಡಿಂಗ್ರಿ ಕೌಂಟಿಯ ತ್ಸೊಗೊ ಟೌನ್‌ಶಿಪ್ ಭೂಕಂಪದ ಕೇಂದ್ರ ಬಿಂದುವಾಗಿದ್ದು, ಈ ಪ್ರದೇಶದ 20 ಕಿ.ಮೀ. ವ್ಯಾಪ್ತಿಯಲ್ಲಿ ಸುಮಾರು 6,900 ಮಂದಿ ವಾಸಿಸುತ್ತಿದ್ದಾರೆ. 27 ಗ್ರಾಮಗಳು ಇಲ್ಲಿವೆ. ಡಿಂಗ್ರಿ ಕೌಂಟಿಯ ಒಟ್ಟು ಜನಸಂಖ್ಯೆ 61 ಸಾವಿರ ಎಂದು ಅಧಿಕೃತ ಅಂಕಿ–ಅಂಶ ತಿಳಿಸುತ್ತದೆ.

ಕಂಪನ ಕೇಂದ್ರವು 10 ಕಿ.ಮೀ ಆಳದಲ್ಲಿ ಇತ್ತು ಎಂದು ಚೀನಾದ ಭೂಕಂಪ ವಿಜ್ಞಾನ ಕೇಂದ್ರವು ತಿಳಿಸಿರುವುದಾಗಿ ಸರ್ಕಾರಿ ಸ್ವಾಮ್ಯದ ಕ್ಸಿನ್‌ಹುವಾ ಸುದ್ದಿ ಸಂಸ್ಥೆ ವರದಿ ಮಾಡಿದೆ.

ನೇಪಾಳದಲ್ಲೂ ಕಂಪನ: ನೆರೆಯ ನೇಪಾಳದಲ್ಲೂ ಭೂಮಿ ಕಂಪಿಸಿದ್ದು, ಜನರು ತಮ್ಮ ಮನೆಗಳಿಂದ ಹೊರಗೆ ಓಡಿದ್ದಾರೆ. ಕಾವ್ರೆಪಲಂಚೊಕ್, ಸಿಂಧು ಪಲಂಚೊಕ್ ಧಾಡಿಂಗ್ ಮತ್ತು ಸೋಲುಖುಂಬು ಜಿಲ್ಲೆಗಳಲ್ಲಿ ಕಂಪನದ ಅನುಭವ ಆಗಿದೆ.

ರಾಜಧಾನಿ ಕಠ್ಮಂಡುವಿನಲ್ಲಿ ಜನರು ಭಯಭೀತರಾಗಿ ಮನೆಗಳಿಂದ ಹೊರಬಂದರು. ನೇಪಾಳದಲ್ಲಿ ಯಾವುದೇ ಸಾವು–ನೋವು ವರದಿಯಾಗಿಲ್ಲ ಎಂದು ನೇಪಾಳ ಪೊಲೀಸ್ ವಕ್ತಾರರು ತಿಳಿಸಿದ್ದಾರೆ. ಎವರೆಸ್ಟ್ ಪರ್ವತಕ್ಕೆ ಸಮೀಪದಲ್ಲಿರುವ ಪರ್ವತ ಪ್ರದೇಶಗಳಲ್ಲೂ ಭೂಮಿ ಕಂಪಿಸಿದೆ.

ಚೀನಾದಲ್ಲಿ 2008ರ ಬಳಿಕ ನಡೆದ ಭೂಕಂಪಗಳು...

2008 ಮೇ: ಸಿಚುವಾನ್ ಪ್ರಾಂತ್ಯದಲ್ಲಿ ಸಂಭವಿಸಿದ 7.9 ತೀವ್ರತೆಯ ಭೂಕಂಪಕ್ಕೆ ಸುಮಾರು 90 ಸಾವಿರಕ್ಕೂ ಹೆಚ್ಚು ಬಲಿ

2010 ಏಪ್ರಿಲ್: ಕ್ವಿನ್‌ಗಾಯ್ ಪ್ರಾಂತ್ಯದಲ್ಲಿ 7.1 ತೀವ್ರತೆಯ ಭೂಕಂಪ; 2,698 ಸಾವು

2013 ಏಪ್ರಿಲ್: ಸಿಚುವಾನ್ ಪ್ರಾಂತ್ಯದಲ್ಲಿ 196 ಮಂದಿ ಬಲಿ; 7.0 ತೀವ್ರತೆ ದಾಖಲು

2013 ಜುಲೈ: ಗಾನ್ಸು ಪ್ರಾಂತ್ಯದಲ್ಲಿ 6.6 ತೀವ್ರತೆಯ ಭೂಕಂಪ; 95 ಸಾವು

2014 ಆಗಸ್ಟ್: ಯುನಾನ್ ಪ್ರಾಂತ್ಯದಲ್ಲಿ 617 ಮಂದಿ ಸಾವು; ತೀವ್ರತೆ 6.1 ದಾಖಲು

2022 ಸೆಪ್ಟೆಂಬರ್: ಸಿಚುವಾನ್‌ನಲ್ಲಿ 6.8 ತೀವ್ರತೆಯ ಭೂಕಂಪ; 93 ಬಲಿ

2023 ಡಿಸೆಂಬರ್: ಗಾನ್ಸು ಮತ್ತು ಕ್ವಿನ್‌ಗಾಯ್‌ನಲ್ಲಿ ಸಂಭವಿಸಿದ 6.2 ತೀವ್ರತೆಯ ಭೂಕಂಪಕ್ಕೆ 126 ಜನರ ಸಾವು

ಟಂಗ್‌ಸ್ಟನ್ ಗಣಿಗಾರಿಕೆ ಯೋಜನೆಯನ್ನು ರದ್ದು ಮಾಡಬೇಕೆಂದು ಆಗ್ರಹಿಸಿ ತಮಿಳುನಾಡಿನ ಮೇಲೂರು ತಾಲ್ಲೂಕಿನಲ್ಲಿ ಸಾವಿರಾರು ರೈತರು ಮಂಗಳವಾರ ಪ್ರತಿಭಟನಾ ಮೆರವಣಿಗೆ ನಡೆಸಿದರು —ಪಿಟಿಐ ಚಿತ್ರ

ಕುಲಪತಿ ಹುದ್ದೆಗೆ ನೇರ ನೇಮಕ

ಒಂದನೇ ಪುಟದಿಂದ...

ನೂತನ ಬೋಧನಾ ವಿಧಾನಗಳ ಶೋಧ, ಡಿಜಿಟಲ್ ಕಂಟೆಂಟ್ ಸೃಷ್ಟಿ, ಸಂಶೋಧನೆಗೆ ನಿಧಿ ಸಂಗ್ರಹಕ್ಕೆ ಕೊಡುಗೆಯಂತಹ ವೃತ್ತಿಪರ ಸಾಧನೆಯನ್ನು ಗುರುತಿಸುವುದಕ್ಕಾಗಿ ವಿದ್ಯಾರ್ಹತೆಯ ವ್ಯಾಪ್ತಿಯನ್ನು ವಿಸ್ತರಿಸ-ಲಾಗಿದೆ. ಬೋಧನಾ ಸಿಬ್ಬಂದಿಯ ಬಡ್ತಿಗೆ ಇದ್ದ ಶೈಕ್ಷಣಿಕ ಕ್ಷಮತೆ ಸೂಚ್ಯಂಕ (ಎಪಿಐ) ವ್ಯವಸ್ಥೆಯನ್ನು ರದ್ದುಪಡಿಸಲಾಗಿದೆ.

ಅಭ್ಯರ್ಥಿಗಳು ಶೈಕ್ಷಣಿಕವಾಗಿ ಉಂಟುಮಾಡಿರುವ ವಿಸ್ತೃತ ಪರಿಣಾಮವನ್ನು ಆಯ್ಕೆ ಸಮಿತಿಯು ಮೌಲ್ಯಮಾಪನ ಮಾಡಲಿದೆ. ಬೋಧನೆಯಲ್ಲಿ ನಾವೀನ್ಯ, ತಂತ್ರಜ್ಞಾನ ಅಭಿವೃದ್ಧಿ, ಉದ್ಯಮಶೀಲತೆ, ಪುಸ್ತಕ ರಚನೆ, ಡಿಜಿಟಲ್ ಕಲಿಕಾ ಸಂಪನ್ಮೂಲಗಳ ಸೃಷ್ಟಿ, ಸಮುದಾಯ ಮತ್ತು ಸಮಾಜಕ್ಕೆ ನೀಡಿದ ಕೊಡುಗೆಗಳು, ಭಾರತೀಯ ಭಾಷೆಗಳಿಗೆ ನೀಡಿದ ಉತ್ತೇಜನ, ಸುಸ್ಥಿರ ಪದ್ಧತಿಗಳು, ಇಂಟರ್ನ್‌ಶಿಪ್ ಮೇಲ್ವಿಚಾರಣೆ, ಪ್ರಾಜೆಕ್ಟ್‌ಗಳು ಅಥವಾ ಯಶಸ್ವೀ ನವೋದ್ಯಮಗಳಲ್ಲಿ ಮಾಡಿದ ಕೆಲಸಗಳನ್ನು ಗಣನೆಗೆ ತೆಗೆದುಕೊಳ್ಳಲಾ-ಗುವುದು ಎಂದು ಜಗದೀಶ್ ಕುಮಾರ್ ಹೇಳಿದ್ದಾರೆ.

ಆಯ್ಕೆ ಸಮಿತಿಯಲ್ಲಿ ಬದಲಾವಣೆ

ಕುಲಪತಿ ಆಯ್ಕೆ ಸಮಿತಿ ಹೇಗಿರಬೇಕು ಎಂಬುದನ್ನು ಕೂಡ ಬದಲಾಯಿಸಲು ಉದ್ದೇಶಿಸಲಾಗಿದೆ. ಆಯ್ಕೆ ಸಮಿತಿಯಲ್ಲಿ ಮೂವರು ಸದಸ್ಯರು ಮಾತ್ರ ಇರುತ್ತಾರೆ. ಕುಲಾಧಿಪತಿ, ಯುಜಿಸಿ ಮತ್ತು ವಿಶ್ವವಿದ್ಯಾಲಯದ ಸರ್ವೋಚ್ಚ ಸಮಿತಿಯು ತಲಾ ಒಬ್ಬೊಬ್ಬ ಸದಸ್ಯರನ್ನು ನೇಮಿಸಲಿದೆ. ಈಗ, ಐವರು ಸದಸ್ಯರ ಆಯ್ಕೆ ಸಮಿತಿಯ ವ್ಯವಸ್ಥೆ ಇದೆ.

ವಿಶ್ವವಿದ್ಯಾಲಯ ಅಥವಾ ಕಾಲೇಜುಗಳ ಬೋಧಕ ಹುದ್ದೆಗೆ ನೇಮಕ ಅಥವಾ ಬಡ್ತಿಯ ಮಾನದಂಡಗಳನ್ನೂ ಬದಲಾಯಿಸಲಾಗಿದೆ. ಸಂಶೋಧನೆ ಅಥವಾ ಬೋಧನಾ ಪ್ರಯೋಗಾಲಯ ಅಭಿವೃದ್ಧಿ, ಬೋಧನೆಗೆ ಕೊಡುಗೆಯಂತಹ ವಿವಿಧ ಸಾಧನೆಗಳನ್ನು ನೇಮಕ ಮತ್ತು ಬಡ್ತಿಗೆ ಪರಿಗಣಿಸಲಾಗುವುದು.

ರಾನಡೆ ಪ್ರಕರಣ

ಅರ್ಥಶಾಸ್ತ್ರಜ್ಞ ಅಜಿತ್ ರಾನಡೆ ಅವರನ್ನು ಪುಣೆಯ ಗೋಖಲೆ ಇನ್ಸ್‌ಟಿಟ್ಯೂಟ್ ಆಫ್ ಪಾಲಿಟಿಕ್ಸ್ ಆ್ಯಂಡ್ ಇಕನಾಮಿಕ್ಸ್‌ನ ಕುಲಪತಿ ಹುದ್ದೆಯಿಂದ ಕೆಲವು ತಿಂಗಳ ಹಿಂದೆ ವಜಾ ಮಾಡಲಾಗಿತ್ತು. 10 ವರ್ಷಗಳ ಬೋಧನಾ ಅನುಭವವನ್ನು ಅವರು ಹೊಂದಿಲ್ಲ ಎಂಬುದು ವಜಾ ಮಾಡಲು ಕಾರಣವಾಗಿತ್ತು. ಆದರೆ, ಅರ್ಥಶಾಸ್ತ್ರದಲ್ಲಿ ಅವರಿಗೆ ವ್ಯಾಪಕ ಅನುಭವ ಇತ್ತು. ಬಾಂಬೆ ಹೈಕೋರ್ಟ್ ಅವರಿಗೆ ಹುದ್ದೆಯನ್ನು ಮರಳಿ ನೀಡಲು ಆದೇಶಿಸಿತ್ತು. ಹಾಗಿದ್ದರೂ ಕಳೆದ ನವೆಂಬರ್‌ನಲ್ಲಿ ರಾನಡೆ ಕುಲಪತಿ ಹುದ್ದೆಗೆ ರಾಜೀನಾಮೆ ನೀಡಿದರು.

ಎಚ್‌ಎಂಪಿವಿ ಎರಡು ಶಂಕಿತ ಪ್ರಕರಣ

ನಾಗ್ಪುರ (ಪಿಟಿಐ): ಮಹಾರಾಷ್ಟ್ರದ ನಾಗ್ಪುರದಲ್ಲಿ ಶಂಕಿತ ಎಚ್‌ಎಂಪಿವಿ ಸೋಂಕಿನ ಎರಡು ಪ್ರಕರಣಗಳು ವರದಿಯಾಗಿವೆ.

'ಏಳು ಮತ್ತು 14 ವರ್ಷದ ಇಬ್ಬರು ಮಕ್ಕಳಲ್ಲಿ ಸೋಂಕಿನ ಲಕ್ಷಣಗಳು ಕಾಣಿಸಿಕೊಂಡಿವೆ. ಖಾಸಗಿ ಆಸ್ಪತ್ರೆಯಲ್ಲಿ ಹೊರ ರೋಗಿಗಳಾಗಿ ಚಿಕಿತ್ಸೆ ಪಡೆದಿರುವ ಇಬ್ಬರೂ ಈಗ ಆರೋಗ್ಯವಾಗಿದ್ದಾರೆ' ಎಂದು ಜಿಲ್ಲಾಧಿಕಾರಿ ವಿಪಿನ್ ಇಟನ್ಕರ್ ಮಂಗಳವಾರ ತಿಳಿಸಿದ್ದಾರೆ.

'ಶಂಕಿತ ಎಚ್‌ಎಂಪಿವಿ ಪ್ರಕರಣ ಇದಾಗಿರುವುದರಿಂದ ಇಬ್ಬರ ಮಾದರಿಗಳನ್ನು ಸಂಗ್ರಹಿಸಿ ಎಐಐಎಂಎಸ್ ಮತ್ತು ಪುಣೆಯ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿಗೆ ಕಳುಹಿಸಲಾಗಿದೆ' ಎಂದಿದ್ದಾರೆ.

ಕರ್ನಾಟಕ, ತಮಿಳುನಾಡು ಮತ್ತು ಗುಜರಾತ್‌ನಲ್ಲಿ ಐದು ಪ್ರಕರಣಗಳು ವರದಿಯಾಗಿವೆ.

ಸಚಿವ ಎಚ್‌ಡಿಕೆ ವಿರುದ್ಧದ ಸರ್ಕಾರಿ ಜಮೀನು ಒತ್ತುವರಿ ಆರೋಪ

ಪ್ರಧಾನ ಕಾರ್ಯದರ್ಶಿಗೆ ಬುಲಾವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹಾಗೂ ಅವರ ಸಂಬಂಧಿ ಮಾಜಿ ಶಾಸಕ ಡಿ.ಸಿ. ತಮ್ಮಣ್ಣ ಮತ್ತಿತರರು ರಾಮನಗರ ಜಿಲ್ಲೆ ಬಿಡದಿ ಹೋಬಳಿಯ ಕೇತಗಾನಹಳ್ಳಿ ವ್ಯಾಪ್ತಿಯಲ್ಲಿ 14 ಎಕರೆ ಸರ್ಕಾರಿ ಜಮೀನು ಒತ್ತುವರಿ ಮಾಡಿದ್ದಾರೆ ಎಂಬ ಆರೋಪಕ್ಕೆ ಸಂಬಂಧಿಸಿದ ಸಿವಿಲ್ ನ್ಯಾಯಾಂಗ ನಿಂದನೆ ವಿಚಾರಣೆಯನ್ನು ಕೈಬಿಡಬೇಕು' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಮನವಿ ಮಾಡಿದೆ.

'ಭೂ ಕಬಳಿಕೆ ಆರೋಪಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ನೀಡಿರುವ ಆದೇಶ ಜಾರಿಗೊಳಿಸುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ' ಎಂದು ಆಕ್ಷೇಪಿಸಿ ಎಸ್.ಆರ್.ಹಿರೇಮಠ ನೇತೃತ್ವದ 'ಸಮಾಜ ಪರಿವರ್ತನಾ ಸಮುದಾಯ' ಸಲ್ಲಿಸಿರುವ ಸಿವಿಲ್ ನ್ಯಾಯಾಂಗ ನಿಂದನೆ ಅರ್ಜಿಯನ್ನು ನ್ಯಾಯಮೂರ್ತಿ ಕೆ.ಸೋಮಶೇಖರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್ ಕಿರಣ್ ವಿ.ರೋಣ ವಾದ ಮಂಡಿಸಿ, 'ದೂರಿಗೆ ಸಂಬಂಧಿಸಿದಂತೆ ಲೋಕಾಯುಕ್ತರು ನೀಡಿದ್ದ ಆದೇಶದ ಅನುಸಾರ ಸರ್ಕಾರ ಈಗಾಗಲೇ ಕ್ರಮ ಕೈಗೊಂಡಿದೆ. ಲೋಕಾಯುಕ್ತದಲ್ಲಿದ್ದ ದೂರು ಮುಕ್ತಾಯಗೊಂಡಿದೆ. ಹಾಗಾಗಿ, ಈ ನ್ಯಾಯಾಂಗ ನಿಂದನೆ ಅರ್ಜಿ ವಿಚಾರಣೆಯನ್ನು ಕೈಬಿಡಬೇಕು' ಎಂದು ಕೋರಿದರು.

ಇದಕ್ಕೆ ಪ್ರತಿಯಾಗಿ ಅರ್ಜಿದಾರ ಎಸ್.ಆರ್.ಹಿರೇಮಠ ಪರ ಹಾಜರಿದ್ದ ಪದಾಂಕಿತ ಹಿರಿಯ ವಕೀಲ ಎಸ್. ಬಸವರಾಜ್, 'ಕೇತಗಾನಹಳ್ಳಿ ವ್ಯಾಪ್ತಿಯ 14 ಎಕರೆ ಸರ್ಕಾರಿ ಜಮೀನನ್ನು ಎಚ್.ಡಿ. ಕುಮಾರಸ್ವಾಮಿ ಮತ್ತಿತರರು ಒತ್ತುವರಿ ಮಾಡಿರುವುದನ್ನು ತಹಶೀಲ್ದಾರ್ ಮತ್ತು ಸಂಬಂಧಿಸಿದ ಕಂದಾಯ ಅಧಿಕಾರಿಗಳು ಗುರುತಿಸಿದ್ದಾರೆ. ಅಂತೆಯೇ, ಲೋಕಾಯುಕ್ತ ನೀಡಿರುವ ಆದೇಶವನ್ನು ಅನುಷ್ಠಾನಗೊಳಿಸಲು ಸರ್ಕಾರ ಮುಂದಾಗಿಲ್ಲ. ಬೇಕಿದ್ದರೆ ತಹಶೀಲ್ದಾರ್ ಮತ್ತು ಸಂಬಂಧಿಸಿದ ಕಂದಾಯ ಅಧಿಕಾರಿಗಳನ್ನು ಕೋರ್ಟ್‌ಗೆ ಕರೆಯಿಸಿ ವಿವರಣೆ ಪಡೆಯಬಹುದು' ಎಂದರು.

ಈ ಮಾತಿಗೆ ತೀವ್ರ ಆಕ್ಷೇಪ ವ್ಯಕ್ತಪಡಿ-ಸಿದ ಕಿರಣ್ ರೋಣ ಅವರು, 'ಯಾರನ್ನು ಕರೆಯಿಸಿಬೇಕು ಎಂದು ಈ ರೀತಿ ಕೋರ್ಟ್‌ಗೆ ಸೂಚಿಸುವುದು ಸೂಕ್ತವಲ್ಲ. ಸರ್ಕಾರ ಕೋರ್ಟ್ ಮೇಲೆ ಅಖಂಡ ಭರವಸೆ ಹೊಂದಿದೆ. ಅಂತೆಯೇ, ಈಗಾಗಲೇ 2024ರ ನವೆಂಬರ್‌ನಲ್ಲಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕೈಗೊಳ್ಳಲಾಗಿರುವ ವಿಸ್ತೃತ ಕ್ರಮಗಳನ್ನು ಪ್ರಮಾಣಪತ್ರದ ಮೂಲಕ ವಿವರಿಸಲಾಗಿದೆ. ಅದನ್ನು ನ್ಯಾಯಪೀಠ ಮಾನ್ಯ ಮಾಡಬೇಕು' ಎಂದು ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯೇ ಈ ಕುರಿತು ಕೋರ್ಟ್‌ಗೆ ಖುದ್ದು ಹಾಜರಾಗಿ ವಿವರಣೆ ನೀಡಲಿ' ಎಂದು ವಿಚಾರಣೆಯನ್ನು ಇದೇ 29ಕ್ಕೆ ಮುಂದೂಡಿತು.

ಏನಿದು ಅರ್ಜಿ?

ಭೂಕಬಳಿಕೆ ಆರೋಪದ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಸ್ತೃತ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಲೋಕಾಯುಕ್ತರು ಹೊರಡಿಸಿರುವ ಆದೇಶ ಜಾರಿಗೊಳಿಸುವಂತೆ ಹೈಕೋರ್ಟ್ ಈ ಹಿಂದೆ ಆದೇಶಿಸಿತ್ತು. 'ಈ ಆದೇಶ ಜಾರಿಗೊಳಿಸುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ' ಎಂದು ಆಕ್ಷೇಪಿಸಿ ಎಸ್.ಆರ್.ಹಿರೇಮಠ ನೇತೃತ್ವದ 'ಸಮಾಜ ಪರಿವರ್ತನಾ ಸಮುದಾಯ' ಈ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿದೆ.

'ರಾಷ್ಟ್ರೀಯ ಸ್ಮೃತಿ'ಯಲ್ಲಿ ಪ್ರಣವ್‌ಗೆ ಸ್ಮಾರಕ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಾಜಿ ರಾಷ್ಟ್ರಪತಿ ಪ್ರಣವ್ ಮುಖರ್ಜಿ ಅವರಿಗೆ ರಾಜ್‌ಘಾಟ್ ಆವರಣದ 'ರಾಷ್ಟ್ರೀಯ ಸ್ಮೃತಿ'ಯಲ್ಲಿ ಸ್ಮಾರಕ ನಿರ್ಮಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ಈಚೆಗೆ ನಿಧನರಾದ ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರ ಸ್ಮಾರಕ ನಿರ್ಮಾಣದ ವಿಷಯದಲ್ಲಿ ಗೊಂದಲದ ಮಧ್ಯೆಯೇ ಈ ಬೆಳವಣಿಗೆ ನಡೆದಿದೆ.

ಪ್ರಣವ್‌ಗೆ ಸ್ಮಾರಕ ನಿರ್ಮಿಸುವ ತನ್ನ ನಿರ್ಧಾರವನ್ನು ಸರ್ಕಾರವು ಅವರ ಕುಟುಂಬಕ್ಕೆ ತಿಳಿಸಿದೆ. ಪ್ರಣವ್ ಪುತ್ರಿ ಶರ್ಮಿಷ್ಠಾ ಮುಖರ್ಜಿ, ಪ್ರಧಾನಿ ಮೋದಿ ಅವರಿಗೆ ಧನ್ಯವಾದ ಸಲ್ಲಿಸಿದ್ದಾರೆ.

'ಮಾಜಿ ರಾಷ್ಟ್ರಪತಿ ದಿವಂಗತ ಪ್ರಣವ್ ಮುಖರ್ಜಿ ಅವರ ಸ್ಮಾರಕ ನಿರ್ಮಿಸಲು 'ರಾಷ್ಟ್ರೀಯ ಸ್ಮೃತಿ' ಸಂಕೀರ್ಣದೊಳಗೆ (ರಾಜ್‌ಘಾಟ್ ಆವರಣದ ಒಂದು ಭಾಗ) ಗೊತ್ತುಪಡಿಸಿದ ಜಾಗಕ್ಕೆ ಸಂಬಂಧಪಟ್ಟ ಪ್ರಾಧಿಕಾರವು ಅನುಮೋದನೆ ನೀಡಿದೆ' ಎಂದು ಶರ್ಮಿಷ್ಠಾ ಅವರಿಗೆ ಬರೆದ ಪತ್ರದಲ್ಲಿ ಸರ್ಕಾರ ತಿಳಿಸಿದೆ.

ಸ್ಪರ್ಧಾವಾಣಿ ಮಾಸಪತ್ರಿಕೆಯ ಹಿಂದಿನ ಸಂಚಿಕೆಗಳನ್ನು ಖರೀದಿಸುವ ಅವಕಾಶ ತಪ್ಪಿ ಹೋಯಿತೇ?

ಪ್ರಜಾವಾಣಿ ಸ್ಪರ್ಧಾವಾಣಿ MASTERMIND
ಆರ್ಡರ್ ಮಾಡಲು QR ಸ್ಕ್ಯಾನ್ ಮಾಡಿ, ನಿಮ್ಮ ವಿವರಗಳನ್ನು ಭರ್ತಿ ಮಾಡಿ.
ಕೇವಲ ₹220 ರಿಂದ ಪ್ರಾರಂಭ

ಮಲೇಷ್ಯಾ ಓಪನ್ ಬ್ಯಾಡ್ಮಿಂಟನ್: ಚಾವಣಿ ಸೋರಿಕೆಯಿಂದಾಗಿ ಪ್ರಣಯ್ ಪಂದ್ಯ ಸ್ಥಗಿತ

ಟ್ರೀಸಾ–ಗಾಯತ್ರಿ ಶುಭಾರಂಭ

ಕೌಲಾಲಂಪುರ (ಪಿಟಿಐ): ಭಾರತದ ಟ್ರೀಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಅವರು ಇಲ್ಲಿ ಮಂಗಳವಾರ ಆರಂಭವಾದ ಮಲೇಷ್ಯಾ ಓಪನ್ ಸೂಪರ್ 1000 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು.

ಮಹಿಳೆಯರ ಡಬಲ್ಸ್‌ನ ಮೊದಲ ಸುತ್ತಿನಲ್ಲಿ ಆರನೇ ಶ್ರೇಯಾಂಕದ ಭಾರತದ ಆಟಗಾರ್ತಿಯರು 21-10, 21-10ರಿಂದ ಥಾಯ್ಲೆಂಡ್‌ನ ಓರ್ನಿಚಾ ಜೋಂಗ್ಸಾತಪೋರ್ನ್‌ಪರ್ನ್ ಮತ್ತು ಸುಕಿರ್ತ ಸುವಾಚೈ ಅವರನ್ನು ಸುಲಭವಾಗಿ ಮಣಿಸಿ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಲಖನೌನಲ್ಲಿ ತಿಂಗಳ ಹಿಂದೆ ನಡೆದ ಸೈಯದ್ ಮೋದಿ ಇಂಟರ್ ನ್ಯಾಷನಲ್ ಸೂಪರ್ 300 ಟೂರ್ನಿಯಲ್ಲಿ ಚಾಂಪಿಯನ್ ಆಗಿರುವ ಟ್ರೀಸಾ ಮತ್ತು ಗಾಯತ್ರಿ ಜೋಡಿಗೆ ಶ್ರೇಯಾಂಕರಹಿತ ಥಾಯ್ಲೆಂಡ್ ಆಟಗಾರ್ತಿಯರು ಯಾವುದೇ ಹಂತದಲ್ಲಿ ಸರಿಸಾಟಿಯಾಗಲಿಲ್ಲ. ಕೇವಲ 30 ನಿಮಿಷಗಳಲ್ಲಿ ಪಂದ್ಯ ಗೆದ್ದರು.

ಭಾರತದ ಗಾಯತ್ರಿ ಗೋಪಿಚಂದ್– ಟ್ರೀಸಾ ಜೋಳಿ

ಪ್ರಣಯ್ ಪಂದ್ಯ ಸ್ಥಗಿತ: ಭಾರತದ ತಾರೆ ಎಚ್.ಎಸ್. ಪ್ರಣಯ್ ಅವರ ಪಂದ್ಯ ನಡೆಯುತ್ತಿದ್ದ ಕೋರ್ಟ್‌ನ ಒಳಾಂಗಣದ ಚಾವಣಿಯಲ್ಲಿ ಮಳೆನೀರು ಸೋರಿಕೆಯಾದ ಕಾರಣ ಸ್ಪರ್ಧೆಯನ್ನು ಅರ್ಧಕ್ಕೆ ಸ್ಥಗಿತಗೊಳಿಸಿ, ಬುಧವಾರಕ್ಕೆ ಮುಂದೂಡಲಾಗಿದೆ. ಪ್ಯಾರಿಸ್ ಒಲಿಂಪಿಕ್ಸ್ ಬಳಿಕ ಕಣಕ್ಕೆ ಇಳಿದಿರುವ ಪ್ರಣಯ್ ಅವರಿಗೆ ಆರಂಭಿಕ ಸುತ್ತಿನಲ್ಲಿ ಕೆನಡಾದ ಬ್ರೈನ್ ಯಂಗ್ ಎದುರಾಳಿಯಾಗಿದ್ದರು. ಮೊದಲ ಗೇಮ್‌ನಲ್ಲಿ 21–12ರಿಂದ ಮೇಲುಗೈ ಸಾಧಿಸಿದ್ದ ಭಾರತದ ಆಟಗಾರ, ಎರಡನೇ ಗೇಮ್‌ನಲ್ಲಿ 3–6 ಸ್ಕೋರ್ ಆಗಿದ್ದಾಗ ಚಾವಣಿಯಲ್ಲಿ ನೀರು ಸೋರಿಕೆ ಆರಂಭವಾಗಿದೆ.

ಮೂರನೇ ಕೋರ್ಟ್‌ನಲ್ಲಿ ನಡೆಯುತ್ತಿದ್ದ ಪಂದ್ಯವನ್ನು ಸುಮಾರು ಒಂದು ಗಂಟೆ ಸ್ಥಗಿತಗೊಳಿಸಿ, ಮತ್ತೆ ಆರಂಭಿಸಲಾಯಿತು. ಎರಡನೇ ಗೇಮ್‌ನ ಸ್ಕೋರ್ 9–11 ಆದಾಗ ಪುನಃ ನೀರು ಸೋರಿಕೆಯಾಗಿ ಅಡಚಣೆಯಾಯಿತು. ಹೀಗಾಗಿ, ಪಂದ್ಯವನ್ನು ಮುಂದೂಡಲು ಅಧಿಕಾರಿಗಳು ನಿರ್ಧರಿಸಿದರು.

‘ಪ್ರಣಯ್ ಅವರ ಪಂದ್ಯವನ್ನು ಸ್ಥಗಿತ ಮಾಡಲಾಗಿದೆ. ಅವರು ನಾಳೆ ಅದೇ ಸ್ಕೋರ್‌ನೊಂದಿಗೆ ಸ್ಪರ್ಧೆಗೆ ಇಳಿಯುವರು’ ಎಂದು ಭಾರತ ತಂಡದ ಕೋಚ್ ಆರ್.ಎಂ.ವಿ. ಗುರುಸಾಯಿದತ್ ಪಿಟಿಐಗೆ ತಿಳಿಸಿದ್ದಾರೆ.

ಇದೇ ಕಾರಣಕ್ಕೆ ಎರಡನೇ ಕೋರ್ಟ್‌ನಲ್ಲೂ ಪಂದ್ಯಗಳನ್ನು ಸ್ಥಗಿತಗೊಳಿಸಲಾಯಿತು. ಆದರೆ, ಒಂದನೇ ಕೋರ್ಟ್‌ನಲ್ಲಿ ಸ್ಪರ್ಧೆಗಳು ನಿಗದಿಯಂತೆ ಮುಂದುವರಿದವು. ಕೋರ್ಟ್‌ಗಳನ್ನು ಒಣಗಿಸಲು ಸಂಘಟಕರು ಬಿಳಿ ಟವೆಲ್‌ಗಳನ್ನು ಬಳಸುತ್ತಿದ್ದುದು ಕಂಡುಬಂತು.

ಸೇನ್‌ಗೆ ಆಘಾತ: ಭರವಸೆ ಮೂಡಿಸಿದ್ದ ಭಾರತದ ಅಗ್ರಮಾನ್ಯ ಆಟಗಾರ ಲಕ್ಷ್ಯ ಸೇನ್ ಅವರು ಪುರುಷರ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲೇ ಹೊರಬಿದ್ದರು.

ವಿಶ್ವ ರ‍್ಯಾಂಕಿಂಗ್‌ನಲ್ಲಿ 12ನೇ ಸ್ಥಾನದಲ್ಲಿರುವ 23 ವರ್ಷ ವಯಸ್ಸಿನ ಸೇನ್ ಅವರಿಗೆ 14–21, 7–21ರಿಂದ ತೈವಾನ್ ಚಿ ಯು-ಜೆನ್ ಆಘಾತ ನೀಡಿದರು.

ಭಾರತದ ಮತ್ತೊಬ್ಬ ಸಿಂಗಲ್ಸ್ ಆಟಗಾರ ಪ್ರಿಯಾಂಶು ರಾಜಾವತ್ ಅವರ ಪಂದ್ಯವನ್ನು ಬುಧವಾರಕ್ಕೆ ಮುಂದೂಡಲಾಗಿದೆ. ಅವರು ಮೊದಲ ಸುತ್ತಿನಲ್ಲಿ ಚೀನಾದ ಲಿ ಶಿಫೆಂಗ್ ಅವರ ಸವಾಲನ್ನು ಎದುರಿಸುವರು.

ಪುರುಷರ ಡಬಲ್ಸ್‌ನಲ್ಲಿ ಕಳೆದ ಬಾರಿಯ ರನ್ನರ್ಸ್ ಅಪ್ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಆತಿಥೇಯ ಮಲೇಷ್ಯಾದ ಟ್ಯಾಂಗ್ ಕೈ ವಿ ಮತ್ತು ಲು ಮಿಂಗ್ ಚೆ ವಿರುದ್ಧ ಅಭಿಯಾನ ಆರಂಭಿಸುವರು.

ಮಹಿಳೆಯರ ಡಬಲ್ಸ್‌ನಲ್ಲಿ ತನಿಶಾ ಕ್ರಾಸ್ಟೊ– ಅಶ್ವಿನಿ ಪೊನ್ನಪ್ಪ ಮತ್ತು ಪಾಂಡಾ ಸಹೋದರಿಯಾದ ಋತುಪರ್ಣ– ಶ್ವೇತಪರ್ಣ ಅವರು ಎರಡನೇ ದಿನ ಕಣಕ್ಕೆ ಇಳಿಯುವರು. ಒಟ್ಟು ₹12.46 ಕೋಟಿ ಬಹುಮಾನ ಮೊತ್ತವನ್ನು ಹೊಂದಿರುವ ಟೂರ್ನಿ ಇದಾಗಿದೆ.

ಅಥ್ಲೆಟಿಕ್ ಫೆಡರೇಷನ್‌ಗೆ ಹೊಸ ಸಾರಥಿ

ಬಹಾದೂರ್ ಸಿಂಗ್ ಸಾಗೂ ಅಧಿಕಾರ ಸ್ವೀಕಾರ: ಸುಮರಿವಾಲಾ ಆಡಳಿತ ಅಂತ್ಯ

ಚಂಡೀಗಢ (ಪಿಟಿಐ): ಏಷ್ಯನ್ ಗೇಮ್ಸ್ ಚಿನ್ನ ವಿಜೇತ ಶಾಟ್‌ಪಟ್ ಥ್ರೋ ಪಟು ಬಹಾದೂರ್ ಸಿಂಗ್ ಸಾಗೂ ಅವರು ಮಂಗಳವಾರ ಭಾರತ ಅಥ್ಲೆಟಿಕ್ ಫೆಡರೇಷನ್‌ನ (ಎಎಫ್‌ಐ) ನೂತನ ಸಾರಥಿಯಾಗಿ ಅಧಿಕಾರ ಸ್ವೀಕರಿಸಿದರು.

ಇಲ್ಲಿ ನಡೆದ ಫೆಡರೇಷನ್‌ನ ವಾರ್ಷಿಕ ಸಭೆಯಲ್ಲಿ ನಿರೀಕ್ಷೆಯಂತೆ 51 ವರ್ಷ ವಯಸ್ಸಿನ ಸಾಗೂ ಅವಿ ರೋಧವಾಗಿ ಆಯ್ಕೆಯಾದರು. ದೀರ್ಘಾವಧಿಗೆ ಅಧ್ಯಕ್ಷರಾಗಿದ್ದ ಅದಿಲ್ ಸುಮರಿವಾಲಾ ಅವರ ಕಾರ್ಯಾವಧಿ ಮುಗಿದ ಮೇಲೆ ತೆರವಾದ ಸ್ಥಾನದಲ್ಲಿ 2029ರವರೆಗೆ ಕಾರ್ಯಭಾರ ನಿರ್ವಹಿಸಲಿದ್ದಾರೆ.

2012ರಿಂದ ಮೂರು ಅವಧಿಗೆ ಅಧ್ಯಕ್ಷರಾಗಿದ್ದ ಸುಮರಿವಾಲಾ ಅವರು ರಾಷ್ಟ್ರೀಯ ಕ್ರೀಡಾ ಸಂಹಿತೆಯ ಅಡಿ ಯಲ್ಲಿ ಈ ಬಾರಿ ಚುನಾವಣೆಯಲ್ಲಿ ಸ್ಪರ್ಧಿಸಲು ಅರ್ಹರಾಗಿರಲಿಲ್ಲ. ಅವರು ಪ್ರಸ್ತುತ ವಿಶ್ವ ಅಥ್ಲೆಟಿಕ್ಸ್ ಕಾರ್ಯಕಾರಿ ಮಂಡಳಿಯ ಸದಸ್ಯರಾಗಿದ್ದಾರೆ.

ಜಲಂಧರ್ ಮೂಲದ ಸಾಗೂ ಅವರು ಪ್ರಸ್ತುತ ಪಂಜಾಬ್ ಪೊಲೀಸ್‌ನಲ್ಲಿ ಕಮಾಂಡೆಂಟ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. 2002ರ ಬೂಸಾನ್ ಏಷ್ಯನ್ ಗೇಮ್ಸ್‌ನಲ್ಲಿ 19.03 ಮೀಟರ್ ಶಾಟ್‌ಪಟ್ ಎಸೆದು ಚಾಂಪಿ ಯನ್ ಆಗಿದ್ದ ಅವರು, 20.40 ಮೀ. ವೈಯಕ್ತಿಕ ಶ್ರೇಷ್ಠ ಸಾಧನೆ ಮಾಡಿದ್ದಾರೆ. ಸಿಡ್ನಿ (2000) ಮತ್ತು ಅಥೆನ್ಸ್ (2004) ಒಲಿಂಪಿಕ್ಸ್‌ನಲ್ಲೂ ಪಾಲ್ಗೊಂಡಿದ್ದರು. ಪದ್ಮಶ್ರೀ ಪುರಸ್ಕೃತರಾಗಿರುವ ಅವರು, ಎಎಫ್‌ಐ ಅಥ್ಲೆಟಿಕ್ಸ್ ಕಮಿಷನ್‌ನ ಸದಸ್ಯರೂ ಆಗಿದ್ದರು.

ಫೆಡರೇಷನ್‌ನಲ್ಲಿ ಹಿರಿಯ ಉಪಾಧ್ಯಕ್ಷರಾಗಿದ್ದ ಅಂಜು ಬಾಬಿ ಜಾರ್ಜ್ ಅವರು ವೈಯಕ್ತಿಕ ಕಾರಣ ಗಳಿಂದ ಅಧ್ಯಕ್ಷೆ ರೇಸ್‌ನಿಂದ ಹಿಂದೆ ಸರಿದ ನಂತರ ಸಾಗೂ ಏಕೈಕ ಅಭ್ಯರ್ಥಿಯಾಗಿದ್ದರು. ಅಂಜು ಅವರು ಎರಡನೇ ಅವಧಿಗೆ ಹಿರಿಯ ಉಪಾಧ್ಯಕ್ಷೆಯಾಗಿ ಪುನರಾಯ್ಕೆಯಾದರು.

2020ರಂತೆ ಈ ಬಾರಿಯೂ ಯಾವುದೇ ಹುದ್ದೆಗಳಿಗೆ ಚುನಾವಣೆ ನಡೆಯದೆ ಅವಿರೋಧ ಆಯ್ಕೆ ನಡೆಯಿತು. ದೆಹಲಿ ಘಟಕದ ಉನ್ನತ ಅಧಿಕಾರಿ ಸಂದೀಪ್ ಮೆಹ್ತಾ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಅವರು ನಿರ್ಗಮಿತಕಾರ್ಯಕಾರಿ ಮಂಡಳಿಯಲ್ಲಿ ಹಿರಿಯ ಜಂಟಿ ಕಾರ್ಯದರ್ಶಿಯಾಗಿದ್ದರು. 1998ರ ಏಷ್ಯನ್ ಗೇಮ್ಸ್‌ನಲ್ಲಿ 800 ಮೀ ಮತ್ತು 1500 ಮೀ ಚಿನ್ನ ಗೆದ್ದಿದ್ದ ಜ್ಯೋತಿರ್ಮಯಿ ಸಿಕ್ದರ್ ಅವರು ಜಂಟಿ ಕಾರ್ಯದರ್ಶಿಯಾಗಿ ಆಯ್ಕೆಯಾದರು.

ಕಾರ್ಯಕಾರಿ ಮಂಡಳಿ ಸದಸ್ಯರಾಗಿ ಕರ್ನಾಟಕ ಅಥ್ಲೆಟಿಕ್ ಸಂಸ್ಥೆಯ ಕಾರ್ಯದರ್ಶಿ ರಾಜವೇಲು ಆಯ್ಕೆಯಾಗಿದ್ದಾರೆ. ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ರಾಜ್‌ಶೇಖರ್ ಅತ್ರಿ ಚುನಾವಣಾ ಪ್ರಕ್ರಿಯೆ ನಡೆಸಿದರು. ಚುನಾವಣಾ ವೀಕ್ಷಕರಾಗಿ ಕ್ರೀಡಾ ಸಚಿವಾಲಯದ ಅಧಿಕಾರಿ ಎಸ್.ಪಿ.ಎಸ್. ತೋಮರ್ ಉಪಸ್ಥಿತರಿದ್ದರು. ವಿಶ್ವ ಅಥ್ಲೆಟಿಕ್ಸ್‌ನ ಪ್ರತಿನಿಧಿಯಾಗಿ ನೀಲ್ಸ್ ಲಿಂಡ್‌ಹೋಮ್ ವರ್ಚುವಲ್ ಮೂಲಕ ಭಾಗವಹಿಸಿದ್ದರು.

‘ನನ್ನನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿರುವುದಕ್ಕೆ ಎಲ್ಲ ಸದಸ್ಯರಿಗೆ ಕೃತಜ್ಞನಾಗಿದ್ದೇನೆ. ಎಎಫ್‌ಐನಲ್ಲಿ ಅಸ್ತಿತ್ವ ದಲ್ಲಿರುವ ಕಾರ್ಯಕ್ರಮಗಳನ್ನು ಮುಂದಕ್ಕೆ ಕೊಂಡೊಯ್ಯಲು ಪ್ರಯತ್ನಿಸುತ್ತೇನೆ ಎಲ್ಲರ ಸಹಕಾರದೊಂದಿಗೆ ಭಾರತೀಯ ಅಥ್ಲೆಟಿಕ್ಸ್ ಕ್ಷೇತ್ರವನ್ನು ಇನ್ನಷ್ಟು ಎತ್ತರಕ್ಕೆ ಏರಿಸಲು ಶ್ರಮಿಸುತ್ತೇನೆ’ ಎಂದು ಸಾಗೂ ಹೇಳಿದರು.

ಎಎಫ್‌ಐ ಪದಾಧಿಕಾರಿಗಳು: ಬಹಾ ದೂರ್ ಸಿಂಗ್ ಸಾಗೂ (ಅಧ್ಯಕ್ಷ), ಅಂಜು ಬಾಬಿಜಾರ್ಜ್ (ಹಿರಿಯ ಉಪಾಧ್ಯಕ್ಷೆ), ಅಬುಮೇಥಾ, ಜಯಂತ ಮಲ್ಲ ಬರುವಾ, ಎ.ಕೆ. ಶರ್ಮಾ (ಉಪಾಧ್ಯಕ್ಷರು), ಸಂದೀಪ್ ಮೆಹ್ತಾ (ಕಾರ್ಯದರ್ಶಿ), ಸ್ಟಾನ್ಲಿಜೋನ್ಸ್ (ಖಜಾಂಚಿ), ಎಸ್. ಶ್ರೀನಿವಾಸ್ ಪಟ್ನಾಯಕ್ (ಹಿರಿಯ ಜಂಟಿ ಕಾರ್ಯದರ್ಶಿ), ಶರತ್ ಚಂದ್ರ ಸಿಂಗ್, ಜ್ಯೋತಿರ್ಮಯಿ ಸಿಕ್ದರ್, ಫಿನ್ಲೆ ಎಲ್ ಪ್ಯಾರಿಯಾಟ್ (ಜಂಟಿ ಕಾರ್ಯದರ್ಶಿಗಳು). ಸುಧಾ ಸಿಂಗ್, ಹರ್ಜಿಂದರ್ ಸಿಂಗ್ ಗಿಲ್, ಶಾರದಾದೇವಿ ಜಡಮ್, ಪ್ರಿಯಾಂಕಾ ಭಾನೋಟ್, ರಚಿತಾ ಮಿಸ್ತ್ರಿ, ಎ. ರಾಜವೇಲು, ಕೆ. ಸಾರಂಗಪಾಣಿ (ಕಾರ್ಯಕಾರಿ ಮಂಡಳಿ ಸದಸ್ಯರು).

ಭಾರತ ಅಥ್ಲೆಟಿಕ್ ಫೆಡರೇಷನ್ ಅಧ್ಯಕ್ಷರಾಗಿ ಆಯ್ಕೆಯಾದ ಬಹಾದೂರ್ ಸಿಂಗ್ ಸಾಗೂ (ಬಲದಿಂದ ಎರಡನೇಯವರು) ಅವರನ್ನು ನಿಕಟಪೂರ್ವ ಅಧ್ಯಕ್ಷ ಆದಿಲ್ ಸುಮರಿವಾಲಾ (ಮಧ್ಯ) ಅಭಿನಂದಿಸಿದರು. ಹಿರಿಯ ಉಪಾಧ್ಯಕ್ಷೆ ಅಂಜು ಬಾಬಿ ಜಾರ್ಜ್, ನಿಕಟಪೂರ್ವ ಕಾರ್ಯದರ್ಶಿ ರವೀಂದರ್ ಚೌಧರಿ, ನೂತನ ಕಾರ್ಯದರ್ಶಿ ಸಂದೀಪ್ ಮೆಹ್ತಾ ಚಿತ್ರದಲ್ಲಿದ್ದಾರೆ –ಎಕ್ಸ್ ಚಿತ್ರ

ಜಾವೆಲಿನ್: ನೀರಜ್ ಪ್ರಮುಖ ಆಕರ್ಷಣೆ

ಚಂಡೀಗಢ (ಪಿಟಿಐ): ಭಾರತ ಅಥ್ಲೆಟಿಕ್ ಫೆಡರೇಷನ್ ಆಶ್ರಯದಲ್ಲಿ ಇದೇ ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ವಿಶ್ವ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ಡಬಲ್ ಒಲಿಂಪಿಕ್ ಪದಕವಿಜೇತ ನೀರಜ್ ಚೋಪ್ರಾ ಪ್ರಮುಖ ಆಕರ್ಷಣೆಯಾಗಲಿದ್ದಾರೆ.

ಮಂಗಳವಾರ ಈ ಕುರಿತು ಪ್ರಕಟಿಸಿದ ಭಾರತ ಅಥ್ಲೆಟಿಕ್ ಫೆಡರೇಷನ್ (ಎಎಫ್‌ಐ) ಅಧ್ಯಕ್ಷ ಆದಿಲ್ ಸುಮಾರಿವಾಲಾ, 2029ರ ವಿಶ್ವ ಚಾಂಪಿಯನ್ ಷಿಪ್ ಸೇರಿದಂತೆ 2027ರ ವಿಶ್ವ ರೀಲೆ ಮತ್ತು 2028ರ ವಿಶ್ವ ಜೂನಿಯರ್ ಚಾಂಪಿಯನ್‌ಷಿಪ್ ಆತಿಥ್ಯ ವಹಿಸುವ ಕುರಿತು ಅಂತರರಾಷ್ಟ್ರೀಯ ಅಥ್ಲೆಟಿಕ್ ಫೆಡರೇಷನ್ ಮುಖ್ಯಸ್ಥ ಸೆಬಾಸ್ಟಿನ್ ಕೋ ಅವರು ಕಳೆದ ನವೆಂಬರ್‌ನಲ್ಲಿ ತಿಳಿಸಿದ್ದರು ಎಂದು ಹೇಳಿದರು.

ಈ ಕ್ರೀಡಾಕೂಟದ ಜೊತೆಗೆ 2029ರ ವಿಶ್ವ ಚಾಂಪಿಯನ್‌ಷಿಪ್ ಆತಿಥ್ಯವಹಿಸುವ ಆಸಕ್ತಿ ತೋರಿದೆ.

‘ಅಗ್ರಮಾನ್ಯ ಜಾವೆಲಿನ್ ಥ್ರೋ ಅಥ್ಲೀಟ್ ನೀರಜ್ ಚೋಪ್ರಾ ಅವರು ಈ ಸ್ಪರ್ಧೆಯಲ್ಲಿ ಇರುವರು. ಇದೊಂದು ಆಹ್ವಾನಿತ ಟೂರ್ನಿಯಾಗಿದೆ’ ಎಂದೂ ಅವರು ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಬಿಸಿಸಿಐ ಕಾರ್ಯದರ್ಶಿಯಾಗಿ ಸೈಕಿಯಾ

ನವದೆಹಲಿ (ಪಿಟಿಐ): ದೇವಜೀತ್ ಸೈಕಿಯಾ ಮತ್ತು ಪ್ರಭತೇಜ್ ಸಿಂಗ್ ಭಾಟಿಯಾ ಅವರನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಗೆ ಕ್ರಮವಾಗಿ ಕಾರ್ಯದರ್ಶಿ ಮತ್ತು ಖಜಾಂಚಿಯಾಗಿ ಇದೇ 12ರಂದು ಅವಿರೋಧವಾಗಿ ಆಯ್ಕೆ ಮಾಡಲಾಗುವುದು.

ಈ ಎರಡೂ ಹುದ್ದೆಗಳಿಗೆ ಆಯ್ಕೆ ಬಯಸಿ ಇವರಿಬ್ಬರೇ ಅರ್ಜಿ ಹಾಕಿದ್ದು ಆದ್ದರಿಂದ ಅವಿರೋಧವಾಗಿ ಆಯ್ಕೆಯಾಗುವುದು ಖಚಿತವಾಗಿದೆ.

ಮಂಗಳವಾರ ಬಿಸಿಸಿಐ ಚುನಾವಣಾಧಿಕಾರಿ ಮತ್ತು ಭಾರತ ಸಿಇಸಿಯ ಮಾಜಿ ಅಧಿಕಾರಿ ಅಚಲ್ ಕುಮಾರ್ ಜೋತಿ ಸ್ಪರ್ಧಾಳುಗಳ ಪಟ್ಟಿಯನ್ನು ಬಿಡುಗಡೆ ಮಾಡಿದರು.

ಕಳೆದ ವಾರ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ ಮುಕ್ತಾಯವಾಗಿತ್ತು.

ಜನವರಿ 12ರಂದು ನಡೆಯಲಿರುವ ಎಸ್‌ಜಿಎಂ ಸಂದರ್ಭದಲ್ಲಿ ಚುನಾವಣಾ ಪ್ರಕ್ರಿಯೆ ನಡೆಯಲಿದೆ. ಸೈಕಿಯಾ ಅವರು ಪ್ರಸ್ತುತ ಹಂಗಾಮಿ ಕಾರ್ಯದರ್ಶಿಯಾಗಿದ್ದಾರೆ.

ನಿಕಟಪೂರ್ವ ಕಾರ್ಯದರ್ಶಿ ಜಯ್ ಶಾ ಅವರು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ)ಗೆ ಮುಖ್ಯಸ್ಥರಾಗಿ ತೆರಳಿದ್ದರು. ಅದರಿಂದಾಗಿ ಈ ಸ್ಥಾನ ತೆರವಾಗಿತ್ತು. ಜಯ್ ಶಾ ಅವರು ಕಳೆದ ಡಿಸೆಂಬರ್ 1 ರಂದು ಐಸಿಸಿ ಮುಖ್ಯಸ್ಥರಾಗಿ ಅಧಿಕಾರ ಸ್ವೀಕರಿಸಿದ್ದರು.

ಖಜಾಂಚಿಯಾಗಿದ್ದ ಈಚೆಗೆ ಮಹಾರಾಷ್ಟ್ರ ಸರ್ಕಾರದಲ್ಲಿ ಸಚಿವರಾಗಿ ಅಧಿಕಾರ ಸ್ವೀಕರಿಸಿದ ಅವರು ರಾಜೀನಾಮೆ ನೀಡಿದ್ದರು.ಅವರ ಸ್ಥಾನಕ್ಕೆ ಭಾಟಿಯಾ ನೇಮಕವಾಗಲಿದ್ದಾರೆ.

ಐಸಿಸಿ ತಿಂಗಳ ಪ್ರಶಸ್ತಿ ಬೂಮ್ರಾ ನಾಮ ನಿರ್ದೇಶನ

ದುಬೈ (ಪಿಟಿಐ): ಭಾರತ ತಂಡದ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಮಂಗಳವಾರ ಐಸಿಸಿ ಪುರುಷರ ಪಂದ್ಯದ ತಿಂಗಳ ಆಟಗಾರನ ಪ್ರಶಸ್ತಿಗೆ ನಾಮನಿರ್ದೇಶನಗೊಂಡಿದ್ದಾರೆ.

ಭಾನುವಾರ ಮುಕ್ತಾಯಗೊಂಡ ಬಾರ್ಡರ್– ಗಾವಸ್ಕರ್ ಟ್ರೋಫಿಯಲ್ಲಿ 31 ವರ್ಷದ ವೇಗಿ ಒಟ್ಟು ಐದು ಟೆಸ್ಟ್ ಪಂದ್ಯಗಳಿಂದ 32 ವಿಕೆಟ್ ಪಡೆದರು. ಬೆನ್ನುನೋವಿನಿಂದಾಗಿ ಕೊನೆಯ ಟೆಸ್ಟ್ ಪಂದ್ಯದ ಎರಡನೇ ಇನ್ನಿಂಗ್ಸ್‌ನಲ್ಲಿ ಬೂಮ್ರಾ ಬೌಲಿಂಗ್ ಮಾಡಿರಲಿಲ್ಲ.

ಬ್ರಿಸ್ಬೇನ್ ಮತ್ತು ಮೆಲ್ಬರ್ನ್ ಟೆಸ್ಟ್ ಪಂದ್ಯಗಳಲ್ಲಿ ತಲಾ 9 ವಿಕೆಟ್‌ಗಳನ್ನು ಪಡೆದು ಸರಣಿಯನ್ನು ಜೀವಂತವವಾಗಿರಿಸುವಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದ್ದರು.

ಐಸಿಸಿ ತಿಂಗಳ ಪ್ರಶಸ್ತಿಗೆ ಬೂಮ್ರಾ ಅವರಿಗೆ ಆಸ್ಟ್ರೇಲಿಯಾ ತಂಡದ ನಾಯಕ ಪ್ಯಾಟ್ ಕಮಿನ್ಸ್ ಮತ್ತು ದಕ್ಷಿಣ ಆಫ್ರಿಕಾದ ವೇಗಿ ಡೇನ್ ಪ್ಯಾಟರ್ಸನ್ ಪೈಪೋಟಿ ನೀಡಿದ್ದಾರೆ. ವೇಗಿ ಪ್ಯಾಟ್ ಕಮಿನ್ಸ್ ಭಾರತ ತಂಡದ ವಿರುದ್ಧ ಸರಣಿಯಲ್ಲಿ 17.64 ಸರಾಸರಿಯಲ್ಲಿ 17 ವಿಕೆಟ್ ಪಡೆದಿದ್ದರು. ಡೇನ್ ಪ್ಯಾಟರ್ಸನ್ ಶ್ರೀಲಂಕಾ ವಿರುದ್ಧದ ಎರಡು ಟೆಸ್ಟ್ ಪಂದ್ಯಗಳಿಂದ 16.92 ಸರಾಸರಿಯಲ್ಲಿ 13 ವಿಕೆಟ್ ಕಬಳಿಸಿದ್ದಾರೆ.

ಮಾಜಿ ಆಲ್‌ರೌಂಡರ್ ಯುವರಾಜ್ ಸಿಂಗ್ ಅಭಿಪ್ರಾಯ

ಕಿವೀಸ್ ಎದುರಿನ ಸೋಲು ದೊಡ್ಡದು

ದುಬೈ (ಪಿಟಿಐ): ಭಾರತ ಕ್ರಿಕೆಟ್ ತಂಡವು ಸ್ವದೇಶದಲ್ಲಿ ನ್ಯೂಜಿಲೆಂಡ್ ಎದುರು ಟೆಸ್ಟ್ ಸರಣಿ ಸೋತಿದ್ದು, ಈಚೆಗಿನ ಆಸ್ಟ್ರೇಲಿಯಾ ವಿರುದ್ಧದ ಪರಾಭವಕ್ಕಿಂತ ದೊಡ್ಡದು ಎಂದು ಮಾಜಿ ಆಲ್‌ರೌಂಡರ್ ಯುವರಾಜ್ ಸಿಂಗ್ ಹೇಳಿದ್ದಾರೆ.

‘ಭಾರತ ತಂಡವು ಈ ಹಿಂದೆ ಆಸ್ಟ್ರೇಲಿಯಾದಲ್ಲಿ ಎರಡು ಸಲ ಬಾರ್ಡರ್–ಗಾವಸ್ಕರ್ ಟ್ರೋಫಿ ಜಯಿಸಿತ್ತು. ಆದ್ದರಿಂದ ಈ ಬಾರಿಯ ಸೋಲಿನ ಬಗ್ಗೆ ಹೆಚ್ಚು ಯೋಚನೆಯಿಲ್ಲ. ಆದರೆ ತವರು ನೆಲದಲ್ಲಿ ತಂಡವು 0–3ರಿಂದ ನ್ಯೂಜಿಲೆಂಡ್ ವಿರುದ್ಧ ಸೋತಿದ್ದನ್ನು ಯಾವುದೇ ಕಾರಣಕ್ಕೂ ಒಪ್ಪಲಾಗದು’ ಎಂದು ಯುವರಾಜ್ ಪಿಟಿಐ ವಿಡಿಯೋಸ್ ಗೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ.

‘ನಾವು ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರಂತಹ ಶ್ರೇಷ್ಠ ಆಟಗಾರರ ಬಗ್ಗೆ ಕೆಟ್ಟದಾಗಿ ಮಾತನಾಡಬಾರದು. ಈ ಹಿಂದೆ ಅವರು ನೀಡಿರುವ ಕಾಣಿಕೆಗಳನ್ನು ಜನರು ಮರೆತುಹೋಗುತ್ತಾರೆ. ಅವರು ಸೋತಿದ್ದಾರೆ ನಿಜ. ಉತ್ತಮವಾದ ಕ್ರಿಕೆಟ್ ಆಡಲಿಲ್ಲವೆನ್ನುವುದೂ ನಿಜ. ಈ ಬಗ್ಗೆ ನಮ್ಮೆಲ್ಲರಿಗಿಂತಲೂ ಆಡಿದವರಿಗೇ ಹೆಚ್ಚು ನೋವಾಗಿರುತ್ತದೆ’ ಎಂದು ಯುವಿ ಅಭಿಪ್ರಾಯಪಟ್ಟರು.

‘ಮುಖ್ಯ ಕೋಚ್ ಗೌತಮ್ ಗಂಭೀರ್ ಮತ್ತು ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರ್ಕರ್, ರೋಹಿತ್ ಶರ್ಮಾ, ಆ ವಿರಾಟ್ ಕೊಹ್ಲಿ, ಜಸ್‌ಪ್ರೀತ್ ಬೂಮ್ರಾ ಅವರು ಉತ್ತಮ ಮನೋಭಾವ ಹೊಂದಿರುವ ವ್ಯಕ್ತಿಗಳು. ಸದ್ಯ ಭಾರತದ ಕ್ರಿಕೆಟ್‌ನಲ್ಲಿರುವ ಶ್ರೇಷ್ಠರು. ಅವರು ತಂಡವನ್ನು ಮತ್ತೆ ಗೆಲುವಿನ ಹಳಿಗೆ ಮರಳಿ ತರುತ್ತಾರೆ’ ಎಂದು ಭರವಸೆ ವ್ಯಕ್ತಪಡಿಸಿದರು.

‘ಒಬ್ಬ ನಾಯಕನಾದವನು ತನ್ನ ಬ್ಯಾಟಿಂಗ್‌ನಲ್ಲಿ ವಿಫಲರಾದಾಗ ತಂಡದಿಂದ ಹೊರಗುಳಿದ ಅಪರೂಪದ ಘಟನೆ ಇದು. ಅಂತಹ ಉತ್ತಮ ಕಾರ್ಯವನ್ನು ರೋಹಿತ್ ಮಾಡಿದ್ದಾರೆ. ತಂಡದ ಹಿತಕ್ಕೆ ಆದ್ಯತೆ ಕೊಟ್ಟ ಅವರು ಸಿಡ್ನಿ ಪಂದ್ಯದಲ್ಲಿ ಕಣಕ್ಕಿಳಿಯಲಿಲ್ಲ’ ಎಂದು ಯುವಿ ಮೆಚ್ಚುಗೆ ವ್ಯಕ್ತಪಡಿಸಿದರು.

‘ಸೋಲು ಅಥವಾ ಗೆಲುವು ಏನೇ ಇರಲಿ. ರೋಹಿತ್ ಉತ್ತಮ ನಾಯಕ. ಏಕದಿನ ವಿಶ್ವಕಪ್ ಫೈನಲ್‌ಗೆ ತಂಡ ತಲುಪಿದ್ದು ಮತ್ತು ಟಿ20 ವಿಶ್ವಕಪ್ ಜಯಿಸಿದ್ದು ಅವರ ನಾಯಕತ್ವದಲ್ಲಿ. ಇದರಾಚೆಯೂ ಇನ್ನೂ ಹಲವಾರು ಸಾಧನೆಗಳನ್ನು ಅವರು ಮಾಡಿದ್ದಾರೆ’ ಎಂದು ಯುವರಾಜ್ ಅವರು ಅಭಿಪ್ರಾಯಪಟ್ಟರು.

ಮಹಿಳಾ ಹಾಕಿ: 13ರಂದು ಟ್ರಯಲ್ಸ್

ಬೆಂಗಳೂರು: ಉತ್ತರಾಖಂಡದಲ್ಲಿ ಇದೇ 28ರಿಂದ ಫೆ. 14ರವರೆಗೆ ನಡೆಯುವ 38ನೇ ರಾಷ್ಟ್ರೀಯ ಕ್ರೀಡಾಕೂಟಕ್ಕೆ ಸೀನಿಯರ್ ಮಹಿಳಾ ತಂಡದ ಆಯ್ಕೆಗಾಗಿ ಹಾಕಿ ಇಂಡಿಯಾ ಟ್ರಯಲ್ಸ್ ಆಯೋಜಿಸಿದೆ.

ಶಾಂತಿನಗರದ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಹಾಕಿ ಅರೇನಾದಲ್ಲಿ ಇದೇ 13ರಂದು ಬೆಳಿಗ್ಗೆ 10ರಿಂದ ಟ್ರಯಲ್ಸ್ ನಡೆಯಲಿದೆ ಎಂದು ಹಾಕಿ ಕರ್ನಾಟಕದ ಪ್ರಧಾನ ಕಾರ್ಯದರ್ಶಿ ಎ.ಬಿ.ಸುಬ್ಬಯ್ಯ ತಿಳಿಸಿದ್ದಾರೆ.

ಕೊಕ್ಕೊ ವಿಶ್ವಕಪ್: ಭಾರತಕ್ಕೆ ನೇಪಾಳ ಮೊದಲ ಎದುರಾಳಿ

ನವದೆಹಲಿ (ಪಿಟಿಐ): ಆತಿಥೇಯ ಭಾರತ ಪುರುಷರ ತಂಡವು ಇದೇ 13ರಿಂದ ಆರಂಭವಾಗುವ ಚೊಚ್ಚಲ ಕೊಕ್ಕೊ ವಿಶ್ವಕಪ್‌ನ ಮೊದಲ ಪಂದ್ಯದಲ್ಲಿ ನೇಪಾಳ ವಿರುದ್ಧ ಅಭಿಯಾನ ಆರಂಭಿಸಲಿದೆ. ಉಭಯ ತಂಡಗಳ ಸೆಣಸಾಟಕ್ಕೆ ಇಂದಿರಾ ಗಾಂಧಿ ಕ್ರೀಡಾಂಗಣ ಸಜ್ಜಾಗುತ್ತಿದೆ.

ಜ.19ರವರೆಗೆ ನಡೆಯುವ ಟೂರ್ನಿಗೆ ಸಿದ್ಧತೆಗಳು ಭರದಿಂದ ಸಾಗಿದೆ. ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ಒಟ್ಟು 39 ತಂಡಗಳು ಪಾಲ್ಗೊಳ್ಳಲಿವೆ.

ಪುರುಷರ ಸ್ಪರ್ಧೆಯಲ್ಲಿ 5 ತಂಡಗಳಂತೆ ನಾಲ್ಕು ಗುಂಪುಗಳಾಗಿ ವಿಂಗಡಿಸಲಾಗಿದೆ. ಭಾರತ ಸೇರಿದಂತೆ ನೇಪಾಳ, ಪೆರು, ಬ್ರೆಜಿಲ್ ಮತ್ತು ಭೂತಾನ್ ತಂಡಗಳು ಎ ಗುಂಪಿನಲ್ಲಿವೆ. ಜ.16ಕ್ಕೆ ಲೀಗ್ ಹಂತದ ಪಂದ್ಯಗಳು ಮುಕ್ತಾಯಗೊಳ್ಳಲಿದೆ. 17ರಿಂದ ಪ್ಲೇಆಫ್ ಹಂತದ ಸ್ಪರ್ಧೆಗಳು ಆರಂಭವಾಗಲಿದೆ. 19ರಂದು ಪ್ರಶಸ್ತಿ ಸುತ್ತಿನ ಸ್ಪರ್ಧೆ ನಡೆಯಲಿದೆ.

ಮಹಿಳೆಯರ ವಿಭಾಗದಲ್ಲಿ 19 ತಂಡಗಳನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಲಾಗಿದೆ. ಭಾರತವನ್ನು ಒಳಗೊಂಡ ಎ ಗುಂಪಿನಲ್ಲಿ ನಾಲ್ಕು ತಂಡಗಳಿದ್ದು, ಉಳಿದ ಗುಂಪುಗಳಲ್ಲಿ ಐದು ತಂಡಗಳಿವೆ. ಜ.14ರಂದು ದಕ್ಷಿಣ ಕೊರಿಯಾ ವಿರುದ್ಧದ ಪಂದ್ಯದೊಂದಿಗೆ ಆತಿಥೇಯ ತಂಡ ಅಭಿಯಾನ ಶುರು ಮಾಡಲಿದೆ.

ಪುರುಷರ ಗುಂಪು: ಎ: ಭಾರತ, ನೇಪಾಳ, ಪೆರು, ಬ್ರೆಜಿಲ್, ಭೂತಾನ್; ಬಿ: ದಕ್ಷಿಣ ಆಫ್ರಿಕಾ, ಘಾನಾ, ಅರ್ಜೆಂಟೀನಾ, ನೆದರ್ಲೆಂಡ್ಸ್, ಇರಾನ್; ಸಿ: ಬಾಂಗ್ಲಾದೇಶ, ಶ್ರೀಲಂಕಾ, ದಕ್ಷಿಣ ಕೊರಿಯಾ, ಅಮೆರಿಕ, ಪೋಲೆಂಡ್; ಡಿ: ಇಂಗ್ಲೆಂಡ್, ಜರ್ಮನಿ, ಮಲೇಷ್ಯಾ, ಆಸ್ಟ್ರೇಲಿಯಾ, ಕೆನ್ಯಾ.

ಮಹಿಳೆಯರ ಗುಂಪು: ಎ: ಭಾರತ, ಇರಾನ್, ಮಲೇಷ್ಯಾ, ದಕ್ಷಿಣ ಕೊರಿಯಾ; ಬಿ: ಇಂಗ್ಲೆಂಡ್, ಆಸ್ಟ್ರೇಲಿಯಾ, ಕೆನ್ಯಾ, ಉಗಾಂಡಾ, ನೆದರ್ಲೆಂಡ್ಸ್; ಸಿ: ನೇಪಾಳ, ಭೂತಾನ್, ಶ್ರೀಲಂಕಾ, ಜರ್ಮನಿ, ಬಾಂಗ್ಲಾದೇಶ; ಡಿ: ದಕ್ಷಿಣ ಆಫ್ರಿಕಾ, ನ್ಯೂಜಿಲೆಂಡ್, ಪೋಲೆಂಡ್, ಪೆರು, ಇಂಡೋನೇಷ್ಯಾ.

ಶ್ರವಣದೋಷವುಳ್ಳವರ 25ನೇ ರಾಷ್ಟ್ರೀಯ ಚೆಸ್ ಚಾಂಪಿಯನ್‌ಷಿಪ್

ಮಹಾರಾಷ್ಟ್ರದ ವಿವೇಕ್ ಭಾಸ್ಕರ್ ಮುನ್ನಡೆ

ಪ್ರಜಾವಾಣಿ ವಾರ್ತೆ

ಮೈಸೂರು: ಮಹಾರಾಷ್ಟ್ರದ ವಿವೇಕ್ ಭಾಸ್ಕರ್ ವಾಟಪಾಡೆ ಅವರು ಇಲ್ಲಿನ ನಿತ್ಯಾನಂದ ಕಲ್ಯಾಣ ಮಂಟಪದಲ್ಲಿ ನಡೆದಿರುವ ಶ್ರವಣದೋಷವುಳ್ಳವರ 25ನೇ ರಾಷ್ಟ್ರೀಯ ಚೆಸ್ ಚಾಂಪಿಯನ್‌ಷಿಪ್‌ನ ಮುಕ್ತ ವಿಭಾಗದಲ್ಲಿ ಪ್ರಶಸ್ತಿಯತ್ತ ಹೆಜ್ಜೆ ಇಟ್ಟಿದ್ದು, ಅವರಿಗೆ ದೇವೇಂದ್ರ ಶ್ರೀಹರಿ ವೈದ್ಯ ಹಾಗೂ ಸೌರಭ್ ಹನ್ಸ್ ಪೈಪೋಟಿ ಒಡ್ಡಿದ್ದಾರೆ.

ಚಾಂಪಿಯನ್‌ಷಿಪ್‌ನ ಮೂರನೇ ದಿನವಾದ ಮಂಗಳವಾರ ಆರು ಸುತ್ತುಗಳ ಅಂತ್ಯಕ್ಕೆ ಈ ಮೂವರೂ ತಲಾ 5.5 ಅಂಕಗಳೊಂದಿಗೆ ಮುನ್ನಡೆ ಗಳಿಸಿದ್ದಾರೆ. ಇನ್ನೂ ಮೂರು ಸುತ್ತಿನ ಆಟ ಬಾಕಿ ಇದೆ.

ಆರನೇ ಸುತ್ತಿನ ಹಣಾಹಣಿಯಲ್ಲಿ ವಿವೇಕ್ ಹಾಗೂ ಹರಿಯಾಣದ ಸೌರಭ್ ಪಂದ್ಯ ಡ್ರಾ ಮಾಡಿಕೊಂಡು ತಲಾ ಅರ್ಧ ಅಂಕ ಹಂಚಿಕೊಂಡರು. ಬಿಳಿಯ ಕಾಯಿಗಳೊಂದಿಗೆ ಕಣಕ್ಕೆ ಇಳಿದ ಮಹಾರಾಷ್ಟ್ರದ ದೇವೇಂದ್ರ, ಪಂಜಾಬ್‌ನ ಆಟಗಾರ್ತಿ ಮಲ್ಲಿಕಾ ಹಂಡರನ್ನು ಮಣಿಸಿ ಅಂಕ ಹೆಚ್ಚಿಸಿ ಕೊಂಡರು. ಮತ್ತೊಂದು ಪಂದ್ಯದಲ್ಲಿ ಕರ್ನಾಟಕದ ಆಟಗಾರ್ತಿ ಕೆ. ಯಶಸ್ವಿ ಗುಜರಾತಿನ ಕಡಚ್ಚ ರಂಭಾಯ್ ನೆಬಾಭಾಯ್ ಎದುರು ಡ್ರಾಗೆ ತೃಪ್ತಿಪಟ್ಟರು.

ಅಂಕಿತ್‌ಗೆ ಮುನ್ನಡೆ: ಜೂನಿಯರ್ ವಿಭಾಗದ ಸ್ಪರ್ಧೆಯಲ್ಲಿ ಐದನೇ ಸುತ್ತಿನ ಅಂತ್ಯಕ್ಕೆ ಪಶ್ಚಿಮ ಬಂಗಾಳದ ಅಂಕಿತ್ ಗಂಗೂಲಿ 5 ಅಂಕಗಳೊಂದಿಗೆ ಮುನ್ನಡೆ ಕಾಯ್ದುಕೊಂಡಿದ್ದಾರೆ. ಪುದುಚೇರಿಯ ಎ. ರೋಷನ್, ಕರ್ನಾಟಕದ ಸಂಜಯ್, ಎಸ್. ಶ್ರೇಯಾ, ಬಿಹಾರದ ಆರ್ಯನ್ ಸಿಂಗ್ ಹಾಗೂ ಗುಜರಾತಿನ ಅಶ್ರಫ್ ಜಾವೆದ್ ಮನ್ಸುರಿ ತಲಾ 4 ಅಂಕ ಗಳಿಸಿದ್ದು, ಕ್ರಮವಾಗಿ ನಂತರದ ಸ್ಥಾನಗಳಲ್ಲಿ ಮುನ್ನಡೆದಿದ್ದಾರೆ. ಇನ್ನೂ ಎರಡು ಸುತ್ತಿನ ಆಟ ಬಾಕಿ ಇದೆ.

ಮೈಸೂರು ಜಿಲ್ಲಾ ಕಿವುಡರ ಸಂಘ ಆಯೋಜಿಸಿದ್ದ ಶ್ರವಣದೋಷವುಳ್ಳವರಿಗೆ 25ನೇ ರಾಷ್ಟ್ರೀಯ ಚೆಸ್ ಚಾಂಪಿಯನ್‌ಷಿಪ್ ಸ್ಪರ್ಧೆಯಲ್ಲಿ ಕೆ. ಯಶಸ್ವಿ (ಕರ್ನಾಟಕ) ಹಾಗೂ ಕಡಚಾ ರಂಬೈ ನೇಭಾಭಾಯಿ (ಗುಜರಾತ್) ಪಾಲ್ಗೊಂಡರು ಪ್ರಜಾವಾಣಿ ಚಿತ್ರ: ಅನೂಪ್ ರಾಘ ಟಿ.

ರೂಟ್ಸ್ ಎಫ್‌ಸಿ, ಕಿಕ್‌ಸ್ಟಾರ್ಟ್ ಎಫ್‌ಸಿ ಪಂದ್ಯ ಡ್ರಾ

ಬೆಂಗಳೂರು: ಸಮಬಲದ ಹೋರಾಟ ನೀಡಿದ ರೂಟ್ಸ್ ಎಫ್‌ಸಿ ತಂಡ ಸೂಪರ್ ಡಿವಿಷನ್ ಲೀಗ್ ಪಂದ್ಯದಲ್ಲಿ ಎದುರಾಳಿ ಕಿಕ್‌ಸ್ಟಾರ್ಟ್ ಎಫ್‌ಸಿ ತಂಡದ ವಿರುದ್ಧ 1–1 ಗೋಲಿನೊಂದಿಗೆ ಡ್ರಾ ಮಾಡಿಕೊಂಡಿದೆ.

ಅಶೋಕನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಫುಟ್ಬಾಲ್ ಪಂದ್ಯದಲ್ಲಿ ರೂಟ್ಸ್ ಎಫ್‌ಸಿ ತಂಡದ ಗೌತಮ್ ರಾಜೇಶ್ (11ನೇ ನಿ.) ಮತ್ತು ಕಿಕ್‌ಸ್ಟಾರ್ಟ್ ತಂಡದ ಸಿದ್ಧಾರ್ಥ್ ನೊಂಗ್‌ಮಿಕಾಪಾಮ್ (45 + 3ನಿ.) ಗೋಲು ಹೊಡೆದರು.

ಇನ್ನೊಂದು ಪಂದ್ಯದಲ್ಲಿ ಬೆಂಗಳೂರು ಇಂಡಿಪೆಂಡೆಂಟ್ಸ್ ಎಫ್‌ಸಿ 2–1 ಗೋಲುಗಳಿಂದ ಎಎಸ್‌ಸಿ ಮತ್ತು ಸೆಂಟರ್ ಎಫ್‌ಸಿ ತಂಡವನ್ನು ಮಣಿಸಿತು.

ಬಿ ಡಿವಿಷನ್ ಲೀಗ್ ಪಂದ್ಯ

ಸಾಯ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಸೌತ್ ಇಂಡಿಯಾ ಎಫ್‌ಸಿ ತಂಡ 2–1 ಗೋಲುಗಳಿಂದ ಮೊಹಮ್ಮಡನ್ ಸ್ಪೋರ್ಟಿಂಗ್ ಎಫ್‌ಸಿ ತಂಡವನ್ನು ಪರಾಭವಗೊಳಿಸಿತು. ಸೌತ್ ಇಂಡಿಯಾ ತಂಡದ ನಥೇನ್ ಡಿ’ಸೋಜಾ (42ನೇ ನಿ.), ಜಿತೆನ್ ಗುಪ್ತಾ (63ನೇ ನಿ.) ಚೆಂಡನ್ನು ಗುರಿ ಸೇರಿಸಿದರು. ಮೊಹಮ್ಮಡನ್ ಸ್ಪೋರ್ಟಿಂಗ್ ತಂಡದ ಸಮರ್ಥ್ ಎಸ್. ಭಾಂಡೇಕರ್ (47ನೇ ನಿ.) ಗೋಲು ಬಾರಿಸಿದರು.

ಎರಡನೇ ಪಂದ್ಯದಲ್ಲಿ ಜೂನೊ ಎಫ್‌ಸಿ ತಂಡ 5–0 ಗೋಲುಗಳಿಂದ ಬೆಂಗಳೂರು ವಾರಿಯರ್ಸ್ ಎಫ್‌ಸಿ ವಿರುದ್ಧ ಭರ್ಜರಿ ಗೆಲುವು ಸಾಧಿಸಿತು. ಜೂನೊ ಎಫ್‌ಸಿ ತಂಡ ಟಿ. ಪ್ರೇಮ್‌ಕಿಶನ್ ಸಿಂಗ್ (13ನೇ ನಿ.), ಪೃಥ್ವಿ (33ನೇ ನಿ.) ಮತ್ತು ರಾಜಿಲ್ (40ನೇ ನಿ.), ಒಸ್ಬರ್ಟ್ ಲೂಹಿಸ್ ಫೆರ್ನಾನ್‌ಬ್ಸ್ (47ನೇ ನಿ.), ಮಹೇಶ್ ಎಂ. (64ನೇ ನಿ.) ಗೋಲು ಹೊಡೆದರು.

ಮೂರನೇ ಪಂದ್ಯದಲ್ಲಿ ವೆಹಿಕಲ್ಸ್ ಎಫ್‌ಸಿ ತಂಡ 5–2 ಗೋಲುಗಳಿಂದ ಇನ್‌ಫೈನೈಟ್ ಬೆಳಗಾವಿ ಎಫ್‌ಸಿ ತಂಡವನ್ನು ಮಣಿಸಿತು.

ಅರ್ಬನ್ನೈಸ್ ಡೌಲಾತ್ ನಾಕೌಟ್ ಟೂರ್ನಿಯಲ್ಲಿ ಲಾ ಮಾಸಿಯಾ ಎಫ್‌ಸಿ 5–2 ಗೋಲುಗಳಿಂದ ಯುಎಫ್‌ಎ ಎಫ್‌ಸಿ ತಂಡವನ್ನು ಸೋಲಿಸಿತು.

ಕಿಕ್‌ಸ್ಟಾರ್ಟ್ ಎಫ್‌ಸಿ ತಂಡದ ಎಂ.ಡಿ. ರೋಹಿತ್ (ಬಲ) ಮತ್ತು ರೂಟ್ಸ್ ಫುಟ್ಬಾಲ್ ಕ್ಲಬ್‌ನ ಗೌತಮ್ ರಾಜೇಶ್ (ಎಡ) ಚೆಂಡಿನ ಮೇಲೆ ನಿಯಂತ್ರಣ ಸಾಧಿಸಲು ಯತ್ನಿಸಿದ ಕ್ಷಣ ಪ್ರಜಾವಾಣಿ ಚಿತ್ರ: ಪುಷ್ಕರ್ ವಿ.

ದ್ವಿಸ್ತರ ಟೆಸ್ಟ್ ಮಾದರಿಗೆ ಕ್ಲೈವ್ ಲಾಯ್ಡ್ ವಿರೋಧ

ಗಯಾನಾ (ಪಿಟಿಐ): ದ್ವಿಸ್ತರ ಕ್ರಿಕೆಟ್ ಮಾದರಿಯನ್ನು ಜಾರಿಗೊಳಿಸುವುದು ಸರಿಯಲ್ಲ. ಟೆಸ್ಟ್ ಕ್ರಿಕೆಟ್ ಮಾನ್ಯತೆ ಗಳಿಸಲು ಕಠಿಣ ಪರಿಶ್ರಮಪಡುವ ದೇಶಗಳಿಗೆ ಇದು ಮಾರಕವಾಗಲಿದೆ ಎಂದು ವೆಸ್ಟ್ ಇಂಡೀಸ್ ಕ್ರಿಕೆಟ್‌ನ ದಿಗ್ಗಜ ಕ್ಲೈವ್ ಲಾಯ್ಡ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಭಾರತ, ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ದೇಶಗಳ ನಡುವಣ ಹೆಚ್ಚು ಕ್ರಿಕೆಟ್ ಸರಣಿಗಳನ್ನು ನಡೆಸುವ ಯೋಜನೆ ಇದಾಗಿದೆ. ಐಸಿಸಿಯು ಈ ಮೂರು ದೇಶಗಳ ಕ್ರಿಕೆಟ್ ಮಂಡಳಿಗಳೊಂದಿಗೆ ಯೋಜನೆಯ ಕುರಿತು ಮಾತುಕತೆ ನಡೆಸುತ್ತಿದೆ.

ಐಸಿಸಿಯ ನೂತನ ಮುಖ್ಯಸ್ಥ ಜಯ್ ಶಾ ಅವರು, ಆಸ್ಟ್ರೇಲಿಯಾದ ಚೇರಮನ್ ಮೈಕ್ ಬೇರ್ಡ್ ಮತ್ತು ಇಂಗ್ಲೆಂಡಿನ ರಿಚರ್ಡ್ ಥಾಮ್ಸನ್ ಅವರೊಂದಿಗೆ ಈಚೆಗೆ ಈ ಕುರಿತು ಮಾತನಾಡಿದ್ದಾರೆ ಎನ್ನಲಾಗಿದೆ.

Divisa
ಡಾ.ಆರ್ಥೋ ತೈಲ
ಅರ್ಪಿಸಲಾಗುತ್ತಿದೆ,
ಬಾರಿ ಉಳಿತಾಯದೊಂದಿಗೆ
ಡಾ.ಆರ್ಥೋ ಬೃಹತ್ ಪ್ಯಾಕ್
ಇಂದೇ ತನ್ನಿರಿ! ₹590/-
ಈಗ, ಕೇವಲ ₹395/-

24x7 Helpline: 78769 77777 | www.drorthooil.com | Available at all medical & general stores.